# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ - 2018

## ಯುಗಾದಿ ವಿಶೇಷಾಂಕ




ಬಿಡಿ ಪ್ರತಿ: ರೂ. 30.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 34**

**ಸಂಚಿಕೆ – 7**

**ಏಪ್ರಿಲ್ – 2018**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 3 |
| ಮೊದಲ ಮಾತು | ಶಿವಕುಮಾರ್ | 4 |
| ನಮ್ಮನಮ್ಮಲ್ಲಿ | ಎಂ ಶಿವಕುಮಾರ್ | 5 |
| ಕೊನೆಯ ನಮಸ್ಕಾರ | ಎನ್ ರಾಮಾನುಜ | 9 |
| ಒಂದು ಹೊಸ ಅನುಭವ | ಉಲ್ಲಾಸ ರಾಯಸಂ ಬೀchi | 13 |
| ಚಪಾತಿಯ ತಪಾಸಣೆ | ನಂದಿನಿ ಕಾಪಡಿ | **14** |
| ಇಂಗು (ಚಾಕೋಲೇಟ್) ತಿಂದ... | ಡಿ.ವಿ. ಗುರುಪ್ರಸಾದ್ | 19 |
| ಲಾಫಿಂಗ್ ಕ್ಲಬ್ | ಸಿ.ಆರ್. ಸತ್ಯ | 23 |
| ಬೆನ್ನ ಹಿಂದೆ ಆಡಿಕೊಳ್ಳುವವರ... | ಗಂಗಾವತಿ ಪ್ರಾಣೇಶ್ | 26 |
| ಸದನದಲ್ಲಿ ಪಟೇಲರು | ಬೇಲೂರು ರಾಮಮೂರ್ತಿ | 30 |
| ನಾ. ಕಸ್ತೂರಿಯವರನ್ನು ಮರೆತರೇ | ಡಾ. ಪ್ರಭುಪ್ರಸಾದ್ | 35 |
| ಹಪ್ಪಳದ ಕಥೆ | ಅನಿತಾ ನರೇಶ್ ಮಂಚಿ | 41 |
| ಮರೆವಾಗಿ ಕಾಡಿತ್ತು ಮಾಯೆ | ಗಾಯಿತ್ರಿ ಮೂರ್ತಿ | 43 |
| ಸ್ವರ್ಗದಲ್ಲಿ ಚುನಾವಣೆ | ಪಾಲಹಳ್ಳಿ ವಿಶ್ವನಾಥ್ | 47 |
| ವ್ಯಂಗ್ಯ ಮೆಲುಕು | ಪ್ರಕಾಶ್ ಶೆಟ್ಟಿ | 51 |
| ಹೆಂಡ್ತೀನ ದತ್ತು ತಗೋತಾರೇನ.... | ಪ್ರಶಾಂತ್ ಅಡೂರ್ | 52 |

ಮುಖಪುಟ – ಜಿ.ಎಸ್. ನಾಗನಾಥ್

ಒಳಪುಟಗಳ ವ್ಯಂಗ್ಯ ಚಿತ್ರ – ಶ್ರೀ ರಘುಪತಿ ಶೃಂಗೇರಿ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಐ.ಪಿ.ಎಲ್. ದಾರಿಯಲ್ಲಿ ಯು ಟರ್ನ್ | ಇ. ಆರ್. ರಾಮಚಂದ್ರನ್ | 54 |
| ತುಂತುರು | ದಂನಆ | 58 |
| ಮಂಗ ದೇಶ | ದಿವಾಕರ್ | 59 |
| ಬಿಂ.ಗೋ.ಜನಕರ ಜೊತೆ ಪ್ರಯಾಣ | ಶಾಮಲಾ ರವಿಶಂಕರ್ | 62 |
| ಫೋನ್ ರಿಂಗ್ ಆದಾಗ | ನುಗ್ಗೆಹಳ್ಳಿ ಪಂಕಜ | 66 |
| ಮಾತಿನ ಮಲ್ಲರು | ಭುವನೇಶ್ವರಿ ಹೆಗಡೆ | 74 |
| ಗಂಡನ ಹಾ(ಪಾ)ಡು | ಎಚ್. ಡುಂಡಿರಾಜ್ | 77 |
| ಗುಂಡಣ್ಣ ಕನ್ಯೆ ನೋಡಿದ್ದು | ಕುಮುದಾ ಪುರುಷೋತ್ತಮ್ | 78 |
| ಶುಭ ಶಕುನ | ಎಂ.ಎಸ್. ನರಸಿಂಹಮೂರ್ತಿ | 82 |
| ಸಿಂಪಲ್ಲಾಗಿರೋದು | ಹ.ಶಿ. ಭೈರನಟ್ಟಿ | 85 |
| ನಾನು ಹಿಂಗೇನೇ | ಸಹನಾ ಪ್ರಸಾದ್ | 88 |
| ಜೀವನ ಮೌಲ್ಯಗಳು | ಗಣೇಶ ಹೆಗ್ಗಡೆ | 90 |
| ಬೆಳ್ಳಗಿರುವುದೆಲ್ಲಾ ಹಾಲಲ್ಲ | ಜಿ.ವಿ.ನಿರ್ಮಲ | 93 |
| ಸ್ಯಾರಿ ಸೆಲೆಕ್ಷನ್ನೂ .... | ಶರತ್ ಕಲ್ಕೋಡ್ | 97 |
| ಗಾದೆಗಳ ಹೊಸ ನೆಟ್ಟಾವತಾರಗಳು | ಆಂಡಾಳ್ ಶರ್ಮ | 100 |
| ಮಾರ್ಜಾಲ ಮುನಿಸು | ನಂ.ನಾಗರಾಜ್ | 104 |
| ಸೀರಿಯಲ್ ಸತ್ಯಗಳು | ಆನಂದ | 107 |
| ಸದ್ಬಳಕೆ | ಕೃಷ್ಣ ಸುಬ್ಬರಾವ್ | 109 |
| ಒಂದು ಚುಕ್ಕಿಯ ಸುತ್ತ | ಎನ್. ರಾಮನಾಥ್ | 112 |
| ಪೂರ್ವಜನ್ಮ ಸುಕೃತ | ಎಚ್. ಗೋಪಾಲಕೃಷ್ಣ | 115 |
| ಹೀಗಾಗಬಾರದಾಗಿತ್ತು | ಗೌತಮ | 118 |
| ಬೈಗುಳ ಮಹಿಮೆ | ವೈ.ಎನ್. ಗುಂಡೂರಾವ್ | 123 |
| ಮ್ಯಾಚಿಂಗ್ ಮ್ಯಾಚಿಂಗ್ | ವಿ.ಪ್ರಾಣೇಶ್ ರಾವ್ | 126 |
| ...ವಾಟ್ಸ್ ಡೌನ್ ಆಪ್ | ತುರುವೇಕರೆ ಪ್ರಸಾದ್ | 130 |
| ಗಡಿಬಿಡಿ ಗುಂಡ | ವಿಜಯ ಗುರುರಾಜ | 134 |
| ಊಟದ ಮಾಟ | ಜಯಕುಮಾರ್ ಮರಿಯಪ್ಪ | 136 |




# ಅಪರಂಜಿ ಕಿಡಿ

– ಪ್ರಕಾಶ್



ಮಕ್ಕಳಲ್ಲಿ ಕ್ರೀಡಾಸಕ್ತಿ ವೃದ್ಧಿಸಿ

*• ವೃದ್ಧರು ಇದನ್ನು ಹೇಳಬೇಕೆ?*

★★★

ಮಹಿಳಾ ನವೋದಯಕ್ಕೆ 50 ಲಕ್ಷ. – ಶೀರ್ಷಿಕೆ

*• ಚುನಾವಣೆಗೂ ಇದಕ್ಕೂ ಸಂಬಂಧ ಕಲ್ಪಸಬಾರದು!!*

★★★

ಸಿದ್ದರಾಮಯ್ಯ ದುರಾಡಳಿತ; ಬಿ.ಎಸ್.ವೈ. ಕಿಡಿ – ಪತ್ರಿಕೆ

*• ಯಾಕೋ ಹಾಗಲಕಾಯಿ ಜ್ಞಾಪಕಕ್ಕೆ ಬರುತ್ತೆ!!*

★★★

''ಭಕ್ತಿ ಭಾವದ ಅಭಿಷೇಕದಲ್ಲಿ ಮಿಂದೆದ್ದ ಗೊಮ್ಮಟೇಶ್ವರ''

''ಮೂವರು ಸಿ.ಬಿ.ಐ. ಬಲೆಗೆ''

*• ಪತ್ರಿಕೆಯಲ್ಲಿ ಒಂದರ ಪಕ್ಕದಲ್ಲಿ ಒಂದು ಶೀರ್ಷಿಕೆಗಳು!!*

★★★

ಬ್ರಹ್ಮಾಂಡದ ಕೌತುಕಮಯ ಚಲನೆಯನ್ನು ಗಾಲಿ ಕುರ್ಚಿಯ ಸ್ಥಿರತೆಯಿಂದಲೇ ತರ್ಕಿಸಿ ವ್ಯೋಮಮಂಡಲದಲ್ಲಿ ಲೀನರಾದ ಸ್ಟೀಫನ್ ಹಾಕಿಂಗ್‌ರವರಿಗೆ ಅಪರಂಜಿಯ ಶ್ರದ್ಧಾಂಜಲಿ.

★★★

ಕಮಲ್ ಹಾಸನ್ ಹೊಸ ಪಕ್ಷ.

*• ಪಾಪ!!*

★★★

ಚಹಾದಂಗಡಿ ಮಾಲೀಕನ ಪುತ್ರಿಗೆ 7 ಚಿನ್ನದ ಪದಕಗಳು.

*• ಪ್ರಧಾನಿಗಳು ನಸುನಕ್ಕರಂತೆ!!*

★★★

ಕಬ್ಬು: 14 ಸಾವಿರ ಕೋಟಿ ಬಾಕಿ.

*• ಕಹಿ ಸುದ್ದಿ ಅಂದರೆ ಇದೇ!!*

# ಮೊದಲ ಮಾತು

ಅಪರಂಜಿ ಇದೀಗ ಮೂವತ್ತನಾಲ್ಕು ತುಂಬಿ ಮೂವತ್ತೈದಕ್ಕೆ ಕಾಲಿಟ್ಟಿದ್ದಾಳೆ. ಆಕೆಯ ಆರೋಗ್ಯಪೂರ್ಣ ಬೆಳವಣಿಗೆಗೆ ನಿಮ್ಮೆಲ್ಲರ ಅಭಿಮಾನ, ಒತ್ತಾಸೆಗಳೇ ಮುಖ್ಯ ಕಾರಣ. ಏಪ್ರಿಲ್ ಒಂದರಂದು ನಾವು ಹಮ್ಮಿಕೊಂಡಿರುವ ಅಪರಂಜಿ ಹಬ್ಬ - 2018 ಕಾರ್ಯಕ್ರಮವು ಯುಗಾದಿಯ ಸಂಭ್ರಮವನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳುವ ಒಂದು ಪ್ರಯತ್ನ.

ಎಂದಿನಂತೆ ನಮ್ಮ ಬರಹಗಾರ ಬರಹಗಾರ್ತಿಯರು ಬಹು ಉತ್ಸಾಹದಿಂದ ತಮ್ಮ ನಗೆಚಿಂತನೆಗಳನ್ನು ತಮ್ಮ ಬರಹಗಳ ಮೂಲಕ ನಿಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಶ್ರೀ ಜಿ. ಎಸ್. ನಾಗನಾಥ್ ಅವರು ಅಂದವಾದ ಮುಖಪುಟ ಚಿತ್ರ ರಚಿಸಿಕೊಟ್ಟಿದ್ದಾರೆ. ಶ್ರೀ ಶೃಂಗೇರಿ ರಘುಪತಿ ಅವರು ಲೇಖನಗಳಿಗೆ ಬಹಳ ಸೂಕ್ತವಾದ ವ್ಯಂಗ್ಯ ಚಿತ್ರಗಳನ್ನು ಬರೆದು ಕೊಟ್ಟಿದ್ದಾರೆ. ಇವರೆಲ್ಲರಿಗೂ ಅಪರಂಜಿಯ ಹಾರ್ದಿಕ ಕೃತಜ್ಞತೆಗಳು.

ಅಪರಂಜಿ ವಿಶೇಷಾಂಕಕ್ಕೆ ಜಾಹೀರಾತುಗಳನ್ನು ನೀಡಿರುವ ಎಲ್ಲ ಬಂಧುಗಳಿಗೂ ನಮ್ಮ ಒಲವಿನ ನಮನಗಳು. ವಿಶೇಷಾಂಕದ ತಯಾರಿಯಲ್ಲಿ ಮುತುವರ್ಜಿ ವಹಿಸಿದ ಒಮೇಗಾ ಲೇಸರ್‌ಟೆಕ್‌ನ ಶ್ರೀ ರವಿ, ನವ್ಯಾ, ಶ್ವೇತಾ ಇವರಿಗೂ, ಹಾಗೂ ಮುದ್ರಣ ಮತ್ತು ಬಟವಾಡೆ ಕೆಲಸಗಳನ್ನು ವಿಶೇಷ ಕಾಳಜಿಯಿಂದ ನಡೆಸಿಕೊಂಡು ಬರುತ್ತಿರುವ ರವಿ ಗ್ರಾಫಿಕ್ಸ್‌ನ ಶ್ರೀ ವಿ.ಆರ್. ನಾಥ್, ಸಂತೋಷ್, ನಾಗರಾಜ್ ಮತ್ತು ಅವರ ಸಹೋದ್ಯೋಗಿಗಳೆಲ್ಲರಿಗೂ ಅಪರಂಜಿ ತಂಡದ ಪರವಾಗಿ ವಿಶೇಷ ವಂದನೆಗಳು.

ಅಪರಂಜಿ ವಿತರಣೆಗೆ ಅನುಕೂಲವಾಗುವಂತೆ ವಿಳಾಸ ಪಟ್ಟಿಗಳ ತಯಾರಿಕೆಯಲ್ಲಿ ನಮಗೆ ನೆರವಾಗಿ ನಿಂತಿರುವ ಎಂ.ಪಿ.ಬಿರ್ಲಾ ಇನ್ಸಿಟ್ಯೂಟಿನ ಸದಾನಂದ್ ಅವರಿಗೆ ಅಪರಂಜಿ ಆಭಾರಿ.

ವಿಳಂಬಿನಾಮ ಸಂವತ್ಸರವು ನಿಮ್ಮೆಲ್ಲರಿಗೂ ಸಕಲ ಸನ್ಮಂಗಳಗಳನ್ನು ತರುವಂತಾಗಲಿ ಎಂಬುದೇ ಅಪರಂಜಿಯ ಹಾರೈಕೆ.

**ಶಿವಕುಮಾರ್**



# ನಮ್ಮ ನಿಮ್ಮಲ್ಲಿ

**- ಎಂ. ಶಿವಕುಮಾರ್**

**ಕ**ಳೆದ ತಿಂಗಳು ಮಗಳ ಮನೆಯ ಭೇಟಿಗಾಗಿ ಸಿಂಗಪುರಕ್ಕೆ ಹೋಗಬೇಕಾಯಿತು. ಕೇವಲ ಹತ್ತು ದಿನಗಳ ಕಾಲ ಇರೋಣ ಅಂತ ಹೋಗಿದ್ದರೂ, ಆ ಅವಧಿಯಲ್ಲಿ ಮೂರು ದಿನ ಬಾಲಿಗೆ ಹೋಗಿ ಬರೋಣ ಅಂತ ನನ್ನ ಮಗಳು ಆರತಿ ಬಲವಂತ ಮಾಡಿದಳು. ಅವಳ ಒತ್ತಾಯಕ್ಕೆ ಮಣಿದು ಬಾಲಿ ಯಾತ್ರೆ ಕೈಗೊಂಡೆವು.

ಇಂಡೋನೇಷ್ಯಾ ಒಂದು ದ್ವೀಪಸಮೂಹಗಳ ದೇಶ. ಬಾಲಿ ಈ ದೇಶದ ಜನಪ್ರಿಯ ಯಾತ್ರಾ ಸ್ಥಳವೆನ್ನಬಹುದಾದ ಒಂದು ದ್ವೀಪ. ಹತ್ತನೆಯ ಶತಮಾನದಿಂದಲೇ ಇಲ್ಲಿ ಹಿಂದೂ ರಾಜರ ಪ್ರಭಾವವಿತ್ತು. ರಾಜ ವರ್ಮದೇವ ಮತ್ತು ಅವನ ಸಂತತಿ ಇಲ್ಲಿನ ಹಿಂದೂ ಸಂಸ್ಕೃತಿಯ ವಿಕಸನಕ್ಕೆ ಕಾರಣರೆಂದು ಚರಿತ್ರೆ ಪುಸ್ತಕಗಳು ಹೇಳುತ್ತವೆ.

ನಾವು ಬಾಲಿಯ ಡೆನ್ ಪಸ್ಸಾರ್ ವಿಮಾನ ನಿಲ್ದಾಣ ಸೇರಿದಾಗ ಬೆಳಗ್ಗೆ ಒಂಭತ್ತೂವರೆ. ಇಳಿದುಕೊಳ್ಳಲು ನಾವು ಕಾಯ್ದಿರಿಸಿದ ವಿಲ್ಲಾ ಇದ್ದದ್ದು ಸೆಮನ್ಯಾಕ್ ಎಂಬ ಬಡಾವಣೆಯಲ್ಲಿ. ವಿಮಾನ ನಿಲ್ದಾಣದಿಂದ ಅಲ್ಲಿಗೆ ಸುಮಾರು ಮುಕ್ಕಾಲು ಗಂಟೆ ಪಯಣ. ದಾರಿಯುದ್ದಕ್ಕೂ ಹರಡಿದ್ದ ಮರಗಿಡಗಳು ಹಳ್ಳಿಯ ಮನೆಗಳು ಇವೆಲ್ಲಾ ನಮ್ಮ ಕೇರಳದ ದೃಶ್ಯಗಳನ್ನೇ ನೆನಪಿಸುವಂತಿದ್ದವು. ಹಾದಿ ಪಕ್ಕದ ಯಾವ ಮನೆಯನ್ನು ನೋಡಿದರೂ ಅದರ ಮುಂದೆ ಒಂದು ಪುಟ್ಟ ತುಳಸೀ ಕಟ್ಟೆ ಕಂಗೊಳಿಸುತ್ತಿತ್ತು. ಊರಿನ ಮಧ್ಯೆ ಇದ್ದ ಮಾರ್ಕೆಟ್ ಚೌಕದಲ್ಲಿ ಸ್ಥಾಪಿತವಾಗಿದ್ದ ಧನುರ್ಧಾರಿಯಾದ ಶ್ರೀರಾಮಚಂದ್ರನ ಭವ್ಯವಾದ ಪ್ರತಿಮೆ ಸುತ್ತ ಚಲಿಸುತ್ತಿದ್ದ ಯಾತ್ರಿಕರನ್ನು ಅವಲೋಕಿಸುತ್ತಿತ್ತು.

ನಾವು ವಿಲ್ಲಾ ಸೇರಿ ಸುಧಾರಿಸಿಕೊಂಡ ನಂತರ ಪಶ್ಚಿಮ ಬಾಲಿಯಲ್ಲಿರುವ ಥಾನಾ ಲಾಟ್ ದೇವಸ್ಥಾನಕ್ಕೆ ಪಯಣಿಸಿದೆವು. ಒಂಭತ್ತನೆಯ ಶತಮಾನದ ಈ ದೇವಸ್ಥಾನ ವರುಣ ದೇವನ ಅರ್ಚನೆಗೆ ಮೀಸಲು. ಅಂದಹಾಗೆ ಇಲ್ಲಿನ ದೇವರುಗಳೆಲ್ಲಾ ಇಂದ್ರ, ವರುಣ, ಅಗ್ನಿ, ಬ್ರಹ್ಮ ಅಂತ ಇದ್ದದ್ದನ್ನು ನೋಡಿದಾಗ ಇಲ್ಲಿನ ಹಿಂದೂ ಸಂಸ್ಕೃತಿಯ ಮೇಲೆ ವೇದ ಪೂರ್ವದ ಪ್ರಭಾವ ಸಾಕಷ್ಟಿರಬಹುದು ಅನ್ನಿಸಿತು. ಥಾನಾ ಲಾಟ್ ಸಮುದ್ರದ ತೀರದಲ್ಲಿನ ಗುಡ್ಡ ಒಂದರ ಮೇಲೆ ನಿಂತಿದೆ. ಅಲೆಗಳು ಉಬ್ಬರದಲ್ಲಿದ್ದಾಗ ಈ ಗುಡ್ಡ ತೀರದಿಂದ ಬೇರೆಯಾಗಿ ಒಂದು ದ್ವೀಪದಂತೆ ಕಾಣುತ್ತದೆ. ಅಲೆಗಳು ಕಡಿಮೆ ಇದ್ದಾಗ ಮಾತ್ರ ನಡೆದು ಹೋಗಿ ಗುಡ್ಡವನ್ನು ಸೇರುವುದು ಸಾಧ್ಯ. ಇಲ್ಲಿನ ಸೂರ್ಯಾಸ್ತಮ ನಿಜಕ್ಕೂ ಬಹು ಮನೋಹರ. ದೇವಸ್ಥಾನದ ಮುಂದೆ ಇದ್ದ ಹುಂಡಿಯ ಮೇಲೆ ''ಧನ ಪುಣಿಯಾ'' ಅಂತ ಇದ್ದದ್ದನ್ನು ನೋಡಿ ಮೋಜೆನಿಸಿತು.



ಆ ಸಂಜೆ ವಿಲ್ಲಾಗೆ ಹಿಂತಿರುಗಿದಾಗ ವಿಲ್ಲಾದ ಮುಖ್ಯ ದ್ವಾರದ ಮುಂದೆ ಒಂದು ಕಾಗದದ ತಟ್ಟೆಯ ಮೇಲೆ ಒಂದಷ್ಟು ಹೂವು, ಒಂದು ಊದುಕಡ್ಡಿ, ಒಂದು ಚಾಕಲೇಟು ಮತ್ತು ಒಂದು ಸಿಗರೇಟ್ ಇಟ್ಟಿದ್ದನ್ನು ಗಮನಿಸಿದೆ. ನಮ್ಮ ಸ್ವಾಗತಕಾರ ಅಲೆಡ್‌ನನ್ನು ಕುರಿತು ''ಇದೇನು?'' ಅಂತ ಕೇಳಿದೆ. ಅವನು ''ಇದು ಚನ್ನಾ'' ಎಂದ.

''ಹಾಗೆಂದರೆ?''

''ನಮ್ಮ ಸುತ್ತ ಒಳ್ಳೆಯ ದೇವತೆಗಳು ಹಾಗೂ ಕೆಟ್ಟ ಭೂತಗಳು ಸದಾಕಾಲ ಹೊಂಚು ಹಾಕುತ್ತಿರುತ್ತವೆ. ಈ ಚನ್ನಾದಲ್ಲಿರುವ ಸಿಗರೇಟು ಮತ್ತು ಚಾಕಲೇಟುಗಳಿಂದ ಕೆಟ್ಟ ಭೂತಗಳು ತೃಪ್ತರಾದರೆ ಹೂವು ಊದುಬತ್ತಿಗಳು ಒಳ್ಳೆಯ ದೇವತೆಗಳಿಗೆ ಕಾಣಿಕೆಯಾಗುತ್ತವೆ. ಆಗ ಅವು ತೃಪ್ತಿಗೊಂಡು ನಮಗೆ ಹಾನಿಮಾಡದೇ ಹೊರಟುಹೋಗುತ್ತವೆ'' ಅಂತ ಅಲೆಡ್ ವಿವರಿಸಿದ. ''ಒಳ್ಳೆಯ ದೇವತೆಗಳಿಗೆ ಕಾಣಿಕೆ ಯಾಕೆ? ಅವು ಹೇಗಿದ್ದರೂ ಒಳ್ಳೆಯದನ್ನು ತಾನೆ ಮಾಡುವುದು?'' ಅಂತ ತಮಾಷೆ ಮಾಡಿದೆ. ಅವ ನಕ್ಕು, ''ಅದು ಹಾಗಲ್ಲ, ಕೆಟ್ಟ ಭೂತಗಳಿಗೆ ಕಾಣಿಕೆ ಕೊಟ್ಟು ಒಳ್ಳೆಯವಕ್ಕೆ ಏನೂ ಕೊಡದಿದ್ದರೆ ಅವು ಹೊಟ್ಟೆಕಿಚ್ಚಿನಿಂದ ನಮಗೆ ಇನ್ನೂ ಹಾನಿ ಮಾಡಬಹುದಲ್ಲಾ!'' ಎಂದ.

ಮಾರನೆಯ ದಿನ ಮಧ್ಯ ಬಾಲಿಯಲ್ಲಿರುವ ಮನುಕಾಯ ಹಳ್ಳಿಯಲ್ಲಿನ ತೀರ್ಥ ಎಂಪುಲ್ ದೇವಸ್ಥಾನಕ್ಕೆ ಹೋದೆವು. ಹತ್ತನೆಯ ಶತಮಾನದಲ್ಲಿ ವರ್ಮದೇವ ಕಟ್ಟಿಸಿದ ದೇವಸ್ಥಾನವಿದ್ದು, ಇಲ್ಲಿ ಪವಿತ್ರವಾದ ತೀರ್ಥ ಮೂರು ಊಟೆಗಳಿಂದ ಸತತವಾಗಿ ಚಿಮ್ಮುತ್ತಿರುತ್ತದೆ. ಇಲ್ಲಿನವರು ಇವನ್ನು ಬ್ರಹ್ಮ ವಿಷ್ಣು ಮಹೇಶ್ವರ ಎಂದು ಗುರುತಿಸಿ ಪೂಜಿಸುತ್ತಾರೆ. ದೇವಸ್ಥಾನದ ಹೊರ ಪ್ರಾಕಾರದಲ್ಲಿ ಇಂದ್ರದೇವನ ಪ್ರತಿಮೆ ಭಕ್ತಾದಿಗಳನ್ನು ಸ್ವಾಗತಿಸುತ್ತಾ ನಿಂತಿದೆ. ನಾವು ಹೋದಾಗ ಇಲ್ಲಿ ಪೂಜೆ ಪ್ರಾರಂಭವಾಗುವುದರಲ್ಲಿತ್ತು. ಗರ್ಭಗುಡಿಗೆ ಹಿಂದೂಗಳಿಗೆ ಮಾತ್ರ ಪ್ರವೇಶ ಎಂದು ದ್ವಾರಪಾಲಕ ಹೇಳಿದ. ನಾನು ''ನಾನು ಸಹಾ ಹಿಂದೂ ಮತಸ್ಥ, ದಕ್ಷಿಣ ಭಾರತದಿಂದ ಬಂದಿದ್ದೇನೆ'' ಅಂತ ಹೇಳಿದಮೇಲೆ ನಾನು ಮತ್ತು ಆರತಿ ಒಳಗೆ ಹೋಗುವುದು ಸಾಧ್ಯವಾಯಿತು. ಪೂಜೆ ಮುಗಿದಮೇಲೆ ಬಿಳೀ ಪಾಯಿಜಾಮ ಬಿಳೀ ಕೋಟು ಧರಿಸಿದ ಪೂಜಾರಿ ನಮ್ಮ ಬಳಿಗೆ ಬಂದು ಮೂರು ಬಾರಿ ತೀರ್ಥ ಕೊಟ್ಟು, ತೀರ್ಥ ಸ್ವೀಕರಿಸಿದ ನಂತರ ತೀರ್ಥದಲ್ಲಿ ನೆನೆದ ಅಕ್ಕಿಕಾಳನ್ನು ನಮ್ಮ ಹಣೆಗೆ, ಕತ್ತಿಗೆ ದೋಷಪರಿಹಾರಾರ್ಥವಾಗಿ ಹಚ್ಚಿದ. ದೇವಸ್ಥಾನದ ಪುಷ್ಕರಣಿಯಲ್ಲಿ ಅನೇಕ ವಿದೇಶೀ ಯಾತ್ರಿಕರೂ ಸಹಾ ಮಿಂದು ಪಾವನರಾಗುತ್ತಿದ್ದರು.

ಇಲ್ಲಿಂದ ಕಾರಿನಲ್ಲಿ ಮುಂದಿನ ಪ್ರೇಕ್ಷಣಾಸ್ಥಳಕ್ಕೆ ಹೋಗುತ್ತಿದ್ದಾಗ ಮಧ್ಯಾಹ್ನ ಹನ್ನೆರಡಕ್ಕೆ ಸರಿಯಾಗಿ ರೇಡಿಯೋ ಬಾನುಲಿಯಿಂದ ಒಂದು ವಿಚಿತ್ರ ರಾಗದ ಶ್ಲೋಕ ಕೇಳಿಬಂತು. ನಮ್ಮ ಚಾಲಕ ''ಇದು ನಿಮಗೆ ಪರಿಚಯದ ಶ್ಲೋಕ ಇರಬೇಕಲ್ಲವೇ?'' ಅಂತ ಕೇಳಿದ. ನಾನು ಎಷ್ಟು ಸೂಕ್ಷ್ಮವಾಗಿ ಕೇಳಿಸಿಕೊಂಡರೂ ರಾಗದ ನಡುವಿನ ಪದಗಳು ಸ್ಪಷ್ಟವಾಗಿ ಕೇಳಿಸಲಿಲ್ಲ. ''ಏನಿದು?'' ಅಂತ ಕೇಳಿದೆ. ಆತ, ''ಇದು ಗಾಯತ್ರಿ ಮಂತ್ರ. ಪ್ರತಿದಿನ ಮಧ್ಯಾಹ್ನ ಹನ್ನೆರಡು ಗಂಟೆ ಹಾಗೂ ಸಂಜೆ ಆರಕ್ಕೆ ಇದನ್ನು ಕಡ್ಡಾಯವಾಗಿ ರೇಡಿಯೋದಲ್ಲಿ ಬಿತ್ತರಿಸುತ್ತಾರೆ'' ಅಂತ ಉತ್ತರಿಸಿದ. ರೇಡಿಯೋದಿಂದ ''ತಾತೂಸಾವೀರೇಣೀಯಾಮ್'' ಅಂತ ಗಾಯತ್ರಿ ಮುಂದುವರಿಯಿತು.

ನನ್ನ ಬಾಲಿ ಭೇಟಿಯಲ್ಲಿ ಮರೆಯಲಾಗದ ಒಂದು ಸ್ಥಳವೆಂದರೆ ಸತಿಯ ದರ್ಮ (ಸತ್ಯ ಧರ್ಮ?) ಎಂಬ ಒಬ್ಬ ಜಾವಾ ಮೂಲದವ ನಿರ್ಮಿಸಿರುವ ಮುಖವಾಡ ಮತ್ತು ತೊಗಲು ಬೊಂಬೆಗಳ ಮ್ಯೂಸಿಯಮ್. ರಾಮಾಯಣ ಮಹಾಭಾರತಗಳ ಪ್ರಭಾವ ಇಂಡೋನೇಷ್ಯಾದ ಮೇಲೆ ಬಹುವಾಗಿ ಆಗಿರುವುದನ್ನು ಈ ಮ್ಯೂಸಿಯಮ್‌ನಲ್ಲಿ ಬಹು ಸ್ಪಷ್ಟವಾಗಿ ಕಾಣಬಹುದು.



ನಮ್ಮಲ್ಲಿ ಯಕ್ಷಗಾನ ಆಡುವಂತೆ ಬಾಲಿಯಲ್ಲಿ ರಾಮಾಯಣದ ಪ್ರಸಂಗಗಳನ್ನು ರಾತ್ರಿಯೆಲ್ಲಾ ಆಡುತ್ತಾರೆ. ಈ ಆಟದಲ್ಲಿನ ಪಾತ್ರಧಾರಿಗಳಿಗೆ ಅವರವರ ಪಾತ್ರಕ್ಕೆ ತಕ್ಕಂತೆ ಮುಖವಾಡಗಳು ಬಳಸಲ್ಪಡುತ್ತವೆ. ಇಂತಹ ಅನೇಕ ಮುಖವಾಡಗಳನ್ನು ಈ ಸತಿಯ ದರ್ಮ ಹೌಸ್ ಆಫ್ ಮಾಸ್ಕ್ಸ್



ಎಂಡ್ ಪಪೆಟ್ಸ್‌ನಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದಾರೆ. ಪ್ರತಿಯೊಂದು ಮುಖವಾಡದ ಕೆಳಗೆ ಆ ಪಾತ್ರದ ಪರಿಚಯ ಓದಬಹುದು. ಸುಗ್ರೀವ ಮುಖವಾಡದ ಕೆಳಗಿನ ಪರಿಚಯ ''ಪ್ರಭು ಸುಗ್ರೀವರು...'' ಎಂದೇ ಪ್ರಾರಂಭವಾಗುತ್ತದೆ. ರಾವಣನ ಮುಖವಾಡಗಳಿಗಂತೂ ಲೆಕ್ಕವೇ ಅಲ್ಲ. ರಾವಣ ಮಾತ್ರವಲ್ಲ, ಅವನ ತಂದೆ ತಾತಂದಿರ ಮುಖವಾಡಗಳನ್ನೂ ಇಲ್ಲಿ ಕಾಣಬಹುದು.

ಒಂದು ಪರದೆಯ ಹಿಂದೆ ನಿಂತು ತೊಗಲು ಬೊಂಬೆಗಳನ್ನು ಆಡಿಸಿ ಅವುಗಳ ನೆರಳುಗಳು ಸೃಷ್ಟಿಸುವ ಮಾಯಾಲೋಕದ ಮೂಲಕ ರಾಮಾಯಣದ ಕತೆಯನ್ನು ಹೇಳುವ ಕಲೆ ಇಲ್ಲಿ ಬಹು ಜನಪ್ರಿಯ. ಇದಕ್ಕೆ ಬಳಸುವ ತೊಗಲು ಬೊಂಬೆಗಳನ್ನೂ ಈ ಮ್ಯೂಸಿಯಮ್‌ನಲ್ಲಿ ಕಲೆಹಾಕಿದ್ದಾರೆ. ಈ ಎಲ್ಲ ಅಮೂಲ್ಯ ವಸ್ತುಗಳನ್ನು ಮೂರು ವಿಶಾಲವಾದ ಪ್ರದರ್ಶನ ಗೃಹಗಳಲ್ಲಿ ಬಹು ಅಂದವಾಗಿ ಜೋಡಿಸಿಟ್ಟಿದ್ದಾರೆ. ಪ್ರದರ್ಶನ ಗೃಹಗಳ ಸುತ್ತಲಿನ ಪರಿಸರವೂ ಸಹಾ ಅಷ್ಟೇ ನಯನಮನೋಹರವಾಗಿದ್ದು ಒಟ್ಟಾರೆ ಅನುಭವ ಬಹುಕಾಲ ಮನಸ್ಸಿನಲ್ಲಿ ನಿಲ್ಲುತ್ತದೆ.

ಮೂರುದಿನಗಳ ಕಾಲ ವೇದಗಳ ಕಾಲದ ಹಿಂದೂ ನಾಡಿನಲ್ಲಿ ಕಳೆದು ಹಿಂತಿರುಗಿದಾಗ ನಮ್ಮ ಸನಾತನ ಯುಗಕ್ಕೆ ಕಾಲಯಾನಯಂತ್ರದಲ್ಲಿ ಯಾನಮಾಡಿ ಹಿಂತಿರುಗಿದಂತೆ ಭಾಸವಾಯಿತು.

---

## ಯುಗಾದಿಯಲ್ಲಿ....

ಯುಗಾದಿ ಹಬ್ಬಕ್ಕೆ ಮನೆಗೆ
ಹಸಿರಿನ ತೋರಣ ಚೆಂದ
ನವವಸ್ತ್ರ ಧರಿಸಿ ಕುಣಿವ
ಮುದ್ದು ಮಕ್ಕಳ ಮೊಗವಂದ



ಒಬ್ಬಟ್ಟಿನೂಟವ ಮೆಲುವುದು
ಮನಕೆ ಮಹದಾನಂದ
ಬೇವು ಬೆಲ್ಲಗಳ ಸಮ್ಮಿಶ್ರಣದ ಸವಿ
ಹೀರುವುದು ಜೀವಕಾನಂದ

ಮರಳಿ ಬರುತಿರಲಿ ಯುಗಾದಿ
ತಣಿಸಲಿ ಮನಕೆ ಕವಿಯುವ ಬೇಗುದಿ
ಸಾಗಲಿ ಸುಗಮವಾಗಿ ಬಾಳಿನ ಹಾದಿ
ಸ್ವಾಗತಿಸಲು ಮತ್ತೊಂದು ಯುಗಾದಿ

– **ಸುಕೇಶವ**

**ಭಾರತೀಯ ವಿದ್ಯಾ ಭವನ, ಬೆಂಗಳೂರು**
**ಮತ್ತು**
**ಕೊರವಂಜಿ ಅಪರಂಜಿ ಟ್ರಸ್ಟ್, ಬೆಂಗಳೂರು ಅರ್ಪಿಸುವ**

# ಅಪರಂಜಿ ಹಬ್ಬ 2018

**ಭಾನುವಾರ, 1.4.2018, ಬೆಳಗ್ಗೆ 10 ಗಂಟೆಯಿಂದ**

**ಸ್ಥಳ : ಖಿಂಚಾ ಸಭಾಂಗಣ, ಭಾರತೀಯ ವಿದ್ಯಾ ಭವನ**
**ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560 001**

ಚಾಲನೆ ಕೊಡುವವರು – **ಶ್ರೀ ಎನ್. ರಾಮಾನುಜ**
ಅಧ್ಯಕ್ಷರು, ಭಾರತೀಯ ವಿದ್ಯಾಭವನ, ಕರ್ನಾಟಕ

ಅಪರಂಜಿ ವಿಶೇಷಾಂಕ ಬಿಡುಗಡೆ – **ಡಾ. ಡಿ.ವಿ. ಗುರುಪ್ರಸಾದ್**
ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿಗಳು ಮತ್ತು ಲೇಖಕರು

ಅಧ್ಯಕ್ಷತೆ – **ಶ್ರೀ ಶ್ರೀನಿವಾಸ ವೈದ್ಯ**
ಹಿರಿಯ ಲೇಖಕರು – ಮತ್ತು ಕೇಂದ್ರ
ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

ಎಲ್ಲರಿಗೂ ಪ್ರೀತಿಪೂರ್ವಕ ಆಹ್ವಾನ

**ಎನ್. ರಾಮಾನುಜ**
ಅಧ್ಯಕ್ಷರು, ಭಾರತೀಯ ವಿದ್ಯಾಭವನ ಕರ್ನಾಟಕ

**ಶ್ರೀ ಎಂ. ಶಿವಕುಮಾರ್**
ಮ್ಯಾನೇಜಿಂಗ್ ಟ್ರಸ್ಟಿ, ಕೊರವಂಜಿ ಅಪರಂಜಿ ಟ್ರಸ್ಟ್

## ಅಪರಂಜಿ ಹಬ್ಬದ ಕಾರ್ಯಕ್ರಮಗಳು

1 ಅಪರಂಜಿ ನಡೆದು ಬಂದ ಹಾದಿಯತ್ತ ಒಂದು ಕಿರುನೋಟ – ಎಂ. ಶಿವಕುಮಾರ್
2. ಅಪರಂಜಿ ಕಿಡಿಯ ಕುಡಿಗಣ್ಣೋಟ – ಡಾ. ಎಂ. ಓಂಪ್ರಕಾಶ್
3. ಬದುಕು ಬರಹ : ಅಪರಂಜಿ ಲೇಖಕಿಯರೊಂದಿಗೆ ಮಾತುಕತೆ
ಶ್ರೀಮತಿ ವಾಣಿ ಸುರೇಶ್ – ಶ್ರೀಮತಿ ಕುಮುದ ಪುರುಷೋತ್ತಮ್
ಶ್ರೀಮತಿ ಶ್ಯಾಮಲ ರವಿಶಂಕರ್ – ಶ್ರೀಮತಿ ಸಹನಾ ಪ್ರಸಾದ್ – ಶ್ರೀಮತಿ ಗಾಯತ್ರಿ ಮೂರ್ತಿ
ಗೋಷ್ಠಿ ನಿರ್ವಹಣೆ : ಶ್ರೀಮತಿ ಭುವನೇಶ್ವರಿ ಹೆಗಡೆ
4. ಹಾಸ್ಯ ಮಧುರ ಗೀತೆಗಳ ಗಾಯನ - ಶ್ರೀ ವೈ.ವಿ.ಗುಂಡೂರಾವ್
5. ಕ್ಯಾರಿಕೇಚರ್ ಲೈವ್ – ಪ್ರಕಾಶ್ ಶೆಟ್ಟಿ ಅವರ ಕಾರ್ಯ–ಕರ್ಮ

ಕಾರ್ಯಕ್ರಮದ ನಂತರ ಭೋಜನ ಕೂಟ ಇದೆ

**ಅಪರಂಜಿ ಹಬ್ಬದ ಪ್ರಾಯೋಜಕರು : ರಾಮಯ್ಯ ಸಮೂಹ ಸಂಸ್ಥೆಗಳು – ಬೆಂಗಳೂರು**



# ಕೊನೆಯ ನಮಸ್ಕಾರ

**- ಕೊಳ್ಳೇಗಾಲದ್ರಾಮಾನುಜ**

ತೋಟಗಾರಿಕಾ ಪ್ರಶಿಕ್ಷಣ ಪದವಿಯ ಪ್ರಶಸ್ತಿ ಪತ್ರವನ್ನು ಅಧ್ಯಕ್ಷರು ಕೈಗೆ ಕೊಟ್ಟು ಬೆನ್ನು ತಟ್ಟಿದಾಗ ಹನುಮನಿಗೆ ಅನಿರ್ವಚನೀಯ ಅನುಭವವಾಯಿತು. ಬೆಟ್ಟವನ್ನು ಹೊತ್ತೇನೆಂಬ ಉತ್ಸಾಹ. ಹಳ್ಳಿಗಳ ಪುನರುದ್ಧಾರವೇ ಭಾರತದ ಭವ್ಯ ಭವಿಷ್ಯಕ್ಕೆ ಮಾರ್ಗ, ರೈತನ ಏಳಿಗೆಯೇ ಹಳ್ಳಿಗಳ ಪುನರುದ್ಧಾರ. ತೋಟಗಳ ಬೆಳವಣಿಗೆಯೇ ರೈತನ ಏಳಿಗೆ. ತೋಟಗಳ ಬೆಳವಣಿಗೆಗೆ---

ಇದಕ್ಕೆ ಇನ್ನೂರು ಪಾಲು ಆನಂದ, ಸಂಜೀವಿನಿಯನ್ನು ಹೊತ್ತು ಆಗಸಕ್ಕೆ ಹಾರಿದ ಆಂಜನೇಯನಷ್ಟು ಹುಮ್ಮಸ್ಸು, ಕೊಳ್ಳೇಗಾಲದ ಮರಳೀ ಗುಡ್ಡದ ಮೇಲೆ ನಿಂತು ಸುತ್ತಲೂ ನೋಡಿದಾಗ ಹನುಮ ಅನುಭವಿಸಿದ.

> ಆಸೆಪಟ್ಟ
> ತೋಟಗಾರಿಕೆಗೆ
> ತಿಲಾಂಜಲಿ
> ಬಿಡುವಂತಾದರೆ

ಅಂದು ಮಟ ಮಟ ಮಧ್ಯಾಹ್ನ, ಸೂರ್ಯನ ಪ್ರಖರ ಕಿರಣಗಳಿಂದ ಮರಳೀ ಗುಡ್ಡದ ಬಂಡೆಗಳು ಕಾದ ಕಬ್ಬಿಣವಾಗಿದ್ದವು. ತೋಟಗಾರಿಕಾ ಕೇಂದ್ರದಿಂದ ಕೊಳ್ಳೇಗಾಲಕ್ಕೆ ಫೀಲ್ಡ್‌ಮನ್ ಆಗಿ ಬಂದ ಹನುಮ, ಬಸ್ಸಿಂದಿಳಿದವನೇ ನೇರ ಮರಳೀ ಗುಡ್ಡವನ್ನು ಹತ್ತಿ ಊರಿನ ಸುತ್ತಳತೆ, ವಿಸ್ತೀರ್ಣಗಳನ್ನು ಗುಣಿಸತೊಡಗಿದ. ಊರೆಲ್ಲ ಭಣ ಭಣ ಗುಟ್ಟುತಿತ್ತು. ದೃಷ್ಟಿ ಎಟಕುವವರೆಗೂ ಬರಡು ಭೂಮಿ ಬಿರಿದ ನೆಲ. ಹಸುರು ಎನ್ನುವುದು ಹೆಸರಿಗೂ ಇಲ್ಲ. ಹನುಮನಿಗೆ ಬೆಂಗ್ಳೂರಿಂದ ಮಾಡಿದ ಪ್ರಯಾಣದ ಆಯಾಸವೆಲ್ಲಾ ಕ್ಷಣದಲ್ಲಿ ಮಾಯವಾಗಿ ಹೋಯಿತು. ಕಾದ ಕಲ್ಲೂ, ಮಂಡೆ ಬಿರಿಯುವಂತೆ ಉರಿಯುತ್ತಿದ್ದ ಸೂರ್ಯನ ಶಾಖವೂ ಹನುಮನಿಗೆ ಏನೋ ತಂಪು ತಂಪಗೆ ಅನಿಸಿತು. ಈ ಬರಡು ಭೂಮಿಯನ್ನು ಬಂಗಾರ ಮಾಡಿದರೇನೇ ಸೈ! ಅಹ! ಎಷ್ಟು ವಿಶಾಲವಾದ ಊರು. ನಾನು ಕಲಿತದ್ದೆಲ್ಲಾ ಪ್ರಯೋಗಿಸಲಿಕ್ಕೆ ಅದೆಷ್ಟು ಅವಕಾಶಗಳು! ಎಂದುಕೊಂಡ.

ಮರಳೀ ಗುಡ್ಡದ ತಪ್ಪಲಲ್ಲೇ - ಪಂಚಾಯತಿ ಕ್ವಾರ್ಟರ್ಸ್, ಹನುಮನಿಗೆ ಅಲ್ಲೇ ವಾಸ. ಸೊಗಸಾದ ಸಿಮೆಂಟ್ ಕಾಂಕ್ರೀಟ್ ಮನೆ. ಮೂರು ನಾಲ್ಕು ಕೊಠಡಿಗಳು. ಹನುಮ ತನ್ನ ಹಡಪದಲ್ಲಿ ತಂದಿದ್ದ ಎಲ್ಲಾ ವಿಧದ ಚಿತ್ರ ವಿಚಿತ್ರ ಬೀಜಗಳನ್ನು ಕೊಠಡಿಗಳಲ್ಲಿ ಓರಣವಾಗಿ ಜೋಡಿಸಿದ. ಬಣ್ಣ ಬಣ್ಣದ ಹಣ್ಣುಗಳ ಚಿತ್ರಗಳನ್ನು ಗೋಡೆಗಳಿಗೆ ನೇತುಹಾಕಿದ.



ಕೊಳ್ಳೇಗಾಲಕ್ಕೆ ಫೀಲ್ಡ್‌ಮನ್ ಆಗಿ ಹನುಮ ಹೊರಟಾಗ ತೋಟಗಾರಿಕಾ ಅಧ್ಯಕ್ಷರು ''ಊರಿಗೆ ಹೋದವನೇ ಮೊದಲು ಅಲ್ಲಿನ ಹತ್ತು ಸಮಸ್ತರು ಅಂದರೆ ಎಲ್ಲದಕ್ಕೂ ಮುಂದೆ ಬರೋ ವ್ಯಕ್ತಿಗಳು, ಎಮ್ಮೆಲೆಗಳು, ಪಂಚಾಯ್ತೀವ್ರು, ಪುಢಾರಿಗಳು, ಪಾರ್ಟಿಗಳವರು - ಎಲ್ಲರಿಗೂ ನಮಸ್ಕಾರ ಹಾಕಿ, ಬಿಟ್ಟಿ ಬಿತ್ತನೆಗಳನ್ನು ಕೊಟ್ಟು, ನಂತರ ಕೆಲಸ ಶುರುಮಾಡಪ್ಪಾ, ಹೊಸಬಾ ನೀನು, ಇನ್ನೂ ಪಳಗಬೇಕು'' ಎಂದಿದ್ದರು. ಒಂದೆರಡು ದಿನಗಳಲ್ಲಿ ಕೊಳ್ಳೇಗಾಲದಲ್ಲೆಲ್ಲಾ ಹನುಮನ ಮಾತೇ ಆಯಿತು. ''ಈ ಊರಿಗೆ ಇದೊಂದು ಕೇಡು'' ಎಂದು ಸರ್ವೆಯರ್ ಶಣ್ಮುಖರೆಂದರೆ ''ಪರವಿಲ್ಲಾ,

ನಮ್ಮೂರ ಕಡೇನೂ ಸರ್ಕಾರಕ್ಕೆ ಗಮನ ಹತ್ತಿದೆ'' ಅಂತಂದ್ರು ದೊಡ್ಡಟ್ಟಿ ದಮಾಸೆಯವರು. ಊರಿನ ಹತ್ತೂ ಸಮಸ್ತರೂ ಹನುಮನಿಗೆ ಹತ್ತು ಮಾತು – ಹತ್ತು ದಾರಿ ಹೇಳಿದರು. ಕಸಿ ಸಸಿ ಯಾವ್ಯಾವುದಿದೆ? ತೆಂಗಿನ ಸಸಿಗಳು ಯಾವಾಗ ಬರುತ್ವೆ? ಮಾವು ನೆಡೋಕೆ ಇದೀಗ ಸರಿಯಾದ ಸಮಯ, ಕೂಡ್ಲೆ ಒಂದ್ನೂರ್ ಸಸಿ ತರ್ಸಿದ್ರೆ ಸರಿಹೋಗುತ್ತೆ ಅಂತ ಹನುಮನ ಬೆನ್ನು ಚಪ್ಪರಿಸಿದರು.

ಹನುಮನ ಫೀಲ್ಡ್ ರಿಪೋರ್ಟ್‌ಗಳು ಅಧ್ಯಕ್ಷರಿಗೆ ತಲುಪಿದಾಗ ಅವರು ಮನಸ್ಸಿನಲ್ಲೇ 'ಭಲೆ ಹನುಮ!' ಅನ್ಕೋತಿದ್ದರು. ''ಎಲ್ಲರೂ ಮನೆಗಳಲ್ಲಿ ತೋಟಗಳಲ್ಲಿ ಹಳ್ಳ ತೋಡಿ ಇಟ್ಟಿದಾರೆ ಸಾರ್. ಮರಳು ಗೊಬ್ಬರ ಹಾಕಿ ಸಸಿಗಳಿಗೆ ಕಾದು ಕುಳಿತಿದ್ದಾರೆ ಸಾರ್. ಒಳ್ಳೇ ಕೆಂಜಗದ ತೆಂಗಿನ ಸಸಿಗಳು ಒಂದ್ನೂರಾದ್ರೂ ಕೂಡಲೇ ಕಳಿಸಬೇಕು ಸಾರ್'', ''ಪನ್ನೇರಳೆ, ಅಂಜೂರ ಅದೆಲ್ಲಾ ಈ ಊರಿಗೆ ಸರಿ ಅಲ್ವಂತೆ ಸಾರ್ ಬರೀ ಕಪಿ ಕಾಟ, ಕಾಯೋದು ಭಾಳ ಕಷ್ಟ, ಒಳ್ಳೇ ಕಸಿ ಮಾವು, ಮಲಗೂಬೆಯೋ



ಬಾದಾಮಿಯೋ ಆದರೆ ಬಹಳ ಒಳ್ಳೇದು, ಕೂಡ್ಲೆ ತರ್ಸು ಅಂತ ಜಲುಮ್ ಮಾಡ್ತಿದಾರೆ ಸಾರ್'' ಅಂತ ದಿನಾ ಒಂದಿಲ್ಲ ಒಂದ್ ತರಾ ಪತ್ರ ಹನುಮನಿಂದ ಅಧ್ಯಕ್ಷರಿಗೆ ಬರುತ್ತಲೇ ಇರೋದು.

ಇಷ್ಟೆಲ್ಲಾ ಆಗೋ ಹೊತ್ತಿಗೆ ಹನುಮ ಕೊಳ್ಳೇಗಾಲಕ್ಕೆ ಬಂದು ತಿಂಗಳೆರಡು ಕಳೀತಾ ಬಂತು. ಊರಿನ ಭೂಮಿಯಿಂದ ಇಲ್ಲಿತನಕ ಒಂದ್ ಪಚ್ಚೆ ಎಬ್ಬಿಸಿರಲಿಲ್ಲ. ತನ್ನ ಕ್ವಾರ್ಟರ್ಸ್‌ನಲ್ಲಿ ಕುಂಡ



ಒಂದರಿಂದ ಕುಂಬಳದ ಬಳ್ಳಿಯೊಂದನ್ನೆಬ್ಬಿಸಿದ್ದ. ಜನರ ಭೇಟಿ ಪ್ರಚಾರದಲ್ಲೇ ಅವನ ವೇಳೆಯೆಲ್ಲಾ ಕಳೆದುಹೋಗಿದ್ದಿತು. ಬದನೆ, ಬೆಂಡೆ, ದಂಟು, ಚಕ್ಕೋತ ಬೆಳೀರೋ ಭಾಳ ಒಳ್ಳೇ ಫಸಲು ಬರುತ್ತೆ, ಜಪಾನು, ಜರ್ಮನಿಯಿಂದ ತರ್ಸಿರೋ ಬಿತ್ತನೆ. ಬಿಟ್ಟಿಗೆ ಕೊಡ್ತೇನೆಂದ್ರೆ ಊರವರು ''ಅದೆಲ್ಲಾ ಬೆಳೀಂತ ಹೇಳೋಕೆ ನೀನೇ ಆಗ್ಬೇಕಾ? ದಿನಾ ಅವಕ್ಕೆ ನೀರೆಲ್ಲಿಂದ ತರೋಣ? ಆಪಾಟಿ ಬೆವರು ಹರ್ಸಿದ್ರೆ ಬರೋದು ಅಷ್ಟರಲ್ಲೇ ಐತೆ! ಒಳ್ಳೇ ತೆಂಗಿನ ಸಸಿ ಆದ್ರೆ ಸೈ'' ಅನ್ನುತ್ತಿದ್ದರು. ದಿನಾ ರಾತ್ರಿ ಮಲಗೋಕ್ ಮುಂಚೆ ಕುಂಡದ ಕುಂಬಳಕ್ಕೆ ನೀರು ಬಿಡುತ್ತಾ ಹುಲುಸಾಗಿ ಮಹಡಿ ಮೇಲೆಲ್ಲಾ ಹಬ್ಬಿ ಈಗಾಗಲೇ ಹೂ ಬಿಟ್ಟಿದ್ದ ಬಳ್ಳಿಯ ಎಲೆಗಳನ್ನು ಸವರುತ್ತಾ ''ಎಂಥಾ ಭೂಮಿ! ಚಿನ್ನ ಆದ್ರೇನ್ಮಾಡೋದು, ಜನ ಕೇಳ ಒಲ್ಲರು. ಎಲ್ಲರಿಗೂ ತೆಂಗು, ಮಾವೇ ಬೇಕು. ನೆಟ್ಟು ನೀರಿಟ್ಟರೆ ತಲೆ – ತಲೇನೂ ತಿನ್ಬೇಕೂಂತಾರಲ್ಲ!'' ಎಂದು ಚಿಂತಿಸುತ್ತಿದ್ದನು. ಕನಸಿನಲ್ಲೂ ಸೊಪ್ಪು ಸದೆಗಳೇ.

ಒಂದು ದಿನ ಮುಂಜಾನೆ ಕೇಂದ್ರದಿಂದ ಲಾರಿಯಲ್ಲಿ ನೂರು ತೆಂಗು. ನೂರು ಹಲಸಿನ ಸಸಿಗಳು ಕೊಳ್ಳೇಗಾಲಕ್ಕೆ ಬಂದವು. ಹನುಮನ ವೈಭವ ಹೇಳತೀರದು. ಲಾರಿಯನ್ನು ಹತ್ತಿ ತೆಂಗಿನ ಸಸಿಗಳನ್ನು ತಬ್ಬಿ ಕೆಳಗಿರಿಸಿಕೊಳ್ಳತೊಡಗಿದನು. ಕೆಳಗಿರಿಸಿಕೊಳ್ಳುತ್ತಿದ್ದಂತೆಯೇ ಊರಿನ ಹತ್ತು ಸಮಸ್ತರು ಹತ್ತತ್ತು ಸಸಿಗಳನ್ನು ಹೊತ್ತು ಹೊರಸಿಕೊಂಡು ನಡೆದರು. ಲಾರಿಯಿಂದ ಕೆಳಕ್ಕೆ ಇಳಿದಾಗ ಹನುಮ ಕಂಡುದು ಹತ್ತು ಹಲಸಿನ ಸಸಿಗಳನ್ನು, ಊರಿನ ನೂರು ಜನರನ್ನು.

''ಲೋ ಹನುಮಾ ಸಸಿ ಕೊಡಿಸ್ತೀನೀಂತ ಆಸೆ ಹುಟ್ಟಿಸಿ ತೋಟದಲ್ಲೆಲ್ಲಾ ಹಳ್ಳ ತೋಡಿಸ್ದೆ, ನಿನ್ನ ಹೂಳೋಕೇನಾ? ಸರ್ಕಾರದ ಸಂಬ್ಳ ಇದೇನಾ ತಿನ್ನೋದು? ಗುರುತ್ಕಂಡವರಿಗೆಲ್ಲಾ ಹಂಚೋಕೆ ಇದೇನ್ ನಿನ್ನ ಅಪ್ಪಂದೇನೋ?'' ಎಂದು ಕಿರುಚಿದ ಖಸಾರಿ.

''ಹಲ್ಸಿನ ಸಸಿ ಈ ಸಲ...'' ಎಂದು ಹನುಮ ಬೆವರೊರಸಿಕೊಂಡು ಬಾಯಿಬಿಡುವುದರಲ್ಲಿ ಹಲ್ಸಿನ ಸಸಿ ಹಿತ್ಲಲ್ಲಿ ಹಾಕಿ ದೆವ್ವ ಬರ್ಸ್ಕೊಂಡಿಯೋ? ಅಂತ ನೆಗೆದು ಬಿದ್ರು ದೊಡ್ಡಟ್ಟಿ ದಮಾಸೆಯವರು. ಅಂತೂ ಗಲಾಟೆಯಿಂದ ಪಾರಾಗೋದರಲ್ಲಿ ಹನುಮನಿಗೆ ಸಾಕುಸಾಕೆನಿಸಿತು... ಅಂದು ರಾತ್ರಿ ಕನಸಿನಲ್ಲೆಲ್ಲಾ ಅವನಿಗೆ ಸೊಪ್ಪು ಸದೆಗಳಿಗೆ ಬದಲು ಮಚ್ಚು ಕೊಡಲಿಗಳೇ ಕಂಡವು. ''ನಾಳೆಯಿಂದ ನಮ್ಮ ತೋಟಕ್ಕೆ ಕಾಲಿಟ್ಟೀಯೇ!'' ಅಂತ ಮಚ್ ತಿರುಗಿಸುತ್ತಾ ಬಸಾರಿ ಹೇಳ್ತಾ ಇದ್ರೆ, ಕೊಡಲಿ ಕಾವಿನ ಮೇಲೆ ಕೈಯೂರಿ ದಮಾಸೆಯವರು ''ಬಾಪ್ಪ, ನಂಮ್ ಹಿತ್ಲಿಗೆ ಬಾ ಹಳ್ಳ ತೋಡಿದೆ'' ಎನ್ನುತ್ತಿದ್ದರು. ನಿದ್ದೆಯಲ್ಲಿ ಅಂದು ನಾಲ್ಕಾರು ಬಾರಿ ಕಿರಿಚಿಕೊಂಡು ಎದ್ದ. ರಾತ್ರಿಯೆಲ್ಲಾ ಕನವರಿಸುತ್ತಿದ್ದ.

ಬೆಳಿಗ್ಗೆ ಎದ್ದಾಗ 'ಸಾಕು ಈ ಊರು. ಏನಾದರೂ ಮಾಡಿ ಈ ಊರು ಬಿಡಬೇಕು'' ಎಂದು ನಿರ್ಧರಿಸಿಯೇ ಬಿಟ್ಟ. ಮಲೆನಾಡಾದರೂ ಸರಿ, ಮಲೇರಿಯಾದರೂ ಸರಿ, ಈ ಊರು ಮಾತ್ರ ಬೇಡ ಎಂದುಕೊಂಡ. ಅಷ್ಟರಲ್ಲಿ ಪುಢಾರಿ ಮಾದೇಶಯ್ಯನವರು ಬಂದರು. ಹಿಂದಿನ ದಿನ ಹತ್ತು ಸಸಿ ಹೊತ್ತಾಕ್ಕಿದವರಲ್ಲಿ ಇವ್ರೂ ಒಬ್ಬರು. ''ಇದೇನ್ ಬಂತಪ್ಪಾ ಗ್ರಹಚಾರ'' ಅಂತ ಹನುಮ ಅಂದ್ಕೊಳ್ಳೋವಷ್ಟರಲ್ಲಿಯೇ ಅವರೇ 'ಹನುಮಾ, ಏನ್ ಹೆದರಬೇಡ ಕಣಪ್ಪಾ. ಅರೀದವ್ನೂಂತ ಆಳ್ಗೊಂದ್ ಮಾತ್ ಅಂತಾರೆ. ನೆನ್ನೆ ನಾವ್ ಹೋದ್ಮೇಲೆ ಗಲಾಟೆ ಮಾಡದ್ರಂತೆ! ಕಂಪ್ಲೇಂಟ್ – ಗಿಂಪ್ಲೇಂಟ್ ಅಂದ್ರಂತೆ. ಅದ್ ಯಾವ ಇಸಮು ನಿನ್ಮೇಲೆ ಮಾತ್ ಎತ್ ತಾನೆ ನೋಡ್ತೀನಿ. ನಿಮ್ಮ ಅಧ್ಯಕ್ಷರ ಹೆಂಡ್ತಿ ತಂಗೀನ ನಮ್ ತಿಮ್ಮೇಗೌಡ್ರುಗೆ ಕೊಟ್ಟಿರೋದು, ಅಂದ್ಹಾಗೆ ಮಾವಿನ ಸಸಿಗಳು



ಯಾವಾಗ ಬರುತ್ವಪ್ಪಾ? ಇನ್ನೂ ಸ್ವಲ್ಪ ತೆಂಗಿನ ಸಸಿಗಳು ಬೇಕು'' ಅಂತಂದ್ರು. ಹನುಮ ಏನೂ ಮಾತಾಡ್ಲಿಲ್ಲ, ಆದರೆ ಅವರು ಆ ಕಡೆ ಹೋದಾಕ್ಷಣ ಇವನಿಗೇನೋ ಹೊಳೀತು. ನೇರ ತಿಮ್ಮೇಗೌಡ್ರ ಮನೆಗೆ ಹೋದ. ತನ್ನ ಕತೆಯನ್ನೆಲ್ಲಾ ಕಳಕಳಿಯಿಂದ ಗೌಡ್ರ ಹತ್ತಿರ ಹೇಳ್ಕೊಂಡು, ಅವರ ಪತ್ನಿಯವರ ಹತ್ತಿರ ಹೇಳ್ಸಿ ಹೇಗಾದ್ರೂ ಮಾಡಿ ಬೇರೆ ಕಾಡಿಗಾದರೂ ಸರಿ, ಹಾಕಿಸ್ಬಿಡಿ ಎಂದು ಬೇಡಿದ. ತಿಮ್ಮೇಗೌಡ್ರು ಭಾಳ ಒಳ್ಳೇ ವ್ಯಕ್ತಿ. ಈ ತರಹ ಪ್ರಸಂಗಗಳಲ್ಲಿ ಹಿಂದುಳಿದ ವ್ಯಕ್ತಿಯೇ ಅಲ್ಲ. ''ಅದ್ಕೇನಪ್ಪ ಅದೇನ್ ದೊಡ್ಡ ಸಹಾಯ ಹೇಳು. ಸಂಜೆಗೆ ಬಾ'' ಅಂದ್ರು.

ಸಂಜೆ ಹೋದಾಗ ಪೇಟೆಯಿಂದ ಮೆಣಸು, ಜೀರಿಗೆ ತರ್ಸಿದರು. ಮತ್ತೆ ಬೆಳಗ್ಗೆ ಸಂಜೆ ಹೀಗೇ ತಿಂಗಳುರುಳಿತು. ಇತ್ತೀಚೆಗೆ ಫೀಲ್ಡ್ ಮನ್ ಹನುಮನ ಫೀಲ್ಡೆಲ್ಲಾ ತಿಮ್ಮೇಗೌಡ್ರ ಕಾಂಪೌಂಡೆ. ರಾತ್ರಿ ಠಿಕಾಣಿಯೂ ಅಲ್ಲೇ. ಅವರ್ಮನೆ ಜಗಲೀಮೇಲೇನೇ ಒಂದು ಚಾಪೆ ಹಾಸಿ. ಕಂಬ್ಳಿ ಹೊದ್ದು ಉರುಳಿಕೊಳ್ಳೋದು. ಬೆಳಗ್ಗೆ ಹೊತ್ತಗೆ ಮುಂಚೆ ನೀರೊಲೆಗೆ ಉರಿ ಹಾಕಿ ತಿಂಡಿ ತಿನ್ನೋಕೆ ಹೋಟಲಿಗೆ ಹೋಗುತ್ತಾನೆ. ಮತ್ತೆ ಗೌಡ್ರ ಮನೆಗೆ ಹೋಗಿ ಗಿಡಗಳಿಗೆಲ್ಲಾ ನೀರು ಬಿಟ್ಟು, ಅದೂ ಇದು ಸುತ್ತಿ ಕೆಲ್ಸ ಮಾಡಿಕೊಟ್ಟು ಪೇಟೆ ಹೋಟಲಿಗೆ ಊಟಕ್ಕೆ ಹೊರಡುತ್ತಾನೆ. ಸಂಜೆ ಒಂದ್ಸಲ ತಿಮ್ಮೇಗೌಡ್ರ ಹತ್ತಿರ ತನ್ನ ವಿಚಾರ ತೆಗಿತಾನೆ. ಗೌಡ್ರದು ''ಖಂಡಿತ ಖಂಡಿತ... ಆಗಲಿ... ಆಗಲಿ'' ಅಂತ ಉತ್ತರ.

ಒಂದು ಸಂಜೆ ಸುಮಾರು ಏಳು ಏಳೂವರೆ ಹೊತ್ತಿಗೆ ಹನುಮ ಗೌಡ್ರ ಮನೆಗೆ ಪೇಟೆಯಿಂದ ಸಾಮಾನ್ - ಗೀಮಾನೇನಾದ್ರು ತರೋದಿದೆಯಾ ಎಂದು ವಿಚಾರಿಸಲಿಕ್ಕೆ ಬಂದಾಗ, ಒಳಗಡೆಯಿಂದ ಅಮಾವ್ರು ''ಹನುಮ ಭಾಳ ಚೆನ್ನಾಗಿ ಸುತ್‌ಕೆಲ್ಸ ಮಾಡ್ತಾನೇರಿ. ಅವ ಬಂದಮೇಲೆ ನನ್ನ ಮುಕ್ಕಾಲು ಪಾಲು ಕೆಲ್ಸ ಕಡಿಮೆ ಆಗಿದೆ. ಅವನ್ನ ಇಲ್ಲೇ ಇರಿಸ್ಕೋಬೇಕು'' ಅಂತ್ಹೇಳ್ತಿದ್ಲು.

''ಅದೇನೋ ಟ್ರೋನ್ಸ್‌ಫರ್ ಅಂತಲ್ಲೇ... ಇರಲಿ ಬಿಡು.. ಇಲ್ಲೇ ಆದಷ್ಟು ದಿನ..'' ಅಂತ ಗೌಡ್ರು ಮಾತು ಮುಂದುವರಿಸಿದರು.

ಹನುಮ ಮುಂದೆ ಕೇಳಿಸಿಕೊಳ್ಳಲಿಲ್ಲ, ತನಗೆ ಕವಿದಿದ್ದ ಅದಾವುದೋ ಮಬ್ಬು ಹರಿದಂತೆ ಭಾಸವಾಯಿತು. ನೇರ ಕ್ವಾರ್ಟರ್ಸ್‌ಗೋಡಿದ. ಗೋಡೆಗೆ ನೇತು ಹಾಕಿದ್ದ ಚಿತ್ರಗಳನ್ನೆಲ್ಲಾ ಕಿತ್ತು ಪೆಟ್ಟಿಗೆಗೆ ಸೇರಿಸಿದ ಸೊಂಪಾಗಿ ಬೆಳೆದಿದ್ದ ಕುಂಬಳದ ಬಳ್ಳಿಯನ್ನು ಬುಡಕ್ಕೆ ತರಿದು, ಬಳ್ಳಿಯಲ್ಲಿ ನೇತಾಡುತ್ತಿದ್ದ ಭಾರಿ ಭಾರಿ ಕೂಷ್ಮಾಂಡಗಳನ್ನು ಕಿತ್ತು ಕ್ವಾರ್ಟರ್ಸ್‌ನ ಗೋಡೆಗಳಿಗೆ ಬಗ್ಗಿ ಕೈಮುಗಿದ. ತೋಟಗಾರಿಕೆಗೆ ಅದೇ ಅವನ ಕೊನೆಯ ನಮಸ್ಕಾರವಾಯಿತು. ಮಾರನೆಯ ಬೆಳಿಗ್ಗೆ ಮೊದಲ ಬಸ್ಸಿನಲ್ಲಿ ತನ್ನ ಊರಿಗೆ ಹಿಂತಿರುಗಿ, ಅಧ್ಯಕ್ಷರಿಗೆ ರಾಜೀನಾಮೆಯ ಪತ್ರವನ್ನು ಅಂಚೆಯಲ್ಲಿ ಹಾಕಿದ.

## ನಿಪ್ಪಟ್ಟು – ಸಿಟ್ಟು

ಹೋಟೆಲಿನಲ್ಲಿ ಇಟ್ಟಿದ್ದ ನಿಪ್ಪಟ್ಟು
ನೋಡಿ ಬಂತು ಸಿಕ್ಕಾಪಟ್ಟೆ ಸಿಟ್ಟು
ಕಾರಣ ಮನೆಯಲ್ಲೇ ಮರೆತು
ಬಂದಿದ್ದ ಹೊಸಾ ಹಲ್ಲು ಸೆಟ್ಟು – ಸುಕೇಶವ



# ಒಂದು ಹೊಸ ಅನುಭವ

**- ಉಲ್ಲಾಸ ರಾಯಸಂ ಬೀchi**

ಬಹುಮುಖ ಪ್ರತಿಭೆ ಶ್ರೀಯುತ ರಾಶಿಯವರು ನಲವತ್ತರ ದಶಕದ ಆದಿಭಾಗದಲ್ಲಿ ಪ್ರಾರಂಭ ಮಾಡಿದ ಹಾಸ್ಯ ಮಾಸ ಪತ್ರಿಕೆ ಸಹಸ್ರಾರು ಕನ್ನಡಿಗರ ಮನಸೆಳೆದಿದೆ. ಕೊರವಂಜಿ ಪತ್ರಿಕೆ ನಿಂತ ನಂತರ ಶ್ರೀ ರಾಶಿಯವರ ಸುಪುತ್ರ ಶ್ರೀಯುತ ಶಿವಕುಮಾರರವರು "ಅಪರಂಜಿ" ಹಾಸ್ಯ ಮಾಸಪತ್ರಿಕೆ ಆರಂಭಿಸಿ ನಂತರ ಪತ್ರಿಕೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್‌ನ ಮೂಲಕ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ.

ನನ್ನ ಸೌಭಾಗ್ಯ, ಈ ಹಿರಿಯುರು ನನ್ನನ್ನೂ ಒಬ್ಬ ಟ್ರಸ್ಟಿಯಾಗಿ ಅವರ ಬಳಗಕ್ಕೆ ಸೇರಿಸಿಕೊಂಡಿದ್ದಾರೆ. ಪ್ರತಿಯೊಬ್ಬ ಟ್ರಸ್ಟಿಯು (ಶ್ರೀ ಎಂ.ಶಿವಕುಮಾರ, ಶ್ರೀ ಬೇಲೂರು ರಾಮಮೂರ್ತಿ, ಶ್ರೀ ಎಚ್.ಎನ್.ಆನಂದ, ಶ್ರೀ ಸಿ.ಆರ್.ಸತ್ಯ, ಶ್ರೀ ವಿ.ಆರ್.ನಾಥ್, ಶ್ರೀ ಕೆ. ರವೀಂದ್ರ ರಾವ್) ರವರ ಉತ್ಸಾಹ ಹುಮ್ಮಸ್ಸು, ಪ್ಯಾಷನ್ ಇಂದಿನ ಯುವಕರೂ ನಾಚಬೇಕು.

ಟ್ರಸ್ಟ್ ಮೀಟಿಂಗ್‌ನಲ್ಲಿ ಲೇಖಕಿಯರನ್ನು ಪರಿಚಯಿಸಲು, ಒಂದು ದಿನ ಶ್ರೀಮತಿ ಗಾಯತ್ರಿ ಮೂರ್ತಿಯವರ ಮನೆಯಲ್ಲಿ ಭೇಟಿಯಾದೆವು. ಶ್ರೀಮತಿ ಭುವನೇಶ್ವರಿ ಹೆಗ್ಡೆ, ಶ್ರೀಮತಿ ಸಹನಾ ಪ್ರಸಾದ, ಶ್ರೀಮತಿ ವಾಣೀ ಸುರೇಶ್, ಶ್ರೀಮತಿ ಶ್ಯಾಮಲಾ ರವಿಶಂಕರ್, ಶ್ರೀಮತಿ ಕುಮುದಾ ಅವರ ಉತ್ಸಾಹ ಕಂಡು ಮನಸ್ಸು ಹಿಗ್ಗಿತು. ಶ್ರೀಮತಿ ಗಾಯತ್ರಿ ಮೂರ್ತಿಯವರ ಮನೆಯಲ್ಲಿ ಕಾಫಿ ತಿಂಡಿಯ ಉಪಚಾರವಾದ ನಂತರ ನಾನು ಹೊರಡುತ್ತೇನೆ" ಎಂದಾಗ, ಶ್ರೀ ಕೃಷ್ಣಮೂರ್ತಿಯವರು (ಗಾಯತ್ರಿ ಮೂರ್ತಿಯವರ ಪತಿ) ನೀವು ಕೋಸಂಬರಿ ತಗೊಂಡ್ರಾ" ಎಂದು ನನ್ನನ್ನು ಕೇಳಿದರು. ನಾನು ತಿಂಡಿ ಹೆವಿ ಆಯ್ತು"ಎಂದೆ. ಅದಕ್ಕವರು ನಕ್ಕು ಕೋಸಂಬರಿ ಎಂದರೆ ತಿನ್ನುವ ಕೋಸಂಬರಿ ಅಲ್ಲ, ನನ್ನ ಮನೆಯವರು ಬರೆದ ಲಲಿತ ಪ್ರಬಂಧಗಳು ಎಂದರು.

ನಾನು ಒಬ್ಬ ಕನ್ನಡ ಪುಸ್ತಕ ಪ್ರಕಾಶಕ. ಕನ್ನಡ ಪುಸ್ತಕ ಅಂದರೆ ಮನಸ್ಸಿಗೆ ಬಹಳ ಖುಷಿ ಆಗುತ್ತದೆ. ನಾನು ಕೈ ಚಾಚಿ ಪುಸ್ತಕವನ್ನು ಎದೆಗವಚಿಕೊಂಡೆ. ಅಷ್ಟರಲ್ಲಿ ಬೇಲೂರು ರಾಮಮೂರ್ತಿಯವರು ಶ್ರೀ ರಾಮನಾಥರವರಿಗೆ ಎರಡು ಪುಸ್ತಕಗಳನ್ನು ಕೊಟ್ಟರು. ಹೇಗೆ ಹಸಿದ ಬೆಕ್ಕಿಗೆ ಇಲಿ ಕಾಣುತ್ತದೋ ಹಾಗೆ ನನಗೆ ಆ ಪುಸ್ತಕ ಕಂಡಿತು, ಶ್ರೀ ರಾಮನಾಥರವರಿಗೆ ಬಂದ ಪುಸ್ತಕ ನನ್ನ ಕೈ ಸೇರಿತು. ಆಗ ರಾಮನಾಥರು ಪರವಾಗಿಲ್ಲ ಇಟ್ಟುಕೊಳ್ಳಿ" ಎಂದರು. ನಮ್ಮೆಲ್ಲರ ಅನುಭವ ಒಂದೇ "ಒಳ್ಳೆಯ ಪುಸ್ತಕ ಕೊಟ್ಟರೆ ವಾಪಸ್ ಬರೋದಿಲ್ಲ." ನನಗೆ ರಾಮನಾಥರ ಮೇಲೆ ಕರುಣೆ ಹುಟ್ಟಿತು. ಅವರ ಕೈಗೆ ಬಂದ ಪುಸ್ತಕ ನಾನು ತೆಗೆದುಕೊಳ್ಳುವುದು ಸರಿಯಲ್ಲ ಎಂದು ವಾಪಸ್ ಕೊಟ್ಟಾಗ ಶ್ರೀ ರಾಮನಾಥರು ಯಾಕೆ ಬೇಡವೇ ಪುಸ್ತಕ, ಸುಮ್ಮನೆ ಕೇಳಿದ್ರಾ? ಇಷ್ಟಾದ ಮೇಲೆ ನಾನು ಸುಮ್ಮನೆ ಬಿಡ್ತಿನಾ? ಪುಸ್ತಕ ನನ್ನ ಬ್ಯಾಗ್ ಸೇರಿತು.

ಇವರೆಲ್ಲರ ಮಾತು ನೇರ, ಮುಚ್ಚುಮರೆ ಇಲ್ಲ. ಇವರು ಸತ್ಯಪ್ರೇಮಿಗಳು ಕೂಡ. ಇನ್ನೇನು ನಾನು ಎದ್ದು ಹೊರಡುವವನಿದ್ದೆ, ಅಷ್ಟರಲ್ಲಿ ಸಹನಾ ಪ್ರಸಾದರವರು ಜಾಮೂನು ತಗೊಳ್ಳಿ"ಎಂದರು. ಕೊಡಿ ಮೆಡಂ" ಎಂದೆ ಮನಸ್ಸು ಹಿಗ್ಗಿತ್ತು, ಇನ್ನೊಂದು ಒಳ್ಳೆಯ ಪುಸ್ತಕ ಬರುತ್ತದೆ ಎಂದುಕೊಂಡೆ. ಬಂದದ್ದು ಬಟ್ಟಲಲ್ಲಿ ಸ್ಪೂನ್ ಜೊತೆ ನಿಜವಾದ ಜಾಮೂನು. ಜಾಮನೇನೋ ರುಚಿಯಾಗಿಯೇ ಇತ್ತು, ಆದರೆ ಪುಸ್ತಕ ಇದ್ದರೆ, ಮನಸ್ಸಿಗೆ, ಹೃದಯಕ್ಕೆ ಇನ್ನೂ ಹೆಚ್ಚು ಸಂತೋಷ ಕೊಡುತ್ತಿತ್ತು.



ಕನ್ನಡ ರಸಿಕ ಬಂಧುಗಳಲ್ಲಿ ವಿನಂತಿ, ತಾವು ಹೀಗೆ ನಮ್ಮ ಅಪರಂಜಿಯನ್ನು ಪ್ರೋತ್ಸಾಹಿಸಿ ಹಾಗೂ ಇತರರನ್ನೂ ಚಂದಾದಾರನ್ನಾಗಿ ಮಾಡಿ. ನಮ್ಮ ಅಪರಂಜಿಯು ಪ್ರತಿ ಮನೆಯ ಪತ್ರಿಕೆಯಾಗಬೇಕು.

# ಚಪಾತಿಯ ತಪಾಸಣೆ

**- ನಂದಿನಿ ಕಾಪಡಿ**

2001ನೇ ಇಸವಿ. ನನಗೆ ಆಗಷ್ಟೇ ಮುಂಬೈ ಮಹಾನಗರಕ್ಕೆ ವರ್ಗವಾಗಿತ್ತು. ಯಜಮಾನರು ದೂರದ ಭುವನೇಶ್ವರ, ನಾವೆಲ್ಲಾ ಮುಂಬೈ. ಅದೇ ಸಮಯಕ್ಕೆ ಅತ್ತೆಯವರು ಹುಷಾರು ತಪ್ಪಿ ರಕ್ತ ಪರೀಕ್ಷೆ ಮಾಡಿಸಿದಾಗ ಸಕ್ಕರೆಯ ಅಂಶ ಹೆಚ್ಚಾಗಿರುವುದನ್ನು ನೋಡಿ, ಡಾಕ್ಟರ್ ಅವರು ಅಲ್ಲಿನ ಹೆಸರಾಂತ ಡೈಯಾಬಿಟಾಲೊಜಿಸ್ಟ್ ಡಾಕ್ಟರ್ ಅ. ಅವರ ಹತ್ತಿರ ತೋರಿಸಲು ಸೂಚಿಸಿದರು. ಅಂತೆಯೇ ನಾನು ಅವರ ಕ್ಲಿನಿಕ್ಕಿಗೆ ಫೋನಾಯಿಸಿದಾಗ ತುಂಬಾ ಗಡಸು ದನಿಯ ರಿಸಪ್ಷನಿಸ್ಟ್ ಮುಂದಿನ ವಾರಕ್ಕೆ ಅಪಾಯಿಂಟ್ಮೆಂಟ್ ಕೊಟ್ಟಿದ್ದ. ಬೆಳಿಗ್ಗೆ 7 ಗಂಟೆಗೆ ಹಾಜರಿರಬೇಕು. ಡಾಕ್ಟರ್ ಸರಿಯಾಗಿ 7.30ಕ್ಕೆ ಬರುತ್ತಾರೆ. ನಂತರ ನೋಡುತ್ತಾರೆ. ಹಳೆಯ ಪೇಶೆಂಟುಗಳನ್ನು ಮೊದಲಿಗೆ ನೋಡಿ, ಆಮೇಲೆ ಹೊಸ ಪೇಶೆಂಟುಗಳನ್ನು ನೋಡುವರು. ಕನಿಷ್ಠ 2 ಗಂಟೆ ಕಾಯಬೇಕಾಗಬಹುದು. ಹೀಗಾಗಿ ಸರಿಯಾಗಿ ತಿಂಡಿ ತಿಂದೇ ಬನ್ನಿ ಎಂದೂ ಹೇಳಿದ್ದ. ಹಾಗಿದ್ದಲ್ಲಿ ನಾವು 9 ಗಂಟೆಗೆ ಬರಬಹುದೇ ಎಂದು ಕೇಳಿದಾಗ ಬೆಳಿಗ್ಗೆ 7ಕ್ಕೆ ಹಾಜರಿರದಿದ್ದರೆ ದೊಡ್ಡ ಡಾಕ್ಟರ್ ನೋಡುವುದೇ ಇಲ್ಲ, ಬರೀ ಅಸಿಸ್ಟೆಂಟ್ ನೋಡುವರು ಎಂದು ಹೆದರಿಸಿದ್ದ.

**ಬರೀ ಚಪಾತಿ ತಿಂದರೆ ಡಯಟ್ ಮಾಡಿದಂತಾಗುವುದೇ?**

ಅತ್ತೆಯವರನ್ನು ಕರೆದುಕೊಂಡು ಬ್ಲಡ್ ರಿಪೋರ್ಟ್ ಜತೆಗೆ ತಂದು ದೂರದ ದಾದರ್ ಇಲಾಖೆಯ ಶಿವಾಜಿ ಪಾರ್ಕಿನ ಹತ್ತಿರ ಕ್ಲಿನಿಕ್ ಹುಡುಕಿಕೊಂಡು ಸರಿಯಾಗಿ ಬೆಳಿಗ್ಗೆ 7 ಗಂಟೆಗೆ ಬಂದೆ. ಈಗಾಗಲೇ ಕ್ಲಿನಿಕ್ ತುಂಬಿತ್ತು. ಹೇಗೋ ಜಾಗ ಮಾಡಿಕೊಂಡು ಕುಳಿತೆವು. ಒಡನೆಯೇ ರಿಸಪ್ಷನಿಸ್ಟ್ ಹತ್ತಿರ ಪೇಪರ್ ಕೊಟ್ಟು ನಮ್ಮ ಅತ್ತೆಯವರ ಹೆಸರು ಹೇಳಿ ಕೇಸ್ ರಿಜಿಸ್ಟರ್ ಮಾಡಿಸಿದೆ. ಗಡಸು ದನಿಯ ಆ ಮನುಷ್ಯ ಸುಮಾರು 55 ವರುಷದವ. ಹೆಸರು ಸಾಮಂತ್. ಒಳಗೆ ಒಂದು ಸಣ್ಣ ಕೋಣೆ. ಅಲ್ಲಿಯೇ ಲ್ಯಾಬೊರೇಟರಿ. ಅದಕ್ಕೆ ಹೊಂದಿಕೊಂಡು ಅತಿ ಚಿಕ್ಕ ಬಾತ್‌ರೂಮ್. ಅದರ ಪಕ್ಕ ಒಂದು ಪುಟ್ಟ ಪಾರ್ಟೀಶನ್ ಹಿಂದೆ ಚಿಕ್ಕ ಡಾಕ್ಟರ್ ಕುಳಿತಿದ್ದರು. ಗೋಡೆಯ ತುಂಬಾ ಪೋಸ್ಟರು. ಡಯಾಬಿಟಿಸ್ ಖಾಯಿಲೆಯ ವಿವಿಧ ಹಂತಗಳು, ವಿವಿಧ ರೂಪಗಳು, ಮಾಡಬೇಕಾದ ಔಷಧೋಪಚಾರ, ವ್ಯಾಯಾಮ ಮತ್ತು ಆಹಾರದ ಕಟ್ಟು ನಿಟ್ಟು ಹೀಗೆ ಎಲ್ಲವನ್ನು ತಿಳಿಸಲಾಗಿತ್ತು. ಆಗ ತಾನೇ ನಂಗೆ ದೂರದೃಷ್ಟಿಯ ಕನ್ನಡಕ ಬಂದಿದ್ದರಿಂದ ಮೂರೇ ನಿಮಿಷಗಳಲ್ಲಿ ಎಲ್ಲಾ ಪೋಸ್ಟರ್ ಓದಿ ಮುಗಿಸಿದೆ.

ಫೋನ್ ಒಂದೇ ಸಮನೆ ಬಾರಿಸುವುದು, ಸಾಮಂತ್ ನೋಡಿ ಅಪಾಯಿಂಟ್ಮೆಂಟ್ ಕೊಡುವುದು ನಡೆದೇ ಇತ್ತು. ಎಲ್ಲ ಹೊಸ ಪೇಶೆಂಟುಗಳಿಗೆ ನಿಮ್ಮ ಮನೆಯ ಚಪಾತಿ ತನ್ನಿ ತಪಾಸಣೆ ಮಾಡುತ್ತೇವೆ ಎಂದು ಹೇಳುವುದು ನಡೆದಿತ್ತು. ನಂಗೋ ಕುತೂಹಲ. ಚಪಾತಿಯ ತಪಾಸಣೆ ಎಂದರೇನು? ಅದರ ಅವಶ್ಯಕತೆಯೇನು ಇತ್ಯಾದಿ ಇತ್ಯಾದಿ.. ತುಂಬಾ ಗಂಭೀರವಾಗಿ ಸಾಮಂತನನ್ನ ಕುರಿತು ಈ ಬಗ್ಗೆ ಕೇಳಿಯೇ ಬಿಟ್ಟೆ. ಸಾಮಂತ್ ನನ್ನ ಕಡೆ ತೀವ್ರವಾಗಿ ನೋಡುತ್ತಾ,



ಇದು ಇಲ್ಲಿನ ನಿಯಮ. ನೀವೂ ಮುಂದಿನ ಸಲ ಬರುವಾಗ ತರಬೇಕು ಎಂದು ಗಡುಸಾಗಿ ಹೇಳಿದ. ಪಕ್ಕದಲ್ಲಿ ಕೂತಿದ್ದ ವಯಸ್ಕರು ನನಗೆ ಸಮಾಧಾನದಿಂದ ಡಯಾಬಿಟಿಸ್ ಖಾಯಿಲೆಯಲ್ಲಿ ಚಪಾತಿ ಮುಖ್ಯ. ಪ್ರತಿ ಮನೆಯಲ್ಲಿಯ ಚಪಾತಿ ಬೇರೆ. ಅದರ ತಪಾಸಣೆ ಆಗದ ಹೊರತು ಡಯಟಿಶನ್ ನಿಮಗೆ ಡಯಟ್ ಚಾರ್ಟ್ ಕೊಡಲು ಸಾಧ್ಯವಿಲ್ಲ ಎಂದರು.

ಅಷ್ಟರಲ್ಲಿ ಡಯಟಿಶನ್ ಕುಮಾರಿ ಪ್ರಣತಿಯ ಆಗಮನವಾಯಿತು. 20-22 ವರ್ಷದ ಮೇಲೆ ವಯಸ್ಸಿಲ್ಲ. ಸಾಮಂತನ ಪಕ್ಕದ ಮೇಜಿನಲ್ಲಿ ಕುಳಿತು ಒಂದು ತೂಕ ಮಾಡುವ ಯಂತ್ರ, ಹಾಗೂ ವಿವಿಧ ಆಹಾರಗಳಲ್ಲಿರುವ ಪೋಷಕಾಂಶದ ಬಗ್ಗೆ ಒಂದು ಚಾರ್ಟ್ ಹೊರಗಿಟ್ಟುಕೊಂಡಳು. ನನ್ನ ಟ್ಯೂಬ್‌ಲೈಟ್ ತಲೆಯಲ್ಲಿ ಈಗ ಸ್ವಲ್ಪ ಸ್ವಲ್ಪ ಪ್ರಕಾಶ ಬರತೊಡಗಿತು. ಚಪಾತಿಗೇನೂ ಸ್ಟೆಥೋಸ್ಕೋಪ್ ಇಟ್ಟು ನೋಡುವುದಿಲ್ಲ ಎಂದು ಖಚಿತವಾಯಿತು.

ನಾನು ಓದುತ್ತಿದ್ದ ಪುಸ್ತಕ ಬದಿಗಿಟ್ಟು ಹುಡುಗಿ ಏನು ಮಾಡುವಳು ಎಂದು ಕುತೂಹಲದಿಂದ ನೋಡುತ್ತಿದ್ದೆ. ಆಗಿನ ಕಾಲದಲ್ಲಿ ಮೊಬೈಲ್ ಫೋನ್ ಈಗಿನಂತೆ ಎಲ್ಲರ ಕೈಯಲ್ಲೂ ಇರಲಿಲ್ಲ. ಪುಸ್ತಕ ಅಥವಾ ಜನರ ಮುಖ ನೋಡುತ್ತಾ ಕಾಲ ಕಳೆಯಬೇಕಿತ್ತು. ಮುಂದೆ ನಡೆದದ್ದು ಒಂದು ನಾಟಕ. ಪಾತ್ರಧಾರಿಗಳು ನಮ್ಮ ಡಯಟಿಶನ್ ಮತ್ತು ಪೇಶೆಂಟುಗಳು. ನಾಟಕದ ವಸ್ತು ನಮ್ಮ ಚಪಾತಿ. ಡಯಟಿಶನ್ ಒಬ್ಬೊಬ್ಬರನ್ನೇ ಕರೆದು ಅವರು ತಮ್ಮ ಮನೆಯಿಂದ ತಂದ ಚಪಾತಿಯನ್ನು ಪರೀಕ್ಷಿಸಿ ಪೇಶೆಂಟುಗಳ ಡಯಟ್ ಚಾರ್ಟ್ ಮಾಡಿಕೊಡುವಳು.

ಪೇಶೆಂಟ್ ನಂಬರ್ 1 ತಮ್ಮ ಮನೆಯಿಂದ ತಂದ ಚಪಾತಿಯನ್ನು ತೆಗೆದು ಡಯಟಿಶನ್ ಮುಂದಿಡುತ್ತಾರೆ.

ಡ : ನಿಮ್ಮ ಮನೆಯಲ್ಲಿ ಎಷ್ಟು ಜನ? ದಿನಕ್ಕೆ ಎಷ್ಟು ಚಪಾತಿ ಮಾಡುತ್ತೀರಾ? ನೀವೇ ಮಾಡುತ್ತೀರೋ ಅಥವಾ ಬಾಯಿ ಮಾಡುತ್ತಾಳೋ? ಎಷ್ಟು ಗೋಧಿ ಹಿಟ್ಟು, ಎಷ್ಟು ನೀರು, ಎಷ್ಟು ಎಣ್ಣೆ ಮತ್ತು ಎಷ್ಟು ಉಪ್ಪು ಹಾಕುತ್ತೀರಾ? ಚಪಾತಿ ಮಾಡಿದ ಮೇಲೆ ತುಪ್ಪ ಅಥವಾ ಎಣ್ಣೆ ಹಚ್ಚುವಿರಾ?

ಪೇ ನಂಬರ್ 1 : ಉತ್ತರ .......

ಡ : ನೀವು ರಾತ್ರಿ ಬೆಳಿಗ್ಗೆ ಹಾಗೂ ಊಟದಲ್ಲಿ ಎಷ್ಟು ಚಪಾತಿ ತಿನ್ನುತ್ತೀರಾ? ಇದರೊಂದಿಗೆ ಅನ್ನ ಕೂಡ ತಿನ್ನುತ್ತೀರಾ? ಎಂತಹ ತರಕಾರಿ ಹಣ್ಣು ತಿನ್ನುವಿರಿ?

ಉತ್ತರ ಕೇಳಿ ಈಗ ಕ್ಯಾಲ್ಕುಲೇಟರ್ ತೆಗೆದು, ಏನೇನೋ ಲೆಕ್ಕ ಮಾಡಿ ನೀವು ಈ ಚಪಾತಿಯನ್ನು 4 ಭಾಗ ಮಾಡಿ ಬೆಳಿಗ್ಗೆ 2 ಭಾಗ ಮತ್ತು ರಾತ್ರಿ ಎರಡು ಭಾಗ ಮಾತ್ರ ತಿನ್ನಬೇಕು. ಅನ್ನ ಬರೀ 2 ಚಮಚ ಮಾತ್ರ. ಸೊಪ್ಪಿನ ಪಲ್ಯ ಬೇಕಾದಷ್ಟು ತಿನ್ನಿ.

ಪೇಶೆಂಟ್ ನಂಬರ್ 2 : ಪ್ಲಾಸ್ಟಿಕ್ ಚೀಲದಿಂದ ಸ್ಟೈನ್‌ಲೆಸ್ ಸ್ಟೀಲ್‌ನ ಚಪಾತಿ ಡಬ್ಬಿ ತೆಗೆದು ಎರಡು ಚಪಾತಿಗಳನ್ನು ತೆಗೆದು ಡಯಟಿಶನ್ ಮುಂದಿಡುತ್ತಾರೆ.



ನಮ್ಮ ಡಯಟಿಶನ್ ಚಪಾತಿಯ ತೂಕ ನೋಡಿ, ಮೇಲೆ ಕೆಳಗೆ ಹಿಡಿದು ಪರೀಕ್ಷೆ ನಡೆಸುತ್ತ, ಈ ಕಪ್ಪು ಕಾಳುಗಳು ಈರುಳ್ಳಿಯ ಬೀಜಗಳೇ ಅಥವಾ ಕರಿ ಎಳ್ಳಿನ ಕಾಳುಗಳೇ? ಮತ್ತೆ ಅವೇ ಪ್ರಶ್ನೆಗಳು. ಚಪಾತಿಯ ಕುಲ, ಗೋತ್ರ, ಅದರ ಮುಖ್ಯ ಗುಣಗಳು ಹೀಗೆ ಎಲ್ಲವೂ ಚರ್ಚೆಯಾಗಿ ಈ

ಪೇಶೆಂಟಿಗೆ ಬೆಳಿಗ್ಗೆ ಒಂದು ರಾತ್ರಿ ಒಂದು ಚಪಾತಿ ತಿನ್ನಬೇಕೆಂದು ಸಲಹೆ ಕೊಡುತ್ತಾಳೆ.

ಪೇಶೆಂಟ್ ನಂಬರ್ 3 : ಗುಜರಾತಿ ಮಹಿಳೆ, ಕನ್ನಡಿ ಕೆಲಸ ಮಾಡಿ ಕಸೂತಿ ಮಾಡಿದ ಚೀಲದಿಂದ ಸ್ಟೈನ್‌ಲೆಸ್ ಸ್ಟೀಲ್‌ನ ಚಪಾತಿ ಡಬ್ಬಿ ತೆಗೆದು ತುಂಬಾ ನಾಜೂಕಾಗಿ ಎರಡು ಚಪಾತಿಗಳನ್ನು ತೆಗೆದು ಡಯಟಿಶನ್ ಮುಂದಿಡುತ್ತಾರೆ. ನಮ್ಮ ಡಯಟಿಶನ್ ಚಪಾತಿಯ ತೂಕ ನೋಡಿ, ಮೇಲೆ ಕೆಳಗೆ ಹಿಡಿದು ಪರೀಕ್ಷೆ ನಡೆಸುತ್ತ, ನಿಮ್ಮ ಚಪಾತಿಗಳು ಡಯಟ್ ಮಾಡುತ್ತಿವೆ 20 ಗ್ರಾಂ ಕೂಡ ತೂಕವಿಲ್ಲ ಎಂದು ಉದ್ಗರಿಸಿ ಮತ್ತೆ ಅವೇ ಪ್ರಶ್ನೆಗಳ ಮೂಲಕ ಚಪಾತಿಯ ಕುಲ, ಗೋತ್ರ, ಅದರ ಮುಖ್ಯ ಗುಣಗಳು ಹೀಗೆ ಎಲ್ಲವೂ ವಿಚಾರಿಸಿ ಈ ಪೇಶೆಂಟಿಗೆ ಬೆಳಿಗ್ಗೆ 5 ರಾತ್ರಿ 5 ಚಪಾತಿ ತಿನ್ನಬೇಕೆಂದು ಸಲಹೆ ಕೊಡುತ್ತಾಳೆ.

ಸಾಮಂತ್ ನನ್ನ ಕಡೆ ನೋಡುತ್ತಾ ನೋಡಿದಿರಾ? ಎಲ್ಲರ ಮನೆಯ ಚಪಾತಿ ಬೇರೆ ಎನ್ನುತ್ತಾನೆ. ನನ್ನ ಕೋತಿಯ ಬುದ್ಧಿ ಎಲ್ಲರ ಮನೆಯ ದೋಸೆಯೂ ತೂತೇ ಎಂದು ಗಾದೆ ಜ್ಞಾಪಿಸಿಕೊಂಡು ಎಲ್ಲರ ಮನೆಯ ಚಪಾತಿಯೂ ಗೋಧಿ ಹಿಟ್ಟಿನದೇ ಎಂದುಕೊಳ್ಳುತ್ತದೆ.

ನನ್ನ ಪೆಕ್ಕರ ಬುದ್ಧಿಗೆ ಸವಾಲಿನಂತೆ ನಾಲ್ಕನೇ ಪೇಶೆಂಟ್ ಡಬ್ಬಿ ತೆಗೆದಾಗ ಒಳಗಿನಿಂದ ಮಹಾಭಾರತದ ಭೀಮನಂತಿದ್ದ ಎರಡು ರೊಟ್ಟಿಗಳು ಹೊರಗೆ ಬರುತ್ತವೆ. ಪೇಶೆಂಟಿನ ಮುಖ ನೋಡಿದರೆ ಅವನು ಭೀಮನಿಗೇನೂ ಕಡಿಮೆಯಿಲ್ಲ. ದೊಡ್ಡ ಆಕಾರ ದೊಡ್ಡ ಧ್ವನಿ. ನಮ್ಮ ರಾಜ್ಯದವನು ಎನಿಸುತ್ತದೆ.

ಡಯಟಿಶನ್ ಆ ರೊಟ್ಟಿಗಳನ್ನು ನೋಡಿ ಅವನಿಗೆ ನಾನಾ ಪ್ರಶ್ನೆ ಕೇಳಿದಾಗ ರೊಟ್ಟಿ ಮಾಡುವವಳು ನನ್ನ ಹೆಂಡತಿ. ನನ್ನನ್ನು ಪ್ರಶ್ನೆ ಕೇಳಿದರೆ ಹೇಗೆ ಎಂದು ಪಾಟೀ ಸವಾಲು ಮಾಡುತ್ತಾನೆ. ಈ ರೊಟ್ಟಿ ಜೋಳದ್ದೇ ಅಥವಾ ಬಾಜ್ರಾ ರೊಟ್ಟಿಗಳೇ ಎಂದು ಗೊಂದಲದಲ್ಲಿ ಬೀಳುತ್ತಾಳೆ. ಅಲ್ಲೇ ಮೌನವಾಗಿ ಕೂತಿದ್ದ ಮಹಿಳೆಯೊಬ್ಬರು ಅದು ಬಾಜ್ರ ರೊಟ್ಟಿಗಳು ಎಂದು ತಮ್ಮ ತೀರ್ಪು ಕೊಡುತ್ತಾರೆ. ಒಂದೊಂದು ರೊಟ್ಟಿಯ ತೂಕ 75 ಗ್ರಾಮುಗಳು. ಇಂತಹ 3 ರೊಟ್ಟಿಗಳನ್ನು ತಿನ್ನುವೆ ಎಂದು ನಮ್ಮ ಪೇಶೆಂಟ್ ಹೇಳಿದಾಗ ಡಯಟಿಶನ್ ಸುಸ್ತಾಗಿ ಇಂದಿನಿಂದ ಒಂದೇ ರೊಟ್ಟಿ ತಿಂದರೆ ಒಳ್ಳೆಯದು ಎನ್ನುತ್ತಾಳೆ. ನಮ್ಮ ನಾಯಕ ಕೆಕ್ಕರು ಗಣ್ಣಿನಿಂದ ಅವಳನ್ನು ನೋಡಿ ಬೆಳಗಿನಿಂದ ರಾತ್ರಿಯವರೆಗೆ ಕಷ್ಟ ಪಟ್ಟು ಕೆಲಸ ಮಾಡುವವರಿಗೆ ಮೂರು ರೊಟ್ಟಿಯೂ ಕಡಿಮೆ ಎಂದು ಗುಡುಗುತ್ತಾನೆ. ನಮ್ಮ ನಾಯಕಿ ಹೌಹಾರಿ ನಿಮಗೆ ಬೇಕಾದಂತೆ ಮಾಡಿ. ಸೂಚಿಸುವುದು ಮಾತ್ರ ನಮ್ಮ ಕರ್ತವ್ಯ ಎನ್ನುತ್ತಾ ಮುಂದಿನ ಪೇಶೆಂಟ್ ಕರೆಯುತ್ತಾಳೆ.

ಪಂಜಾಬಿ ಮಹಿಳೆ. ತನ್ನ ಚೀಲದಿಂದ ಹಾಟ್ ಕೇಸ್ ತೆಗೆದು ಒಳಗೆ ಅಲ್ಯೂಮಿನಿಯಂ ಫಾಯಿಲ್‌ನಲ್ಲಿ ಸುತ್ತಿದ್ದ ಎರಡು ಚಪಾತಿಗಳನ್ನು ತೋರಿಸುತ್ತಾ ನಾವು ತುಪ್ಪದಲ್ಲಿ ತರಕಾರಿ ಮಾಡುವುದರಿಂದ ಇದಕ್ಕೆ ತುಪ್ಪ ಹಾಕಿಲ್ಲ ಎಂದು ಸಮಜಾಯಿಷಿ ಕೊಟ್ಟು, ಈ ಚಪಾತಿಯೊಂದಿಗೆ ಪನೀರ್, ಆಲೂಗೆಡ್ಡೆಯ ಪಲ್ಯ ಮತ್ತು ಎರಡು ದಿನಕ್ಕೊಮ್ಮೆ ಬಟರ್ ಚಿಕೆನ್ ತಿನ್ನುತ್ತೇವೆ ಎಂದು ಹೇಳುತ್ತಾಳೆ. ನಮ್ಮ ಡಯಟಿಶನ್ ಅವಳಿಗೆ ಡಯಟ್ ಚಾರ್ಟ್ ಕೊಡುತ್ತಾ ಸುಸ್ತಾಗಿ ಬಿಡುತ್ತಾಳೆ.

ಪೇಶೆಂಟ್ ನಂಬರ್ 6 : ಒಂದು ಚೀಲ. ಅದರೊಳಗೆ ಒಂದು ಬಿಳಿ ಕಾಗದ. ಒಳಗೆ ಎರಡು ಚಪಾತಿಗಳು ಎಣ್ಣೆಯಲ್ಲಿ ತೇಲುತ್ತಿದ್ದವು. ಡಯಟಿಶನ್ ಕೆಟ್ಟ ಮುಖ ಮಾಡಿಕೊಂಡು ಇದೆಂತಹ

ಚಪಾತಿ? ಯಾರು ಮಾಡಿದರು ಎಂದು ಕೇಳುತ್ತಾಳೆ. ಸ್ವಲ್ಪವೂ ವಿಚಲಿತರಾಗದೆ ಇದು ಹೋಟೆಲ್ನಿಂದ ತಂದಿದ್ದು ಎಂದು ಪೇಶೆಂಟ್ ಹೇಳುತ್ತಾರೆ. ನಿಮ್ಮ ಮನೆಯಲ್ಲಿ ಚಪಾತಿ ಮಾಡುವುದಿಲ್ಲವೇ ಎಂದು ಕೇಳಿದಾಗ, ನಾವು ರಾಗಿ ಮುದ್ದೆ ತಿನ್ನುತ್ತೇವೆ ಎಂದು ಉತ್ತರ ಬರುತ್ತದೆ. ಗೊಂದಲದಲ್ಲಿ ಬೀಳುತ್ತ ತನ್ನ ಪುಸ್ತಕದಲ್ಲಿ ರಾಗಿ ಮುದ್ದೆ ಬಗ್ಗೆ ಬರೆದಿಲ್ಲವಲ್ಲ ಎಂದು ಕೊರಗುತ್ತಾಳೆ. ಮರಳಿ ಮುಂದಿನ ವಾರ ಬರಲು ಹೇಳುತ್ತಾಳೆ.

ಕಡೆಯ ಪೇಶೆಂಟು ದಕ್ಷಿಣ ಭಾರತದವರು. ಚಪಾತಿ ತೋರಿಸುತ್ತಾ ನಮ್ಮ ಮನೆಯಲ್ಲಿ ಚಪಾತಿ ಎಂದೋ ಒಮ್ಮೆ ಟಿಫಿನ್ನಿಗೆ ಮಾಡುತ್ತಾರೆ. ನಾವು ಅನ್ನ ಮಾತ್ರ ಊಟ ಮಾಡುತ್ತೇವೆ ಎಂದಾಗ, ಡಯಟಿಶನ್ ಚೂರೂ ಕಸಿವಿಸಿ ಗೊಳ್ಳದೆ ಮೇಜಿನಿಂದ 5 ಬೇರೆ ಬೇರೆ ಸೈಜಿನ ವಾಟಿಗಳನ್ನು ತೆಗೆದು ನೀವು ದಿವಸ ಇಂತಹ ಎಷ್ಟು ವಾಟಿ ಅನ್ನ ತಿನ್ನುತ್ತೀರಿ ಎಂದು ಕೇಳುತ್ತಾಳೆ. ಅವರು ರಸಂಗೆ ಒಂದು ವಾಟಿ, ಸಾಂಬಾರ್‌ಗೆ ಒಂದು ವಾಟಿ, ಮೊಸರಿಗೆ ಒಂದು ವಾಟಿ ಎಂದು ಪ್ರಾಮಾಣಿಕವಾಗಿ ಉತ್ತರ ಕೊಡುತ್ತಾರೆ. ಬರೀ ಅಕ್ಕಿ ಎಂದು ಡಯಟಿಶನ್ ಉದ್ಗರಿಸುತ್ತಾಳೆ. ಮತ್ತೆ ಕಿಸಕ್ಕನೆ ನಕ್ಕು ಹುಡುಗಿ ಇಡ್ಲಿ ದೋಸೆ ವಡೆ ಎಂದು ಇನ್ನೆಷ್ಟು ಅಕ್ಕಿ ತಿನ್ನುತ್ತೀರಿ ಎಂದು ಕುಹಕ ಮಾಡುತ್ತಾಳೆ.

ಪೇಶೆಂಟ್‌ನ ಉತ್ತರ ಕೇಳಿ:

ನೋಡಮ್ಮ , ನಾನೂ ನಿನ್ನನ್ನ ನೋಡುತ್ತಿದ್ದೀನಿ. ಬರೀ ಚಪಾತಿ ನೋಡಿ ಡಯಟ್ ನಿರ್ಧರಿಸುತ್ತಿದ್ದೀಯ. ಒಂದು ಬಾರಿಯೂ ಅವರು ಎಷ್ಟು ವ್ಯಾಯಾಮ ಮಾಡುತ್ತಾರೆ, ಅವರ ದಿನ ನಿತ್ಯದ ಚಟುವಟಿಕೆ ಏನು ಎಂದು ಕೇಳಲಿಲ್ಲ ನೀನು. ಬಹುಶಃ ನೀನು ಹುಟ್ಟುವ ಮೊದಲಿನಿಂದ ನನಗೆ ಡಯಾಬಿಟಿಸ್ ರೋಗವಿದೆ. ಕಟ್ಟುನಿಟ್ಟಿನ ಆಹಾರ, ವ್ಯಾಯಾಮ ಮತ್ತು ಔಷಧಿಯಿಂದ ಅದು ಉಲ್ಬಣವಾಗದಂತೆ ಕಾಪಾಡಿಕೊಂಡು ಬಂದಿದ್ದೀನಿ. ನಿನಗೆ ಅಮೆರಿಕನ್ ಡೈಯಾಬಿಟೀಸ್ ಫೌಂಡೇಶನ್, ಯು.ಕೆ. ಡಯಾಬಿಟಿಸ್ ಸೆಂಟರ್ ಇವುಗಳ ಹೊಸ ರಿಸರ್ಚ್ ಬಗ್ಗೆ ಗೊತ್ತಿರಲಾರದು. ಗೋಧಿಗಿಂತ, ಸಿರಿಧಾನ್ಯ ಮೇಲು, ಅಕ್ಕಿಯಲ್ಲೂ ಅನೇಕ ಗುಣಗಳಿವೆ. ಇವೆಲ್ಲ ಚರ್ಚೆಯಾಗಿದೆ. ಅದೇನೂ ತಿಳಿಯದೆ ನನ್ನ ಊಟದ ಬಗ್ಗೆ ಕುಹಕ ಮಾಡುತ್ತೀಯಾ. ಡಾಕ್ಟರ್ ಅ. ಅವರಿಗೆ ಖಂಡಿತ ಹೇಳುತ್ತೇನೆ. ಈ ಚಪಾತಿ ನಾಟಕ ನಿಲ್ಲಿಸಿ ಎಂದು ಕುಳಿತರು.

ಹುಡುಗಿಯ ಮುಖ ಚಿಕ್ಕದಾಗಿ ಸಾರಿ ಎಂದಳು. ಆದರೆ ಬಿದ್ದರೂ ಮೀಸೆ ಮಣ್ಣಾಗಿಲ್ಲದಂತೆ ಮುಂದಿನ ಪೇಶೆಂಟಿನ ಚಪಾತಿ ತಪಾಸಿಸಲು ಕರೆದಳು.

ನನಗೋ ಚಿಂತೆ ! ನಮ್ಮ ಮನೆಯಲ್ಲಿ ಚಪಾತಿ ಪ್ರತಿ ದಿನ ಬೇರೆ. ಅತ್ತೆಯವರು ಮಾಡಿದರೆ ಒಂದು ತರಹ. ನಾನು ಮಾಡಿದ್ದು ಪ್ರತಿ ದಿನ ಬೇರೆ ಬೇರೆ ರೂಪು, ಬೇರೆ ಬೇರೆ ಗಾತ್ರ, ಬೇರೆ ಬೇರೆ ಬಣ್ಣ ಮತ್ತು ಬೇರೆ ಬೇರೆ ತೂಕ ಮತ್ತು ನನ್ನ ಲಹರಿಯ ಪ್ರಕಾರ ತುಪ್ಪ ಅಥವಾ ಎಣ್ಣೆಯ ಬಳಕೆ. ಮುಂದಿನ ಸಲ ಇಲ್ಲಿಗೆ ಬಂದಾಗ ಏನು ಮಾಡುವುದು ಎಂದು ಗಂಭೀರ ಚಿಂತೆಯಲ್ಲಿ ಮುಳುಗಿದೆ. ಸದ್ಯ ನಮ್ಮ ಹೆಸರು ಕೂಗಿದ ಸಾಮಂತ್. ನಿಧಾನವಾಗಿ ಅತ್ತೆಯೊಂದಿಗೆ ಡಾಕ್ಟರ್ ಅ. ಅವರ ಕೋಣೆಯೊಳಗೆ ನುಸುಳಿದೆ.



# ADMISSION OPEN

**Center of Distance Learning,**

(GITAM UNIVERSITY)

MBA with 6 specilizations:

MA, M.com, MCA,
MSc-BT,
PGDCS, BA & B.Com - Age Basis

**www.beechi.in**

**9035006769 / 9035007003**

# ಇಂಗು (ಚಾಕೋಲೇಟ್) ತಿಂದ ಮಂಗ

– **ಡಾ. ಡಿ.ವಿ. ಗುರುಪ್ರಸಾದ್**

ನನ್ನ ಸುಪುತ್ರ ಸುಮುಖ ಆ ಸಮಯದಲ್ಲಿ ಬೆಲ್ಜಿಯಂ ದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ. ಅವನೊಡನೆ ಕೆಲ ಸಮಯ ಕಳೆಯಲು ಪತ್ನಿ ಸಮೇತನಾಗಿ ನಾನು ಅವನು ವಾಸವಿದ್ದ ಬ್ರಸೆಲ್ಸ್‌ಗೆ ಹೋದೆ. ನಾವು ಅಲ್ಲಿರುವಂತೆಯೇ ನನ್ನ ತಮ್ಮನ ಮಗ ರಘು ಎರಡು ದಿನಗಳ ಕಾರ್ಯನಿಮಿತ್ತ ಅಲ್ಲಿಗೆ ಬಂದ.

> ಚಾಕೋಲೇಟ್‌ಗಳಲ್ಲಿದ್ದ ರಮ್,ವಿಸ್ಕಿ ಕೊಟ್ಟ ಕಿಕ್ ಎಂಥದು

ರಘು ಮಹಾ ತಿಂಡಿಪೋತ. ತಾನು ಹೋದ ಊರುಗಳಲ್ಲಿ ಆ ಊರಿನ ವಿಶೇಷ ತಿಂಡಿತಿನಿಸುಗಳನ್ನು ಸೇವಿಸದೆಯೇ ಆತ ವಾಪಸ್ ಆಗುತ್ತಲೇ ಇರಲಿಲ್ಲ. ಮನೆಗೆ ಬಂದ ರಾತ್ರಿಯೇ ರಘು, "ಈ ದೇಶ ಚಾಕೊಲೇಟ್‌ಗಳಿಗಾಗಿ ಪ್ರಸಿದ್ಧಿ ಎಂದು ನಿಮಗೆ ತಿಳಿದಿದೆಯೇ" ಎಂದ.

"ನಾನು ಸ್ವಿಟ್ಜರ್‌ಲ್ಯಾಂಡ್‌ನ ಚಾಕೊಲೇಟ್‌ಗಳ ಬಗ್ಗೆ ಅರಿತಿದ್ದೇನೆಯೇ ಹೊರತು ಬೆಲ್ಜಿಯಂ ಚಾಕೊಲೇಟ್‌ಗಳ ಬಗ್ಗೆ ನನಗೆ ತಿಳಿದಿಲ್ಲ. ಮೇಲಾಗಿ ನಮ್ಮ ಕ್ಯಾಡ್‌ಬರಿ ಡೈರಿಮಿಲ್ಕ್ ಹೊರತಾಗಿ ನನಗೆ ಇತರ ಯಾವ ಬ್ರಾಂಡೂ ಗೊತ್ತಿಲ್ಲ" ಎಂದೆ.

ನಮ್ಮ ಮಾತನ್ನು ಆಲಿಸುತ್ತಿದ್ದ ಸುಮುಖ, "ಅಪ್ಪಾ, ರಘು ಹೇಳುವುದು ನೂರಕ್ಕೆ ನೂರು ಸತ್ಯ. ಈ ದೇಶದಲ್ಲಿ ಸಿಗುವ ಚಾಕೊಲೇಟ್‌ಗಳು ಪ್ರಪಂಚದಲ್ಲೆಲ್ಲಾ ಹೆಸರುವಾಸಿ. "ಪ್ರೋಲೈನ್" ಎಂಬ ಬಗೆಯ ಚಾಕೊಲೇಟ್‌ಗಳು ಇಲ್ಲಿನ ವಿಶೇಷ. ನಾವು ಮಾಡುವ ಬಜ್ಜಿಯ ಒಳಗೆ ಆಲೂಗಡ್ಡೆ, ಹಿರೇಕಾಯಿ, ಮೆಣಸಿನಕಾಯಿಗಳನ್ನು ಹಾಕುವಂತೆ ಇಲ್ಲಿಯವರು ಚಾಕೊಲೇಟ್‌ಗಳ ಒಳಗೆ ಬಾದಾಮಿ, ಗೋಡಂಬಿ, ಒಣದ್ರಾಕ್ಷಿ, ಅಕ್ರೋಟ್ ಮುಂತಾದ ಪದಾರ್ಥಗಳನ್ನು ತುಂಬಿಸಿ ಬಿಡುತ್ತಾರೆ. ಅವುಗಳ ಸವಿಯೇ ಸವಿ. ನಾನು ಕೆಲಸ ಮಾಡುವ ಕಛೇರಿಯ ಎದುರೇ ಒಂದು ವಿಖ್ಯಾತ ಚಾಕೊಲೇಟ್ ಫ್ಯಾಕ್ಟರಿ ಇದೆ. ನಾಳೆ ಸಂಜೆ ನಿಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತೇನೆ. ರಘು ಮನತೃಪ್ತಿಯಾಗಿ ಚಾಕೊಲೇಟ್ ತಿನ್ನಲಿ" ಎಂದ.

ರಘುವಿನ ಮುಖ ಅರಳಿದ ಕಮಲದಂತಾಯಿತು. ಮಾರನೆಯ ದಿನ ತಾನು ಸವಿಯುವ ಚಾಕೊಲೇಟ್‌ಗಳ ಆಸೆಯಲ್ಲಿ ಆತ ರಾತ್ರಿಯೆಲ್ಲಾ ನಿದ್ದೆ ಮಾಡದೆ ಅತ್ತಿಂದಿತ್ತ ಹೊರಳಾಡುತ್ತಿದ್ದುದನ್ನು ನಾವೆಲ್ಲರೂ ಗಮನಿಸದೇ ಇರಲಿಲ್ಲ.



ಮಾರನೆಯ ದಿನ ಸುಮುಖ ಕಛೇರಿಗೆ ಹೋಗುವಾಗ ತಾನು ಆ ಸಂಜೆ ಚಾಕೊಲೇಟ್ ಫ್ಯಾಕ್ಟರಿಯ ಮುಂದೆ ನಮಗಾಗಿ ಕಾಯುತ್ತಿರುತ್ತೇನೆ ಎಂದು ತಿಳಿಸಿ ಆ ಜಾಗಕ್ಕೆ ಹೇಗೆ ತಲುಪಬೇಕು ಎನ್ನುವ ಬಗ್ಗೆ ರೂಟ್‌ಮ್ಯಾಪ್ ಹಾಕಿ ನನ್ನ ಕೈಗೆ ಕೊಟ್ಟು ಸಂಜೆ ಸರಿಯಾಗಿ 5.30 ಘಂಟೆಗೆ ಬರಲು ಹೇಳಿದ.

ಆ ಸಂಜೆ ರಘು ತನ್ನ ಕೆಲಸವನ್ನು ಬೇಗನೇ ಮುಗಿಸಿಕೊಂಡು ಮಧ್ಯಾಹ್ನವೇ ಮನೆಗೆ

ಬಂದ. ನಾವೆಲ್ಲಾ ತಯಾರಾಗಿ ಸಂಜೆ 5 ಘಂಟೆಗೆ ಮನೆ ಬಿಟ್ಟು ಟ್ರಾಂ, ಬಸ್ ಹಾಗೂ ರೈಲುಗಳ ಮೂಲಕ ಪ್ರಯಾಣ ಮಾಡಿ ಊರ ಹೊರವಲಯದಲ್ಲಿರುವ ಚಾಕೊಲೇಟ್ ಫ್ಯಾಕ್ಟರಿಯ ಮುಂಭಾಗಕ್ಕೆ ಬಂದೆವು. ಅಷ್ಟರಲ್ಲಾಗಲೇ ನನ್ನ ಮಗ ಅಲ್ಲಿಗೆ ಬಂದು ಕಾಯುತ್ತಿದ್ದ.

ಫ್ಯಾಕ್ಟರಿಯ ಹೊರಭಾಗವನ್ನು ನೋಡಿದ ನಾನು, "ಇದೇನು ಫ್ಯಾಕ್ಟರಿಯಂತೆಯೇ ಕಂಡು ಬರುತ್ತಿಲ್ಲವಲ್ಲ" ಎಂದುದ್ಗರಿಸಿದೆ. ನನ್ನ ಪುತ್ರ, "ಅಪ್ಪಾ ಇದು ಭಾರತದಲ್ಲಿ ಇರುವ ಫ್ಯಾಕ್ಟರಿಗಳಂತಲ್ಲ. ಇಲ್ಲಿ ಸಣ್ಣ ಸಣ್ಣ ಫ್ಯಾಕ್ಟರಿಗಳೇ ಇರುವುದು. ಮೇಲಾಗಿ ಇದು ಚಾಕೊಲೇಟ್ ಕಾರ್ಖಾನೆಯಲ್ಲವೇ, ಸಣ್ಣದಾಗಿಯೇ ಇದೆ" ಎಂದು ಹೇಳಿ ನಮ್ಮನ್ನು ಒಳಗೆ ಕರೆದೊಯ್ದ. ನಾವು ಒಳಗೆ ಹೋಗುತ್ತಲೇ "ಚಾಕೊಲೇಟ್ ಅಂಗಡಿಗೆ ದಾರಿ" ಎಂಬ ಫಲಕ ಕಂಡಿತು. ಮುಂದುವರೆದಾಗ ಒಂದು ದೊಡ್ಡ ಷೋರೂಮ್ ಕಂಡಿತು.

ಷೋರೂಮ್‌ನ ಸ್ವಾಗತಕಾರಿಣಿ ನಮ್ಮನ್ನು ಎದುರುಗೊಳ್ಳುತ್ತಲೇ ನಮ್ಮ ಕೈಗೆ ಶಾಪಿಂಗ್ ಬುಟ್ಟಿಯನ್ನು ಕೊಟ್ಟು, "ನೀವು ಇಲ್ಲಿ ಏನನ್ನು ಖರೀದಿಸಿದರೂ ಕಡಿಮೆಯೆಂದರೆ ಎರಡು ಕಿ.ಲೋ. ಪ್ರಮಾಣದಷ್ಟು ಖರೀದಿಸಬೇಕು" ಎಂದಳು. ಗಾಬರಿಯಾದ ನಾನು ಸುಮುಖನ ಮುಖ ನೋಡಿದೆ. ಆತ "ಖರೀದಿ ಮಾಡಲೇಬೇಕು ಎನ್ನುವ ನಿಯಮವಿಲ್ಲವಲ್ಲಾ ಅಪ್ಪಾ" ಎಂದ. ನಾವು ಒಳ ಹೋಗುವಾಗ ಅದೇ ಯುವತಿ, "ನೀವು ಇಲ್ಲಿ ಯಾವುದೇ ಬಗೆಯ ಚಾಕೊಲೇಟ್‌ನ ಸ್ಯಾಂಪಲ್‌ನೋಡಿ ರುಚಿ ಸವಿಯಬಹುದು. ಎಷ್ಟು ಚಾಕೊಲೇಟ್ ಬೇಕಾದರೂ ತಿಂದುರುಚಿ ನೋಡಿ. ಆದರೆ ಬಿಡಿ ಚಾಕೊಲೇಟ್‌ಗಳನ್ನು ನಿಮ್ಮ ಜೇಬಿನಲ್ಲಾಗಲೀ ಅಥವಾ ಬ್ಯಾಗಿನಲ್ಲಾಗಲೀ ಹಾಕಿಕೊಳ್ಳುವಂತಿಲ್ಲ. ಇಲ್ಲಿ ಸಿ.ಸಿ. ಟಿವಿ ಕ್ಯಾಮೆರಾಗಳಿವೆ" ಎಂದು ಎಚ್ಚರಿಸಿದಳು. ಅವಳ ಮಾತುಗಳನ್ನು ಕೇಳಿ ಖುಷಿಯಾದ ರಘು, "ದೊಡ್ಡಪ್ಪ ಎಷ್ಟು ಚಾಕೊಲೇಟ್‌ಗಳನ್ನಾದರೂ ತಿನ್ನಬಹುದು" ಎಂದ. ನಾನು ತಲೆದೂಗಿದೆ. ಸುಮುಖ, "ನಮ್ಮ ದೇಶದವರು ಏನೂ ಖರೀದಿಸದೆ ಸ್ಯಾಂಪಲ್‌ಗಿಟ್ಟ ಚಾಕೊಲೇಟ್‌ಗಳನ್ನು ಜೇಬಿಗೆ ಬಿಡುವುದರಿಂದಲೇ ಈ ನಿಯಮ" ಎಂದು. ನಾನು ನಕ್ಕೆ. ಪ್ರತಿಯೊಂದು ರ್‍ಯಾಕ್‌ನಲ್ಲಿಯೂ ಸೀಲ್ ಮಾಡಿದ ಚಾಕೋಲೇಟ್ ಡಬ್ಬಿಗಳು. ಅವುಗಳ ಮುಂದೆ ತೆರೆದ ಡಬ್ಬಿಗಳಲ್ಲಿ ಚಾಕೊಲೇಟ್‌ಗಳನ್ನು ಅವುಗಳ ಸ್ಯಾಂಪಲ್‌ಗಳನ್ನು ರುಚಿ ನೋಡಲು ಇಟ್ಟಿದ್ದರು.

ನನ್ನ ಪತ್ನಿ, ಮಗ ಹಾಗೂ ರಘು ರುಚಿಗಾಗಿ ಇಟ್ಟಿದ್ದ ಚಾಕೊಲೇಟ್‌ಗಳನ್ನು ಒಂದೊಂದಾಗಿ ಸವಿಯಲು ಪ್ರಾರಂಭ ಮಾಡಿದರು. ಸುಮಾರು ಮೂವತ್ತು ಬಗೆಯ ಚಾಕೊಲೇಟ್‌ಗಳು ಇದ್ದದ್ದರಿಂದ ನನ್ನ ಪತ್ನಿ ಹಾಗೂ ಮಗ ಐದಾರು ಬಗೆಯ ಚಾಕೊಲೇಟ್‌ಗಳನ್ನು ಮಾತ್ರ ಸೇವಿಸಿದರು. ಆದರೆ ರಘು ಕೇಳಬೇಕೇ? ಒಂದೂ ಬಿಡದಂತೆ ಎಲ್ಲಾ ಚಾಕೊಲೇಟ್‌ಗಳ ಸವಿಯನ್ನು ನೋಡಿಯೇ ಬಿಟ್ಟ. ಅವನಿಗೆ ಇಷ್ಟವಾದ ಚಾಕೊಲೇಟ್‌ಗಳನ್ನು ಎರಡು ಮೂರರಂತೆ ಬಾಯಿಗೆ ತುರುಕಿಕೊಂಡ.

ಆನಂತರ ಎರಡು ಡಬ್ಬಿ ಚಾಕೊಲೇಟ್‌ಗಳನ್ನು ಖರೀದಿಸಿ ಕ್ಯಾಷಿಯರ್ ಬಳಿ ಬಂದೆವು. ನಾವು ಖರೀದಿಸಿದ ಪ್ರತಿ ಚಾಕೊಲೇಟ್ ಡಬ್ಬಕ್ಕೂ ತಲಾ ಐವತ್ತು ಯೂರೋ ಬೆಲೆ ಎಂದು ತಿಳಿದಾಗ ನಾನು ಗಾಬರಿಯಾದೆ. ಈ ಒಂದು ಡಬ್ಬಕ್ಕೆ ಮೂರುವರೆ ಸಾವಿರ ರೂಪಾಯಿಗಳೇ ಎಂದು ಉದ್ಗರಿಸಿದೆ. ಅಷ್ಟರಲ್ಲಿ ಸುಮುಖ, "ಅಪ್ಪ, ಇಲ್ಲಿಯ



ಚಾಕೊಲೇಟ್‌ಗಳನ್ನು ಹೊರಗೆ ಖರೀದಿಸಿದರೆ ಒಂದು ಸಣ್ಣ ಪ್ಯಾಕೆಟ್‌ಗೆ ಹತ್ತು ಯೂರೋಗಳು ತೆರಬೇಕು" ಎಂದ.

"ದೊಡ್ಡಪ್ಪಾ, ನಾನೀಗಲೇ ಒಂದು ಕೆ.ಜಿ. ಚಾಕೊಲೇಟ್ ತಿಂದು ಮುಗಿಸಿದ್ದೇನೆ – ಅದೂ ಫ್ರೀ ಆಗಿ" ಎಂದು ರಘು ಜಂಬ ಕೊಚ್ಚಿದ.

ಫ್ಯಾಕ್ಟರಿಯಿಂದ ಹೊರಗೆ ಸ್ವಲ್ಪದೂರ ನಡೆದುಬಂದಾಗ ಸುಮುಖ ಎದುರಿಗೇ ಕಾಣುತ್ತಿದ್ದ ಒಂದು ಅಂಗಡಿಗೆ ಕರೆದೊಯ್ದು, "ಈ ದೇಶದಲ್ಲಿ ಚಿಪ್ಸ್‌ಗೆ 'ಫ್ರಿಟ್ಟೂರ್' ಎಂದು ಕರೆಯುತ್ತಾರೆ. ನಮ್ಮ ಊರಿನಲ್ಲಿ ನಾವು ತಿನ್ನುವ ಫಿಂಗರ್ ಚಿಪ್ಸ್ ರೀತಿಯದಿವು, ತಿನ್ನೋಣ" ಎಂದ. ಹಾಗಾದರೆ ನಾವು ತಿನ್ನುವ ಚಿಪ್ಸ್‌ಗೆ ಏನೆನ್ನುತ್ತಾರೆ ಎಂದು ಕೇಳಿದಳು ನನ್ನ ಪತ್ನಿ. "ಅಮ್ಮ, ಅದನ್ನು 'ಕ್ರಿಸ್ಪ್ಸ್' ಎನ್ನುತ್ತಾರೆ" ಎಂದ ಸುಮುಖ. ಚಿಪ್ಸ್ ಅಂಗಡಿಯಲ್ಲಿ ಬಿಸಿಬಿಸಿಯಾಗಿ ಕರೆದ ಚಿಪ್ಸ್‌ಗಳನ್ನು 6–7 ಬಗೆಯ ಡಿಪ್‌ಗಳಲ್ಲಿ ನೆಂಚಿಕೊಂಡು ತಿಂದೆವು. ಸುಮಾರು ಹತ್ತು ಯೂರೋ ಕೊಟ್ಟು ನಾವು ನಾಲ್ಕು ಮಂದಿ ಹೊಟ್ಟೆ ತುಂಬುವಷ್ಟು ಚಿಪ್ಸ್ ತಿಂದೆವು. ಅಲ್ಲೇ ಒಂದು ದೊಡ್ಡ ಬಾಟಲ್ ಕೊಕೋಕೋಲಾ ಖರೀದಿಸಿ ರಾತ್ರಿಯ ಭೋಜನ ಮುಗಿಸಿದೆವು.

ಮನೆಗೆ ಬಂದ ನಂತರ ಸ್ವಲ್ಪ ಹರಟೆ ಹೊಡೆದು ಎಲ್ಲರೂ ನಿದ್ರಾಧೀನರಾದೆವು.





ಮಧ್ಯರಾತ್ರಿ ನನ್ನ ಪಕ್ಕದ ಮಂಚದಲ್ಲಿಯೇ ಮಲಗಿದ್ದ ರಘು, "ಅಯ್ಯೋ ಅಮ್ಮ, ಅಯ್ಯೋ ಅಮ್ಮ" ಎನ್ನುತ್ತಾ ನರಳುವುದನ್ನು ಕೇಳಿ ಗಾಬರಿಯಾಗಿ ಅವನ ಬಳಿ ಹೋದೆ. "ದೊಡ್ಡಪ್ಪ. ತಲೆ ಸುತ್ತುತ್ತಾ ಇದೆ, ಹೊಟ್ಟೆ ತುಂಬಾ ನೋಯುತ್ತಿದೆ" ಎನ್ನುತ್ತಾ ತೊದಲು ತೊದಲಾಗಿ ಅಸಂಬದ್ಧ ಮಾತುಗಳನ್ನಾಡತೊಡಗಿದ. ಅಷ್ಟರಲ್ಲಿ ನನ್ನ ಮಗ ಹಾಗೂ ಪತ್ನಿಯೂ ಎದ್ದು ಬಂದರು. ರಘು ತೇಲುಗಣ್ಣು ಮಾಡಿದ್ದು ನೋಡಿ ಅವರು ಹೆದರಿದರು. ಬಾತ್‌ರೂಮ್‌ಗೆ ಹೋಗಿ ಮುಖ ತೊಳೆದುಕೊಂಡು ಬಾ ಎಂದೆ. ಅವನು ಬಾತ್‌ರೂಮ್‌ಗೆ ಹೋಗುವಷ್ಟರಲ್ಲಿ ಹಾದಿಯಲ್ಲೇ ದಪ್ ಎಂದು ಕೆಳಗೆ ಬಿದ್ದ. ನನಗೆ ತುಂಬಾ

ಗಾಬರಿಯಾಗಿ ನನ್ನ ಮಗನಿಗೆ, "ದಯವಿಟ್ಟು ಡಾಕ್ಟರಿಗೆ ಫೋನ್ ಮಾಡಿ ಡಾಕ್ಟರನ್ನು ಮನೆಗೆ ಕರೆಸು" ಎಂದೆ.

"ಅಪ್ಪಾ ನಾವು ಬೆಂಗಳೂರಿನಲ್ಲಿಲ್ಲ. ಇದು ಬೆಲ್ಜಿಯಂ ದೇಶ. ಇಲ್ಲಿ ಯಾವ ಡಾಕ್ಟರೂ ನಾವು ಕರೆದಾಗ ಮನೆಗೆ ಬಂದು ನೋಡುವುದಿಲ್ಲ. ಏನೇ ಆದರೂ ನಾವೇ ಆಸ್ಪತ್ರೆಗೇ ಹೋಗಿ ಎಮರ್ಜೆನ್ಸಿಗೆ ಸೇರಿಸಬೇಕು, ಆಂಬುಲೆನ್ಸ್ ಕರೆಸಲೇ" ಎಂದ. ಅಷ್ಟರಲ್ಲಿಯೇ ನನಗೆ ನಮ್ಮ ಪರಿಚಯಸ್ಥ ಡಾಕ್ಟರೊಬ್ಬರ ನೆನಪಾಯಿತು. ಅವರು ಕೆಲಕಾಲ ಬೆಲ್ಜಿಯಂನಲ್ಲೇ ಕಳೆದು ಬಂದಿದ್ದರು. ಸೀದಾ ಅವರಿಗೆ ಫೋನಾಯಿಸಿದೆ. "ಏನು ಇಷ್ಟೊತ್ತಿನಲ್ಲಿ" ಎಂದು ಕೇಳಿದರು. ನಡೆದ ವಿಷಯ ತಿಳಿಸಿದೆ. "ಓ ಅಷ್ಟೆನಾ, ಏನೂ ಗಾಬರಿಯಾಗಬೇಡಿ. ರಘುಗೆ ವಾಂತಿ ಮಾಡಿಸಿ ಆ ನಂತರ ಒಂದು ಕಪ್ ಕಹಿ ಕಾಫಿ ಡಿಕಾಕ್ಷನ್ ಕುಡಿಸಿ ಎಲ್ಲಾ ಸರಿ ಹೋಗುತ್ತದೆ" ಎಂದು ಫೋನ್ ಕೆಳಗಿಟ್ಟೇ ಬಿಟ್ಟರು.

ರಘುವನ್ನು ಬಾತ್‌ರೂಮ್‌ಗೆ ಕರೆದೊಯ್ದು ವಾಂತಿ ಮಾಡಿಸಿದೆವು. ಕೆಲ ನಿಮಿಷಗಳ ತರುವಾಯ ಆತ ಚೇತರಿಸಿಕೊಂಡಂತೆ ಕಂಡ. ಅನಂತರ ಅವನಿಗೆ ಕರಿಕಾಫಿಯನ್ನು ಮಾಡಿ ಕುಡಿಸಿದೆವು. ರಘು ಮಾತನಾಡುವ ಸ್ಥಿತಿ ತಲುಪಿದ. ಅಷ್ಟರಲ್ಲಿ ನನ್ನ ಪುತ್ರ ಮುಸಿಮುಸಿ ನಗಲು ಶುರು ಮಾಡಿದ. ನನಗೆ ಕೋಪ ಬಂದು ಕಾರಣ ಕೇಳಿದೆ.

"ಅಪ್ಪಾ, ಈಗ ಕಾರಣ ಅರ್ಥವಾಗಿದೆ. ನೀವು ರಘುವಿನ ಮುಖದ ಬಳಿ ಹೋಗಿ ವಾಸನೆ ನೋಡಿ" ಎಂದ. ನಾನು ರಘುವಿನ ಮುಖದತ್ತ ಹೋಗಿ ಗಾಬರಿಗೊಂಡು, "ಏನೋ ರಘು, ನಿನ್ನ ಬಾಯಿಯಿಂದ ಹೆಂಡದ ವಾಸನೆ ಬರ್ತಾ ಇದೆಯಲ್ಲಾ" ಎಂದೆ. ಹೆದರಿದ ರಘು, "ದೊಡ್ಡಪ್ಪಾ, ನನ್ನನ್ನು ನಂಬಿ. ನಾನು ಜೀವನದಲ್ಲಿಯೇ ಒಂದು ಹನಿ ಆಲ್ಕೋಹಾಲ್ ಸಹ ಸೇವಿಸಿಲ್ಲ" ಎಂದ.

"ಅದಕ್ಕೇ ನಿನಗೆ ಹೀಗಾಯಿತು" ಎಂದ. ಸುಮುಖ ಮತ್ತಷ್ಟು ಗಹಗಹಿಸುತ್ತಾ, "ಅಪ್ಪಾ, ಈ ದೇಶದ ಕೆಲವು ಪ್ರೋಲೈನ್ ಚಾಕೊಲೇಟ್‌ಗಳ ಒಳಗೆ ರಮ್, ಜಿನ್, ವಿಸ್ಕಿ, ವೈನ್‌ಗಳನ್ನು ಹಾಕುತ್ತಾರೆ. ಇಂತಹಾ ಚಾಕೊಲೇಟುಗಳನ್ನು ಊಟದ ನಂತರ ಸೇವನೆ ಮಾಡ್ತಾರೆ. ಆದರೆ ನಮ್ಮ ಭೂಪ ರಘು ಎಂದೂ ಕಂಡಿಲ್ಲದ ಹಾಗೆ ಗಬಗಬ ಕಾಲು ಕೆ.ಜಿ. ಚಾಕೋಲೇಟ್ ಮೇಯ್ದ. ಅವುಗಳ ಒಳಗಿದ್ದ ರಮ್ಮು, ಜಿನ್ನು, ವಿಸ್ಕಿ ಒಂದಕ್ಕೊಂದು ಮಿಕ್ಸಾಗಿ ಅವನಿಗೆ ಜಾಸ್ತಿ ಕಿಕ್ ಹೊಡೆದಿದೆ. ವರೀ ಮಾಡಿಕೊಳ್ಳಬೇಡಿ ನಾಳೆ ಬೆಳಿಗ್ಗೆ ಸರಿ ಹೋಗ್ತಾನೆ" ಎಂದ.

ರಘುವಿನ ಮುಖ ಇಂಗು ತಿಂದ ಮಂಗ. ಅಲ್ಲ ಮೊದಲ ಬಾರಿ ಗುಂಡು ಹಾಕಿದ ಕಾಲೇಜು ಹುಡುಗನ ಹಾಗಿತ್ತು. ಮಾರನೆಯ ದಿವಸವೇ ರಘು ಬೆಂಗಳೂರಿಗೆ ವಾಪಸ್ಸಾದ.

ಒಂದು ತಿಂಗಳ ನಂತರ ನಾವೂ ಊರಿಗೆ ವಾಪಸ್ಸಾದೆವು. ರಘುವಿನ ಅಪ್ಪನಿಗೆ ನಡೆದ ವಿಷಯ ತಿಳಿಸಿದೆ. "ಅಣ್ಣಾ, ಬೆಲ್ಜಿಯಂನಿಂದ ಬಂದ ಬಳಿಕ ರಘು ಚಾಕೊಲೇಟ್ ಹಾಗೂ ಚಿಪ್ಸ್ ತಿನ್ನುವುದನ್ನೇ ನಿಲ್ಲಿಸಿಬಿಟ್ಟಿದ್ದಾನೆ. ಕಾರಣ ಗೊತ್ತಿಲ್ಲ. ಕಾಶಿಗೆ ಹೋಗಿ ನಮಗೆ ಇಷ್ಟವಾದುದ್ದನ್ನು ಬಿಟ್ಟುಬರುವಂತೆ ಬೆಲ್ಜಿಯಂಗೆ ಹೋಗಿ ಚಾಕೊಲೇಟ್ ಹಾಗೂ ಚಿಪ್ಸ್ ಬಿಟ್ಟಿದ್ದಾನೆ" ಎಂದ.

"ಒಳ್ಳೆಯದೇ ಆಯಿತು ಬಿಡು. ಜಂಕ್‌ಫುಡ್ ತಿಂದೂ ತಿಂದೂ ಅವನೂ ದಪ್ಪವಾಗಿದ್ದ" ಎಂದು ನಾನು ಹೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು.



# ಲಾಫಿಂಗ್ ಕ್ಲಬ್

**– ಸಿ.ಆರ್. ಸತ್ಯ**

ನನ್ನ ಆಪ್ತ ಗೆಳೆಯ ಸೂರಿ ನಮ್ಮ ಬಡಾವಣೆಯ ಲಾಫಿಂಗ್ ಕ್ಲಬ್ ಸಂಚಾಲಕ. ಅವನ ಕ್ಲಬ್‌ನಲ್ಲಿ ಹೆಚ್ಚು ಕಮ್ಮಿ ಮೂವತ್ತು ಜನ ಸದಸ್ಯರಿದ್ದಾರೆ; ಪ್ರತಿ ಬೆಳಿಗ್ಗೆಯೂ ನಮ್ಮ ಪಾರ್ಕ್‌ನಲ್ಲಿ ಸೇರ್ತಾರೆ; ಸುಮಾರು ಒಂದು ಗಂಟೆಯ ಕಾಲದಲ್ಲಿ ತಮ್ಮ ಕಾರ್ಯಕಲಾಪವನ್ನು ಮುಗಿಸಿ ಎಲ್ಲಾ ಮನೆಗೆ ಹೋಗ್ತಾರೆ. ಇದು ಒಂದೆರಡು ವರುಷಗಳಿಂದ ತಪ್ಪದೇ ಆಗ್ತಿರೊ ಕಾರ್ಯ – ಥ್ಯಾಂಕ್ಸ್ ಟು ಸೂರಿ. ಆದರೆ ಮೊನ್ನೆ ಏನಾಯ್ತು ಅಂದರೆ, ಅದೇ ಪಾರ್ಕ್‌ನಲ್ಲಿ ಬೆಳಿಗ್ಗೆಯ ಕಾರ್ಯಕ್ರಮ ಮುಗಿದ ಮೇಲೆ, ಸೂರಿ ಒಬ್ಬನೇ ಮರದ ಕೆಳಗೆ ಪೆಚ್ಚಾಗಿ ಕೂತ್ಕೊಂಡಿದ್ದ. ನಾನು ಯಾಕೋ, ಏನಾಯ್ತೋ ಅಂತ ವಿಚಾರಿಸಿದೆ. ಒಹ್, ಒಹ್, ಹೋ!!, ಇಹ್, ಇಹ್ ಈ!! ಅಂತ ಅಂದ. ಹಾಗಂದರೆ ಏನಪ್ಪಾ? ಅಂತ ಕೇಳಿದೆ. ನೀನು ಕೇಳಿಲ್ವಾ, ಇದು ನಮ್ಮ ಲಾಫ್ಟರ್ ಕ್ಲಬ್ಬಿನ ಟ್ರೇಡ್ ಮಾರ್ಕ್ ಶಬ್ದ ಅಂದ. ಹೌದು ಕೇಳಿದೀನಿ, ಅದರಿಂದ ನಿದ್ರೇನು ಕೆಡಿಸಿಕೊಂಡಿದೀನಿ ಅಂತ ಅಂದೆ. 'ಈಗ ನಾನೂನೂ ಅದರಿಂದ ನಿದ್ದೆ ಕೆಡಿಸ್ಕೋತಿದೀನಿ' ಅಂದ. ಯಾಕಪ್ಪ ಏನಾಯ್ತು? ಅಂತ ಕೇಳಿದೆ. ನಿನಗೆ ಅರ್ಥವಾಗುತ್ತೋ ಇಲ್ವೋ. ಹೇಳ್ತೀನಿ ಕೇಳು. ನಮ್ಮ ರುಟೀನ್‌ನಲ್ಲಿ ಎಲ್ಲರೂ ಒಹ್, ಒಹ್, ಹೋ!!, ಇಹ್, ಇಹ್ ಈ!! ಅಂತ ಪಕ್ಕೆ ಹಿಡಿಕೊಂಡು ನಗಬೇಕು ಅಥವಾ ನಗು ಬರದೇ ಇದ್ರೂನೂವೆ, ನಗೋ ಹಾಗೆ ನಟನೆ ಮಾಡಬೇಕು. ಇದು ನಮ್ಮ ನಿಯಮ. ಇತ್ತೀಚೆಗೆ ಈ ನಿಯಮವನ್ನು ಯಾರೂ ಪಾಲಿಸ್ತಿಲ್ಲ. ಈ ಘಟ್ಟದಲ್ಲೇ ಅವರುಗಳು ನಿಯಮ ಪಾಲಿಸದೇ ಇದ್ದರೆ ಇನ್ನೂ ಮುಂದಿನ ಎಕ್ಸರ್ ಸೈಜಗಳು ಅಂದರೆ – ಉ, ಊ, ಊ; ಎ, ಎ, ಎ; ಏ, ಏ, ಏ; ಐ, ಐ, ಐ; ಔ, ಔ, ಔ; ಅಂ, ಅಂ, ಅಂ; ಅಹಃ, ಅಹಃ, ಅಹಃ; ಇವೆಲ್ಲಾ ಸರಿಯಾಗೆ ಮಾಡ್ತಾರೆ ಅಂತ ಏನು ಗ್ಯಾರಂಟೀ? ನನಗೆ ಇದೇ ಈಗ ಯೋಚನೆ ಆಗಿದೆ ಅಂದ. ಅವರು ಒಹ್, ಒಹ್, ಹೋ!! ನಲ್ಲಿ ನಗೋದಿಲ್ಲ ಅಂತ ಹೇಗೆ ನಿನಗೆ ಗೊತ್ತಾಯ್ತು? ಅಂತ ಕೇಳಿದೆ.

> ನಗುವುದಕ್ಕೂ ಒಂದು ರಿದಮ್ ಫಿಕ್ಸ್ ಮಾಡಿ... ಹಾಗೇ ನಗಬೇಕೆಂದರೆ.

ಅದಕ್ಕೆ ಸೂರಿ, 'ಅವರು ಒಹ್, ಒಹ್, ಹೋ!! ಅಂತ ಕೂಗೋವಾಗ ಅವರ ಹತ್ತಿರ ಹೋಗಿ ನೋಡಿದರೆ ನನಗೆ ಕಾಣೋದು ಏನು ಗೊತ್ತಾ? ಎರಡು ತರಹ. ಸುಮಾರು ಅರ್ಧಜನ ನಗೋ ಬದಲು ನಿಜವಾಗಿ ಅಳ್ತಿರ್ತಾರೆ! ಇನ್ನು ಅರ್ಧಜನ ನಗೋ ಬದಲು ಕೋಪದಿಂದ ಅರಚಿಕೊಳ್ತಾ ಇರ್ತಾರೆ! ಒಬ್ಬರ ಮುಖದಲ್ಲೂ ನಗೂನೇ ಕಾಣೋಲ್ಲಾ! ಇನ್ನೊಂದು ತಮಾಷೆ ಅಂದರೆ, ನಮ್ಮಲ್ಲಿ ಬರೋವರು ಎಲ್ಲಾ ದಂಪತಿಗಳೇ. ಸೋಜಿಗವೆಂದರೆ, ಒಂದೊಂದು ದಿವಸ ಹೆಂಡತಿ ಒಹ್, ಒಹ್, ಹೋನಲ್ಲಿ ಅಳುತ್ತಾ ಇದ್ದರೆ, ಆಕೆ ಗಂಡ ಅದೇ ಸಮಯಕ್ಕೆ ಒಹ್, ಒಹ್, ಹೋನಲ್ಲಿ ಕೋಪದಿಂದ ಕೂಗ್ತಾ ಇರ್ತಾನೆ. ಆಮೇಲೆ, ಇದು ವೈಸ್ ವರ್ಸಾನೂ ಆಗುತ್ತೆ. ಹೆಂಡತಿ ಒಹ್, ಒಹ್, ಹೋನಲ್ಲಿ ಕೋಪದಿಂದ ಅರ್ಚುಕೊಳ್ತಾ ಇದ್ದಾಗ, ಅವಳ ಗಂಡ ಒಹ್, ಒಹ್, ಹೋನಲ್ಲಿ ಅಳ್ತಾ ಇರ್ತಾನೆ.



ಇದು ಯಾಕೆ ಹೀಗೆ ಆಗ್ತಾ ಇದೆ ಅಂತ ನನಗೆ ಅರ್ಥ ಆಗ್ತಾ ಇಲ್ಲ. ನಮ್ಮ ಲಾಫಿಂಗ್ ಕ್ಲಬ್‌ನಲ್ಲಿ ಲಾಫಿಂಗೇ ಇಲ್ಲದಿದ್ದರೆ ಹೇಗಪ್ಪಾ?' ಅಂತ ಅವನೂ ಕಣ್ಣೊರೆಸಿಕೊಂಡ.

ನಾನು ಜೀವನದಲ್ಲಿ ಸ್ವಲ್ಪ ಅನುಭವ ಪಡೆದಿರೋನು. ಅವನ ಪಕ್ಕ ಕೂತ್ಕೊಂಡು, 'ನೋಡು ಸೂರಿ. ನೀನು ಇನ್ನೂ ಬ್ರಹ್ಮಚಾರಿ. ನಿನಗೆ ಇದೆಲ್ಲಾ ಅರ್ಥವಾಗಬೇಕಾದರೆ, ಮದುವೆ ಆಗಿ ಸುಮಾರು ಇಪ್ಪತ್ತು ವರುಷಗಳು ಕಳೀಬೇಕು. ನೀನು ಒಂದು ಗಾದೆ ಕೇಳಿದೀಯಾ? ಗಂಡ ಹೆಂಡತಿ ಜಗಳ ಬೆಳಗ್ಗೆ ಹತ್ತು ಗಂಟೆ ತನಕ – ಅಂತ. ವಿಷಯ ಇಷ್ಟೆ. ಈ ದಂಪತಿಗಳ ಮನೆಯಲ್ಲೆಲ್ಲಾ ದಿನಾ ರಾತ್ರಿ ಯಾವುದೋ ಕಾರಣಕ್ಕೆ ಜಗಳ ಆಗೇ ಆಗುತ್ತೆ. ಒಂದೊಂದು ದಿವಸ ಜಗಳದಲ್ಲಿ ಹೆಂಡ್ತಿ ಗೆಲ್ತಾಳೆ.



ಒಂದೊಂದು ದಿವಸ ಗಂಡ ಗೆಲ್ತಾನೆ. ಆದರೆ ಜಗಳದ ಕೋಪ ಹೋಗಬೇಕಾದರೆ ಹತ್ತು ಗಂಟೆ ತನಕ ಯಾರ ಕೈಲಿ ಕಾಯೋದಕ್ಕೆ ಆಗುತ್ತೆ ಹೇಳು. ಬೆಳಗಾಗೆದ್ದು ನಿನ್ನ ಕ್ಲಬ್‌ಗೆ ಬಂದಾಗ, ಅವರಲ್ಲಿ ಕೋಪ ಆಗಲೀ ಅಳು ಆಗಲೀ ಇನ್ನೂ ಹಾಗೆ ಇರುತ್ತೆ. ಅದನ್ನ ನಿನ್ನ ಒಹ್, ಒಹ್, ಹೋ ಸ್ಟೇಜ್‌ನಲ್ಲಿ ತೋರಿಸಿಕೊಳ್ತಾರೆ ಅಷ್ಟೆ' ಅಂತ ಅಂದೆ. ಸೂರಿಗೆ ನನ್ನ ಮಾತು ಕೇಳಿ ಇನ್ನಷ್ಟು ಗಾಬರಿ ಆಯ್ತು. 'ಅಲ್ಲಪ್ಪ, ಮದುವೆ ಅಂದರೆ ಇಷ್ಟೇನಾ? ದಿನಾ ಜಗಳ ಆಡೋದು ಅಂದ್ರೆ ಏನರ್ಥ? ನಿಮ್ಮನೇಲೂ ಇದೇ ಗೋಳಾ? ಅದೂ ಅಲ್ಲದೆ ಜಗಳದಲ್ಲಿ ಗಂಡಂದಿರೂ ಸೋತುಕೊಂಡು ಅಳ್ತಾರೆ ಅಂತ ನಾನು ಕೇಳ್ತಿರೋದು ಇದೇ ಮೊದಲನೆಯ ಸಲ. ಸಾಧಾರಣವಾಗಿ ನಮ್ಮ ಕತೆ ಕಾದಂಬರಿಗಳಲ್ಲಿ ಸಿನೆಮಾಗಳಲ್ಲಿ ಯಾವಾಗಲೂ ಗಂಡಂದೇ ಅಲ್ಲವಾ ಮೇಲ್ಗೈ?' ಅಂತ ಕೇಳಿದ. 'ನಮ್ಮನೆ ವಿಷಯ ಯಾಕೆ ಈಗ? ನಿಮ್ಮ ಕ್ಲಬ್ ವಿಷಯಕ್ಕೆ ಬಾ' ಅಂತ ನಾನು ಮಾತು ತೇಲಿಸಿದೆ. 'ಹಾಗಾದ್ರೆ, ಏನು ಮಾಡಲಿ ಹೇಳಪ್ಪ. ಆ ಹಾಳು ಗಾದೇನ ಯಾವನು ರಚಿಸಿದ್ನೋ ಅವನನ್ನ ಸದೇಬಡೀಬೇಕು. ಅಲ್ಲ, ಹತ್ತು ಗಂಟೆ ಆದಮೇಲೆ, ಲಾಫಿಂಗ್ ಕ್ಲಬ್‌ಗೆ ಬರೋದಕ್ಕೆ ಯಾರು ತಾನೇ ಫ್ರೀ ಇರ್ತಾರೆ ನೀನೇ

ಹೇಳು. ಅದೂ ಅಲ್ಲದೆ ಈ ದಂಪತಿಗಳು ತಮ್ಮ ಕೋಪಾನ, ಅಳೂನ ಬೇರೆ ಯಾರಾದ್ರೂ ಮೇಲೆ ಹರಿಸಿ, ನಮ್ಮ ಪಾರ್ಕ್‌ಗೆ ಶಾಂತವಾಗಿ ಯಾಕೆ ಬರಬಾರ್ದು ಅಂತೀನಿ?' ಅಂದ. 'ಅದು ಅಷ್ಟು ಸುಲಭವಲ್ಲ ಸೂರಿ. ಮಕ್ಕಳ ಮೇಲೆ ತಳ್ಳಬಹುದು ಅಂದ್ರೆ, ಈಗ ಎಲ್ಲರ ಮನೇಲೂ ಮಕ್ಕಳು ಅಮೇರಿಕಾದಲ್ಲಿ ಹೋಗಿ ಕೂತಿದ್ದಾರೆ. ಹಾಲಿನವನಿಗೆ, ಪೇಪರ್ ಹುಡುಗನಿಗೆ ಟ್ರಾನ್ಸ್‌ಫರ್ ಮಾಡೋಣ ಅಂದರೆ ಅವರು ಗೇಟ್ ಹತ್ತಿರ ಅರ್ಧ ನಿಮಿಷಾನೂ ಇರಲ್ಲ. ಇನ್ನು ಉಳಿದಿರೋದು ಅಂದರೆ ಮನೆ ನಾಯಿ. ಯಾರೂ ಈಗ ನಾಯಿ ಕಟ್ಕೋತಿಲ್ಲ. ಸಾಕಿದ ನಾಯಿಗಳೂ ಈಗ ಅವುಗಳ ಮೇಲೆ ರೇಗಿದ್ರೆ, ಅನ್ನ ಹಾಕಿದವರಿಗೇ ಕಚ್ಚುತ್ವೆ. ಹಾಗಾಗಿ ಅವರಿಗೆ ಉಳಿದಿರೋ ಜಾಗ ಅಂದರೆ ನಿನ್ನ ಲಾಫಿಂಗ್ ಕ್ಲಬ್. ಅಲ್ಲಿ ಯಾರು ಹೇಗೆ ಕೂಗಿಕೊಂಡರೂ ಯಾರಿಗೂ ಅರ್ಥವಾಗಲ್ಲ. ಕೋಪ ಕಳೆದುಕೊಳ್ಳೋಕ್ಕೆ, ಅಳು ಮುಗಿಸೋದಕ್ಕೆ ಐಡಿಯಲ್ ಜಾಗ!' ಅಂತ ವಿವರಿಸಿದೆ.

ಸೂರಿ ನನ್ನ ಫಿಲಾಸಫಿನ ಬೇಗ ಅರ್ಥ ಮಾಡಿಕೊಂಡ ಅಂತ ಕಾಣುತ್ತೆ. 'ನಿನ್ನ ವಿಶ್ಲೇಷಣೆಗೆ ಬಹಳ ಥ್ಯಾಂಕ್ಸ್ ಕಣಪ್ಪ. ಅದರಿಂದ ನಾನು ಎರಡು ನಿರ್ಧಾರಗಳನ್ನ ಮಾಡ್ತಾ ಇದೀನಿ' ಅಂತ ಅಂದ. 'ಏನಪ್ಪಾ ಅವು?' ಅಂತ ಕೇಳಿದೆ. 'ಒಂದು: ನಾನು ಇನ್ನು ಮದುವೆ ಆಗೋ ಯೋಚನೆ ಮಾಡೋಲ್ಲ ಅಂತ. ಎರಡನೇದು: ನನ್ನ ಲಾಫಿಂಗ್ ಕ್ಲಬ್‌ನ ಎರಡು ಕ್ಲಬ್‌ಗಳಾಗಿ ಭಾಗ ಮಾಡಿ ಬಿಡ್ತೀನಿ. ಒಂದಕ್ಕೆ ಕ್ರಯಿಂಗ್ ಕ್ಲಬ್ ಅಂತ ಹೆಸರು ಇಡ್ತೀನಿ. ಇನ್ನೊಂದಕ್ಕೆ ರೋರಿಂಗ್ ಕ್ಲಬ್ ಅಂತ ಹೆಸರಿಡ್ತೀನಿ. ಮೆಂಬರ್ಸ್ಸು ಅವರ ಮೂಡನ್ನ ನೋಡಿಕೊಂಡು ಯಾವುದಾದರೂ ಒಂದು ಕ್ಲಬ್‌ಗೆ ಬಂದು ತಮ್ಮ ದುಃಖಾನೂ ಕೋಪಾನೂ ಕಳೆದುಕೊಳ್ಳೋಕ್ಕೆ ಅನುಕೂಲ ಆಗುತ್ತೆ' ಅಂತ ಅಂದ. ದಂಪತಿಗಳಿಗೆ ಎರಡು ಎರಡು ಕ್ಲಬ್‌ಗಳಿಗೆ ಹೋಗೋದು ಕಷ್ಟ ಆಗಲ್ವಾ? ಅಂತ ಕೇಳಿದೆ. 'ಇಲ್ಲ, ಅದೇ ಗ್ರೌಂಡ್‌ನಲ್ಲೇ ಅದೇ ಜಾಗದಲ್ಲೇ ಎರಡು ಬೋರ್ಡ್‌ಗಳನ್ನ ಹಾಕ್ತೀನಿ. ಅಕ್ಕ ಪಕ್ಕದಲ್ಲೇ. ಅವರು ಯಾವ ಕಡೇಗಾದರೂ ಹೋಗ್ಲಿ. ಬೇಕಾದ ಹಾಗೆ ಅಳಲಿ, ಬೇಕಾದ ಹಾಗೆ ಅರಚಿಕೊಳ್ಳಲಿ. ಏನಂತೀಯಾ?' ಅಂದ. 'ಹಾಗಾದರೆ, ಲಾಫಿಂಗ್ ಗತಿ?' ಅಂತ ಕೇಳಿದೆ. 'ಲಾಫಿಂಗ್ ಹಾಳಾಯ್ತು. ಇಂತಹ ತೊಂದರೆಗಳು ಇಲ್ಲದಿದ್ರೂ ಅವರೆಲ್ಲಾ ನಿಜವಾಗಿ ನಗೋದು ಅಷ್ಟರಲ್ಲೇ ಇದೆ' ಅಂದ.

ಆಶ್ಚರ್ಯ ಅಂದರೆ, ಸೂರಿ ಹೇಳಿದ ಹಾಗೇ ಮಾಡಿದ. ಇದರಿಂದ ಅವನೇ ಹೇಳೋ ಹಾಗೆ, ಮೆಂಬರ್ಸ್ ಎಲ್ಲಾ ಗ್ರೌಂಡ್‌ಗೆ ಬಂದ ತಕ್ಷಣ ಆಟೋಮ್ಯಾಟಿಕ್ ಆಗಿ ಕ್ರಯಿಂಗ್ ಅಥವಾ ರೋರಿಂಗ್ ಬೋರ್ಡ್ ಕಡೆ ಹೋಗ್ತಾರಂತೆ. ಕನ್ನಡದ ಅಕ್ಷರ ಮಾಲೆ ಮುಗಿಯೋ ತನಕ – ಅಂದರೆ ಅಂ, ಅಂ, ಅಹ! ಘಟ್ಟಕ್ಕೆ ಬರೋದರಲ್ಲಿ ಅವರ ಕೋಪ ಅಥವಾ ದುಃಖ ಎರಡೂ ಕಳೆದುಕೊಂಡು, ಮನೆ ಕಡೆ ನಗು ನಗುತಾ ಹೋಗ್ತಾರಂತೆ. 'ಈಗ ನನಗೂ ಟೆನ್ಷನ್ ಇಲ್ಲಪ್ಪ. ನಾನೂ ಮದುವೆ ಆಗೋಣ ಅಂತ ಇದೀನಿ. ಹುಡುಗೀನ ಆಗಲೇ ನೋಡಿ ಆಗಿದೆ' ಅಂತ ಹೇಳಿದ. ಆರ್ ಯೂ ಶೂರ್? ಅಂತ ಕೇಳಿದೆ. 'ಶೂರ್ ಕಣಪ್ಪ. ನಾವು ಮದುವೆ ಆದಮೇಲೆ ಈ ದಂಪತಿಗಳ ಸ್ಟೇಜ್‌ಗೆ ಬರಬೇಕಾದರೆ ನಿನ್ನ ಪ್ರಕಾರ ಇಪ್ಪತ್ತು ವರುಷಗಳಾಗುತ್ತೆ ಅಂತ ನೀನೇ ಹೇಳಿದೀಯ. ಆಗಲಿ ಇಪ್ಪತ್ತು ವರುಷ ಕಳೀಲಿ. ಆಮೇಲೆ ನಾವಿಬ್ರೂನು ಇದೇ ಕ್ಲಬ್‌ಗೆ ಮೆಂಬರ್‌ಗಳಾಗಿ ನಮಗೆ ಬೇಕಾದ ಬೋರ್ಡ್ ಕಡೆ ಹೋಗ್ತೀವಿ ಬಿಡು. ನಾನಿನ್ನು ಬರಲಾ? ನನ್ನ ವುಡ್ ಬಿ ಕಾಯ್ತಾ ಇರ್ತಾಳೆ' ಅಂತ ಅಲ್ಲಿಂದ ಕಾಲ್ಕಿತ್ತ!



# ಬೆನ್ನ ಹಿಂದೆ ಆಡಿಕೊಳ್ಳುವವರ ಅಂಗಳದಲ್ಲಿ

**- ಗಂಗಾವತಿ ಪ್ರಾಣೇಶ್**

ಸ್ವಾತಂತ್ರ್ಯ ಸಿಕ್ಕ ಮೇಲಿನ ನಮ್ಮ ಜನರ ಮನಸ್ಥಿತಿ, ಮನೋಭಾವ, ವಿಚಾರಲಹರಿ ಎಲ್ಲವೂ ಹಳ್ಳ ಹಿಡಿದು ಹೋಗಿವೆ. ದೇಶ, ಭಾಷೆ, ಸಂಸ್ಕೃತಿ ಬಗ್ಗೆ ಯಾರಿಗೂ ಬೇಕಿಲ್ಲ. ತಾವು, ತಮ್ಮ ಮನೆ, ಮಕ್ಕಳು, ಆಸ್ತಿ, ಬ್ಯಾಂಕ್‌ಬ್ಯಾಲೆನ್ಸ್‌ಗಳ ಬಗ್ಗೆಯೇ ಚಿಂತಿಸುತ್ತಿರುವ ಈ ಜನರಿಗೆ, ಅಂದಿನ ದಿನ, ಈ ವರ್ಷದ ಹಬ್ಬ, ಈ ಒಂದು ಕೆಲಸ ಆದರೆ ಸಾಕು, ಗೆದ್ದರೆ ಸಾಕು ಎಂಬ ಅಲ್ಪತೃಪ್ತಿ, ಅಲ್ಪಮತಿಗಳಾಗಿದ್ದಾರೆ. ಎಲ್ಲೋ ಹಳ್ಳಿಗಳಲ್ಲಿ ಅಷ್ಟಿಷ್ಟು ಮಾನವೀಯ ಸಂಬಂಧಗಳಿವೆಯಾಗಲಿ, ಪಟ್ಟಣದಲ್ಲಿ ಎಲ್ಲರೂ ತಮ್ಮಷ್ಟಕ್ಕೆ ತಾವಿರುವ ಪರದೇಶಿಗಳೇ. ಮಾನವೀಯ ಸಂಬಂಧಗಳ ಮುಖ್ಯ ಕೊಂಡಿ ಮಾತೇ ಮುಖ್ಯ. ಅದೇ ಕಡಿಮೆ ಆದ್ದರಿಂದ ಪರಸ್ಪರರ ಬಗ್ಗೆ ಯಾರೂ ಪ್ರಶಂಸೆ ಮಾಡುವುದಿಲ್ಲ. ನಾನು ಹಾಗೆ, ನನಗಿದು ಇಷ್ಟವಾಗಲ್ಲ, ನನ್ನ ಅಭಿಪ್ರಾಯ ಕೇಳಿ ನಾ ಹೇಳ್ತಿನಿ ಕೇಳಿ ಎಂಬ ಮಾತುಗಳೇ ಜನರನ್ನು ದೂರ ದೂರ ಮಾಡುತ್ತಿವೆ.

> **ಬಾಯಿ ಮುಂದೆ ಇದ್ದರೂ ಪಕ್ಕದಲ್ಲಿರೋ ಕಿವಿಗೆ ಹಿಂದೆ ಆಡಿಕೊಳ್ಳೋ ಮಾತು ಕೇಳದೇ ?**

ಮಾತನಾಡುವುದು ಒಂದು ಕಲೆ, ಹಿತವಾಗಿ ಮಾತನಾಡುವುದಂತೂ ವರ. ನನ್ನ ಜೀವನದಲ್ಲಿ ಎಂದೂ ಯಾರನ್ನೂ ಕಾಯಾ, ವಾಚಾ, ಮನಸಾ ನೋಯಿಸದೇ 'ಸತ್ಯಂಬ್ರೂಯಾತ್, ಪ್ರಿಯಂ ಬ್ರೂಯಾತ್' ಎಂಬ ಸಿದ್ಧಾಂತದಲ್ಲಿ ಮಾತನಾಡುವವರು ಹಿರಿಯ ಲೇಖಕರಾದ ಶ್ರೀ ಎಂ.ಎಸ್. ನರಸಿಂಹಮೂರ್ತಿ ಹಾಗೂ ಶ್ರೀ ಬದರಿನಾಥ ಸ್ನೇಹಿತರು. ಇವರ ಬಾಯಿಂದ ಎಂದೂ ನರಸಿಂಹಮೂರ್ತಿಗಳು ಯಾವ ಕಲಾವಿದ, ಯಾವ ಲೇಖಕ, ಹೇಗೇ ಮಾತಾಡಿರಲಿ, 'ಸೂಪರ್ ಬರೆದಿದ್ದೀರಾ, ತುಂಬಾ ಚೆನ್ನಾಗಿ ಮಾತಾಡಿದ್ರಿ, ಚಿಂದಿ ಮಾಡಿ ಹಾಕಿದ್ರಿ ಎಂದೇ ಅನ್ನುತ್ತಾ' ಅವರನ್ನು ಪ್ರೋತ್ಸಾಹಿಸುತ್ತಾರೆ. ಇನ್ನು ಸ್ನೇಹಿತರಾದ ಬದರಿನಾಥ ಅವರಂತೂ ಯಾರೇ ಕಂಡರೂ 'ಎಷ್ಟು ಇಳಿದು ಹೋಗಿದ್ದೀರಾ? ಆರೋಗ್ಯದ ಕಡೆ ಗಮನ ಕೊಡಿ, ಬಿಸಿನೀರು ಕುಡಿಯಿರಿ, ಹೊಟೇಲ್‌ಗಳಲ್ಲಿ ಎಂದೂ ಮಜ್ಜಿಗೆ ಕುಡಿಬೇಡಿ, ತಿಂಡಿ ಊಟಕ್ಕೆ ನಮ್ಮನೆಗೇ ಬನ್ನಿ, ಮಾತಾಡ್ತಾ ಕೂಡೋಣ. ಎಷ್ಟು ದಿನ ಆಯ್ತು ಸೇರದೇ ಅಲ್ವಾ?' ಎನ್ನುತ್ತಾರೆ. ಕೇವಲ ಎಂಟೇ ದಿನಕ್ಕೆ ಅವರು 'ತುಂಬಾ ದಿನ ಆಯ್ತು ನೀವು ಸಿಗದೆ, ನಿಮ್ಮನ್ನ ನೋಡದೇ' ಎನ್ನುತ್ತಾರೆ. ಇಂಥವರನ್ನು ಕಂಡಾಗೆಲ್ಲ ನನಗೆ 'ವಚನೇಕಾ ದರಿದ್ರತಾ' ಎಂಬ ಉಕ್ತಿ ನೆನಪಾಗುತ್ತದೆ. ಇದನ್ನು ಅವರು ಅರ್ಥಮಾಡಿಕೊಂಡಿದ್ದಾರೆ ಎನಿಸುತ್ತದೆ.

ಇನ್ನು ಕೆಲವರು ಮಾತನಾಡಿದರಂತೂ, ದರಿದ್ರಗಳು ಇವರೇಕೆ ಮಾತನಾಡುತ್ತಾರೋ ಎನಿಸುತ್ತದೆ. ಅವರ ಮಾತುಗಳು ಈಟಿಯಂತೆ ಚುಚ್ಚುತ್ತವೆ. ಇವರನ್ನು ಬೆನ್ನ ಹಿಂದಿನ ಭಾಷಣಕಾರರು ಎಂದು ಕರೆಯಬಹುದು. ಎಲ್ಲೋ ಓದಿದ ಒಂದು ವಕ್ರತುಂಡೋಕ್ತಿ 'ಗುಂಪಿನಲ್ಲಿ ಎಂದೂ ನಿಮ್ಮ ಬಗ್ಗೆ ನೀವೇ ಮಾತನಾಡಬೇಡಿ. ನೀವು ಎದ್ದು ಹೋದ ಮೇಲೆ ಅವರೆಲ್ಲ ಮಾತನಾಡುವುದು ನಿಮ್ಮ ಬಗ್ಗೆಯೇ' ಎಷ್ಟು ನಿಜ ಎನಿಸುತ್ತದೆ.



ಗೆಳೆಯರ ಗುಂಪಿನಲ್ಲಿ ಇದು ಕಡಿಮೆ ಆದರೂ, ಬಂಧು-ಬಳಗ, ದಾಯಾದಿಗಳು ಸೇರಿದರೆಂದರೆ ಮುಗಿಯಿತು. ಇವರಿಗೆ ಅವನಾರವ ಇವನಾರವ ಎಂಬ ಭೇದವಿಲ್ಲ. ಆಡಿಕೊಳ್ಳುವುದೇ ನಮ್ಮವರನ್ನು ಅಲ್ಲವೆ? ಎಂಬ ಏಕೋಭಾವ. ಯಾರದಾದರೂ ತಮ್ಮವರ ಮದುವೆಗೆ ಹೋದರಾಯಿತು, ಮದುವೆ ಅಂತಲೇ ಇಲ್ಲ ಮುಂಜಿ, ಗೃಹಪ್ರವೇಶ, ಷಷ್ಠಬ್ಧಿ, ಹೋಗಲಿ ತಿಥಿ, ಶ್ರಾದ್ಧಕ್ಕೆ ಹೋದರೂ ಅವರನ್ನು ಅವರ ಮಕ್ಕಳನ್ನು ಆಡಿಕೊಂಡು ಅನ್ನವನ್ನು ಅರಗಿಸಿಕೊಳ್ಳುವವರಿದ್ದಾರೆ. ಇವರನ್ನೆಲ್ಲ ಪಾಪ ಕರೆದವರು 'ನಮ್ಮವರೇ' ಅಂತ ಕರೆದಿರುತ್ತಾರೆ. ಅವರು ನಾವು ಅನ್ಯರು ಎಂದು ಮಾತನಾಡಿ ಅದನ್ನು ಸ್ಪಷ್ಟಪಡಿಸುತ್ತಾರೆ.



'ಭರ್ಜರಿ ಕಲ್ಯಾಣ ಮಂಟಪ, ಸುಸಜ್ಜಿತ ರೂಮುಗಳು, ಅದ್ಧೂರಿ ಅಲಂಕಾರ, ಗಂಟೆಗೊಮ್ಮೆ ಕಾಫಿ – ತಿಂಡಿ, ಪಾನೀಯ, ಎಲ್ಲೆಲ್ಲೂ ಒಡವೆ, ಸೀರೆಗಳನ್ನು ಹೊತ್ತು ಲಾರಿಯಂತೆ ನಾರಿಯರು ಇದ್ದರೆನ್ನಿ, ಇವರ ನಾಲಿಗೆ ಅವರ ಅಂದ ಚೆಂದ, ರೂಪುಗಳ ಬಗ್ಗೆ ವಾಗ್ಬಾಣಗಳನ್ನು ಬಿಡಲು ಉಪಕ್ರಮಿಸುತ್ತಾರೆ. ಹುಡುಗಿ ಏನೂ ಚೆಂದವಿಲ್ಲ, ಹುಡುಗಿ ಗಂಡಿನ ತರಹ ಇದ್ದಾಳೆ, ಹುಡುಗನೇ ಹೆಣ್ಣಿನ ಥರ ಕಾಣ್ತಿದಾನೆ ಅಲ್ಲವಾ? ಈ ಪಾಟಿ ಬಂಗಾರದ ಒಡವೆನಾ, ಈಗೆಲ್ಲ ಬಂಗಾರದ ಮುಖಕ್ಕೆ ಹೊಡೆದ ಹಾಗೆ ಗಿಲೀಟಿನ, ರೋಲ್ಡ್ ಗೋಲ್ಡ್ ಒಡವೆ ಬಂದಿವೆ, ದಪ್ಪಕ್ಕೆ ಬಂಗಾರದ ನೀರು ಕುಡಿಸಿರೋ ಒಡವೆ ಬಂದಿವೆ' ಎಂದೆಲ್ಲಾ ಮಾತನಾಡಿಕೊಳ್ಳುತ್ತಾರೆ. 'ಬಂಗಾರದವು ಇದ್ರೂ ಇರಬಹುದು ಕಣ್ರೆ, ಏನೇನೋ ಮಾಡಿ ಹಣಗಳಿಸಿವೆ, ಒಬ್ಬರ ಕಷ್ಟ ಸುಖಕ್ಕೂ ಕರಗದೇ, ಕೈ ಎತ್ತಿ ಕೊಡದೇ, ಕೂಡಿಟ್ಟು ಈಗ ಮಕ್ಳು ಸೊಸೆಯಂದಿರ ಮೈಮೇಲೆ ಸುರಿದಿದ್ದಾರೆ. ನಾಯಿ ಹಾಲು ಪಂಚಾಮೃತಕ್ಕೆ ಬರುತ್ತದೆಯೆ? ಅವುಗಳ ಮರಿಗೆ ತಾನೆ? ಅಂತ ಕುಹಕವಾಡುತ್ತಾರೆ.

ಹುಡುಗಿ ಚೆನ್ನಾಗಿದ್ದು ಹುಡುಗ ಚೆನ್ನಾಗಿರೋ ಒಳ್ಳೆ ಮನೆತನ ನೋಡಿ ಕೊಟ್ಟಿದ್ದರಂತೂ

‘ಅಯ್ಯೋ ಬಿಟ್ಟಿದ್ರೆ ಹುಡುಗಿ ಓಡಿ ಹೋಗೋಕೆ ರೆಡಿಯಾಗಿದ್ರು ಗೊತ್ತಾ? ಮರ್ಯಾದೆ ಹೋಗುತ್ತೇಂತ ಈ ಮನೆತನಕ್ಕೆ ಹುಡುಕಿ ಕೊಟ್ಟಿದ್ದಾರೆ, ಹುಡುಗ ನೋಡೋ ಹಾಗಿರಬೇಕಪ್ಪ, ಮನೆತನ ನೋಡ್ತಾರೆಯೆ ಜನ? ಹಾಗಂತ ಚೆಲುವ ಎಂದು ರಾಹುಲ್ ಗಾಂಧಿಯಂತ ಹುಡುಗನಿಗೆ ಹೆಣ್ಣನ್ನು ಕೊಟ್ಟರೆ? ಅದಕ್ಕೆ ಇಡೀ ದೇಶವೇ ಆಡಿಕೊಳ್ಳುವವರ ಅಂಗಳಕ್ಕೆ ಇಳಿದಿಲ್ಲವೆ ಈಗ ಹಾಗಾಗುತ್ತದೆ. ‘ಹೆರರ ಕಂಡು ಹಿಗ್ಗುವವರಿಲ್ಲದೆ ಹಗುರವಾಗಿದೆ ಈ ಜಗವೆಲ್ಲ, ತನ್ನವರ ಬಳಿ ಸತ್ವವಿಲ್ಲ, ತಮ್ಮ ಮಿಥ್ಯೆಯ ಮುಚ್ಚಿಡಲು ತತ್ವವನ್ನೇ ತುಳಿಯುತಿಹರಲ್ಲಾ’ ಎಂಬ ವಾಕ್ಯವೇ ಇಂದಿನ ಘೋಷವಾಕ್ಯ. ಇನ್ನೂ ಕೆಲವರಿದ್ದಾರೆ. ತಾವು ತಮ್ಮ ಮಕ್ಕಳು, ತಮ್ಮ ಮನೆತನ ಬಿಟ್ಟರೆ ಪ್ರಪಂಚದಲ್ಲಿ ಉಳಿದದ್ದೆಲ್ಲ ಶೂನ್ಯ, ಕೆಲಸಕ್ಕೆ ಬಾರದ್ದು ಎಂಬ ಧೋರಣೆಯವರದು. ಸುಮಾರು ಹದಿನೆಂಟು – ಇಪ್ಪತ್ತು ವರ್ಷಗಳ ಮೇಲೆ ಮೊನ್ನೆ ಒಂದೂರಿಗೆ ಮತ್ತೊಮ್ಮೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಇಪ್ಪತ್ತು ವರ್ಷಗಳ ಹಿಂದೆ ಇಳಿದುಕೊಂಡಿದ್ದವರ ಮನೆಗೇ ಅವರೇ ಬಂದು ಕರೆದೊಯ್ದರು. ಊರ ಹೊರಗೆ ದೊಡ್ಡ ಮನೆ ಕಟ್ಟಿಸಿದ್ದರು ಹಳೆ ಮನೆಗೆ ಬಂದಿದ್ರಿ, ನಿಮ್ಮ ಕಾಲ್ಗುಣ ಹೊಸಮನೆ ಕಟ್ಟಿಸಿದ್ದೀವಿ, ಅಲ್ಲಿಗೂ ಪಾದ ಹಾಕಿ ಎಂದೆಲ್ಲ ಪುಸಲಾಯಿಸಿ ಈ ಪ್ರಾಣೇಶನ ಪಾದಗಳಿಗೆ ಪುರಾಣ ಪ್ರಸಿದ್ಧಿ ತರುವ ಹವಣಿಕೆಯ ಮಾತನ್ನಾಡಿದರು. ಸರಿ ಅಂತ ಹೋದೆ. ಆಗ ಅದೇ ಮದುವೆಯಾಗಿದ್ದ ದಂಪತಿಗಳವರು, ಈಗ ಎದೆಯುದ್ದ ಇಪ್ಪತ್ತರ ಮಗನಿದ್ದ, ಕುಂಬಳಕಾಯಿ ಬಳ್ಳಿಯಂತಿದ್ದ ಆ ತಾಯಿ ಈಗ ಸಾಕ್ಷಾತ್ ಕುಂಬಳಕಾಯಿಯೇ ಆಗಿದ್ದಳು, ಈಗ ಗಂಡ ಬಳ್ಳಿಯಂತೆ ನಲುಗಿ ಹೋಗಿದ್ದ. ಬಳ್ಳಿಯೂ ಅಲ್ಲದೇ, ಕಾಯಿಯೂ ಆಗದ ಮಗ ಸಾಫ್ಟವೇರ್ ಆಗಿ ಮುಂದೆ ನಿಂತ, ನಮಸ್ಕಾರ ಮಾಡು ಎಂಬ ತಂದೆಯ ಮಾತಿಗೆ ಹಾಗೆಂದರೇನು ಎಂಬಂತೆ ನಿಂತ ಮಗ ‘ಹಾಯ್ ಅಂಕಲ್’ ಎಂದು ವಿಷ್ ಮಾಡಿ ನಿಂತ. ತಾಯಿ ಮಗನಿಗೆ ನನ್ನ ಪರಿಚಯ ಹೇಳುತ್ತಾ ‘ಅಪ್ಪಿ ಕಿರಣ್, ಇವರು ಪ್ರಾಣೇಶ ಅಂಕಲ್ ಅಂತ, ನೀ ಇನ್ನೂ ಚಿಕ್ಕವನಿದ್ದಾಗ ಆ ಓಲ್ಡ್ ಮನೆ ಇತ್ತಲ್ಲ ಅಲ್ಲಿಗೆ ಬಂದಿದ್ರು, ನೀ ಇನ್ನು ಚಿಕ್ಕವನು ಆಗ, ಎಷ್ಟು ಮುದ್ದಾಗಿದ್ದೆ ಗೊತ್ತಾ? ಯಾರ ಹತ್ರಾನೂ ಹೋಗ್ತಿರಲಿಲ್ಲ, ನಿನಗೆ ಇಷ್ಟುದ್ದ ಜಡೆಗಳಿತ್ತು, ಕೃಷ್ಣವೇಷ ಸ್ಪರ್ಧೆಯಲ್ಲಿ ಸ್ಕೂಲಲ್ಲಿ ನಿಂಗೇ ಫಸ್ಟ್ ಪ್ರೈಸ್ ಬಂದಿದ್ದು, ಫ್ಯಾನ್ಸಿ ಡ್ರೆಸ್ ಸ್ಪರ್ಧೆಲೂ ನಿಂಗೇ ಮಿಲಿಟರಿ ಮ್ಯಾನ್ ವೇಷಕ್ಕೆ ಪ್ರೈಸ್ ಬಂದಿತ್ತು. ನನ್ನ ಬಿಟ್ರೆ ನೀ ಯಾರ ಹತ್ರಾನೂ ಹೋಗ್ತಿರಲಿಲ್ಲ ಗೊತ್ತಾ? ಈವಾಗ್ಲೇ ನನ್ನ ಬಿಟ್ಟು ಬೆಂಗಳೂರು ಸೇರಿ ಬಿಟ್ಟಿದ್ದೀ, ನಾ ಕೊಡಿಸಿದ ಡ್ರೆಸ್ಸೇ ಹಾಕ್ಕೋತಿದ್ದೆ, ನಿಂಗೆ ಮೊದಲಿಂದ ಜಾಮೂನು ಅಂದ್ರೆ ಇಷ್ಟ, ಆ ಹಾಸ್ಟೆಲ್ ಊಟ ಮಾಡಿ ನೋಡು ಹೇಗಾಗಿದ್ದಿ, ಮನೇಲಿ ಜಾಮೂನು ಮಾಡಿದಾಗೆಲ್ಲ ನಂಗೇ ನೆನಪಾಗಿ ಅಳು ಬರುತ್ತದೆ. ಅದಕ್ಕೆ ನಿಮ್ಮಪ್ಪ ಎಷ್ಟು ಕೇಳಿಕೊಂಡ್ರೂ ನಾ ಜಾಮೂನು ಮಾಡಲ್ಲ ನೀ ಬಂದಾಗೇ ಮಾಡೋದು, ಇವತ್ತು ಬೆಳಿಗ್ಗೆ ಮಾಡಿದ್ದೆನಲ್ಲಾ ಜಾಮೂನು ಚೆನ್ನಾಗಿತ್ತಾ? ಹೋಗುವಾಗ ಬಾಟಲ್‌ನಲ್ಲಿ ಹಾಕ್ಕೊಡ್ತೀನಿ, ಒಯ್ದು ಹಾಸ್ಟೆಲ್‌ನಲ್ಲಿ ತಿನ್ನು. ಹಾಸ್ಟೆಲ್ ಊಟಕ್ಕೆ ಹೇಗಾಗಿದ್ದಿ ನೋಡು, ಸುಡುಗಾಡು ಈ ಸಾಫ್ಟವೇರ್ ಇಂಜಿನಿಯರ್ ಯಾಕೆ ಆಗಬೇಕು ಅಂತ ನಿನ್ನ ತಲೇಲಿ ಬಂತೋ ಕಾಣೆ, ಆ ನಿನ್ನ ಡ್ರೆಸ್ಸೋ, ದಾಡಿ ಬಿಡಬೇಡ ಕಂದ. ನಿಂದು ದುಂಡು ಮುಖ ದಾಡಿ ಇರದಿದ್ರೆ ಎಷ್ಟು ಚೆಂದ ಕಾಣ್ತ್ಯಾ ಗೊತ್ತಾ? ನಿಮ್ಮಪ್ಪ ಬಿಡ್ಲಿ ದಾಡಿನಾ ಅವರಿಗೆ ಒಪ್ಪುತ್ತೆ. ನೀನು ಬೆಳ್ಳಗಿದ್ದಿ, ಡಾರ್ಕ್ ಕಲರ್ ಡ್ರೆಸ್ಸ್ ಒಪ್ಪುತ್ತೆ, ತೆಳ್ಳಗೆ ಜುಬ್ಬಾ ಹಾಕಬೇಡ, ಈ ಸುಡುಗಾಡು ಪ್ರಾಣೇಶರವರು ಕಂಡಂಗೆ ಕಾಣ್ತೀಯಾ ಅಂತ ನಿಂಗೆ ಎಷ್ಟೋ ಸಲ ಬೈದಿದೀನಿ ಗೊತ್ತಾ? ಯಾರು ಪ್ರಾಣೇಶ ಅಂದ್ರೆ ಅಂತ ಕೇಳ್ತಿದ್ದೀಯಲ್ಲಾ, ಇವ್ರೆ ನೋಡು ಪ್ರಾಣೇಶ ಅಂಕಲ್, ಇವರಿಗೆ ಓದು ತಲೆಗೆ ಹತ್ತಲಿಲ್ಲವಂತೆ ಅದಕ್ಕೆ ಈ ಥರ ಜೋಕ್ಸ್ ಹೇಳ್ತಿದಾರಂತೆ, ಸದಾ ಟೀವೀಲಿ ಬರ್ತಿರ್ತಾರಂತೆ ಗೊತ್ತಾ, ನಿನ್ನ ಹಾಸ್ಟೆಲ್‌ನಲ್ಲಿ ಟಿವಿ ನೋಡಲು ಅವಕಾಶವಿಲ್ಲವಲ್ಲಾ ಕಂದ, ಅದಕ್ಕೆ ನಾನೂ ಇತ್ತೀಚಿಗೆ ನನ್ನ ಮಗನಿಗೆ ಇಲ್ಲದ್ದು ನಂಗೂ



ಬೇಡ ಅಂತ ಟೀವೀನೇ ನೋಡಲ್ಲ' ಎಂದು ಕಣ್ಣಲ್ಲಿ ನೀರು ತುಂಬಿಕೊಂಡು ಒಳಹೋದಾಗ ಇದು ಮಗನಿಗೆ ನನ್ನ ಪರಿಚಯ ಮಾಡಿಸಿದಳಾ ಅಥವಾ ಮಗನ ಪರಿಚಯ ನನಗೆ ಮಾಡಿಸಿದಳಾ? ಎಂಬ ಸಂದೇಹದಲ್ಲಿ ಮೂಕನಾಗಿ ಹೋದೆ. ಸಮಾಧಾನ ಮಾಡ್ಕೊಳಮ್ಮಾ ನಾನು ಬರಬಾರದಿತ್ತು, ನಿಂಗೆ ಹಳೇದೆಲ್ಲ ನೆನಪಿಸಿ ದುಃಖ ಕೊಟ್ಟೆ ಎಂದು ಸಮಾಧಾನಿಸಿ ಹೊರಬರಬೇಕೆನ್ನುವಲ್ಲಿ ಹೊರಬಂದ ತಾಯಿ 'ಇಲ್ಲಾ ಪ್ರಾಣೇಶ್ ಅವರೆ ನಮ್ಮ ಕಿರಣ್‌ಗೆ ಈಗಿನ್ನೂ ಇಪ್ಪತ್ತು, ಚೊಚ್ಚಲ ಮಗ, ಎಷ್ಟು ಜಲ್ದಿ ನಮ್ಮಿಂದ ದೂರ ಇದ್ದಾನೆ ನೋಡ್ರಿ, ನಾವೆಲ್ಲ 35-40 ವರ್ಷ ತನಕ ಅಪ್ಪಾ ಅಮ್ಮನ ಜೊತಿಗಿದ್ವಿ, ಹಬ್ಬ ಹುಣ್ಣಿಮಿ ಏನಾದ್ರೂ ಜತಗೆ ಮಾಡ್ತಿದ್ವಿ. ಈಗಿನ ಮಕ್ಳಿಗೆ ಎಲ್ಲಿದೇರಿ ಇದು, ನೀವು ಟಿವಿಯೊಳಗೆ ತಂದೆ ತಾಯಿನ ಬಿಟ್ಟು ಮಕ್ಕಳು ದೂರ ಹೋಗಬ್ಯಾಡರಿ ಅಂತ ಮಕ್ಳಿಗೆ ಹೇಳ್ರಿ' ಎಂದು ಮತ್ತೆ ಅತ್ತಳು. 'ಜನ ಕಾಯ್ತಿದಾರೆ ಸಾರ್' ಎಂದು ಸಂಘಟಕರು ನನ್ನ ಎಳೆದೊಯ್ಯದಿದ್ದರೆ ಆ ಮಾತೃದೇವತೆಯ ಪುತ್ರ ಪ್ರೇಮದಲ್ಲಿ ನಾನು ಪ್ರಪಂಚವನ್ನೇ ಮರೆಯುತ್ತಿದ್ದೆ.

ಎಂಥೆಂಥ ಜನರಿದ್ದಾರೆ, ಬಾಂಧವ್ಯಗಳಿವೆ. ಇವುಗಳ ಮಧ್ಯದಲ್ಲಿಯೇ ಆಡಿಕೊಳ್ಳುವವರಿದ್ದಾರೆ. 'ಲೋಕೋಭಿನ್ನರುಚಿ' ಎಂಬಂತೆ ಎಲ್ಲ ವರ್ಗದ ಜನರೊಡನೆ ಬೆರೆತಾಗಲೇ ಬದುಕಿನ ವೈಚಿತ್ರ್ಯಗಳ ಮನವರಿಕೆಯಾಗಿದೆ. ನಿತ್ಯ ಒಂದೊಂದು ಊರು ಸುತ್ತುವ ನನಗೆ ಜನರನ್ನು ಅರಿಯುವ ಅವಕಾಶ ಕೊಟ್ಟಿರುವುದಕ್ಕೆ ದೇವರಿಗೆ ವಂದಿಸುತ್ತೇನೆ. ಜನತಾ ಜನಾರ್ಧನನಲ್ಲವೆ ಆತ.

ಆಡಿಕೊಳ್ಳುವವರು, ಹಂಗಿಸುವವರು, ಹಾರೈಸುವವರು, ಎಲ್ಲರೊಳಗೂ ಆತನೇ ನಿಂತು ನಮ್ಮನ್ನು 'ಇದು ಲೋಕ, ನೀ ಹೀಗಿರಬೇಕು, ಹೀಗಿರಬಾರದು' ಎಂದು ತಿಳಿಸುತ್ತಾನೇನೋ ಎನ್ನುವುದರಿಂದಲೇ ಬದುಕನ್ನು ಸರಳವಾಗಿ ಬದುಕಲು ನಗುನಗುತ್ತಾ ಸ್ವೀಕರಿಸಲು ಸಾಧ್ಯವಾಗಿರೋದು ಎನಿಸಿದೆ.

ಕೃಪೆ : ವಿಶ್ವವಾಣಿ

## ಕೊರಿಯೋಗ್ರಾಫರು

– ಸುಕೇಶವ

ಹೆಣ್ಣಿನ ದೇಹದ ಅಂದಚೆಂದವನ್ನು
ಬಳುಕಿಸಿ, ತುಳುಕಿಸಿ, ಥಳುಕಿಸಿ
ಇನ್ನಷ್ಟು ಚೆಂದಗಾಣಿಸುವವರು ಸಿನಿಮಾದ
ಕೋರಿಯೋಗ್ರಾಫರುಗಳು

ಇರುವ ಮನಸಿನ ನೆಮ್ಮದಿಯನ್ನು
ಚೂರಾಗಿಸಿ, ದೂರಾಗಿಸಿ, ಬೋರಾಗಿಸುವವರು
ಎರಡೂ ಕಿವಿಯನ್ನು ತೂತಾಗಿಸುವ
ನಮ್ಮ ನಿಮ್ಮ ನಡುವಿನ ಕೊರಿಯೋ...
ಗ್ರಾಫರುಗಳು



# ಸದನದಲ್ಲಿ ಪಟೇಲರು

**- ಬೇಲೂರು ರಾಮಮೂರ್ತಿ**

**ಯಾರು ಹೇಳಿದ್ದು ನಮ್ಮ ರಾಜಕಾರಣಿಗಳಿಗೆ ಹಾಸ್ಯಪ್ರಜ್ಞೆ ಇಲ್ಲವೆಂದು. ನಮ್ಮ ಮಾಜಿ ಮುಖ್ಯಮಂತ್ರಿಗಳಾಗಿದ್ದ ಜೆ.ಎಚ್. ಪಟೇಲರು ಸದನದಲ್ಲಿ ಹಾಸ್ಯ ಚಟಾಕಿಗಳನ್ನು ಹಾರಿಸುವುದರಲ್ಲಿ ನಿಸ್ಸೀಮರು.**

ಒಂದು ಹಳ್ಳಿ. ಆ ಹಳ್ಳೀಲಿ ಒಬ್ಬ ಸ್ವಾಮಿ ಇದ್ದ. ಆ ಸ್ವಾಮಿ ಹಳ್ಳಿಯಲ್ಲಿ ದರ್ಬಾರ್ ನಡೆಸಿದ್ದ. ಎದುರಿಗೆ ಯಾರೋ ಒಬ್ಬ ಅಮಾಯಕ ಬಂದ. ಸರಿ ತಕ್ಷಣ ಸ್ವಾಮಿಗೆ ತನ್ನ ದೊಡ್ಡತನವನ್ನು ತೋರಿಸಬೇಕು ಎಂದು ಮನಸ್ಸಾಯಿತು. ಎಲ್ಲರೆದುರಿಗೆ ಆ ಬಡಪಾಯಿಯನ್ನು ಬೈಯ್ದ. ಏನಪ್ಪಾ ಮರುಳಾ, ಜನ ಎಲ್ಲಾ ನಿನ್ನ ವಿಷಯಾನೇ ಮಾತಾಡ್ತ ಇದಾರಲ್ಲೋ, ತುಂಬಾ ಕುಡಿತೀಯಂತಲ್ಲೋ, ಹೌದೇನೋ? ಸ್ವಾಮಿಗಳ ಈ ಮಾತು ಕೇಳಿ ಬಡವ ಕಂಗಾಲಾದ. ಏನ್ ಸ್ವಾಮಿ, ಏನ್ ಬುದ್ದಿ, ನಾನೇನ್ ಮಾಡ್ದೆ ಒಡೆಯಾ, ನಾನೇನೂ ಅಂಥಾ ತಪ್ಪು ಮಾಡಿಲ್ವಲ್ಲ ಅಂದ. ಮತ್ತೆ ಆ ಸ್ವಾಮಿ ಜೋರು ಧ್ವನಿಯಿಂದ ಬರೇ ಕುಡಿತೀಯಂತಲ್ಲೋ ಅಂದರು. ಬಡವನಿಗೆ ಎಲ್ಲರೆದುರಿಗೆ ಹೀಗೆ ಅವಮಾನ ಮಾಡಿದ ಸ್ವಾಮಿಯ ಬಗೆಗೆ ಕೋಪ ಬಂತು. ಈಗ ನನ್ನ ಸರದಿ ಅಂದುಕೊಂಡು ಅಯ್ಯೋ ಶಿವನೇ, ನಾನು ಅಷ್ಟೊಂದು ಕುಡಿಯಲ್ಲ ಸ್ವಾಮಿ, ಕಳೆದ ಬಾರಿ ನಿಮ್ಮ ಜೊತೆ ಕುಡಿದದ್ದೇ ಕೊನೆ. ಮತ್ತೆ ಕುಡಿದಿಲ್ಲ ಅಂದ. ಈಗ ಸ್ವಾಮಿ ಕಂಗಾಲಾಗಿ ತುಟಿ ಪಿಟಿಕ್ ಅನ್ನಲಿಲ್ವಂತೆ.

> ರಾಜಕಾರಣದಲ್ಲಿ ನಗಿಸುವುದಕ್ಕೂ ನಗುವುದಕ್ಕೂ ಇರಲೇಬಾರದು ಕಾರಣ

**ನಾನು ಐದು ನಿಮಿಷ ಆಡಿದ ಮಾತನ್ನೇ ಹಿಡಿದುಕೊಂಡು ಪತ್ರಿಕೆಯವರು, ಮಾಧ್ಯಮದವರು ಗಂಟೆಗಟ್ಟಲೆ, ದಿನಗಟ್ಟಲೆ ಅದರ ಬಗ್ಗೆ ತಮಗೆ ತೋಚಿದ ಹಾಗೆ ಚರ್ಚೆ ಮಾಡುತ್ತಲೇ ಇರುತ್ತಾರೆ. ಅಂದು ಈ ಕೆಳಗಿನ ಹಾಸ್ಯಪ್ರಸಂಗ ಹೇಳಿದರು.**

ಒಬ್ಬ ಗುರು ತನ್ನ ಶಿಷ್ಯನನ್ನು ಕರೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ಒಂದು ಹೊಳೆ ಅಡ್ಡ ಬಂತು. ಗುರು ಶಿಷ್ಯ ಇಬ್ಬರೂ ಹೊಳೆ ದಾಟಲು ಸಿದ್ಧರಾದರು. ಆಗ ಅಲ್ಲಿಗೆ ಬಂದ ಒಬ್ಬ ಸುಂದರ ಯುವತಿ ನನಗೆ ಹೊಳೆ ದಾಟಲು ಹೆದರಿಕೆ. ನನಗೆ ಸಹಾಯ ಮಾಡಿ ಎಂದು ಕೇಳಿದಳು. ಶಿಷ್ಯ ಯುವತಿಯನ್ನು ಹೆಗಲ ಮೇಲೆ ಕೂರಿಸಿಕೊಂಡು ಹೊಳೆ ದಾಟಿಸಿದ. ಯುವತಿ ಶಿಷ್ಯನಿಗೆ ವಂದಿಸಿ ಹೊರಟುಹೋದಳು. ಸ್ವಲ್ಪ ಹೊತ್ತಿನ ನಂತರ ಗುರುಗಳು ಶಿಷ್ಯನನ್ನು ನೀನು ಬ್ರಹ್ಮಚಾರಿ ಅಲ್ವೇನಪ್ಪಾ ಅಂತ ಕೇಳಿದರು. ಶಿಷ್ಯ ಹೌದು ಅಂದ. ಇನ್ನೂ ಐದು ಮೈಲಿ ಹೋದ ಮೇಲೆ ಮತ್ತೆ ನೀನು ಯುವತಿಯನ್ನು ಸ್ಪರ್ಶ ಮಾಡಿದೆ ಅಲ್ವಾ ಅಂತ ಕೇಳಿದರು. ಶಿಷ್ಯ ಹೌದು ಅಂದ. ಇನ್ನು ಐದು ಮೈಲಿ ಹೋದ ಮೇಲೆ ಆಕೆಯ ಕಾಲು ನಿನ್ನ ಎದೆಗೆ ತಗುಲುತ್ತಿತ್ತಲ್ಲ ನಿನಗೆ ಏನನಿಸಿತು ಅಂತ ಕೇಳಿದರು. ಹೀಗೆ ಗುರುಗಳು ಶಿಷ್ಯನನ್ನು ಕೇಳುತ್ತಲೇ ಇದ್ದಾಗ ಶಿಷ್ಯ ತುಸು ಸಿಟ್ಟಿನಿಂದ ಗುರುಗಳೇ ನಾನೇನೋ ಯುವತಿಯನ್ನು ಐದು ನಿಮಿಷ ಹೆಗಲ ಮೇಲೆ ಕೂರಿಸಿಕೊಂಡು ಇಳಿಸಿ ಕಳಿಸಿದೆ. ಆದರೆ






ನೀವು ಕಳೆದ ಐದಾರು ಗಂಟೆಗಳಿಂದ ನೀವು ಅವಳನ್ನು ನಿಮ್ಮ ತಲೆಯ ಮೇಲೇ ಕೂರಿಸಿಕೊಂಡಿದ್ದೀರಲ್ಲ ಅಂದ.

**ಪಟೇಲರು ತಮ್ಮ ಆಡಳಿತದ ಕೀಲಿ ಕೈ ಕಳೆದು ಹೋಗಿದೆ ಎಂದು ಹೇಳುತ್ತಾ ಶಾಸಕ ಸುರೇಶ್ ಕುಮಾರ್ ಅವರು ಈ ಪ್ರಸಂಗ ವಿವರಿಸಿದರು.**

15 ಜನ ಯುವಕರು ಜಪಾನ್ ದೇಶವನ್ನು ನೋಡಲು ಹೋದರು. ಕಾಕತಾಳೀಯ ಎಂದರೆ ಜಪಾನಿಗೆ ಹೋದದ್ದು 15 ಜನ. ಅವರಿಗೆ ದೊಡ್ಡ ಹಜಾರದಂತಹ ಕೊಠಡಿ ದೊರಕಿದ್ದು ಬಹುಮಹಡಿ ಕಟ್ಟಡದ 15ನೇ ಅಂತಸ್ತಿನಲ್ಲಿ. ಪ್ರತೀದಿನ ಅವರು ದಿನವೆಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಸಂಜೆಗೆ ಕೊಠಡಿಗೆ ಹಿಂದಿರುಗುತ್ತಿದ್ದರು. ಹೀಗೆ ಒಂದು ದಿನ ಸುತ್ತಾಡಲು ಹೋದವರು ಹಸಿವು, ನಿದ್ದೆ, ಬಾಯಾರಿಕೆ, ಇವುಗಳಿಂದ ಬಳಲಿ ಸಧ್ಯ ನಮ್ಮ ಕೊಠಡಿಗೆ ಹೋದರೆ ಸಾಕಪ್ಪಾ ಅಂದುಕೊಂಡು ಬಂದರು. ನಮ್ಮ ದೇಶದಂತೆಯೇ ಅಲ್ಲಿಯೂ ಕರೆಂಟ್ ಕೈ ಕೊಡುತ್ತಿತ್ತು. ಇವರುಗಳು ಹೋಟೆಲಿಗೆ ಬಂದಾಗ ಕರೆಂಟ್ ಇರಲಿಲ್ಲ, ಜನರೇಟರ್ ಇನ್ನೂ ಬಂದಿರಲಿಲ್ಲ. 15 ಮಹಡಿ ಹತ್ತಬೇಕಾದ ಅನಿವಾರ್ಯ ಪರಿಸ್ಥಿತಿ ಅವರಿಗೆ ಬಂತು. ಆಯಾಸ ಪರಿಹಾರಕ್ಕೆ ಒಂದೊಂದು ಮಹಡಿ ಹತ್ತಿದಾಗಲೂ ಒಬ್ಬ ಒಂದು ನಗೆಹನಿಯನ್ನು ಹೇಳಬೇಕು ಅಂತ ಅವರವರಲ್ಲೇ ಮಾತಾಡಿ ಮಹಡಿ ಹತ್ತಲು ಶುರು ಮಾಡಿದರು. ಒಬ್ಬೊಬ್ಬರು ಒಂದೊಂದು ನಗೆ ಹನಿಹೇಳಿಕೊಂಡು ಮಹಡಿ ಹತ್ತಿದರು. 14 ಜನ ನಗೆಹನಿಗಳನ್ನು ಹೇಳಿದರು. ಈಗ 15ನೆಯವನ ಸರದಿ. 15ನೇ ಮಹಡಿಗೆ ಮೆಟ್ಟಿಲುಗಳನ್ನು ಹತ್ತುವ ಮುಂಚೆ ಅವನು ನಾನು ನಗೆಹನಿ ಹೇಳಲೇಬೇಕಾ ಅಂತ ಕೇಳಿದ. ಎಲ್ಲರೂ ಹೌದು ಅಂದರು. ಹೇಳುತ್ತೇನೆ, ಆದರೆ ಅದನ್ನು ಕೇಳಿ ನೀವ್ಯಾರೂ ಗಾಬರಿ ಆಗಬಾರದು ಅಂದ. ಸರಿ ಇವನು ಯಾವುದೋ ದೆವ್ವದ ನಗೆಹನಿ ಇಲ್ಲವೇ ಪತ್ತೇದಾರಿ ನಗೆ ಹನಿ ಹೇಳಬಹುದು ಅಂತ ಅವರೆಲ್ಲಾ ಕಾದರು. ಆಗ ಅವನು ಇದು ವಾಸ್ತವ. ನಾವು ನಮ್ಮ ಕೋಣೆಯ ಬಾಗಿಲಿನ ಬೀಗದ ಕೈಯನ್ನು ನೆಲಮಹಡಿಯಲ್ಲೇ ಬಿಟ್ಟು ಬಂದಿದ್ದೇವೆ



ಅಂದ. ಎಲ್ಲರೂ ಮೂರ್ಛೆ ಹೋಗೋದೊಂದು ಬಾಕಿ.

**ಪ್ರತಿಪಕ್ಷದ ನಾಯಕರಾಗಿದ್ದ ಪಟೇಲರು ಸರ್ಕಾರ ಹೇಗೆ ನಡೆಯುತ್ತಿದೆ ಎಂದು ವಿವರಿಸಿ ಈ ನಗೆಹನಿ ಹೇಳಿದರು.**

ಗಂಗಾ ನದಿಗೆ ಕೆಲವು ನಾವಿಕರು ಹೋದರು. ಆಚೆ ದಡ ಸೇರಬೇಕೆಂದು ದೋಣಿಯಲ್ಲಿ ಕುಳಿತುಕೊಂಡರು. ನದಿಯಲ್ಲಿ ಇಡೀ ರಾತ್ರಿ ಹುಟ್ಟುಹಾಕುತ್ತಿದ್ದರು. ಬೆಳಕು ಹರಿಯುವವರೆಗೂ ಹುಟ್ಟು ಹಾಕುತ್ತಲೇ ಇದ್ದರು. ಅವರೆಲ್ಲಾ ನಾವು ಈಗ ಬಹುದೂರ ಬಂದಿದ್ದೇವೆ ಅಂತ. ಬೆಳಗಾಗುತ್ತ ನೋಡಿದರೆ ಅವರೆಲ್ಲಾ ಎಲ್ಲಿದ್ದರೋ ಅಲ್ಲಿಯೇ ಇದ್ದರು. ಇದೇಕೆ ಹೀಗಾಯಿತು ಅಂತ ನೋಡಿದರೆ ದೋಣಿಯಲ್ಲಿ ದಡಕ್ಕೆ ಕಟ್ಟಿದ್ದ ಹಗ್ಗವನ್ನು ಯಾರೂ ಬಿಚ್ಚಿರಲೇ ಇಲ್ಲ. ಹೀಗೆ ನೀವು ಸಮಾಜವನ್ನು ಇನ್ನೊಂದು ದಡ ಮುಟ್ಟಿಸುವ ರೀತಿ ಅಂತ ಅಣಕವಾಡಿದ್ದರು.

ಪಟೇಲರು, ಬೀಚಿ ಮತ್ತು ಶೇಷಪ್ಪ ಜೊತೆಯಾಗಿ ಹೋಗುತ್ತಿದ್ದಾಗ ಬೀಚಿ ಹೇಳಿದ ನಗೆಹನಿ ಎಂದು ಇದನ್ನು ಉದಾಹರಿಸಿದ ಪಟೇಲರು. ನಾನೇನಾದರೂ ಇದನ್ನು ಹೇಳಿದ್ದರೆ ಸದನದ ಒಳಗೆ ಹೊರಗೆ ವಾಹಿನಿಗಳಲ್ಲಿ ದೊಡ್ಡ ದೊಡ್ಡ ಚರ್ಚೆಯಾಗುತ್ತಿತ್ತು ಎಂದರು.

ಮಾತಿನ ನಡುವೆ ಒಬ್ಬರು ಒಂದು ಊರಿನಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದ ಅಂದಾಗ ಬೀಚಿ ಛೆ, ಬ್ರಾಹ್ಮಣ ಇದ್ದ ಅಂದರೆ ಸಾಕು ಆತ ಬಡವನೇ ಅಂದರ್ಥ ಅಂದರು. ಇನ್ನೂ ಸ್ವಲ್ಪ ಹೊತ್ತಿನ ಮಾತಿನಲ್ಲಿ ಒಂದು ಊರಿನಲ್ಲಿ ಒಬ್ಬ ಸುಳ್ಳುಗಾರ ವಕೀಲನಿದ್ದ ಅಂದರು. ಮತ್ತೆ ಬೀಚಿ ವಕೀಲ ಅಂದರೆ ಸಾಕಪ್ಪಾ ಆತ ಸುಳ್ಳುಗಾರ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಂದರು. ಇನ್ನೂ ಸ್ವಲ್ಪ ದೂರ ಹೋದ ಮೇಲೆ ಪಟೇಲರು ಒಬ್ಬ ಕುಡುಕ ಪತ್ರಕರ್ತನಿದ್ದ ಅಂದರು. ಮತ್ತೆ ಬೀಚಿ ತಲೆಯಾಡಿಸಿ ಆ ರೀತಿ ಹೇಳಲೇಬಾರದು. ಪತ್ರಕರ್ತ ಅಂದರೆ ಸಾಕು ಆತ ಕುಡುಕ ಎಂದೇ ಅರ್ಥ ಅಂದಾಗ ಎಲ್ಲರೂ ನಕ್ಕರಂತೆ.

ಐ ಕ್ಯಾನ್ ಟೇಕ್ ಕೇರ್ ಆಫ್ ಮೈ ಎನಿಮೀಸ್ ಬಟ್ ಪ್ಲೀಸ್ ಸೇವ್ ಮಿ ಫ್ರಮ್ ಮೈ ಫ್ರೆಂಡ್ಸ್.

**ರಾಜಕಾರಿಣಿಗಳದು ಬಹಳ ಮರ್ಮ. ಅದು ಏನು ಅನ್ನುವುದು ನಮಗೆ ತಿಳಿಯುವುದಕ್ಕೆ ಮುಂಚೆ ಏನಾಗಬಾರದೋ ಅದು ಆಗಿಹೋಗಿರುತ್ತೆ. ನೋಡಿ ಈ ದೇವರಾಜ ಅರಸು ಅವರು ಒಂದಲ್ಲ ಒಂದು ದಿನ ನಮ್ಮನ್ನೆಲ್ಲಾ ಮುಗಿಸುತ್ತಾರೆ ಅಂದು ಈ ಕೆಳಗಿನ ನಗೆಹನಿ ಹೇಳಿದರು.**

ಒಂದು ಊರಿನಲ್ಲಿ ಒಂದು ಬೆಕ್ಕು ಇತ್ತಂತೆ. ಆದರೆ ಅದಕ್ಕೆ ಊಟಕ್ಕೇ ಸಂಚಕಾರ ಬಂದಿತ್ತು. ಏಷ್ಟೇ ಆಗಲಿ ಜಾಣ ಬೆಕ್ಕು ಒಂದು ಉಪಾಯ ಹುಡುಕಿತು. ಇಲಿಗಳನ್ನೆಲ್ಲಾ ಕರೆದು ಇನ್ನುಮುಂದೆ ನಾನು ನಿಮ್ಮನ್ನು ತಿನ್ನುವುದಿಲ್ಲ. ಇಷ್ಟು ದಿವಸ ಮಾಡಿದ ಪಾಪಕ್ಕೆ ನಿಮ್ಮನ್ನೆಲ್ಲಾ ಕಾಶಿಗೆ ಕರೆದುಕೊಂಡು ಹೋಗುತ್ತೇನೆ ಎಂದಿತಂತೆ. ಪಾಪ ಇಲಿಗಳು ನಂಬಿಬಿಟ್ಟವು. ಎಲ್ಲ ಇಲಿಗಳೂ ಹೊರಟಾಗ ಜಾಣ ಬೆಕ್ಕು ಉಪಾಯ ಮಾಡಿ ನೋಡಿ ನೀವೆಲ್ಲಾ ದುರ್ಬಲರು. ನಾನು ನಿಮ್ಮ ಬೆಂಗಾವಲಾಗಿ ಬರುತ್ತೇನೆ. ನೀವೆಲ್ಲಾ ಸಾಲಿನಲ್ಲಿ ಮುಂದೆ ಚಲಿಸಿ ಎಂದಿತಂತೆ. ಪಾಪ ಅಮಾಯಕ ಇಲಿಗಳು ಏನೂ ತಿಳಿಯದೇ ಬೆಕ್ಕು ಹೇಳಿದಂತೆ ಸಾಲಾಗಿ ಚಲಿಸಿದವಂತೆ. ಹಿಂದೆ ಬಂದ ಬೆಕ್ಕು ಒಂದೊಂದೇ ಇಲಿಗಳನ್ನು ತಿಂದುಕೊಂಡು ಮುಂದೆ ಸಾಗುತ್ತಿತ್ತಂತೆ. ಕೆಲವು ದಿವಸಗಳಲ್ಲಿ ಎಲ್ಲ ಇಲಿಗಳೂ ಖಾಲಿ.



**ದಯೆ ದಾನ ಸಂಯಮದ ಕಥೆ**

ಟಿ.ಎಸ್. ಇಲಿಯಟ್ ನೈತಿಕ ಅಧಃಪತನ ಹೊಂದಿದ ಸಮಾಜವನ್ನು ಕಂಡು ಮರುಗಿ ವೇಸ್ಟ್ ಲಾಂಡ್ ಎಂಬ ಕಾವ್ಯ ರಚಿಸಿದ್ದಾನೆ. ಅದರಲ್ಲಿ ಬರುವ ಉಪಮೇಯ ಹೀಗಿದೆ. ರಾಕ್ಷಸರು ಕ್ರೂರಿಗಳು, ಮಾನವರು ಲೋಭಿಗಳು, ದೇವತೆಗಳು ಲೋಲುಪ್ತರು ಎಂಬ ಜಿಜ್ಞಾಸೆ ಮೂಡುತ್ತದೆ. ಏನು ಮಾಡುವುದೆಂದು ತಿಳಿಯುವುದಿಲ್ಲ. ಇದಕ್ಕೆ ಪರಿಹಾರ ಕಂಡು ಹಿಡಿಯದಿದ್ದಲ್ಲಿ ಅಪಾಯ ಎಂದು ಎಲ್ಲರೂ ದೇವರ ಬಳಿ ಹೋಗುತ್ತಾರೆ. ಇವರುಗಳು ಕೇಳಿದ ಪ್ರಶ್ನೆಗಳಿಗೆ ದೇವರು ದ ಎಂದು ಉತ್ತರಿಸುತ್ತಾನೆ. ನೀನು ಹೇಳುತ್ತಿರುವುದು ಏನು ದೇವ ತಿಳಿಯಲಿಲ್ಲ ಎಂದಾಗ ದತ್ತ, ದಯತ್ವಂ ಮತ್ತು ದಮ್ಯತಾ ಎಂದು ಹೇಳಿದ ದೇವರು ಅದರ ಅರ್ಥವನ್ನೂ ವಿವರಿಸುತ್ತಾನೆ. ಮೊದಲು ಮನುಷ್ಯರೇ ನೀವು ಲೋಭಿಗಳಾಗಿದ್ದೀರಿ. ನಿಮಗೆ ಕೊಡುವುದು, ದಾನ ಮಾಡುವುದು ಈ ಗುಣವೇ ತಿಳಿಯುತ್ತಿಲ್ಲ. ಮೊದಲು ನೀವು ದ ಎಂದರೆ ದತ್ತ ಕೊಡುವುದನ್ನು ಕಲಿಯಿರಿ. ಇನ್ನು ರಾಕ್ಷಸರೇ ನೀವು ಕ್ರೂರಿಗಳಾಗಿದ್ದೀರಿ. ನೀವೂ ಅಷ್ಟೇ ದ ಅಂದರೆ ದಯೆಯನ್ನು ಮೊದಲು ಕಲಿಯಿರಿ. ಇನ್ನು ದೇವತೆಗಳು ರಂಭೆ – ಊರ್ವಶಿಯರಂತಹ ಸುರಸುಂದರಿಯರ ಸದಾಕಾಲದ ಸಂಗದಿಂದ ಮತ್ತು ಸುರಾಪಾನದಿಂದ ಹಾಳಾಗಿ ಹೋಗಿದ್ದೀರಿ. ನೀವೂ ಸಹಿತ ದ ಅಂದರೆ ದಮ್ಯತ ಅಂದರೆ ಸಂಯಮ ಕಲಿಯಿರಿ ಎನ್ನುತ್ತಾನೆ.

ಇದನ್ನು ಏಕೆ ಹೇಳಿದೆ ಎಂದರೆ ನಮ್ಮಲ್ಲಿ ಈ ಮೂರೂ ಗುಣಗಳಿರುವ ಮಹಾನುಭಾವರಿದ್ದಾರೆ ಎಂದರು.

**ನಾವು ಬರೀ ಟೀಕೆ ಟಿಪ್ಪಣಿಗಳನ್ನು ಮಾಡಿಕೊಂಡು ಅವರು ಹೀಗೆ ಇವರು ಹಾಗೆ ಅಂದುಕೊಂಡು ಕಾಲ ಕಳೆಯುತ್ತೇವೆಯೇ ಹೊರತು ನಮ್ಮ ಗೆಲುವಿಗೆ ಏನು ಮಾಡಬೇಕೋ ಅದನ್ನು ಮಾಡುತ್ತಿಲ್ಲ. ಅದಕ್ಕೇ ಸ್ವಾತಂತ್ರ್ಯ ಬಂದು 50 ವರ್ಷಗಳು ಕಳೆದರೂ ನಾವು ಹೀಗೆಯೇ ಇರುವುದು ಎಂದು ಹೇಳಿದ ಪಟೇಲರು ಈ ಕೆಳಗಿನ ಪದ್ಯವನ್ನು ಓದುತ್ತಾರೆ.**

ಕನ್ನಡಿಯಲ್ಲಿರುವುದನ್ನು ನಂಬಿ ಮಗನ ಬಲಿಕೊಡುವ ತಂದೆ

ಎರಡನೆಯದೂ ಹೆಣ್ಣಾಯಿತೆಂದು ಆತ್ಮಹತ್ಯೆಗೆ ಚಿಂತಿಸುವ ತಾಯಿ

ಕರ್ತವ್ಯ ವಿಮುಖನಾಗಿ ದುರಾಚಾರದಲ್ಲಿ ತೊಡಗುವ ಗುರು

ಅಭ್ಯಸಿಸದೆಯೇ ಜಯ ಬಯಸುವ ವಿದ್ಯಾರ್ಥಿ

ಸ್ವಾರ್ಥ, ಸ್ವಜನ ಪಕ್ಷಪಾತದಲ್ಲಿ ಮುಳುಗಿದ ರಾಜಕಾರಣಿ

ದುಡಿಯದೇ ದೇಶವನ್ನು ಸುಸ್ಥಿತಿಗೆ ತಳ್ಳುತ್ತಿರುವ ಪ್ರಜೆ

ಬದುಕಿನ ಮಾರ್ಗವನ್ನರಿಯದೆ ವಿಕಾರಕ್ಕೊಳಗಾದ ಯುವಪೀಳಿಗೆ

ಹೀಗಾದಲ್ಲಿ ಈ ದೇಶದ ಉದ್ಧಾರವೆಂತಯ್ಯಾ



**ಒಂದು ಸಾರಿ ಇದ್ದಕ್ಕಿದ್ದಂತೆ ಚುನಾವಣಾ ಆಯೋಗ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದನ್ನು ಗಮನಿಸಿದ ಪಟೇಲರು ಈ ಕಥೆ ಹೇಳಿದ್ದರು.**

**ಕುಟ್ಟಿ ಕುಂದಾಪುರಕ್ಕೆ ಹೋದ ಕತೆ**

ಕುಟ್ಟಿ ಕುಂದಾಪುರಕ್ಕೆ ಏಕೆ ಹೋದ ಎನ್ನುವುದನ್ನು ಹೇಳುತ್ತೇನೆ ಕೇಳಿ. ಮನೆಯ ಯಜಮಾನ ತನ್ನ ಹೆಂಡತಿಯ ಜೊತೆ ಮಾತನಾಡುತ್ತಾ ಬೆಳಗ್ಗೆ ಕುಟ್ಟಿಯನ್ನು ಕುಂದಾಪುರಕ್ಕೆ ಕಳಿಸಬೇಕು ಕಣೆ ಎಂದು ಹೇಳಿದನಂತೆ. ಇದನ್ನು ಕೇಳಿಸಿಕೊಂಡ ಕುಟ್ಟಿ ಬೆಳಗ್ಗೆ ಆಗುವವರೆಗೂ ಯಾಕೆ ಕಾಯಬೇಕು ಈಗಲೇ ಏಕೆ ಹೋಗಬಾರದು ಎಂದು ರಾತ್ರಿಯೇ ಹೊರಟು ಬಿಟ್ಟನಂತೆ. ಬೆಳಗ್ಗೆ ಎದ್ದಾಗ ಕುಟ್ಟಿ ಕಾಣಿಸಲಿಲ್ಲ. ಕುಟ್ಟಿ ಹಿಂದಿರುಗಿ ಬಂದಾಗ ಇಷ್ಟು ಹೊತ್ತೂ ಎಲ್ಲಿಗೆ ಹೋಗಿದ್ಯೋ ಎಂದು ಬೈದರೆ ನೀನು ನನ್ನನ್ನು ಬೆಳಗ್ಗೆ ಕುಂದಾಪುರಕ್ಕೆ ಕಳಿಸಬೇಕು ಎಂದು ಮಾತಾಡಿಕೊಳ್ಳುತ್ತಿದ್ದುದು ನನಗೆ ಕೇಳಿಸಿತು. ಅದಕ್ಕೆ ನಾನು ರಾತ್ರಿಯೇ ಕುಂದಾಪುರಕ್ಕೆ ಹೋಗಿ ಬಂದುಬಿಟ್ಟೆ ಎಂದನಂತೆ. ಏಕೆ ಏನು ಅದರ ಪರಿಣಾಮ ಏನಾಗುತ್ತದೆ, ನಾವು ಏನು ಮಾಡುತ್ತಿದ್ದೇವೆ ಎಂದು ತಿಳಿದುಕೊಳ್ಳದೇ ದಿಢೀರನೆ ಕೆಲಸ ಮಾಡಿದರೆ ಕುಟ್ಟಿ ಕುಂದಾಪುರಕ್ಕೆ ಹೋದಂತೆಯೇ ಆಗೋದು.

(ಎಸ್.ಕೆ. ಶೇಷಚಂದ್ರಿಕ ಅವರ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆಯಿಂದ ಹೆಕ್ಕಿ ತೆಗೆದದ್ದು)

## ಮದುವೆಗೆ ಕಾರಣ

ಕಿರಿಯರ ಮದುವೆಗೆ ನೂರು ಕಾರಣ
ಕೊಡುವರು ಮನೆಯ ಹಿರಿಯರು
ಮಕ್ಕಳು ಮದುವೆಯಾಗಿ
ಸುಖವಾಗಿರಲೆಂದು
ಮದುವೆ ಬೇಡೆನ್ನುವ ಹುಡುಗರು
ಒಂದೇ ಕಾರಣ ಕೊಡುವರು
ಬದುಕು ಸುಖವಾಗಿರಬೇಕೆಂದು
ಆದರೂ ಹಿರಿಯರು ಬಲವಂತದಿಂದ
ಮಕ್ಕಳ ಮದುವೆ ಮಾಡೇಬಿಡುವರು
ಕಾರಣ ನಮಗೆ ದೊರೆಯದ ಸುಖ
ಮಕ್ಕಳಿಗೇಕೆಂದು

– **ಸುಕೇಶವ**



# ಕನ್ನಡ ಜನತೆ ನಾ. ಕಸ್ತೂರಿಯವರನ್ನು ಮರೆತರೆ?

**– ಡಾ. ಕೆ. ಬಿ. ಪ್ರಭುಪ್ರಸಾದ್**

ಎರಡು ತಲೆಮಾರಿನ ಹಿಂದೆ ಹಾಸ್ಯಸಾಹಿತ್ಯ ಪ್ರಿಯರೆಲ್ಲರಿಗೂ ನಾ. ಕಸ್ತೂರಿಯವರ ಹೆಸರು ತುಂಬಾ ಪರಿಚಿತವಾದುದು. ಈಗಿನ ತಲೆಮಾರಿನವರಿಗೆ ಓದಲು ಕಸ್ತೂರಿಯವರ ಪುಸ್ತಕಗಳೇ ದೊರೆಯುತ್ತಿಲ್ಲ ಎಂಬ ಕೊರತೆಯನ್ನು ನೀಗಲು, 'ಅಪರಂಜಿ' ಹಾಸ್ಯಪತ್ರಿಕೆಯ ಉಪ ಸಂಪಾದಕರಾದ ಶ್ರೀ ಬೇಲೂರು ರಾಮಮೂರ್ತಿಯವರ ಸಲಹೆ – ನೆರವು ಸ್ವೀಕರಿಸಿದ 'ಸ್ವಪ್ನಬುಕ್‌ಹೌಸ್' ಪುಸ್ತಕ ಪ್ರಕಾಶಕರು ಕಸ್ತೂರಿಯವರ 9 ಪುಸ್ತಕಗಳನ್ನು ಪುನಃ ಮುದ್ರಿಸಿ ಪ್ರಕಟಿಸಿದರು.

ಕನ್ನಡಿಗರಿಗೂ ನಗಲು ಬರುತ್ತದೆ ಎಂದು ತೋರಿಸಿ ಹಾಸ್ಯಸಾಹಿತ್ಯವನ್ನೇ ಒಂದು ಸ್ವತಂತ್ರ ಪ್ರಕಾರವನ್ನಾಗಿ ಬೆಳೆಸಿದ ಹಾಸ್ಯಪಿತಾಮಹ ನಾ. ಕಸ್ತೂರಿಯವರು ಮೂಲತಃ ಕೇರಳದವರು. ಮಾತೃಭಾಷೆ ತಮಿಳು. ಓದಿದ್ದು, ವ್ಯವಹರಿಸಿದ್ದು ಮಲೆಯಾಳಮ್ ಮಾಧ್ಯಮದಲ್ಲಿ. ಕನ್ನಡನಾಡಿನ ಮೈಸೂರು ನಗರಕ್ಕೆ ಉದ್ಯೋಗದ ದೆಸೆಯಿಂದ ಬಂದು ಕನ್ನಡದವರೊಡನೆ ಬೆರೆತು ಕನ್ನಡ ಭಾಷೆಯನ್ನು ಕಲಿತು ಕನ್ನಡ ಸಾಹಿತ್ಯವನ್ನು ಕನ್ನಡದವರಿಗಿಂತ ಹೆಚ್ಚು ಆಳವಾಗಿ ಅಧ್ಯಯನ ಮಾಡಿ, ಡಿಕ್ಷನರಿ ಅಲ್ಲ ಫಿಕ್ಷನರಿ ಎಂಬಂತಹ 'ಅನರ್ಥಕೋಶವನ್ನು' ರಚಿಸುವಷ್ಟರ ಮಟ್ಟಿಗೆ ಕನ್ನಡ ಭಾಷಾ ಪ್ರಭುತ್ವವನ್ನು ಪಡೆದರು. ಅನೇಕ ಹಾಸ್ಯ ಕಾದಂಬರಿ, ಹಾಸ್ಯ ನಾಟಕ, ಅಣಕವಾಡು, ಹಾಸ್ಯ ಲೇಖನಗಳನ್ನು ಬರೆದು ಜನಪ್ರಿಯರಾದರು. ಕನ್ನಡ ಕಸ್ತೂರಿಯಾದುದು ಆಶ್ಚರ್ಯವಲ್ಲ, ಕಸ್ತೂರಿ ಕನ್ನಡದವರಾದದ್ದು ಆಶ್ಚರ್ಯ!

ಡಾ. ಶಿವರಾಮ್ ಹಾಸ್ಯಕ್ಕೆ ಮೀಸಲಾದ 'ಕೊರವಂಜಿ' ಮಾಸಪತ್ರಿಕೆಯನ್ನು ಆರಂಭಿಸುವ ದಿಟ್ಟ ಸಾಹಸಕ್ಕೆ ಕೈಹಾಕಿ ನಾ. ಕಸ್ತೂರಿಯವರ ಸಹಕಾರವನ್ನು ಕೋರಿದಾಗ ಖುಷಿಯಾಗಿ ಜೊತೆಯಾದ ಕಸ್ತೂರಿಯವರು 'ಕೊರವಂಜಿ'ಗೆ ಆಯಾ ವಸ್ತುವಿಗನುಗುಣವಾಗಿ ರುದ್ರಮ್ಮ, ಕೇಸರಿ, ಪಾಟಾಳಿ, ನಾಕ, ಖಾರಾಂತ ಎಂಬ ನಾನಾ ಕಾವ್ಯನಾಮಗಳಲ್ಲಿ ಬರೆದರು.

ದೀಪಾವಳಿ ಪ್ರಯುಕ್ತ, ವ್ಯರ್ಥವಾದ ಖರ್ಚಿನ, ಪರಿಸರವನ್ನು ಕಲುಷಿತಗೊಳಿಸುವ ಪಟಾಕಿ ಸುಡುವ ಬದಲು, ''ಹಾಸ್ಯಚಟಾಕಿ'' ಎಂಬ ಪದವನ್ನು ನಾಣ್ಯಿಸಿ, ಹಾಸ್ಯ ಸಂಜೆಗಳನ್ನೇರ್ಪಡಿಸಿ ನಗೆಯ ಹೂ ಕುಂಡಗಳನ್ನೇ ಹೊತ್ತಿಸಿ ನಗುವಿನ ತರಂಗ ಹಾಗೂ ಬೆಳಕು ಸಭಾಂಗಣವನ್ನು ತುಂಬಿ ತುಳುಕುವ ಹಾಗೆ ಮಾಡಿದರು.

ಮೈಸೂರಿನ ವಯಸ್ಕ ಶಿಕ್ಷಣ ಸಮಿತಿಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಯಾಗಿ ಸೇರಿ ಸ್ವತಃ ಕನ್ನಡ ಅಕ್ಷರಗಳನ್ನು ಕಲಿತುದಲ್ಲದೆ, ವಯಸ್ಕ ಶಿಕ್ಷಿತರ ಮುಂದುವರಿದ ಓದಿಗೆ ''ದಸರಾ ನೋಡಲು ಕೆಂಪ ಮೈಸೂರಿಗೆ ಹೋದದ್ದು'' ಎಂಬ ಕಿರುಪುಸ್ತಿಕೆಯನ್ನು 1930ರಲ್ಲಿ ಬರೆದುಕೊಟ್ಟರು.



ಅದರ ಪರಿಚಯವನ್ನು 'ನಿರೂಪಕ'ನೊಬ್ಬ ಆರಂಭಿಸಿ, ಆಮೇಲೆ ಕೆಂಪನೆ ಹೇಳುವ ಹಾಗೆ ಈ ಸ್ವಾರಸ್ಯವಾದ (ಆದರೆ ವಾಸ್ತವವಾದ, ಕಾಲ್ಪನಿಕವಲ್ಲದ) ಕಥನವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

# ನವರಾತ್ರಿ (ದಸರಾ) ನೋಡಲು ಕೆಂಪ ಮೈಸೂರಿಗೆ ಹೋದದ್ದು.

**- ನಾ. ಕಸ್ತೂರಿ**

**ಇದು 1930ರ ಮೈಸೂರಿನ ದಸರಾ.**

**ನಿರೂಪಕ:**

ಸ್ವಾಮಿಗಳಾ ನಮಸ್ಕಾರ. ನಮ್ಮೂರ ಕೆಂಪ ದಸರಾ ನೋಡಬೇಕು ಅಂತ ಮೈಸೂರಿಗೆ ಹೋದದ್ದೊಂದು ಕತೆ ಬಹಳ ಸ್ವಾರಸ್ಯವಾಗಿದೆ. ಹೇಳತೀನಿ ಕೇಳಿ. ''ನಮ್ಮೂರ ಅಂತಿ, ಕೆಂಪ ಅಂತಿ, ನಿಮ್ಮೂರು ಯಾವುದು, ಕೆಂಪ ಯಾರು'' ಅಂತ ಕೇಳ್ತೀರಲ್ವಾ?

> ಮಹಾರಾಜರ ದಸರಾ ನೋಡೋದು ಅಂದ್ರೆ ಹಳ್ಳಿಗರಿಗೆ ಹಬ್ಬ

ನಮ್ಮೂರು ಐನೂರು ಸ್ವಾಮಿ. ಸಣ್ಣ ಹಳ್ಳಿ. ಶೆಟ್ಟಿಹಳ್ಳಿ ಸ್ಟೇಷನ್ನಿಂದ ಏಳು ಮೈಲಿ. ಕೆಂಪ ಅಂದರೆ ನನ್ನ ಬಾಮೈದ. ಕೆಂಪೀ ಗಂಡ.

ದಸರಾ ನೋಡಬೇಕು, ಮೈಸೂರ ಮಹಾರಾಜರ ಅರಮನೆ ನೋಡಬೇಕು ಅಂತ ಆಸೆ. ಕೆಂಪಿ ಕುಡುಕೇಲಿ ಬಚ್ಚಿಟ್ಟ ಕಾಸು ಮೂರು ರೂಪಾಯಿ - ಎಲ್ಲ ಆಣೆ ಪಾವಲಿಗಳ ಚಿಲ್ಲರೇನ ಗುಟ್ಟಾಗಿ ಎತ್ತಿಕೊಂಡು ಬೆಳಗಿನ ಜಾವಾನೆ ಐನೂರ ಬಿಟ್ರ. ನಡ್ಕಂದು ಹೋಗುತಾ ದಾರೀಲಿ ಕಂಡ ಒಬ್ಬರನ್ನ ''ಸ್ವಾಮೀ ಈ ರಸ್ತೆ ಎಲ್ಲೋಯ್ತುದೆ?'' ಅಂತ ಕೇಳಿದ. ಅವರು ''ಇದು ಎಲ್ಲೂ ಓಗಾಕಿಲ್ಲಾ ಗೌಡ್ರೆ. ಇಲ್ಲೇ ಬಿದ್ದಿರುತ್ತೆ'' ಅಂದರು. ''ಆಸ್ಯ ಮಾಡಬೇಡಿ ದೇವ್ರೂ. ನಾನು ಈ ರಸ್ತೇಲಿ ಓದರೆ ಯಾವ ಊರು ಸಿಕ್ಕುತ್ತೆ'' ಅಂದ. ''ಸಿಕ್ಕಿದ ಊರಿಗೆ ಓದ್ರೆ ಸಾಕಾ, ಓಗ್ಬೇಕಾದ ಊರು ಸಿಕ್ಕಬೇಕಾ?'' ಅಂದರು. ''ನೀವ್ ಏಳಾದೂ ಸರೀನೆ. ಮೈಸೂರು ಸಿಗಬೇಕು ಸ್ವಾಮೀ'' ಅಂದ. ''ಓ ದಸರಾ ನೋಡಾಕಾ? ನೆಟ್ಟಗೆ ಈ ದಿಕ್ಕಲ್ಲಿ ಆರೇಳು ಮೈಲಿ ನಡಿ. ಅಲ್ಲೇ ಶೆಟ್ಟಿಹಳ್ಳಿ ಅಂತ ರೈಲು ಸ್ಟೇಷನ್ ಸಿಕ್ಕತ್ತೆ. ಅಲ್ಲಿಂದ ಮೈಸೂರ್ಗೆ ಓಗು'' ಅಂದ್ರು.

ಓದಾ ಓದಾ - ಸೂರ್ಯ ನೆತ್ತಿ ಮ್ಯಾಗ ಬಂದ. ಟೇಶನ್ ಸಿಕ್ತು. ಅಲ್ಲೊಂದು ರೈಲು ನಿಂತಿತ್ತು. ಇವನು ಗಾಡಿ ಹತ್ತಲು ಹೋದ. ಅಲ್ಲೊಬ್ಬರು ಟಿಕೀಟು ತಗೋ ಗೌಡಾ ಅಂದ್ರು. ಟಿಕೀಟು ಕೊಡೋ ಜಾಗ ಕೇಳ್ಕಂಡ್ ಹೋದ. ಟಿಕೀಟು ಕೊಡೋವ್ರು ''ಯಾವೂರು?'' ಅಂತ ಕೇಳಿದರು. ''ಐನೂರು'' ಅಂದ. ''ನಿನ್ನನ್ನ ಎಷ್ಟು ರೂಪಾಯಿ ಅಂತ ಕೇಳಲಿಲ್ಲ. ಯಾವ ಊರಿಗೆ ಟಿಕೀಟು ಕೊಡಲಿ ಅಂದೆ''. ''ದಸರಾ ನೋಡಾಕೆ ಓಗ್ಬೇಕು ಸ್ವಾಮಿ, ಮೈಸೂರ್ಗೆ'' ಅಂದ. ಹಾಗಾದರೆ ಇರು. ಈಗ ನಿಂತಿರೋ ಗಾಡಿ ಬೆಂಗಳೂರಿಗೆ ಹೋಗತ್ತೆ, ಮೈಸೂರಿಗಲ್ಲ, ಮೈಸೂರು ರೈಲು ಬರುತ್ತೆ, ಕೂತಿರು ಅಂದರು. ಕೂತ. ಒಂದು ಗಂಟೆ ಕಾದ ಮೇಲೆ ರೈಲು ಬಂತು. ಇವನು ತನ್ನಲ್ಲಿದ್ದ ಚಿಲ್ಲರೇನೆಲ್ಲ ಟಿಕೇಟ್ ಕೊಡೋರ ಮುಂದೆ ಸುರಿದ. ಅವರು ಅದರಲ್ಲಿ ಒಂದೆರಡು ಪಾವಲಿ ಮಾತ್ರ ತಗೊಂಡು ಮಿಕ್ಕ ಚಿಲ್ಲರೆ ವಾಪಾಸು ಕೊಟ್ಟರು. ಟಿಕೇಟನ್ನೂ ಕೊಟ್ಟರು. ''ನಿಮ್ಮಂತಾ ಒಳ್ಳೇವರು ಅಪರೂಪ ಬುದ್ದೀ. ನಿಮ್ಮಕ್ಕಳೂಮರಿ ಚೆಂದಾಕಿರಲಿ'' ಎಂದ.



ನವರಾತ್ರಿ ನೋಡಲು ಕೆಂಪ ಮೈಸೂರಿಗೆ ಬಂದದ್ದು 1930ರಲ್ಲಿ

**ಕೆಂಪನೇ ಹೇಳಿದ್ದು**

ಓ ಮೈಸೂರು ದೊಡ್ಡ ಪಟ್ನ ಕಣಪ್ಪೋ. ಅತ್ತು ಎಜ್ಜೆ ದಾಟಿದ್ರೆ ಅಲ್ಲೇ ಅರಮನೆ. ಏನು ಎತ್ತರವಾಗದೆ – ಉಪ್ಪರಿಗೆ ಮ್ಯಾಲುಪ್ಪರಿಗೆ. ಅದೇನು ದಪ್ಪ ಅವೆ ಕಂಬಗಳು! ''ಯಾಕ ಸ್ವಾಮಿ ನಗ್ತೀರಿ – ಇದು ಅರಮನೆ ಅಲ್ಲವ್ರಾ ಮತ್ತೆ? ರೈಲಾಪೀಸಾ.'' ಸರಿ ಬಿಡಿ ಅಂತ ಮುಂದೆ ಓದೆ. ''ಓ ಇಲ್ ಐತೆ ಅರಮನೆ'' ಅಂತ ನೋಡುತ್ತಾ ನಿಂತೆ. ಅಲ್ಲೊಬ್ರು ನಕ್ಕರು. ಅವರು ಏಳಿದ ಮೇಲೆ ''ಇದೂ ಅಲ್ಲವ್ರಾ – ಎಕ್ಸಿಬಿಷನ್ ಕಟ್ಟಡಾನಾ'' ಅಂದೆ. ಒಬ್ಬರು ''ಅಣ್ಣಾ ಇಂಗೇ ಮುಂದೆ ಓಗಿ ಆಸ್ಪತ್ರೆ ಬರತ್ತೆ. ಬಲಕ್ಕೆ ತಿರುಗಿ ಓಗ್ರಿ – ಯಾರ್ನಾರ ಕೇಳಿರಿ – ಚಾಮರಾಜ ಒಡೆಯರ್ ಗೋಪುರಕ್ಕೆ ಓಗೋ ದಾರಿ ತೋರಿಸುತ್ತಾರೆ. ಅಲ್ಲಿ ಅದರ ಮುಂದೇನೇ ಅರಮನೆ'' ಅಂದರು. ಅಷ್ಟರಲ್ಲಿ ಅಲ್ಲೊಂದಿಬ್ಬರು ''ನಾವೂ ಅಲ್ಲಿಗೇ ಓಗ್ತಿರೋದು. ನಮ್ಮ ಜೊತೇಗೆ ಬಾಪ್ಪ'' ಅಂದರು. ಅವರ ಜೊತೆ ಓದೆ. ''ಚಾಮರಾಜ ಒಡೆಯರು ಹಿಂದಿನ ಮಹಾರಾಜರು – ಅವರ ಪ್ರತಿಮೆ ಬಂಗಾರದ ಗೋಪುರ'' ಎರಡು ಕಣ್ಣು ಸಾಲವು. ಆಂಜನೇಯನ ಗುಡಿ ಬಂತು. ನಮಸ್ಕಾರ ಮಾಡಿ ಒಳಗೆ ಓದೆ. ದೊಡ್ಡ ಮೈದಾನ ಆಗಲೇ ಕತ್ತಲಾಗ್ತಾ ಬಂತು. ನೋಡ್ತಿದ್ದಂಗೆ ಜಗ್ ಅಂತ ಇಡೀ ಅರಮನೆಗೆ ಬೆಂಕಿ ಅತ್ಕಂಡಂಗಾಯ್ತು. ಎಲೆಟ್ರಿ ದೀಪಗಳಂತೆ. ಅಲ್ಲಿದ್ದ ಒಬ್ಬರ್ನ ಕೇಳ್ದೆ ''ಈ ದೀಪಗಳ್ಗೆಲ್ಲ ಯಾವ ಎಣ್ಣೆ ಆಕ್ತಾರೆ ಸ್ವಾಮೀ''. ಎಣ್ಣೆ ದೀಪ ಅಲ್ಲ ಗೌಡ್ರೆ. ಮಳೆಗಾಲದಲ್ಲಿ ಗುಡುಗು ಮಿಂಚು ಬರುತ್ವಲ್ಲ, ಆ ಮಿಂಚನ್ನ ಇಡ್ದು ತಂತಿ ಮೂಲಕ ತಂದು ದೀಪಗಳಿಗೆ ಬಿಡ್ತಾರೆ'' ಅಂದ್ರು. ನಾನು ಕಣ್ಣು – ಬಾಯಿ ಇಷ್ಟಗಲ ತೆರೆದು ನೋಡ್ದೆ. ಮಾರಾಜರು ಸಿಮ್ಮಾಸನದ ಮೇಲೆ ಕೂತರು ಅಂತ ಇಷ್ಟು ದೀಪ ಅತ್ಗೆಂಡ್ವಂತೆ. ನಾನು ಎದ್ದು ನಮಸ್ಕಾರ ಮಾಡ್ದೆ. ಆಮೇಲೆ ಜಟ್ಟಿ ಕಾಳಗ, ಕುದುರೆ ಸವಾರರ ಕವಾಯಿತು ಆದವು. ದರ್ಬಾರು ಮುಗೀತು ಅಂದ್ರು. ಆಗ್ಲೇನೆ ನೆಪ್ಪಾದ್ದು ಹೊಟ್ಟೆ ತಾಳ ಆಕ್ತಿದೆ, ಬಾಯಾರಿಕೆ ಎಂದು. ಎಲ್ಲಿ ಉಣ್ಣಾದು, ಎಲ್ಲಿ ಮಲಗಾದು ಅಂತ ಯೋಚಿಸ್ತಿದ್ದ ಅಂಗೆ ನಮ್ಮೂರಿನ ಹುಚ್ಚ ಪೋಲೀಸಾಗಿ ಮೈಸೂರಲ್ಲವನೆ ಅಂತ ನೆಪ್ಪಾತು. ಆಗ ಅಲ್ಲೇ ರಸ್ತೆ ಎರಡು ಪಕ್ಕ ನಿಂತಿದ್ದ ಪೋಲೀಸರ ಬಳಿ ಹೋಗಿ ''ಸ್ವಾಮೀ, ಸ್ವಾಮೀ ನಮ್ಮೂರ ಉಚ್ಚ ಪೋಲೀಸಿಗೆ ಸೇರಿದಾನೆ ನಿಮಗವನು ಗೊತ್ತಾ?'' ಅಂತ ಕೇಳ್ದೆ. ಪೋಲೀಸಿಗೆ ಸೇರಿದ್ಮೇಲೆ ಅವನ್ನ ಯಾರೂ ಹುಚ್ಚ ಗಿಚ್ಚ ಅಂತ ಅನ್ನಲ್ಲ, ಅವನ ನಂಬರೆಷ್ಟು ಹೇಳು ಅಂದ್ರು. ನಂಬ್ರೂ ಗಿಂಬ್ರೂ ಗೊತ್ತಿಲ್ಲ ಸ್ವಾಮಿ ನನಗೆ. ಐನೂರು ಅಂತ ಮಾತ್ರ ಗೊತ್ತು ಅಂತ ಅಂದೆ. ಅವನು ''ನನ್ನ ನಂಬರ್ ಐನೂರು. ಊರು ಐನೂರಲ್ಲ'' ಅಂತ ಅಂದ. ''ಕ್ಷಮ್ಸಿ ಸ್ವಾಮೀ ನೀವೇ ಹುಚ್ಚ ಅಂತ ಮಾಡ್ದೆ'' ಅಂದೆ. ಅವನಿಗೆ ರೇಗಿತು. ''ಇವನನ್ನ ಟೇಶನ್ನಿಗೆ ಕರ್ಕಂಡು ಓಗು'' ಅಂದ. ನನಗೆ ಗಾಬರಿ ಆಯ್ತು. ಆದರೆ ನನ್ನನ್ನ ಟೇಶನ್ನಿಗೆ ಕರ್ಕಂಡು ಓಗಲು ಬಂದವ್ನ ಗುರ್ತು ಸಿಕ್ತು. ಅವನೆ ಹುಚ್ಚ ಅಂತ ತಿಳಿದು ಖುಷಿ ಆಗೋಯ್ತು. ಅವತ್ತು ಅವನ ಮನೇಲೆ ಊಟ. ಅಲ್ಲೇ ಮಲಕ್ಕಂಡೆ. ಬೆಳಗಾಗ ಹುಚ್ಚ ಹೋಟಲಿಗೆ ಕರ್ಕಂಡು ಓದ. ಇಬ್ರೂ ದೋಸೆ ತಿಂದೆವು. ''ನಾನು ಡ್ಯೂಟಿಗೆ ಓಗ್ಬೇಕು. ನೀನು ಜೂ ನೋಡ್ಕಂಡು ಬಾ, – ಎಂಕ ಅಂತ ಪಕ್ಕದ್ಮನೆ ಉಡುಗನ್ನ ಜೊತೆ ಮಾಡ್ತೀನಿ. ಜೂ ತೋರಿಸ್ಕಂಡು ಬರ್ತಾನೆ'' ಅಂದ. ಜೂ ಅಂದ್ರೇನಣ್ಣಾ ಅಂದೆ. ಅಲ್ಲಿ ಹುಲಿ, ಚಿರತೆ, ಸಿಂಹ, ಕರಡಿ, ಜಿಂಕೆ, ಹಾವು ಕೋತಿಗಳನ್ನು ಕಾಡಿಂದ ಇಡಿದು ತಂದು ಇಲ್ಲಿಟ್ಟಿದ್ದಾರೆ. ಜನ, ಮಕ್ಳು ನೋಡ್ಲಿ ಅಂತ. ಅವುಗಳ್ಗೆಲ್ಲಾ ಒತ್ತೊತ್ಗೆ ಇವರೇ ಆಹಾರ ಕೊಡ್ತಾರೆ



ಅಂದರು. ಪಾವಲಿ ಕೊಟ್ಟು ನಾನು, ಎಂಕ ಒಳಕ್ ಓದ್ವಿ. ಮೊದಲು ಕಂಡದ್ದು ಉದ್ದಾ ಅಂದ್ರೆ ಉದ್ದದ ಕತ್ತು ಇರೋ ಪ್ರಾಣಿ. ನೀರು ಕುಡುದ್ರೆ ಬಾಯಿಂದ ಒಟ್ಟೇಗೋಗಾಕೆ ಶಾನೇ ಒತ್ತು ಆಗ್ತೈದು. ಅದೆಂಗ್ ನೆಲದ್ಮೇಲಿನ ಉಲ್ಲು ಮೇಯುತ್ತೆ ಅಂದೆ ಜೋರಾಗಿ. ಆಗ ಅಲ್ಲಿದ್ದ ಒಬ್ಬುಡ್ಗ ಚಿಕ್ಕೋನು ''ಅದು ಜಿರಾಫೆ, ಹುಲ್ಲು ತಿನ್ನಲು ಅಲ್ಲೇ ........... ಮರದೆಲೆ, ಚಿಗುರು ಮೇಯುತ್ತೆ'' ಅಂತ ಅಂದ. ಆಮೇಲೆ ಬೋನೊಳಗಿದ್ದ ಸಿಮ್ಮ ಉಲಿ ಚಿರತೆಗಳನ್ನ ನೋಡ್ದೆ. ಬಿಳಿ ಕರಡಿ, ಮೂಗಿನ ಮೇಲೆ ಒಂದೇ ನೆಟ್ಟಗಿರೋ ಕೊಂಬು ಇದ್ದ ರಾಕ್ಷಸ ಪ್ರಾಣಿ, ಕೊಳದಲ್ಲಿ ತೇಲ್ತಾ ಇದ್ದ ಅಂಸ ನೋಡ್ಕಂಡು ಜನರ ಜೊತೆ




ಮುಂದೆ ಓದೆ. ಸಾಲಾಗಿ ಇದ್ದ ಬೋನುಗಳ ಒಳಗೆ ನಾನಾ ತರ ಕೋತಿಗಳಿದ್ವು. ಪಡ್ಡೆ ಉಡುಗ್ರು ಕಳ್ಳೆಕಾಯಿ, ಬಾಳೆ ಅಣ್ಣು ಬೋನೊಳಗೆ ಎಸೀತಿದ್ರು. ಕೋತಿಗಳು ಇವರ ಚೇಷ್ಟೆಗಳನ್ನ ನೋಡಿ ಅಣಕಿಸ್ತಿದ್ವು. ಶ್ರೀರಾಮಚಂದ್ರಂಗೆ ಸಹಾಯ ಮಾಡಿದ ಕೋತಿಗಳ ನೆನಪಾತು. ಅಲ್ಲೊಂದ್ಕಡೆ ನೀರಲ್ಲಿ ಮುಳುಗೇಳ್ತಿದ್ದ ಆನೆ ಮರಿ ಗಾತ್ರದ ಪ್ರಾಣೀನ ಎಂಕ ''ನೀರು ಕುದುರೆ'' ಅಂತ ತೋರಿಸ್ದ! ಅಪ್ಪಯ್ಯ! ಇದು ಕುದುರೇನಾ! ಆನೆ ಮರಿ ಇದ್ದಾಂಗದೆ ಅಂತ ಅಂದೆ. ಸೊಪ್ಪು ಒಟ್ಟು ತಿಂತದಂತೆ. ಈ ಕಡೆ ಅನೇಕ ತರ ಗಿಳಿಗಳು, ಹಕ್ಕಿಗಳೂ, ನವಿಲು, ಕೊಕ್ಕರೆ, ಬಾತುಕೋಳಿ ಎಲ್ಲ ಪಂಜರಗಳಲ್ಲಿದ್ವು. ಒಂದಂತೂ ಬೊ ವಿಚಿತ್ರದ ಅಕ್ಕಿ. ಈಟುದ್ದ ಕತ್ತು – ತುಪ್ಪಳ ತುಂಬಿದ ಮೈ – ಉದ್ದಾನೆ ಕಾಲು –



ಹಾರಲ್ಲ ಓಡತ್ತಂತೆ. ಅದು ಒಂಟೆ ಅಕ್ಕಿ ಅಂದ್ರು. ಇದ್ಕಿಂತ ಇಚಿತ್ರವಾದ್ದು ಇನ್ನೊಂದ್ ಪ್ರಾಣಿ – ಜಿಂಕೆ ತರ ಮುಕ, ಮುಂಗಾಲು ಸಣ್ಣ, ಇಂಗಾಲು ಮತ್ತು ದಪ್ಪಗೆ ಗಟ್ಟಿಗಿರೋ ಬಾಲ – ಈ ಮೂರರ ಮ್ಯಾಗೆ ನಿಂತ್ಕಳತ್ತೆ. ಒಟ್ಟೇಲೊಂದು ಚೀಲ – ಅದರೊಳೀಕೆ ಬೆಚ್ಚಗೆ ಕುಂತು ತಲೆ ಮಾತ್ರ ಒರಕಾಕಿರೋ ಮರಿ. ಕಾಂಗರೂ ಅಂತೆ. ಯಾವ್ದೋ ದೂರದ ದೇಸದಾಗೆ ಇರತ್ತಂತೆ. ನಮಗೆ ತೋರ್ಸಾಕೆ ಗಂಡು ಎಣ್ಣು ಎರಡನ್ನ ಇಲ್ಲಿಗೆ ತಂದವ್ರೆ. ಜೂ ಇಚಾರ ಕೆಂಪೀಗೆ ಏಳಾದ್ ಬಾಳ ಐತೆ. ಏಳ್ಬೇಕು.

ಮಾರನೇ ದಿನ ಇಜಯದಸಮಿ. ಮಾರಾಜರ ಜಂಬೂಸವಾರಿ ಮೆರವಣಿಗೆ. ಉಚ್ಚ ಅರಮನೆ ಡ್ಯೂಟೇಲಿರ್ತಾನಂತೆ. ಮೆರವಣಿಗೇನ ಸಂದಾಕಿ ನೋಡಾಕೆ ದೊಡ್ಡಪೇಟೆ ಬೀದೀಲಿ ಒಂದ್ಮನೆ ಮಹಡಿ ಮ್ಯಾಗೆ ನಿಂತ್ಕಳಾಕೆ ಜಾಗ ಮಾಡಿದ್ದ. ಮೆರವಣಿಗೆ ನೋಡಾಕೆ ಸಾವಿರಾರು ಜನ ಸೇರಿದ್ರು. ರಸ್ತೇಲಿ ಯಾರ್ನೂ ಬಿಡ್ತಿರ್ಲಿಲ್ಲ. ಮಹಡಿಗಳ್ ಮ್ಯಾಗೆ, ಮರಗಳ್ ಮ್ಯಾಗೆ ಎತ್ತರದ ಜಾಗ ಉಡುಕ್ಕೊಂಡು ಜನ ಕುಂತಿದ್ರು ಕಾಯ್ತಾ. ಬಿಸ್ಲೂ ಅಂದ್ರೆ ಬಿಸಿಲು. ಆನರ ಗದ್ದಲ. ಇದ್ದಕ್ಕಿದ್ ಅಂತೆ ಡಂ ಡಂ ಅಂತ ತುಪಾಕಿ ಸದ್ದಾಯ್ತು. ಕೊಂಬು ಕಹಳೆ ಕೂಗಿದ್ವು. ಮೆರವಣಿಗೆ ಹೊರಡ್ತು ಅಂದ್ರು. ಬ್ಯಾಂಡು ಬಜಂತ್ರಿ, ಡೊಳ್ಳು ಸಮಾಳ ವಾಲಗ ಎಲ್ಲ ಸುರು ಆದ್ವು. ನಂದೀಕೋಲು – ಅದರ ಹಿಂದೆ ಡೊಳ್ಳು ಬಾರಿಸೋರು, ಗೊರವರು, ಕಂಸಾಳೆಯವರು, ಮುಗಿಲೆತ್ತರದ ಗಂಡ ಹೆಂಡ್ತೀರ ಗೊಂಬೆಗಳ ಒಳಗೆ ಎತ್ತರದ ಕೋಲು ಕಾಲಿನವರು, ಕುದುರೆ ಸವಾರರು, ದರ್ಬಾರ್ ಡ್ರೆಸ್‌ನವರು ಬಂದರು. ಚೆಂದಾಗಿ ಫಳಫಳಾಂತ ಹೊಳೆಯೋ ಅಂಬಾರಿ, ಅಲಂಕಾರ ಮಾಡಿದ ಆನೆ – ಅದರ ಮ್ಯಾಲೆ ಚಿನ್ನದ ಮಂಟಪದಲ್ಲಿ ಕೂತ ಮಾರಾಜರು, ಇವ ರಾಜರು ಕಂಡರು. ನಾವೆಲ್ಲರೂ ಉಪ್ಪರಿಗೆ ಮ್ಯಾಲಿಂದ್ಲೆ ನಮಸ್ಕಾರ ಮಾಡಿದ್ವಿ. ಮಾರಾಜರು ಎರಡೂ ಕಡೆ ನೋಡ್ತಾ ಕೈ ಆಡಿಸ್ತಾ ಒಪ್ಪಿಸ್ಕೋತಿದ್ರು. ನೋಡಾಕೆ ಎರಡು ಕಣ್ಣೂ ಸಾಲವು. ಎರಡು ಮೈಲಿ ದೂರದ ಬನ್ನಿ ಮಂಟಪಕ್ಕೆ ಓಗುತ್ತಂತೆ ಮೆರವಣಿಗೆ. ಅಲ್ಲಿ ಬನ್ನಿಮರದ ಪೂಜೆ ಮಾಡಿ ಬನ್ನಿ ಪತ್ರೆ ಮುಡಿದು ರಾತ್ರಿ ಮತ್ತೆ ಅರಮನೆಗೆ ವಾಪಾಸ್ ಬರತ್ತೆ ಅಂದ್ರು. ಅದು ಬರಾದ್ರಾಗೆ ಪುಳಿಯೋಗ್ರೆ, ಮಸರನ್ನ ದೊನ್ನೆಗಳಲ್ಲಿ ಕೊಟ್ರು ಯಾರೋ ಪುಣ್ಯಾತ್ಮರು. ತಿಂದು ನೀರು ಕುಡಿದ್ವಿ. ಅಲ್ಲೇ ಕೂತಿದ್ದು ಪಂಜಿನ ಮೆರವಣಿಗೇನೂ ನೋಡ್ದೆ. ಮಾರನೇದಿನ ಚಾಮುಂಡಿ ಬೆಟ್ಟದ ಮೆಟ್ಟಲುಗಳನ್ನು ಹತ್ತಿ, ಚಾಮುಂಡಮ್ಮನ ಪೂಜೆಗೆ ಹೊರಟೆವು. ಜನರ ನೂಕು ನುಗ್ಗಲು. ನಾನೂರೋ ಐನೂರೋ ಮೆಟ್ಟಲು ಅತ್ತೋ ಒತ್ಗೆ ಬೆವರು ಕಿತ್ಕಂಡು ಬಂದು ಸಾಕಾತು. ಅಲ್ಲಿ ದೊಡ್ಡ ನಂದಿ ಬಸವಣ್ಣನ ಕಲ್ಲಿನ ವಿಗ್ರಹ ಪೂಜೆ ಮಾಡಿದ್ರು. ಕೈ ಮುಗ್ದು ಸ್ವಲ್ಪ ಸುಧಾರಿಸ್ಕಂಡು ಮತ್ತೆ ಮೆಟ್ಟಲು ಅತ್ತಿದೆ. ಸಾವಿರ ಮೆಟ್ಲಂತೆ. ಅಮ್ಮನೋರ ಗುಡಿ ಗೋಪುರ ಬೋ ಎತ್ರ. ತಲೆ ಎತ್ತಿ ನೋಡ್ತಾ ಕತ್ತು ನೋವು ಬಂತು. ದೊಡ್ಡ ಬಾಗಿಲ ಒಳಗೆ ಮತ್ತೆ ಮೆಟ್ಟಲ ಅತ್ತಿ ಓಗುತ್ತಿದ್ದ ಜನ ಜಂಗುಳಿ ಜತೆ ನಾನೂ ಓದೆ, ಓಗೋದೇನು ತಳ್ಕಂಡು ಓಗೋ ಜನರ ನಡುವೆ ನಾನೂ ಅಮ್ಮನೋರ ಗುಡಿವಳಕ್ಕೋದೆ. ಅಲ್ಲಿ ಕಟಕಟೆ ಕಟ್ಟಿದ್ರು. ಅಲ್ಲಿಂದ್ಲೆ ಜರತಾರಿ ಸೀರೆ ಊವಿನ ಆರಗಳಿಂದ ಅಲಂಕಾರ ಮಾಡಿದ್ದ ತಾಯೀಗೆ ನಮಸ್ಕಾರ ಮಾಡ್ದೆ. ಖುಷಿಯಾಗಿ ಕಣ್ಣೀರು ಬಂತು. ನಮ್ಮಮ್ಮಾ ಮಾತಾಯೀ ಎಲ್ಲಾರ್ನೂ ಕಾಪಾಡಮ್ಮಾ. ಮಾರಿ ಪ್ಲೇಗು ಬರದಾಂಗೆ ನೋಡುಕೋಮ್ಮಾ. ಮಳೆ ಬೆಳೆ ಚೆನ್ನಾಗಿ ಆಗಿ ಮಕ್ಕು ಮರಿ ಎಂಗಸ್ರು ಎಲ್ರೂ ಚೆಂದಾಕಿರ್ಲಿ ಅಂತ ಬೇಡ್ಕಂಡೆ.



ಮೂರನೇ ದಿನ ಎಕ್ಸಿಮಿಷನ್ ತೋರಿಸ್ಕಂಡ್ ಬಾ ಕೆಂಪಣ್ಣಂಗೆ ಅಂತ ಹುಚ್ಚ ಎಂಕನ್ನ ಜೊತೆಗ್ ಕಳಿಸ್ದ. ಎಕ್ಸಿಮಿಷನ್ ಅಂದ್ರೆ ಮಿಷನ್ ಅಲ್ಲ ಅದೊಂದ್ ಅಂಗ್ಡೀ ಸಾಲು. ಸಂತೆ – ಜಾತ್ರೆ. ಒಳಾಕ್ ಓಗಾಕೆ ಅಲ್ಲೂ ಟಿಕೀಟ್ ತಗಾಬೇಕು. ಒಳಗೆ ಮಾರಾಟದ ಅಂಗ್ಡಿಗಳೂ ಅವೆ. ನಮ್ ರಾಜ್ಯದಾಗ್ ತಯಾರಾಗೋ ವಸ್ತುಗಳನ್ನ ತೋರ್ಸಿ ಅವುಗಳ್ನ ವಿವರಿಸೋ ಮಳಿಗೆಗಳೂ ಅವೆ. ನಮ್ ಕಾಡು, ಬದ್ರಾವತಿ ಕಾರ್ಖಾನೇಲಿ ತಯಾರಾಗೋ ಕಬ್ಣದ್ ಸಾಮಾನುಗಳು, ಬೇರೆ ಬೇರೆ ಕಡೆ ಗಿರಣಿಗಳಲ್ಲಿ ತಯಾರಾಗೋ ನೂಲು, ಬಟ್ಟೆ, ಗಂದದೆಣ್ಣೆ, ಸಾಬೂನು, ರಾಗಿ, ಬತ್ತ, ಅಡಿಕೆ, ತೆಂಗುಗಳ್ಗೆ ಆಕೋ ಗೊಬ್ಬರ, ರೋಗ ಬಂದಾಗ್ ಸಿಂಪಡಿಸೋ ಔಸ್ದಿ ಎಲ್ಲಾನೂ ತೋರ್ಸಿ ವಿವರ್ಸಿ ಏಳ್ತಾ ಇದ್ರು. ಅಲ್ಲೊಂದ್ಕಡೆ ವಯಸ್ಸಾದೋರ್ಗೆ ಅಕ್ಸರ ಕಲಿಸ್ತೇವೆ, ನಾವೇ ಬರೆಯೋ ಸ್ಲೇಟು, ಬಳಪ, ಪುಸ್ತಕ ಕೊಡ್ತೇವೆ. ಎಬ್ಬಟ್ಟು ಆಕ್ದೆ ರುಜು ಮಾಡ್ಬೌದು. ಚಿಕ್ಕ ಚಿಕ್ಕ ಪುಸ್ತಕ ಓದ್ಬೋದು ಅಂತ ಏಳ್ತಾ ಕರೀತಿದ್ರು. ಅಲ್ಲೊಂದ್ ದೊಡ್ಡ ಚಿತ್ರ – ಕರ್‍ರಗೆ, ದೊಡ್ಡ ಕಲ್ಲೀ ಮೀಸೆ, ಕೋರೆದಾಡೆ, ಕೆಂಗಣ್ಣು ಇರೋ ಭಾರೀ ಗಾತ್ರದವನ ಚಿತ್ರ. ಮಂಕಾಸುರ ಅನ್ನೋ ರಾಕ್ಸಸ ಅಂತೆ. ಅವನ್ನ ಬಿಳೀ ಸೀರೆ ಉಟ್ಕಂಡ್ ಸರಸತಮ್ಮ ಲೇಕನಿ ಶೂಲ ಎತ್ತಿ ಚುಚ್ಚಿ ಸಾಯಿಸ್ತಿರೋ ಚಿತ್ರ. ನಮ್ಮೂರು ಏನೂರು ಅನ್ನೋ ಅಳ್ಳೀ, ಅಂತ ಏಳಿದ್ಕೂಡ್ಲೆ ಐನೂರಲ್ಲೂ ಹತ್ತು ಜನಾನ ಸಂಜೇಲಿ ಒಲದ ಕೆಲಸ, ಊಟ, ಎಲ್ಲ ಆದ್ಮೇಲೆ ಗುಡಿ ಜಗಲಿ ಮೇಲೆ ಸೇರಿಸಿದ್ರೆ ಅಕ್ಸರ ಪಾಟ ಕಲಿಸಾಕೆ ಏರ್ಪಾಟು ಮಾಡಾನ ಅಂದ್ರು.

ಎಕ್ಸಿಮಿಷನ್ನಲ್ಲಿ ಕನ್ನಡ ಅಲ್ದೆ ಏನೇನೋ ಬಾಸೆ ಮಾತಾಡ್ತಿರೋದು ಕೇಳ್ತಿತ್ತು. ದೇಶದ ಎಲ್ಲಾ ಕಡೀಂದ ದಸರಾ ನೋಡಾಕೆ ಜನ ಬರ್ತಾರಂತೆ – ತೆಲುಗು, ತಮಿಳು, ಮರಾಟಿ, ಹಿಂದಿ ಮಾತಾಡೋ ಜನ. ಅಷ್ಟು ಎಸ್ರು ನಮ್ಮ ಕನ್ನಡ ನಾಡಿಂದು. ಇಂತಾ ನಾಡಿನಲ್ಲಿ ಉಟ್ಟಿದ್ದೇ ನಮ್ಮ ಪುಣ್ಯ. ಕನ್ನಡಾನೆ ಚೆಂದ ಕಣ್ ಮಗಾ, ಕೇಳಾಕೆ ಇತವಾಗಿರ್ತದೆ. ನಮ್ಮ ಈ ದೇಸದ್ ಸಮ ಎಲ್ಲೂ ಇಲ್ಲ ತಗಿ ಈ ಜಗತ್‌ನಾಗ ಅಂದೆ ಎಂಕನಿಗೆ.

ದಸರಾ ನೋಡಿದ್ದಾತು. ಅರಮನೆ, ಮೆರವಣ್ಗೆ ಎಲ್ಲ ಕಣ್ಣಲ್ ತುಂಬ್ ಕೆಂಡು ಪೇಟೆ ಬೀದೀಲಿ ಕೆಂಪೀಗೆ ಅಂತ ಒಂದ್ ಕಣ ಕೊಂಡ್ಕಂಡು, ಚಾಮುಂಡಮ್ಮನ್ ಗುಡೀಲಿ ಕೊಟ್ಟ ಕುಂಕುಮದ ಪೊಟ್ನ, ಊವ ಎಲ್ಲ ಚೀಲದಲ್ಲಿ ಮಡಗಿ ಮಾರನೆ ದಿನ ವತಾರೆ ಬೇಗ ಎದ್ದು ಹುಚ್ಚನಿಗೂ ಅವನ ಎಂಡ್ತೀಗೂ ನಮಸ್ಕಾರ ಏಳಿ ನಡೀತಾ ಶ್ರೀರಂಗಪಟ್ಣ ಸೇರ್ದೆ. ಕಾವೇರಿ ಹೊಳೆ ಸೇತುವೆ ಬುಡದಾಗ್ ಹರೀತಿತ್ತು. ನಮಸ್ಕಾರ ಮಾಡಿ ಒಂದ್ ಕಾಸು ಆಕ್ದೆ. ಹೊಳೇಲಿ ಸ್ನಾನ ಮಾಡಿ ರಂಗನಾಥಸ್ವಾಮಿ ಗುಡೀಗ್ ಓಗಿ ಪೂಜೆ ಮಾಡ್ಸಿ, ಟಿಪ್ಪೂ ಸುಲ್ತಾನನ ಬ್ಯಾಸಿಗೆ ಅರಮನೆ ದರಿಯಾದೌಲತ್ತು, ಗುಂಬಜ್‌ನಲ್ಲಿದ್ದ ಸಮಾದಿ, ಪರಂಗಿಯೋರ್ನ ಸೆರೇಲಿಟ್ಟ ನೆಲದಡಿ ಕತ್ತಲಮನೆ ಎಲ್ಲ ನೋಡ್ದೆ. ಗುಡಿ ಅತ್ರದ್ ರೈಲು ಟೇಸನ್‌ಗೆ ಓಗಿ ''ಐನೂರಿಗೆ ಒಂದ್ ಟಿಕೀಟ್ ಕೊಡಿ ಸ್ವಾಮಿ'' ಅಂದೆ. ಐನೂರಿಗೆ ರೈಲಿಲ್ಲ ಅಂದ್ರು. ಶೆಟ್ಟಿ ಅಳ್ಳಿಗೆ ಟಿಕೀಟ್ ಕೊಡಿ ಮಾಷ್ಟ್ರೆ, ಅಲ್ಲಿಂದ ಐನೂರಿಗೆ ಏಳೇ ಮೈಲಿ, ನಡ್ಕಂಡ್ ಓಯ್ತಾನೆ ಅಂತ ಅಂದ್ರು ಪಕ್ಕದಲ್ಲಿದ್ದ ಒಬ್ರು. ಸರಿ ಟಿಕೀಟ್ ತಗಂಡು ರೈಲು ಅತ್ತಿದೆ, ಶೆಟ್ಟಿಅಳ್ಳಿ ಟೇಸನ್ನಲ್ಲಿಳಿದೆ. ಐನೂರ ಮನೆ ಸೇರಿದಾಗ ಕೆಂಪಿ ಮನೆ ಮುಂದೆ ನಿಂತಿದ್ಲು. ನಾನು ಚಾಮುಂಡಮ್ಮನ ಗುಡಿ ಕುಂಕುಮದ ಪೊಟ್ನ, ಊವು ಕಣದ ಮೇಲಿಟ್ಟು ಕೆಂಪೀಗೆ ಕೊಟ್ಟೆ. ಆಕೆ ಮಕ ಅರಳ್ತು. ಮುಂದಿನ ವರ್ಸ ಇಬ್ರೂ ಒಟ್ಟಿಗೆ ಮೈಸೂರ್ಗೆ ಓಗಾನ ದಸರಾ ನೋಡಾಕೆ. ನನಗಂತೂ ಎಲ್ಲ ಗೊತ್ತವೆ, ಹುಚ್ಚನ ಮನೆ ಅದೆ ಅಂದೆ. ಕೆಂಪಿ ಕುಶೀ ಆದ್ಲು.



# ಹಪ್ಪಳದ ಕತೆ

**- ಅನಿತಾ ನರೇಶ್ ಮಂಚಿ**

ಹಲಸಿನಕಾಯಿಯ ಸೀಸನ್ ಬಂತೆಂದರೆ ಸಾಕು ಮನೆ ಮನೆಯೂ ಸಣ್ಣ ಕಾರ್ಖಾನೆಯೇ. ಅದರಲ್ಲೂ ನಮ್ಮೂರಲ್ಲಂತು ಹೋದಲ್ಲಿ ಬಂದಲ್ಲಿ ನೆರೆಕರೆಯ ಮಾತುಗಳಲ್ಲಿ ಕೇಳಿಬರುವ ಒಂದೇ ಒಂದು ಮಾತು ಎಂದರೆ ಹಲಸಿನಕಾಯಿ ಹಪ್ಪಳ ಹಾಕಿ ಆಯ್ತಾ...? ಸಣ್ಣವಳಿರುವಾಗ ಅಜ್ಜನ ಮನೆಯ ರಜೆಯ ಮೈನ್ ಅಟ್ರಾಕ್ಷನ್ ಈ ಹಲಸಿನಕಾಯಿ ಹಪ್ಪಳವೇ. ಮೊಮ್ಮಕ್ಕಳ ಜಿಹ್ವಾಚಾಪಲ್ಯ ತಣಿಸಲು ನಾವು ಹೋಗುವ ಮೊದಲೇ ರಾಶಿ ರಾಶಿ ಹಪ್ಪಳದ ಕಟ್ಟುಗಳು ಸಿದ್ದಗೊಳ್ಳುತ್ತಿದ್ದವು. ನಾವು ಹೋದ ಮೇಲೂ ಈ ಕಾರ್ಯಕ್ರಮ ಬಿಡುವಿಲ್ಲದೇ ಮುಂದುವರಿಯುತ್ತಿತ್ತು. ಎಲ್ಲಿಯವರೆಗೆ ಎಂದರೆ ಮಳೆ ಶುರು ಆಗುವವರೆಗೆ ಇದು ಕೇವಲ ನಮ್ಮಜ್ಜನ ಮನೆಯಲ್ಲಿ ಎಂದಲ್ಲ ಮನೆ ಮನೆ ಕಥೆಯೂ ಇದುವೇ.

> ಹಪ್ಪಳ ತಯಾರಿಕೆ
> ಸಪ್ಪಳವಿಲ್ಲದೇ
> ಮರೆಯಾಗುತ್ತಿವೆ

ನಸು ಬೆಳಕು ಮೂಡುವಾಗಲೇ ಅಜ್ಜ ಮೆಟ್ಟುಗತ್ತಿಯ ಮೇಲೆ ವಿರಾಜಮಾನರಾಗುತ್ತಿದ್ದರು. ಹಿಂದಿನ ದಿನವೇ ತಂದುಹಾಕಿದ ಬೆಳೆದ ಹಲಸಿನಕಾಯಿಗಳು ಇಡೀ ಇದ್ದುದು ಅರ್ಧವಾಗಿ, ಅರ್ಧವಿದ್ದುದು ಕಾಲುಭಾಗವಾಗಿ ಅವುಗಳು ಹಲಸಿನಕಾಯಿ ಗಡಿಗಳಾಗಿ ಬದಲಾಗುತ್ತಿದ್ದವು. ಕೈಗೆ ಧಾರಾಳವಾಗಿ ತೆಂಗಿನೆಣ್ಣೆ ಹಚ್ಚಿಕೊಂಡ ನಾವುಗಳು ಅದರ ತೊಳೆ ತೆಗೆದು ಬೀಜ ಬಿಡಿಸಿ ರಾಶಿ ಹಾಕಿದರೆ ಅಜ್ಜಿ ಆಗಲೇ ದೊಡ್ಡ ಒಲೆಗೆ ಬೆಂಕಿ ಹಚ್ಚಿ ಅಟ್ಟಿನಳಗೆಯೊಳಗೆ ನೀರು ತುಂಬಿ ಒಲೆಗೇರಿಸಿ ಆಗುತ್ತಿತ್ತು. ನೀರು ತುಂಬಿರುವ ಜಾಗಕ್ಕೆ ಒಂದಿಷ್ಟು ಹಲಸಿನ ಬೀಜಗಳನ್ನು ಹಾಕಿ ಅದ್ರ ಮೇಲಿಟ್ಟ ಕಣ್ಣಿನ ಮುಚ್ಚಳದ ಮೇಲೆ ನಸು ಹಳದಿ ಬಣ್ಣದ ತೊಳೆಗಳೆಲ್ಲಾ ಕುಳಿತು ಬೇಯಲು ತೊಡಗುತ್ತಿದ್ದವು. ಈ ನಡುವೆಯೇ ಅಜ್ಜಿ ನಮ್ಮ ಕಾಫಿ ತಿಂಡಿಯ ಸರಬರಾಜು ಮುಗಿಸಿ ನಮ್ಮನ್ನು ಇನ್ನೊಂದು ಕಾರ್ಯಕ್ರಮಕ್ಕೆ ಅಣಿಗೊಳಿಸುತ್ತಿದ್ದರು.

ಬೆಂದ ಹಲಸಿನಕಾಯಿ ತೊಳೆಗಳು, ದೊಡ್ಡ ಕಡೆಯುವ ಕಲ್ಲಿನ ಒಳಗೆ, ಅಜ್ಜ ಬಲಗೆ ಹಿಡಿದು ಹಾಕುವ ಪೆಟ್ಟಿಗೆ, ಅಜ್ಜಿ ಹಾಕುವ ಉಪ್ಪು ಕಾರಗಳನ್ನು ಸೇರಿಸಿಕೊಂಡು ನುಣ್ಣನೆಯ ಹಿಟ್ಟಾಗುತ್ತಿದ್ದವು ಅಗಲವಾದ ಅಡಿಕೆಯ ಹಾಳೆಯ ಮೇಲೆ ಅದನ್ನು ತಣಿಯಲು ಬಿಡಲಾಗುತ್ತಿತ್ತು. ಮತ್ತೊಮ್ಮೆ ಕೈಗೆ ಎಣ್ಣೆ ಸವರಿಕೊಂಡು ನಿಂಬೆ ಗಾತ್ರದ ಉಂಡೆಗಳನ್ನು ಮಾಡುವ ಕೆಲಸ ನಮ್ಮದು. ಶುರು ಶುರುವಿಗೆ ನಿಂಬೆಯ ಗಾತ್ರದಲ್ಲಿದ್ದು ನಂತರ ನಿಧಾನಕ್ಕೆ ದೊಡ್ಡದಾಗುತ್ತಾ ಅಜ್ಜಿ ಕಣ್ಣಿಗೆ ಸಿಕ್ಕಿ ಮತ್ತೆ ಸಣ್ಣದಾಗುತ್ತಿದ್ದವು. ಅಷ್ಟರಲ್ಲಿ ಅಜ್ಜಿ ನಮ್ಮ ನಾಲಿಗೆಯ ಚಪಲ ತಣಿಸಲು ಬೇಯಿಸಿದ ಹಲಸಿನ ಬೀಜವನ್ನು ನಮ್ಮ ಪಕ್ಕದಲ್ಲಿ ಇಟ್ಟು ಬಿಡುತ್ತಿದ್ದರು. ಉಂಡೆಗಳಾದ ಮೇಲೆಯೂ ನಮ್ಮ ಕೆಲಸ ಮುಗಿಯುತ್ತಿರಲಿಲ್ಲ. ಮರದ ಮಣೆ ಇಟ್ಟು ಅದರ ಮೇಲೆ ಬಾಡಿಸಿ ಎಣ್ಣೆ ಹಚ್ಚಿದ ಬಾಳೆ ಎಲೆ ಇಡಲಾಗುತ್ತಿತ್ತು. ಅದರ ಮೇಲೆ ಉಂಡೆ ಇಟ್ಟು ಮತ್ತೊಂದು ಬಾಳೆ ಎಲೆಯಿಂದ ಮುಚ್ಚಿ ಇನ್ನೊಂದು ಮಣೆಯನ್ನು ಅದರ ಮೇಲಿಟ್ಟು ಒತ್ತಲಾಗುತ್ತಿತ್ತು. ತೆಳ್ಳಗಿನ ಹಪ್ಪಳ ಅಗಲವಾಗಿ ಹರಡಿಕೊಳ್ಳುತ್ತಿತ್ತು. ಅಜ್ಜಿ ಅದನ್ನು ನಾಜೂಕಾಗಿ ತೆಗೆದು ಹುಲ್ಲಿನ ಚಾಪೆಯ ಮೇಲೆ ಹರಡುತ್ತಿದ್ದಳು.



ಸ್ವಲ್ಪ ಹೊತ್ತಿಗೆ ಅವೆಲ್ಲಾ ಬಿಸಿಲಲ್ಲಿ ಒಣಗುವ ಶಿಕ್ಷೆಗೆ ಒಳಗಾಗುತ್ತಿದ್ದವು. ಅಬ್ಬಾ ಕೆಲಸ ಮುಗಿಯಿತು ಎಂದು ಸೊಂಟ ನೆಟ್ಟಗೆ ಮಾಡಿಕೊಂಡು ಏಳುವಂತಿಲ್ಲ. ಒಬ್ಬರಾದ ನಂತರ ಒಬ್ಬರು ನಾವು ಕಷ್ಟಪಟ್ಟು ಒತ್ತಿದ ಹಪ್ಪಳ ಕಾಗೆಗಳ ಪಾಲಾಗದಂತೆ ಕಾಯಬೇಕಿತ್ತು. ಅಂತೂ ಇಂತೂ ಸಂಜೆಯ ಹೊತ್ತಿಗೆ ಒಣಗಿದ ಹಪ್ಪಳ ಚಾಪೆಯಿಂದ ನಿದ್ರೆ ಬಿಟ್ಟವರಂತೆ ಮೇಲೇಳುತ್ತಿತ್ತು ಮತ್ತೊಂದೆರಡು ದಿನ ಬಿಸಿಲಿನಲ್ಲಿ ಒಣಗಿಸಿ ಮನೆಯೊಳಗೆ ತಂದು ರಾಶಿ ಹಾಕಲಾಗುತ್ತಿತ್ತು. ಬಾಳೆಯ ನಾರು ತೆಗೆದು ಹಪ್ಪಳವನ್ನು ಲೆಕ್ಕ ಮಾಡಿ ಒಂದರ ಮೇಲೊಂದು ಪೇರಿಸಿ ಕಟ್ಟುಗಳನ್ನು ಕಟ್ಟಲಾಗುತ್ತಿತ್ತು. ಆ ಕಟ್ಟುಗಳು ಮತ್ತೊಂದು ದಿನ ಬಿಸಿಲಿನಲ್ಲಿ ಒಣಗಿದ ಮೇಲೆ ಅಜ್ಜಿ ಯ ಹಪ್ಪಳದ ಮಂಡಗೆ ಎಂಬ ದೊಡ್ಡ ಗಾತ್ರದ ಮಣ್ಣಿನ ಹಂಡೆಯೊಳಗೆ ಇಳಿದು ಮೇಲಿನಿಂದ ಬಿಗಿಯಾಗಿ ಮುಚ್ಚಲ್ಪಟ್ಟು ಉಗ್ರಾಣ ಸೇರಿಕೊಳ್ಳುತ್ತಿದ್ದವು.

ಸಾವಿರಾರು ಸಂಖ್ಯೆಯಲ್ಲಿ ತಯಾರಾಗುತ್ತಿದ್ದ ಇದರ ಫಲಾನುಭವಿಗಳು ಬರೀ ನಾವುಗಳು ಮಾತ್ರ ಆಗಿರಲಿಲ್ಲ. ಮನೆಗೆ ಬಂದ ಯಾವುದೇ ನೆಂಟರು ಹೊರಡುವಾಗ ಅಜ್ಜಿ ಲಗುಬಗೆಯಿಂದ ಉಗ್ರಾಣದೊಳಕ್ಕೆ ನುಗ್ಗಿ ಒಂದೋ ಎರಡೋ ಕಟ್ಟು ಹಪ್ಪಳ ಹಿಡಿದು ಹೊರಬರುತ್ತಿದ್ದರು. ಇದರ ಜೊತೆ ಮಾವಿನ ಹಣ್ಣಿನ ಮಾಂಬಳ, ಒಣಗಿಸಿದ ಬಾಳೆಹಣ್ಣಿನ ತುಂಡುಗಳು ಇರುವ ಇನ್ನೊಂದು ಕಟ್ಟು ಕೂಡಾ ಸೇರಿಕೊಳ್ಳುತ್ತಿತ್ತು. ತಮ್ಮ ಮನೆಯಲ್ಲೂ ರಾಶಿ ರಾಶಿ ಹಪ್ಪಳ ಹಾಕಿದವರೂ ಕೂಡಾ ಬೇರೆ ಮನೆಯವರು ಕೊಡುವ ಹಪ್ಪಳವನ್ನು ಬೇಡ ಎಂದು ಸಂಕೋಚ ಮಾಡದೇ ಕೈ ಉದ್ದ ಮಾಡಿ ಪಡೆದುಕೊಳ್ಳುತ್ತಿದ್ದರು. ಅವರ ಮನೆಗೆ ನಾವು ಹೋದಾಗ ಇದೇ ಸತ್ಕಾರ ನಮ್ಮ ಪಾಲಿಗೂ ಸಿಗುತ್ತಿತ್ತು.

ಮನೆಗೆ ಯಾರೇ ಬರಲಿ ಕೆಂಡದಲ್ಲಿ ಸುಟ್ಟ ಹಲಸಿನ ತೆಳುವಾಗಿ ಕೊಬ್ಬರಿ ಎಣ್ಣೆ ಸವರಿ ಒಂದು ತಟ್ಟೆಯಲ್ಲಿ ತುಂಡು ಮಾಡಿದ ತೆಂಗಿನಕಾಯಿ ಇನ್ನೊಂದರಲ್ಲಿ ಬೆಲ್ಲದ ತುಂಡುಗಳು ಇವಿಷ್ಟನ್ನು ಇಟ್ಟುಬಿಟ್ಟರೆ ಸೈ. ಕುರು ಕುರು ಎಂದು ಖಾಲಿಯಾಗುವುದೇ ತಿಳಿಯುತ್ತಿರಲಿಲ್ಲ. ಅದರಲ್ಲೂ ಕೆಲವು ಮರಗಳು ಹಪ್ಪಳ ಹಾಕುವ ಮರಗಳೆಂದೇ ಪ್ರಸಿದ್ಧಿ ಹೊಂದಿದವುಗಳೂ ಇದ್ದವು. ಅವುಗಳ ಹಪ್ಪಳ ಈರುಳ್ಳಿ ಸಿಪ್ಪೆಯಂತೆ ತೆಳ್ಳಗಿದ್ದು ಬಾಯಿಗಿಟ್ಟೊಡನೆ ಕರಗಿ ಮರೆಯಾಗುತ್ತಿತ್ತು.

ಈಗಲೂ ಹಲಸಿನ ಮರಗಳು ಕಾಯಿ ಬಿಡುತ್ತವೆ. ಅದು ಹಪ್ಪಳ ಹಾಕುವಷ್ಟು ಬೆಳೆದೂ ಇರುತ್ತದೆ. ಆದರೆ ರೆಡಿ ಟು ಈಟ್ ಆಹಾರವನ್ನೇ ಅತ್ಯುತ್ಕೃಷ್ಟ ಎಂದು ಅವಲಂಬಿಸಿರುವ ನಾವುಗಳು ಪೇಟೆಯಲ್ಲಿ ಹಣ ಕೊಟ್ರೆ ಸಿಗಲ್ವಾ ಹಪ್ಪಳ ಅದಕ್ಕೇ ಅಷ್ಟೆಲ್ಲಾ ಪಾಡು ಪಡಬೇಕಾ ಎಂಬ ತುಟಿ ಮೇಲಿನ ಅಣಿಮುತ್ತನ್ನು ಉದುರಿಸುತ್ತಾ ಅಂಗಡಿ ಅಂಗಡಿ ಅಲೆಯುತ್ತೇವೆಯೇ ವಿನಃ ಹಲಸಿನ ಮರದ ಕಡೆ ನೋಡುವುದಿಲ್ಲ.

ಹಪ್ಪಳ ಹಾಕುವುದು ಎಂಬುದು ಒಂದು ಆಹಾರ ಸಂಸ್ಕೃತಿಯನ್ನು ಉಳಿಸಿದಂತೆ. ಅಜ್ಜ ಅಜ್ಜಿಯಿಂದ ಒಂದು ಅನುವಂಶಿಕ ವಿದ್ಯೆ ಇದು. ಮುಂದಿನ ತಲೆಮಾರಿಗೂ ಸಾಗಬೇಕಾಗಿದ್ದು. ಇದರಲ್ಲಿ ಕೆಲಸದ ಶ್ರಮದ ಜೊತೆಗೆ ಕೂಡಿ ಕೆಲಸ ಮಾಡುವ ಗಮ್ಮತ್ತು ಇರುತ್ತದೆ. ಆಹಾರವನ್ನು ಸಂಪಾದಿಸುವ ಕಷ್ಟದ ಅರಿವೂ ಆಗುವುದರಿಂದ ಅದನ್ನು ಪೋಲು ಮಾಡುವ ಮನಸ್ಸು ನಮ್ಮದಾಗದು. ಎಲ್ಲೆಲ್ಲಿಂದ ತಂದು ತಿನ್ನುವ ಕುರುಕಲು ತಿಂಡಿಗಳಿಂದ ರುಚಿಕರವೂ ಆಗಿರುವ ನಮ್ಮದೇ ಆಹಾರ ಆರೋಗ್ಯಕ್ಕೂ ಹಿತಕರ.

ಅಂದ ಹಾಗೇ ನಮ್ಮಲ್ಲಿ ಇವತ್ತು ಹಪ್ಪಳ ಹಾಕಿದೆವು.. ನಿಮ್ಮಲ್ಲಿ??



# ಮರೆವಾಗಿ ಕಾಡಿತ್ತು ಮಾಯೆ

**- ಗಾಯತ್ರಿ ಮೂರ್ತಿ**

ರಂಗಣ್ಣನಿಗೆ ಮೋಟಾರ್‌ಬೈಕ್ ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದು, ಜೀವಕ್ಕೇನೂ ಅಪಾಯವಾಗದಿದ್ದರೂ ಅವನ ಜ್ಞಾಪಕಶಕ್ತಿಗೆ ಮಾತ್ರ ಬಂದಿತ್ತು ಕುತ್ತು! ಪಾಪ, ಅಂದಿನಿಂದ ಅವನಿಗೆ ಮಧ್ಯೆ ಮಧ್ಯೆ ಭಯಂಕರ ಮರೆವು ಅಮರಿಕೊಂಡು ಕಾಡುತ್ತಿತ್ತು. ಬಸ್ ಹತ್ತಿದರೆ ಯಾವ ಸ್ಟಾಪ್‌ನಲ್ಲಿ ಇಳಿಯಬೇಕೆಂಬುದು ಅಥವಾ ಇಳಿಯಬೇಕೆಂಬುದನ್ನೇ ಮರೆಯುವುದು, ತಾನು ಕೆಲಸ ಮಾಡುವ ಆಫೀಸಿನ ಹೆಸರನ್ನು ಮರೆತು ಎಲ್ಲಿಗೆ ಹೋಗಬೇಕೆಂಬುದು ತಿಳಿಯದೆ ಪರದಾಡುವುದು, ಆಫೀಸಿಗೆ ಹೋದರೆ ಆಫೀಸಿನಲ್ಲಿ ಏನು ಕೆಲಸ ಮಾಡಬೇಕೆಂದು ಮರೆತು ಸುಮ್ಮನೆ ಕೂತು ತೂಕಡಿಸುವುದು ಮುಂತಾದ ಇಂತಹ ಹಾನಿಕರವಲ್ಲದ ಮರೆವು ಕಾಡುವಾಗ ಅವನ ನೆರವಿಗೆ ಬರುತ್ತಿದ್ದುದು ಅವನ ಗೆಳೆಯ ಸುಂದರು. ಅದಕ್ಕೆ ಕಾರಣವೂ ಇದೆ. ಅವನ ದ್ವಿಚಕ್ರ ವಾಹನದಲ್ಲಿ ಹಿಂದೆ ಕುಳಿತು ಸವಾರಿ ಮಾಡುತ್ತಿದ್ದಾಗಲೇ ಅಪಘಾತ ಸಂಭವಿಸಿದ್ದು. ಅದೂ ಸುಂದರೂ ತಪ್ಪಿನಿಂದಲೇ!

> ರಂಗಣ್ಣ ದಡ್ಡನಿರಬಹುದು
> ಆದರೆ ಅವನ ಹೆಂಡತಿ
> ದಡ್ಡಿಯಲ್ಲ

ಪಾಪ, ಸುಂದರೂ ತಾನೆ ಏನು ಮಾಡಿಯಾನು? ಅವನ ವಾಹನದ ಪಕ್ಕದಲ್ಲಿ ಸುಂದರ ಯುವತಿಯೊಬ್ಬಳು ಸ್ಕೂಟಿ ಸವಾರಿ ಮಾಡುತ್ತಿದ್ದುದು, ಸುಂದರೂ ಗಮನವೆಲ್ಲ ಅವಳ ಸುಂದರವಾದ ಸೊಂಟದ ಮೇಲೇ ನೆಟ್ಟಿದ್ದು, ರಸ್ತೆಯ ಮಧ್ಯೆ ನೆಮ್ಮದಿಯಾಗಿ ತೂಕಡಿಸುತ್ತ ನಿಂತಿದ್ದ ಎತ್ತರದ ಹಸು ಕಣ್ಣಿಗೆ ಬೀಳದಿದ್ದುದು ಅವನ ತಪ್ಪೆ? ಕೊನೆಯ ಗಳಿಗೆಯಲ್ಲಿ ಹಿಂದೆ ಕುಳಿತಿದ್ದ ರಂಗಣ್ಣ, ಏಯ್ ಸುಂದರೂ, ಎಲ್ಲಿ ನೋಡ್ತಿದಿಯೋ? ಎಂದು ಗುದ್ದಿದಾಗಲೇ ಸುಂದರೂಗೆ ಜ್ಞಾನೋದಯ! ಸರ್ರನೆ ವಾಹನ ಪಕ್ಕಕ್ಕೆ ತಿರುಗಿಸಲು ಹವಣಿಸಿದಾಗ ಅದು ಸಹಕರಿಸದೆ ಇದ್ದುದರಿಂದ ಇಬ್ಬರೂ ಬಿದ್ದಿದ್ದು ಸುಂದರೂ ತಪ್ಪೋ, ಇಲ್ಲಾ ಸಮಯಕ್ಕೆ ಸರಿಯಾಗಿ ಸಹಕರಿಸದ ಬೈಕ್ ತಪ್ಪೋ??? ಸುಂದರೂ ಧರಿಸಿದ್ದ ಹೆಲ್ಮೆಟ್ ಅವನನ್ನು ಕಾಪಾಡಿತು. ಆದರೆ ಪಾಪ, ರಂಗಣ್ಣನಿಗೆ ತಲೆಗೆ ಏಟು ಬಿದ್ದು ಅದರ ಪರಿಣಾಮ ಇಂದಿಗೂ ಅನುಭವಿಸುತ್ತಿದ್ದಾನೆ! ಅದಕ್ಕೆಂದೇ ಕಾಣತ್ತೆ ಈಗ ಪಿಲಿಯನ್ ಸವಾರನಿಗೂ ಹೆಲ್ಮೆಟ್ ಕಡ್ಡಾಯವೆಂಬ ರೂಲ್ಸ್ ಬಂದಿರುವುದು.

ಮಗನ ಸರ್ವ ರೋಗಗಳಿಗೂ ಮದುವೆಯೇ ಮದ್ದು ಎಂದು ತಂದೆತಾಯಿ ಚಿಂತಿಸುತ್ತಾರೆ. ಅಂತೆಯೇ ನಡೆದುಕೊಳ್ಳುತ್ತಾರೆ. ಅಂತೆಯೇ ಮಗನ ಮರೆವಿನ ರೋಗಕ್ಕೆ ಮದ್ದು ನೀಡಲು ಪ್ರಮೀಳ ಎಂಬ ಯುವತಿಯೊಡನೆ ರಂಗಣ್ಣನ ಮದುವೆ ಮಾಡಿ ಅವನ ತಂದೆ-ತಾಯಿ ನಿಶ್ಚಿಂತರಾಗಿ ತಮ್ಮ ಹಳ್ಳಿಗೆ ತೆರಳಿದರು. ಆಮೇಲೆ ಶುರುವಾಯ್ತು ನೋಡಿ, ರಂಗಣ್ಣನ ಕಷ್ಟಗಳ ಸರಣಿಮಾಲೆ! ಮುಚ್ಚಿಟ್ಟು ಮದುವೆ ಮಾಡಿದ್ದರಿಂದ ಪ್ರಮೀಳೆಗೆ ಗಂಡನ ಮರೆವಿನ ರೋಗದ ಸುಳಿವೇ ಇರಲಿಲ್ಲ.



ಒಂದು ದಿನ ಸಿನಿಮಾಗೆ ಕರ್ಕೊಂಡು ಹೋಗ್ತೀನಿ, ರೆಡಿಯಾಗಿರು ಅಂತ ಹೆಂಡ್ತೀಗೆ ಹೇಳಿ

ರಂಗಣ್ಣ ಆಫೀಸಿಗೆ ಹೋದ. ಬಂದಾಗ ರಾತ್ರಿಯಾಗಿತ್ತು. ಯಾಕೆ ಗೊತ್ತಾ? ಅವನು ಸಿನಿಮಾ ನೋಡಿಕೊಂಡೇ ಮನೆಗೆ ಬಂದಿದ್ದ! ಮನೆ ಬಾಗಿಲಲ್ಲಿ ಅವನ ಹೆಂಡತಿ ಪಮ್ಮಿ ಉರುಫ್ ಪ್ರಮೀಳ ಲಂಕಿಣಿ ಅವತಾರ ತಾಳಿಕೊಂಡು ನಿಂತಿದ್ದಾಳೆ! ತನಗೆ ಮದುವೆ ಆಗಿದೆ ಅಂತ ಆಗಲೇ ಅವನಿಗೆ ಜ್ಞಾಪಕ ಬಂದದ್ದು! ಹೆಂಡತಿಯಿಂದ ಸಹಸ್ರನಾಮ, ಅಷ್ಟೋತ್ತರ, ಅರ್ಚನೆಗಳನ್ನು ಮಾಡಿಸಿಕೊಂಡ ರಂಗಣ್ಣ ತೆಪ್ಪಗೆ ಊಟವೂ ಇಲ್ಲದೆ ಬಿದ್ದುಕೊಂಡ!

ಪ್ರಮೀಳ ತವರು ಮನೆಗೆ ಹೋಗಿದ್ದು, ಹದಿನೈದು ದಿನಗಳಾಗಿದ್ದವು. ರಂಗಣ್ಣ ಮರೆವಿನ ಮಾಯೆಗೆ ಸಿಲುಕಿ ತನಗೆ ಮದುವೆಯಾಗಿರುವುದನ್ನೇ ಮರೆತು ನೆಮ್ಮದಿಯಾಗಿದ್ದ! ಅತ್ತ ಪ್ರಮೀಳೆ ಗಂಡನ ಫೋನಿಗಾಗಿ ಕಾದು ಕಾದು ಬಸವಳಿದು ಹೋದಳು. ಊಟ ತಿಂಡಿ ರುಚಿಸಲಿಲ್ಲ, ತಾನೇ ಫೋನ್ ಮಾಡಲು ಏನೋ ಬಿಗುಮಾನ! ಇವರ್‍ಯಾಕೆ ಹೀಗೆ ಮಾಡ್ತಿದಾರೆ, ನೋಡೇ ಬಿಡೋಣ ಎಂದು ಒಂದು ದಿನ ಇದ್ದಕ್ಕಿದ್ದಂತೆ ವಾಪಸ್ಸು ಬಂದಳು. ಅವಳ ಬಳಿ ಮನೆ ಬೀಗದ ಕೈ ಇರಲಿಲ್ಲ, ಸೀದಾ ರಂಗಣ್ಣನ ಆಫೀಸಿಗೆ ಹೋದಳು. ತನ್ನನ್ನು ನೋಡಿದೊಡನೆ ಅರಳಬಹುದಾದ ಗಂಡನ ಮುಖ ನೆನೆಸಿಕೊಂಡೇ ಅವಳು ರಂಗೇರಿದ್ದಳು. ಆದರೇನು? ರಂಗಣ್ಣನಿಗೆ ಆಫೀಸಿಗೆ ಬಂದ ಹೆಂಡತಿಯ ಗುರುತು ಹತ್ತಲಿಲ್ಲ!

ತನ್ನತ್ತಲೇ ಬರುತ್ತಿರುವ ಸೊಬಗಿ ಯಾರೆಂದು ತಿಳಿಯದೆ ಕಂಗಾಲಾದ ರಂಗಣ್ಣ, ಹೇಗೆ ಮಾತಾಡಬೇಕೆಂದು ಅರಿಯದೆ ತೊಳಲಾಡಿದ. ಕೊನೆಗೆ ಧೈರ್ಯ ಮಾಡಿ, ತಾವು ಯಾರು? ಏನು ಬೇಕಾಗಿತ್ತು? ಅಂತ ಅತ್ಯಂತ ವಿನಯದಿಂದ ಮಾತನಾಡಿಸಿದ.

ಅಯ್ಯೋಽಽ, ಹದಿನೈದು ದಿನ ತವರಿಗೆ ಹೋದ್ರೆ ನಾನ್ಯಾರು ಅಂತೀರಲ್ಲ! ಇನ್ನೇನು ಗತಿ! ರ್ರೀಽಽ.. ನಾನು ಪಮ್ಮಿ, ನಿಮ್ಮ ಹೆಂಡತಿ, ಮೊದಲು ಮನೆ ಬೀಗದ ಕೈ ಕೊಡಿ. ಮನೆಗೆ ಬನ್ನಿ ಆಮೇಲೆ ನೋಡ್ಕೊತೀನಿ ಒಂದು ಕೈ ಎಂದು ಅವಳು ಗದರಿಕೊಂಡಳು.

ಆಂ, ನೀನು ನನ್ನ ಹೆಂಡತೀನಾ? ಹೌದಲ್ವಾ, ಅದಕ್ಕೇ ಎಲ್ಲೋ ನೋಡಿದೀನಲ್ಲಾ? ಯಾರಿರ್‍ಬೋದು ಅಂದ್ಕೋತಿದ್ದೆ. ನೀನು ನನ್ನ ಹೆಂಡ್ತೀನೇ ತಾನೇ, ಎನ್ನುತ್ತಾ ಅವನು ಬೀಗದ ಕೈಯನ್ನು ಹೆಂಡತಿಯ ಕೈಯ್ಯಲ್ಲಿ ಕೊಟ್ಟ.

ಪಮ್ಮಿ, ಎಲ್ಲಾ ಬಿಟ್ಟು ನಿಮ್ಮಂತಹವರನ್ನು ಮದುವೆ ಆದ್ನಲ್ಲ, ನನ್ನ ಕರ್ಮ ಎಂದು ತಲೆ ಚಚ್ಚಿಕೊಂಡಳು. ಹದಿನೈದು ದಿನ ತವರು ಮನೆಗೆ ಹೋದರೆ ನೀನ್ಯಾರು ಅಂತೀರಲ್ಲ? ನಿಮಗೆ ಬೇರೆ ಇನ್ಯಾರದೋ ಮಿಟಕಲಾಡಿ ಸಹವಾಸ ಇರ್‍ಬೇಕು ಎಂದು ಹೇಳುತ್ತಿದ್ದಂತೆ ಪಮ್ಮಿಯ ಕಣ್ಣಿಗಳಿಂದ ಗಂಗಾ ಭವಾನಿಯ ಪ್ರವಾಹ ಹರಿಯತೊಡಗಿತು. ಇಷ್ಟಾದರೂ ರಂಗಣ್ಣ ಏನೂ ಅರ್ಥವಾಗದವನಂತೆ ಪಿಳಿಪಿಳಿ ಕಣ್ಣು ಬಿಡುತ್ತಾ ನಿಂತಿದ್ದ!

ಮಾಡೋದೆಲ್ಲಾ ಮಾಡ್ಬಿಟ್ಟು ಹೇಗೆ ಮಳ್ಳಿ ಹಾಗೆ ನಿಂತಿದಾರೆ ನೋಡ್ರೀ? ಎಂದು ರಂಗಣ್ಣನ ಪಕ್ಕದ ಟೇಬಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಂದರೂ ಬಳಿ ಹೇಳಿದಳು.

ಆಗ ಪಮ್ಮಿಯ, ಅಲ್ಲ, ರಂಗಣ್ಣನ ನೆರವಿಗೆ ಬಂದವನು ಸುಂದರೂ. ಪಾಪ, ಎಷ್ಟೆಂದರೂ ಗೆಳೆಯ ಅಲ್ವೇ?

ಪ್ರಮೀಳ ಅವರೆ, ಇದರಲ್ಲಿ ಅವನ ತಪ್ಪೇನೂ ಇಲ್ಲ ಎಂದು ಅವಳಿಗೆ ವಿಷಯ ತಿಳಿಸಿ, ಅವನು ಒಳ್ಳೆಯವನೆ. ಘಜ಼ಿನಿ ಸಿನಿಮಾದಲ್ಲಿ ಅಮೀರ್ ಖಾನ್ ಮರೆವಿನ ರೋಗಕ್ಕೆ ತುತ್ತಾದ ಹಾಗೆ ನಮ್ಮ



ರಂಗಣ್ಣ ಕೂಡ. ಮಧ್ಯೆ ಮಧ್ಯೆ ಮರೆವು ಕಾಡೋದರಿಂದ ಹೀಗಾಡ್ತಾನೆ ಅಷ್ಟೆ. ಈ ಮರೆವೊಂದು ಬಿಟ್ಟರೆ ನಮ್ಮ ರಂಗಣ್ಣ ಅಪ್ಪಟ ಚಿನ್ನದಂತೆ. ಮೋಸ, ಕಪಟ ಯಾವುದೂ ಇಲ್ಲ. ದಯವಿಟ್ಟು ಸ್ವಲ್ಪ ಅಡ್ಜಸ್ಟ್ ಮಾಡ್ಕೊಳಿ ಮೇಡಂ ಎಂದು ಬೆಂಗಳೂರಿನಲ್ಲಿ ಜನಪ್ರಿಯವಾದ ಅಡ್ಜಸ್ಟ್‌ಮೆಂಟ್ ಮಂತ್ರೋಪದೇಶ ಮಾಡಿದ.

ನನ್ನ ಕರ್ಮ, ಇಂತಹವರನ್ನು ಮದುವೆಯಾದೆ ಎಂದು ತಲೆ ಜಜ್ಜಿಕೊಂಡಿದ್ದೇ ಸೀದಾ ಮನೆಗೆ ಹೋದಳು ಪಮ್ಮಿ.

ಒಮ್ಮೆ ಪಮ್ಮಿ ಗೆಳತಿಯೊಂದಿಗೆ ಸಿನಿಮಾ ನೋಡಲು ಹೋಗಿದ್ದಳು. ಪಮ್ಮಿ ತಾನು ಸಿನಿಮಾಗೆ ಹೋಗುವ ವಿಷಯ ರಂಗಣ್ಣನಿಗೆ ತಿಳಿಸಿದ್ದಳು. ಆದರೆ, ಪಾಪ, ರಂಗಣ್ಣನಿಗೆ ಮರೆವಾಗಿ ಕಾಡುವ ಮಾಯೆ ಮುಸುಕು ಹಾಕಿದ್ದಳು. ಹೆಂಡತಿ ಅದೇ ಸಿನಿಮಾಕ್ಕೆ ಹೋಗುವ ವಿಷಯ ಮರೆತು, ಅದೇ ಶೋಗೆ ಗ್ರಹಚಾರವಶಾತ್ ರಂಗಣ್ಣ ಸಹ ಮಧ್ಯಾಹ್ನ ಅರ್ಧ ರಜೆ ಹಾಕಿ ಸಹೋದ್ಯೋಗಿಯೊಂದಿಗೆ ಸಿನಿಮಾಗೆ ಬಂದಿರಬೇಕೇ?

ಪಮ್ಮಿಯ ಗೆಳತಿಗೆ ರಂಗಣ್ಣನ ವಿಷಯ ಗೊತ್ತು. ಪಮ್ಮಿಯೇ ಅವಳೊಂದಿಗೆ ಅಳುತ್ತಾ ವಿಷಯ ತಿಳಿಸಿದ್ದಳು ಅನ್ನಿ. ಅವಳು ಪಮ್ಮಿಗೆ, ನೀನು ಗಂಡನ ಜೊತೆ ಮಾತಾಡಬೇಡ. ಸುಮ್ಮನೆ ತಮಾಷೆ ನೋಡು ಎಂದು ಹೇಳಿ, ರಂಗಣ್ಣನ ಬಳಿ ಬಂದಳು. ಹಲೋ, ಮಿಸ್ಟರ್ ರಂಗನಾಥ್, ಹೇಗಿದೀರಾ? ಎಂದಾಗ ರಂಗಣ್ಣ ಕಕ್ಕಾಬಿಕ್ಕಿ.

ಅರೆ, ನಿಮಗೆ ನನ್ ಗುರುತು ಸಿಗಲಿಲ್ಲ ಅಂತ ಕಾಣತ್ತೆ. ನಾನು, ನಿಮ್ಮ ಪಕ್ಕದ ಮನೇಲಿ ಇದೀನಿ. ನನ್ನ ತಂಗಿ ಜೊತೆ ಸಿನಿಮಾಗೆ ಬಂದಿದ್ದೆ. ಇವಳೇ ನನ್ನ ತಂಗಿ, ಪ್ರಮೀಳ ಅಂತ.

ರಂಗಣ್ಣ ಪಮ್ಮಿಯತ್ತ ನೋಡಿದ. ಎಲ್ಲೋ ನೋಡಿದೀನಿ ಅನ್ನಿಸಿತು. ಆದರೆ ಎಲ್ಲೆಂದು ಆ ಕ್ಷಣ ಹೊಳೆಯಲಿಲ್ಲ.

ನಿಮ್ಮ ಪರಿಚಯ ಆದದ್ದು ಸಂತೋಷ. ನೀವು ಯಾವ ಊರಿನಲ್ಲಿದೀರಾ? ಯಾವಾಗ ಅಕ್ಕನ ಮನೆಗೆ ಬಂದಿರಿ? ಎಂದು ಅತ್ಯಂತ ವಿನಯವಾಗಿ ಕೇಳಿದ. ಹೆಂಡತಿ ಮೇಲೆ ಎಷ್ಟು ಜೋರು ಹೊಡೆದ್ರೂ, ಬೇರೆ ಹೆಂಗಸರನ್ನ ಇಂಪ್ರೆಸ್ ಮಾಡಕ್ಕೆ ತೋರಿಕೆಯ ನಯವಿನಯ ತೋರಬೇಕೆಂಬುದು ಎಲ್ಲ ಗಂಡಸರಂತೆ ರಂಗಣ್ಣನಿಗೂ ತಿಳಿದಿದೆ.

ಪಮ್ಮಿಗೂ ಅವನನ್ನು ಆಟ ಆಡಿಸಬೇಕು ಎನ್ನಿಸಿತು. ನಾನು ಬಂದು ಒಂದು ವಾರವಾಯಿತು ಎಂದಳು.

ನಮ್ ಮನೆಗೆ ಬನ್ನಿ. ನನ್ನ ಹೆಂಡತಿ ಒಬ್ಬಳೇ ಬೇಜಾರು, ಹೊತ್ ಹೋಗಲ್ಲಾಂತ ಸದಾ ಗೊಣಗ್ತಾಳೆ. ನಿಮ್ಮಂತಹವರ ಪರಿಚಯ ಆಗಲಿ ಅವಳಿಗೆ. ನೀವು ಬಂದರೆ ನನಗೂ ಸಂತೋಷ ಆಗತ್ತೆ ಎಂದ.



ಎಲಾ ಇವರಾ? ಎಂದುಕೊಂಡ ಪಮ್ಮಿ, ರೀ, ನಾನು ನಿಮ್ಮ ಹೆಂಡತಿ ಪಮ್ಮಿ. ನನ್ ಕರ್ಮ, ನಿಮಗೆ ಅಷ್ಟೂ ತಿಳಿಯಲ್ವಾ? ಏನ್ರೀ, ನಿಮ್ಮ ಹೆಂಡತಿ ಸದಾ ಗೊಣಗ್ತಾಳಾ? ನಾನು ಬಂದರೆ ನಿಮಗೆ ಸಂತೋಷ ಆಗತ್ತಾ? ನಡೀರಿ ಮನೆಗೆ ಎಂದು ಗದರಿಕೊಂಡಳು.

ಆಂ, ನೀನು ನನ್ನ ಹೆಂಡ್ತೀನಾ? ಮೊದಲೇ ಯಾಕೆ ಹೇಳಲಿಲ್ಲ? ರಂಗಣ್ಣ ಜರ್ಬಾಗಿ ಕೇಳಿದ.

ಎಷ್ಟೆಂದರೂ ಹೆಂಡತಿಯಲ್ಲವೇ? ತಪ್ಪು ತನ್ನದೇ ಆದರೂ ಹೆಂಡತಿಯ ಮುಂದೆ ತೋರಿಸಿಕೊಳ್ಳಬಾರದಲ್ಲವೆ? ಆದರೂ ಮನೆಗೆ ಹೋದಮೇಲೆ ನಡೆದ ದ್ವಂದ್ವ ಯುದ್ಧದ ರಸಮಯ ಸನ್ನಿವೇಶವನ್ನು ನೀವೇ ಊಹಿಸಿಕೊಂಡು ಆನಂದಿಸಿ.

ಒಮ್ಮೆ ಪಮ್ಮಿ ಶಾಪಿಂಗ್‌ಗೆಂದು ಹೋಗಿದ್ದಳು. ಅವಳ ತಂದೆ-ತಾಯಿ ಮಗಳ ಮನೆಗೆ ಆಗಲೇ ಬರಬೇಕೇ? ರಂಗಣ್ಣ ಅವರನ್ನು ಅತ್ಯಂತ ಸೌಜನ್ಯದಿಂದ ಬರಮಾಡಿಕೊಂಡ. ಕೂತ್ಕೊಳ್ಳಿ. ತಾವು ಯಾರನ್ನು ಕಾಣಲು ಬಂದಿರಿ? ಏನಾಗಬೇಕಿತ್ತು? ಎಂದು ವಿಚಾರಿಸಿದ.

ಪಮ್ಮಿಯ ತಂದೆ-ತಾಯಿ ದಂಗುಬಡಿದವರಂತೆ ಕುಳಿತರು. ಇದೇನು ಅಳಿಯಂದಿರು ಹೀಗೆ ಕೇಳ್ತಿದಾರೆ? ಎಂದುಕೊಳ್ಳುತ್ತ, ರಂಗಣ್ಣನ ಮಾವ, ಇದೇನು ಅಳಿಯಂದಿರೇ? ತಮಾಷೆ ಮಾಡ್ತಿದೀರಾ? ನಾವು ಪಮ್ಮಿಯ ತಂದೆ-ತಾಯಿ. ಅವಳನ್ನು ನೋಡಿಕೊಂಡು ಹೋಗೋಣಾಂತ ಬಂದೆವು ಎಂದರು.

ಪಮ್ಮಿ? ಓ... ಗೊತ್ತಾಯ್ತು, ನೀವು ಪಮ್ಮಿ ತಂದೆ-ತಾಯಿನಾ? ಸರಿ ಸರಿ, ಅರ್ಥ ಆಯ್ತು ಎಂದು ಅರ್ಥವಾಗದಿದ್ದರೂ ದೇಶಾವರಿ ನಗೆ ಬೀರಿದ.

ಪಮ್ಮಿ ಎಲ್ಲಿ? ಕಾಣ್ತಾ ಇಲ್ವಲ್ಲಾ?

ರಂಗಣ್ಣನ ಬಾಯಿಂದ ಇನ್ನಾವ ಮಾತಿನ ಮುತ್ತು ಉದುರಿ ಆಭಾಸ ಆಗುತ್ತಿತ್ತೋ ಅಷ್ಟರಲ್ಲಿ ಪಮ್ಮಿ ಬಂದಳು. ಹೆಂಡತಿಯನ್ನು ನೋಡಿ ರಂಗಣ್ಣನಿಗೆ ಜ್ಞಾನೋದಯವಾಯಿತು, ನಿಟ್ಟುಸಿರು ಬಿಟ್ಟ.

ಈ ವೇಳೆಗೆ ಗಂಡ ಮರೆವು ಅಂತ ಪರದಾಡ್ತಾನೆ, ಸ್ವಲ್ಪ ಭೋಳೆ ಸ್ವಭಾವದವ, ಒಳ್ಳೆಯವನು ಎಂದು ತಿಳಿದುಕೊಂಡಿದ್ದ ಪಮ್ಮಿ, ಮರೆವಿನ ರೋಗದ ಲಾಭವನ್ನು ಚೆನ್ನಾಗಿಯೇ ಪಡೆದುಕೊಳ್ಳಲು ಕಲಿತಿದ್ದಳು ಅನ್ನಿ. ಹಾಗೆ ಮಾಡದಿರಲು ಅವಳೇನು ದಡ್ಡಿಯೇ?

## ಕೊಟ್ಟಿದ್ದು

ಭಗವಂತ ನಮಗೆ ಕೊಟ್ಟಿರುವುದು
ಎರಡು ಕಣ್ಣುಗಳನು
ಎರಡು ಕಿವಿಗಳನು
ಎರಡು ಮೂಗಿನ ಹೊಳ್ಳೆಗಳನು
ಎರಡು ಕೈಗಳನ್ನು
ಎರಡು ಕಾಲುಗಳನು
ಆದರೆ ಕೊಟ್ಟಿರುವುದು
ಒಂದೇ ಹೃದಯವನು
ಅದೇಕೆಂದು ಗೊತ್ತೇ
ಕಾಲ ಬಂದಾಗ ಕೊಡುವನು
ನಮಗೆ ಮ್ಯಾಚ್ ಮಾಡಿ
ಇನ್ನೊಂದನು

**– ಸುಕೇಶವ**



# ಸ್ವರ್ಗದಲ್ಲಿ ಚುನಾವಣೆ

**- ಪಾಲಹಳ್ಳಿ ವಿಶ್ವನಾಥ್**

ಇಂದ್ರ ಪದವಿ ಶಾಶ್ವತವೇನಲ್ಲ, ಪುಣ್ಯ ಮಾಡಿದವರು ಇಂದ್ರನಾಗುತ್ತಾರೆ ಎನ್ನುತ್ತಾರಲ್ಲವೆ ಋಷಿಮುನಿಗಳು! ಪುಣ್ಯ ಎಂದರೆ ಚುನಾವಣೆ ಗೆಲ್ಲಬೇಕು! ದೇವಲೋಕದಲ್ಲಿ ಐದು ವರ್ಷಗಳಿಗೊಮ್ಮೆ ಚುನಾವಣೆಯಾಗುತ್ತಂತೆ. ವರ್ಷ ಎಂದರೆ ಎಷ್ಟು ಎಂದು ಕೇಳಿದಿರಾ? ಅವರದ್ದು ಏನೋ ಲೆಕ್ಕ ಇರುತ್ತೆ ಬಿಡಿ. ಬ್ರಹ್ಮನ ಹತ್ತೋ ಇಪ್ಪತ್ತೋ ಮಿಣುಕು ಎಂದಿರುತ್ತದೆ. ನಮ್ಮ 5000–10000 ವರ್ಷವಿರಬಹುದು! ಆಗ ಇಬ್ಬರು ಯಾರೋ ಚುನಾವಣೆಗೆ ನಿಲ್ಲುತ್ತಾರೆ. ಕೆಲವುಬಾರಿ ಮೂವರೂ ಇರಬಹುದು. ಇವರಿಗೆ ಮತ ಹಾಕುವರು ಯಾರು? ಉಳಿದ ದೇವತೆಗಳು, ದೇವತೆಗಳದೇ ಸಂಖ್ಯೆ 33 ಕೋಟಿ ಎನ್ನುತ್ತಾರೆ. ಅದಲ್ಲದೆ ರಂಭೆ, ಊರ್ವಶಿ ಇತ್ಯಾದಿ ಅಪ್ಸರೆಯರು. ಇವೆಲ್ಲಾ ಅಲ್ಲದೆ ನಮ್ಮಲ್ಲಿ ಸ್ವರ್ಗವಾಸಿಗಳು ಎನ್ನುತ್ತೇವಲ್ಲ ಅವರೆಲ್ಲ ಅಲ್ಲಿ ಮತ ಹಾಕಬಹುದು. ಚುನಾವಣಾ ಆಯೋಗ? ಮತ್ಯಾರು? ತ್ರಿಮೂರ್ತಿಗಳು – ಬ್ರಹ್ಮ, ವಿಷ್ಣು, ಶಿವ.

> ಚುನಾವಣಾ ರಾಜಕಾರಣ ಸ್ವರ್ಗವನ್ನೂ ಸ್ವರ್ಗವಾಸಿಗಳನ್ನೂ ಬಿಡಲಾರದು

ಈಗ ಇಂದ್ರ ಪದವಿಯಲ್ಲಿರುವುದು ಹಿಂದೆ ಸುರೇಂದ್ರ ಎಂಬ ಹೆಸರಿದ್ದ ರಾಜ. ತನ್ನನ್ನು ಯಾರೂ ಈ ಬಾರಿ ವಿರೋಧಿಸುವುದಿಲ್ಲ ಎಂದು ತಿಳಿದುಕೊಂಡಿದ್ದ. ಆದರೆ ಹಿಂದಿನ ಇಂದ್ರನೊಬ್ಬ ಮತ್ತೆ ವಾಪಸ್ಸು ಬಂದಿದ್ದಾನೆ. ಅಂಥವರು ಮತ್ತೆ ಸ್ಪರ್ಧಿಸಬಾರದು ಎಂಬ ನಿಯಮವವೇನೂ ಇಲ್ಲ. ಅವನೇ ನಹುಷ. ಹಿಂದೆ ಇಂದ್ರನಾಗಿದ್ದು ಬಹಳ ಅಹಂಕಾರದಿಂದ ಇದ್ದ. ಕಡೆಯಲ್ಲಿ ಅಗಸ್ತ್ಯ ಋಷಿಗಳ ಶಾಪದಿಂದ ಹೆಬ್ಬಾವಾಗಿ ಭೂಲೋಕ ಸೇರಿದ್ದ. ಭೂಲೋಕದಲ್ಲಿ ಯುಧಿಷ್ಟಿರನು ಅವನನ್ನು ಮುಟ್ಟಿದ ಮೇಲೆ ಶಾಪ ಕಳೆದುಕೊಂಡು ಮತ್ತೆ ದೇವಲೋಕಕ್ಕೆ ವಾಪಸ್ಸು ಬಂದಿದ್ದ. ಆದರೆ ಒಂದುಬಾರಿ ಅಧಿಕಾರದ ರುಚಿ ನೋಡಿದವರು ಸುಮ್ಮನಿರುವುದು ಕಷ್ಟ ಅಲ್ಲವೇ. ಆದ್ದರಿಂದ ಈ ಬಾರಿ ಇಂದ್ರ ಪದವಿಯನ್ನು ಮತ್ತೆ ಪಡೆಯುವ ಆಕಾಂಕ್ಷೆ ಇಟ್ಟುಕೊಂಡಿದ್ದಾನೆ. ಅದಲ್ಲದೆ ಈ ಸುರೇಂದ್ರನ ಆಟೋಟೋಪ ಹೆಚ್ಚಾಗಿದೆ, ಭ್ರಷ್ಟಾಚಾರವೂ ಹೆಚ್ಚಾಗಿದೆ. ಇವನನ್ನು ಇಳಿಸಲೇ ಬೇಕು'' ಎಂದು ಎಲ್ಲೆಲ್ಲೂ ನಹುಷ ಪ್ರಚಾರ ಮಾಡುತ್ತಿದ್ದಾನೆ. ಪ್ರತಿ ಚುನಾವಣೆಯಲ್ಲೂ ಸ್ವರ್ಗದ ಮೂಲವಾಸಿಗಳಾದ ದೇವತೆಗಳೂ ಮತ್ತು ಅಪ್ಸರೆಯರೂ ಸುಮ್ಮನೆ ಕೂರುವುದಿಲ್ಲ. ಈ ಬಾರಿಯೂ ಅದಕ್ಕೆ ಅಪವಾದವೇನಿಲ್ಲ. ಅಗ್ನಿ, ವರುಣ, ವಾಯು ಯಮ ಇತ್ಯಾದಿ ಇಂದ್ರನ ಪ್ರಮುಖ ಮಂತ್ರಿವರ್ಗವಷ್ಟೆ! ಅಂದರೆ ಪ್ರತಿ ಚುನಾವಣೆಯಾದ ನಂತರ ಸೂಕ್ತ ವ್ಯಕ್ತಿಗಳನ್ನು ಆರಿಸಿ ಅವರುಗಳನ್ನು ಇಂದ್ರ ನೇಮಿಸಿ ಅಧಿಕಾರ ಕೊಟ್ಟಿರುತ್ತಾನೆ. ಆ ಪದವಿಗಳಿಗೆ ಅವರ ಹಿಂಬಾಲಕರು ಎಷ್ಟು ಎನ್ನುವುದು ಮುಖ್ಯವೇ ಹೊರತು ದಕ್ಷತೆ, ಸಾಮರ್ಥ್ಯ ಇತ್ಯಾದಿ ಅಲ್ಲ. ಆಗಾಗ್ಗೆ ಇಂದ್ರ ಅವರ ಇಲಾಖೆಗಳನ್ನು ಬದಲಾಯಿಸಲೂಬಹುದು ಮತ್ತು ತನ್ನ ಅಧಿಕಾರವನ್ನು ಮನದಟ್ಟುಮಾಡಲು ಅವಕಾಶವಿದ್ದಾಗಲೆಲ್ಲ ಬದಲಾಯಿಸುತ್ತಲೇ ಇರುತ್ತಾನೆ.



ಇದರಿಂದ ಆಗಾಗ್ಗೆ ಭೂಲೋಕದಲ್ಲಿ ಎಷ್ಟೋ ಅನಾಹುತಗಳು ನಡೆಯುತ್ತವೆ. ಕೆಲ ಸಮಯದ ಹಿಂದೆ ಇಂದ್ರ ಅಗ್ನಿಯ ಕಾರ್ಯಭಾರವನ್ನು ವರುಣನಿಗೂ ವರಣನ ಕೆಲಸವನ್ನು ಅಗ್ನಿಗೂ ಬದಲಾಯಿಸಿದ್ದ. ಅಂದರೆ ಅಂದಿನ ವರುಣ ಇಂದಿನ ಅಗ್ನಿ ಮತ್ತು ವೈಸಿ ವರ್ಸ! ಹೀಗಾಗಿ ಭೂಲೋಕದಲ್ಲಿ ಬೆಂಕಿ ಬೇಕಾದಾಗ ನೀರೂ ಮತ್ತು ನೀರು ಬೇಕಾದಾಗ ಬೆಂಕಿಯೂ ಕಾಣಿಸಿಕೊಳ್ಳಲು ಪ್ರಾರಂಭವಾಯಿತು. ಆಗಾಗ್ಗೆ ಸರೋವರಗಳಲ್ಲಿ ಬೆಂಕಿ ಹತ್ತಿಕೊಳ್ಳುವುದೂ ಸಾಮಾನ್ಯವಾಗಿದ್ದಿತು. ಈ ಇಂದ್ರ – ಅಂದರೆ ಸುರೇಂದ್ರ – ನ ಅಧಿಕಾರದಲ್ಲಿ ಮತ್ತೊಂದು ಆಭಾಸವೂ ನಡೆದಿತ್ತು. ಒಮ್ಮೆ ಸೂರ್ಯ ಚಂದ್ರರ ಇಲಾಖೆಗಳನ್ನು ಇಂದ್ರ ಬದಲಾಯಿಸಿದ. ಇದರಿಂದಾಗಿ ಭೂಲೋಕದಲ್ಲಿ ಕೆಲವು ಬಾರಿ ಇದ್ದಕ್ಕಿದ್ದ ಹಾಗೆ ರಾತ್ರಿಯಲ್ಲಿ ಸೂರ್ಯನೂ ದಿನದಲ್ಲಿ ಚಂದ್ರನೂ ಕಾಣಿಸಿಕೊಳ್ಳುತ್ತಿದ್ದರು. ಭೂನಿವಾಸಿಗಳಿಗೆ ವರ್ಷ ಯಾವುದು, ತಿಂಗಳು ಯಾವುದು ಎಂಬುದರ ಬಗ್ಗೆ ಬಹಳ ಗೊಂದಲವಾಗಿದ್ದಿತು. ಅದಲ್ಲದೆ ಸೂರ್ಯಗ್ರಹಣವೋ ಚಂದ್ರಗ್ರಹಣವೋ ಎಂಬ ಗೊಂದಲವೂ ಇರುತ್ತಿತ್ತು. ಬರೇ ಭೂನಿವಾಸಿಗಳಿಗಲ್ಲದೆ ರಾಹು ಕೇತುಗಳಿಗೂ ಯಾರನ್ನು ಗ್ರಹಣ ಮಾಡುವುದು ಎಂದು ತಿಳಿಯುತ್ತಿರಲಿಲ್ಲ (ಅದಲ್ಲದೆ ರಾಹು ಕೇತುಗಳ ಇಲಾಖೆಗಳನ್ನೂ ಇಂದ್ರ ಬದಲಾಯಿಸಿದ್ದರೆ ತೊಂದರೆ ಇರುತ್ತಿರಲಿಲ್ಲವೋ ಏನೋ!). ಇಷ್ಟೆಲ್ಲಾ ಆದರೂ ಇಂದ್ರ ದೇವತೆಗಳ ಖಜಾಂಚಿಯಾಗಿದ್ದ ಕುಬೇರನನ್ನು ಮಾತ್ರ ಸಂತೋಷದಿಂದ ಇರಿಸಿಕೊಂಡಿದ್ದ. ನರವಾಹನನಾದ ಕುಬೇರ ತನ್ನ ವಾಹನದ ಬಗ್ಗೆ ಸ್ವಲ್ಪ ಅಸಂತೋಷವನ್ನು ವ್ಯಕ್ತಪಡಿಸಿದಾಗ ''ನನ್ನ ವಾಹನಕ್ಕೆ ವಯಸ್ಸಾಗುತ್ತಿದೆ. ಅವನು ಮುದುಕನಾಗುತ್ತಿದ್ದಾನೆ, ಒಂದೆರಡು ಬಾರಿ ನನ್ನನ್ನು ಬೀಳಿಸಿದ್ದಾನೆ ಕೂಡ'' ಎಂದು ದೂರು ಹೇಳಿದ್ದ. ಇಂದ್ರ ಪ್ರತಿದಿನವೂ ಅವನಿಗೆ ಬೇರೆ ಬೇರೆ ವಾಹನವನ್ನು ಕಳಿಸಲು ಶುರುಮಾಡಿದ. ಅಂದರೆ ಪ್ರತಿದಿನವೂ ಬೇರೆ ಬೇರೆ ನವಯುವಕರು ಕುಬೇರನನ್ನು ಎತ್ತಿಕೊಂಡು ಓಡಾಡುತ್ತಿದ್ದರು. ಆದರೆ ಕುಬೇರ ''ಯುವಕರೇ ಏಕೆ, ಯುವತಿಯರನ್ನು ಏಕೆ ಕಳಿಸಬಾರದು'' ಎಂದು ಇಂದ್ರನಿಗೆ ಅರ್ಜಿಯೊಂದನ್ನು ಕಳಿಸಿದ. ಅದಕ್ಕೆ ಇಂದ್ರ 'ಖಂಡಿತ, ಆದರೆ ಚುನಾವಣೆಯಾಗಲಿ' ಎಂದು ಆಶ್ವಾಸನೆ ಕೊಟ್ಟಿದ್ದಾನೆ.

ಏನೇ ಆಗಲಿ ಇಂದ್ರನನ್ನು ಬೆಂಬಲಿಸುವುದರಲ್ಲಿ ದೇವತೆಗಳಲ್ಲಿಯೇ ಒಮ್ಮತವಿರಲಿಲ್ಲ. ಅದಲ್ಲದೆ ಮೊದಲಿಂದಲೂ ಕೆಲವು ದೇವತೆಗಳು ನಮಗೆ ಸರಿಯಾದ ಮಂತ್ರಿಪದವಿ ಸಿಗಲಿಲ್ಲವೆಂದು ಗೊಣಗುತ್ತಲೇ ಇದ್ದರು. ಮತ್ತು ಕೆಲವರು ನಮಗೆ ಮಂತ್ರಿ ಪದವಿ ಸಿಗಲೇ ಇಲ್ಲವೆಂದು ಗೊಣಗುತ್ತಿದ್ದದ್ದೂ ಇದ್ದೇ ಇತ್ತು. ಈಗಲೂ ಇದೆ. ಚುನಾವಣಾ ಸಮಯದಲ್ಲಿ ಇಂಥವರು ಆಡಳಿತ ಪಕ್ಷವನ್ನು ತ್ಯಜಿಸಿ ವಿರೋಧ ಪಕ್ಷವನ್ನು ಅಪ್ಪಿಕೊಳ್ಳುವುದು ಸಾಮಾನ್ಯ. ಅಂತೂ ಇಂದ್ರನ ಮಂತ್ರಿವರ್ಗದಲ್ಲಿ ಪುಟ್ಟ ಪುಟ್ಟ ಮಂತ್ರಿಗಳೂ ರಾತ್ರೋರಾತ್ರಿ ಗುಟ್ಟಾಗಿ ಸಭೆಗಳನ್ನು ನಡೆಸಿ ನಹುಷನನ್ನು ಸಂಧಿಸುತ್ತಿದ್ದಾರೆ ಎಂಬ ಸುದ್ದಿಗಳೂ ಬರುತ್ತಿವೆ. ಎಲ್ಲರಿಗೂ ನಹುಷ ನನ್ನ ಜೊತೆ ಬಂದರೆ ನಾನು ಗೆದ್ದ ನಂತರ ನಿಮಗೆ ಒಳ್ಳೆಯ ಪದವಿ ಕೊಡುತ್ತೇನೆ ಎಂದು ಆಶ್ವಾಸನೆ ಇತ್ತಿದ್ದಾನಂತೆ. ಅಂತೂ ಅವರೆಲ್ಲಾ ಕನಸು ಕಾಣುತ್ತಿದ್ದಾರೆ.

ಇನ್ನು ಅಪ್ಸರೆಯರ ವಿಷಯ. ಊರ್ವಶಿಗೆ ಮೊದಲಿಂದಲೂ ಈ ಇಂದ್ರನಮೇಲೆ ಕೋಪ. ತನ್ನನ್ನು ಮಂತ್ರಿ – ಅಂದರೆ ದೊಡ್ಡ ಕಾರ್ಯಭಾರ – ಮಾಡುತ್ತೇನೆ ಎಂದು ಹಿಂದಿನ ಚುನಾವಣೆಯಲ್ಲಿ ಅವಳ ವಿಶ್ವಾಸವನ್ನು ಗೆದ್ದಿದ್ದ. ಆದರೆ ಇಂದ್ರನಾದ ನಂತರ ತನ್ನ ಮಾತನ್ನು



ಉಳಿಸಿಕೊಳ್ಳಲಿಲ್ಲ. ಅದಲ್ಲದೆ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸಲು ನನ್ನನ್ನು ಏಕೆ ಕಳಿಸಲಿಲ್ಲ ಎನ್ನುವ ಹಳೆಯ ಕೋಪವೂ ಇದ್ದಿತು. ಅಂತೂ ಅವಳು ಮೊದಲು ಗುಟ್ಟಾಗಿ ನಹುಷನ ಪಕ್ಷವನ್ನು ಸೇರಿದಳು. ಅನಂತರ ಒಂದು ದಿನ ಧೈರ್ಯವಾಗಿ ಹೊರಬಂದು ನಾನು ನಹುಷನ ಪರ ಎಂದು ಹೇಳಿಕೆಯನ್ನು ಕೊಟ್ಟಳು. ಅವಳ ಜೊತೆ ನೂರಾರು ಅಪ್ಸರೆಯರು ನಹುಷನ ಪಕ್ಷವನ್ನು ಸೇರಿದ್ದಾರೆ. ''ಮುಂದಿನ ವಿದ್ವಾಂಸರಲ್ಲಿ ಘಟಾನುಘಟಿಗಳಿರುತ್ತಾರೆ. ಅವರಲ್ಲಿ ಕೆಲವರು ವಿಧ್ವಂಸಕ ಅಸ್ತ್ರಾಸ್ತ್ರಗಳನ್ನೂ ತಯಾರಿಸಬಹುದು. ಅಂಥವರ ತಪಸ್ಸನ್ನು ಮುರಿಯಲು ನಿನ್ನಂತಹವರನ್ನೇ ಕಳಿಸುತ್ತೇನೆ'' ಎಂದು ನಹುಷ ಊರ್ವಶಿಗೆ ಆಶ್ವಾಸನೆ ಕೊಟ್ಟಿದ್ದಾನೆ. ರಂಭೆ ಮತ್ತು ಕೆಲವರು ಇಂದ್ರನ ಜೊತೆಯೇ ಉಳಿದುಕೊಂಡಿದ್ದಾರೆ. ಈಗ ಮುಂದಿನ ಪ್ರಶ್ನೆ: ಸ್ವರ್ಗವಾಸಿಗಳಲ್ಲಿ ಯಾರು ಮತ ಹಾಕಬಹುದು? ಎಲ್ಲರೂ ಮತ ಹಾಕಲಾಗುವುದಿಲ್ಲ.

ಭಾರತೀಯರು ಮಾತ್ರ ಈ ಚುನಾವಣೆಯಲ್ಲಿ ಭಾಗವಹಿಸಬಹುದು ಎಂದು ಚುನಾವಣಾ ಆಯೋಗ ಆದೇಶ ಕೊಟ್ಟಿದೆಯಂತೆ. ಆದರೆ ಭಾರತೀಯರು ಯಾರು? ಆರ್ಯರನ್ನು ಇಲ್ಲಿನವರು ಎಂದು ಒಪ್ಪಬೇಕೆ? ಅವರು ಹೊರಗಿನಿಂದ ಬಂದವರೆ? ಅವರಿಗೆ ಮತದಾನದ ಹಕ್ಕಿದೆಯೇ? ಈಗಿನ ಇಂದ್ರನನ್ನು ಅನಿವಾಸಿ ಭಾರತೀಯರು ಮೆಚ್ಚುತ್ತಿದ್ದದ್ದು ಗುಟ್ಟೇನಲ್ಲ. ಆದ್ದರಿಂದ ಇಂದ್ರನ ಪಕ್ಷದವರು ಭಾರತದಲ್ಲಿ ಹುಟ್ಟಿದ್ದರೆ ಮತದಾನ ಮಾಡಬಹುದು ಎನ್ನುತ್ತಿದ್ದಾರೆ. ಆದರೆ ಅವರು ಸ್ವರ್ಗಕ್ಕೆ ಬರುವಾಗ ಅವರು ಎಲ್ಲಿದ್ದರು ಎಂಬುದು ಮುಖ್ಯ ಎಂದು ನಹುಷನ ಪಕ್ಷ ಹೇಳುತ್ತಿವೆ. ಅಂದರೆ ಸಾಮಾನ್ಯರ ಭಾಷೆಯಲ್ಲಿ ಹೇಳಬೇಕೆಂದರೆ ಅವರು ಸಾಯುವಾಗ ಎಲ್ಲಿದ್ದರು? ಭಾರತದಲ್ಲಿ ಇದ್ದರೇ? ಅಥವಾ ಅಮೆರಿಕ, ಯೂರೋಪು ಇತ್ಯಾದಿ ದೇಶಗಳಲ್ಲಿದ್ದರೇ? ಅವರು ಮೃತರಾದಾಗ ಅವರ ಬಳಿ ಯಾವ ಪಾಸ್‌ಪೋರ್ಟ್ ಇತ್ತು ಎನ್ನುವುದು ಮುಖ್ಯವೇ ಹೊರತು ಬೇರೇನೂ ಇಲ್ಲ ಎಂದು ನಹುಷನ ಪಕ್ಷದವರು ವಾದಿಸುತ್ತಿದ್ದಾರೆ. ಅಮೆರಿಕದಲ್ಲಿ ಇದ್ದ ಭಾರತೀಯ ಸ್ವರ್ಗವಾಸಿಯಾದರೆ ಅವರು ಹೇಗೆ ಭಾರತೀಯರಾಗುತ್ತಾರೆ? ಎನ್ನುತ್ತಾರೆ ನಹುಷ. ಈ ವಿಷಯದಲ್ಲಿ ಅವರು ಚುನಾವಣಾ ಆಯೋಗಕ್ಕೆ ಅರ್ಜಿ ಕೊಟ್ಟಾಗ ಆಯೋಗ ಪ್ರತಿ ವಿಷಯಕ್ಕೂ ನಮ್ಮ ಹತ್ತಿರ ಬರಬೇಡಿ. ಅದಲ್ಲದೆ ಎಲ್ಲಾ ಸಮಸ್ಯೆಗಳನ್ನೂ ಒಟ್ಟಿಗೆ ತಂದುಕೊಡಿ'' ಎಂದು ಹೇಳಿದೆ.

ಈಗ ಸ್ವರ್ಗದಲ್ಲಿ ಭಾರತೀಯರು ಯಾರು ಎಂಬ ಸಮಸ್ಯೆಗೆ ಹೇಗಾದರೂ ಉತ್ತರ ಸಿಕ್ಕರೂ ಮತ್ತೊಂದು ದೊಡ್ಡ ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಸ್ವರ್ಗ ತುಂಬಿ ಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. (ಪ್ರಾಣಿಗಳೂ ಅಲ್ಲಿ ಬಂದಿವೆ. ಆದರೆ ಆ ವಿಷಯ ನಮಗೆ ಈಗ ಬೇಡ) ಒಟ್ಟಿನಲ್ಲಿ ಅಗಾಧ ಸಂಖ್ಯೆ! ಮತಗಣಿಕೆ ಯಂತ್ರಗಳೂ ಸುಸ್ತಾಗಿ ಬಿಡಬಹುದಲ್ಲವೆ? ಎಣಿಕೆಗೇ ವಿಪರೀತ ಸಮಯವಾಗಿಬಿಡುವುದಿಲ್ಲವೆ. ಈಗ ರಾಮ, ಕೃಷ್ಣ, ಬುದ್ಧ ಅಂತಹವರೆಲ್ಲ ಸ್ವರ್ಗದಲ್ಲಿ ಇದ್ದಾರೆ. ಅವರಿಗೆಲ್ಲಾ ಈ ರಾಜಕೀಯ ಬೇಡ. ಅವರು ಮತಗಟ್ಟೆಗೆ ಬರದಿರಬಹುದು ಕೂಡ. ಆದರೆ ಪ್ರಶ್ನೆ ಇರುವುದು ಆ ಕಾಲದವರನ್ನು ಎಣಿಕೆ ಮಾಡಬಹುದೇ? ಅಥವಾ ಇಲ್ಲವೆ? ಎರಡು ಪಕ್ಷದವರೂ ಕುಳಿತು ಬಹಳ ಚರ್ಚೆಗಳ ನಂತರ ಭಾರತ ಸ್ವತಂತ್ರವಾದಾಗಿನಿಂದ ಯಾರು ಸ್ವರ್ಗಕ್ಕೆ ಬಂದಿದ್ದಾರೋ ಅವರಿಗೆ ಮಾತ್ರ ಮತದಾನದ ಹಕ್ಕು ಎಂದು ನಿರ್ಣಯಕ್ಕೆ ಬಂದರು. ಆದರೆ ಇತರ ಸ್ವರ್ಗವಾಸಿಗಳು ಸುಮ್ಮನಿರುತ್ತಾರೆಯೆ? ಭಾರತ ಎಂದರೆ ಏನು? ಯಾರೋ ಹೊರಗಿನವರು ಬಂದು ನಕ್ಷೆಯಲ್ಲಿ ಇಲ್ಲಿ ಇಲ್ಲಿ ರೇಖೆಗಳನ್ನು ಎಳೆದುಬಿಟ್ಟರೆ ಆಯಿತೇ. ಈ ನಿರ್ಣಯ ಅಸಿಂಧು ಎಂದು ಗಲಾಟೆ ಮಾಡುತ್ತಿದ್ದಾರೆ. ನಾವೇ ಚುನಾವಣಾ ಆಯೋಗಕ್ಕೆ ಅರ್ಜಿ ಕೊಡುತ್ತೇವೆ ಎಂದು



ಪ್ರತಿಭಟಿಸುತ್ತಿದ್ದಾರೆ.

ಇಂದ್ರನ ಕೈಲಿ ಈಗ ಅಧಿಕಾರವಿದೆ. ಅದನ್ನು ಅವನು ಚುನಾವಣೆಯಲ್ಲಿ ದುರುಪಯೋಗಿಸುತ್ತಾನೆ ಎಂದು ನಹುಷನ ಕಡೆಯವರ ಆರೋಪ. ಸ್ವರ್ಗವಾಸಿಗಳ ಆಸೆಯೇನು ಎಂದು ಇಂದ್ರನ ಪಕ್ಷದವರು ಗುಟ್ಟಾಗಿ ವಿಚಾರಿಸಿದಾಗ ಅನೇಕ ಸ್ವರ್ಗವಾಸಿಗಳು ಭೂಲೋಕದಲ್ಲಿರುವ ನಮ್ಮವರಿಗೆ ಮನೆಗಳನ್ನು ತೆಗೆದುಕೊಡಿ ಎಂದು ಕೇಳಿದ್ದರಂತೆ. ಅದಕ್ಕೆ ಇಂದ್ರ ಒಂದು ಯೋಜನೆಯನ್ನು ಪ್ರಾರಂಭಿಸಿ ಅದಕ್ಕೆ 'ಗೃಹ ಭಾಗ್ಯ' ಎಂದು ನಾಮಕರಣ ಮಾಡಿದ. ಆದರೆ ಆ ವಿಷಯ ತಿಳಿದ ತಕ್ಷಣ ಭಾಗ್ಯ ಎಂಬ ಹೆಸರಿದ್ದ ಮಹಿಳೆಯರೆಲ್ಲಾ ಧರಣಿ ನಡೆಸಿದ್ದರಿಂದ ಆ ಹೆಸರನ್ನು ತೆಗೆದು ಹಾಕಲಾಯಿತು. ನಹುಷನ ಪಕ್ಷದವರು ಇದರ ಬಗ್ಗೆ ಚುನಾವಣಾ ಯೋಜನೆಗೆ ದೂರು ಕೊಟ್ಟಾಗ ಭಾಗ್ಯದ ಜೊತೆಗೆ ಆ ಯೋಜನೆಯೂ ಹೊರಟು ಹೋಯಿತು.

ಇದಲ್ಲದೆ ಇಂದ್ರ ಮತ್ತೊಂದು ಹೊಸ ಯೋಜನೆಯನ್ನೂ ಮೆಲುಕು ಹಾಕುತ್ತಿದ್ದಾನೆ. ನರಕವಾಸಿಗಳು ಸ್ವರ್ಗಕ್ಕೆ ಆಗಾಗ್ಗೆ ಹೋಗುವುದು ಹೊಸದೇನಲ್ಲ. ಕೆಲವರು ನರಕದಲ್ಲೇ ಒಳ್ಳೆಯ ಕೆಲಸ ಮಾಡುತ್ತಿದ್ದು ಅವರಿಗೆ ಬಡ್ತಿ ಸಿಕ್ಕಿ ಸ್ವರ್ಗವನ್ನು ಪ್ರವೇಶಿಸುತ್ತಾರೆ. ಕೆಲವರು ನರಕದ ಜೀವನದಿಂದ ಬೇಸತ್ತು ಹೇಗೋ ಸ್ವರ್ಗಕ್ಕೆ ಬಂದುಬಿಡುತ್ತಾರೆ. ಅಂತಹವರೆಲ್ಲ ತನಗೆ ಮತ ಹಾಕುವುದಿಲ್ಲ ಎಂದು ಇಂದ್ರನಿಗೆ ಗೊತ್ತು. ಆದ್ದರಿಂದ ಅವರನ್ನು ತಡೆಯಲು ಸ್ವರ್ಗ ಮತ್ತು ನರಕಗಳ ಮಧ್ಯೆ ಒಂದು ಬಹು ಎತ್ತರದ ಗೋಡೆಯನ್ನು ಕಟ್ಟುತ್ತೇನೆ ಎಂದು ಪ್ರಚಾರ ಮಾಡುತ್ತಿದ್ದಾನೆ. ಕೆಲವು ಸ್ವರ್ಗವಾಸಿಗಳು ಇದನ್ನು ಸ್ವಾಗತಿಸಿದರೂ ಈ ಯೋಜನೆಗೆ ವಿರೋಧವೂ ಇದೆ. ಇಂದ್ರ ಮತ್ತು ನಹುಷ ಇಬ್ಬರೂ ತಮ್ಮ ತಮ್ಮ ಕಡೆಯವರನ್ನು ಕಾಪಾಡಿಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಭೂಲೋಕದಲ್ಲಿ ಹುಟ್ಟಿಕೊಂಡಿರುವ, ಅಮರಾವತಿಯನ್ನೂ ಮೀರಿಸುವ, ಕೆಲವು ವಿಶ್ರಾಮಧಾಮಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ಹೀಗಿರುವಾಗ ನಹುಷನ ಪಕ್ಷದವರು ಚುನಾವಣಾ ಆಯೋಗದ ಬಗ್ಗೆಯೇ ಆಕ್ಷೇಪಣೆಗಳನ್ನು ತಂದರು. ಇಂದ್ರನ ಪಕ್ಷದಲ್ಲಿ ಕುಬೇರನಂತಹ ಶ್ರೀಮಂತನಿರುವಾಗ ಲಕ್ಷ್ಮಿಯಂತಹ ಶ್ರೀಮಂತ ಪತ್ನಿಯನ್ನು ವಿವಾಹವಾಗಿರುವ ವಿಷ್ಣು ಅವನನ್ನು ಬೆಂಬಲಿಸದೇ ವಿಧಿಯಿಲ್ಲ. ಆದ್ದರಿಂದ ವಿಷ್ಣು ಹೇಗೆ ಪಕ್ಷಾತೀತ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲ ಎಂದು ನಹುಷನ ಪಕ್ಷದವರು ಆರೋಪಿಸಿ ಚುನಾವಣಾ ಆಯೋಗವನ್ನು ವಿಸ್ತರಿಸಬೇಕೆಂದು ಧರಣಿ ನಡೆಸಿದರು. ಅದಲ್ಲದೆ ಅಪ್ಸರೆಯರು ಆಯೋಗದಲ್ಲಿ ಮಹಿಳೆಯೊಬ್ಬಳಾದರೂ ಇರಬೇಕು ಎಂದೂ ಧರಣಿ ನಡೆಸಿದರು. ಸರಿ, ಶಿವ ಪಾರ್ವತಿ ಆಯೋಗಕ್ಕೆ ಸೇರಲಿ ಎಂದು ಪ್ರಸ್ತಾಪಿಸಿದ. ಅದಕ್ಕೆ ವಿಷ್ಣು ಪಾರ್ವತಿ ಬಂದರೆ ಲಕ್ಷ್ಮಿಯೂ ಬರಲೇಬೇಕು ಎಂದ. ಇವೆಲ್ಲವನ್ನೂ ಸಾವಧಾನದಿಂದ ನೋಡುತ್ತಿದ್ದ ಬ್ರಹ್ಮ ಸುಮ್ಮನಿದ್ದರೂ ಸರಸ್ವತಿ ದೇವಿ ಸುಮ್ಮನೆ ಕೂರಲಿಲ್ಲ. ಅವರಿಬ್ಬರು ಮಾತ್ರ ಏಕೆ? ನಾನೂ ಇರಬೇಕು ಎಂದು ಪ್ರತಿಭಟಿಸಿದಾಗ ಅವಳನ್ನೂ ಸೇರಿಸಲಾಯಿತು. ಅಂತೂ ಈಗ ಚುನಾವಣೆ ಆಯೋಗದಲ್ಲಿ 6 ಸದಸ್ಯರು: ಬ್ರಹ್ಮ, ವಿಷ್ಣು, ಶಿವ, ಶಾರದೆ, ಲಕ್ಷ್ಮಿ ಮತ್ತು ಪಾರ್ವತಿ. ಆದರೆ ಇದು ಸಮಸಂಖ್ಯೆ ಆಯಿತಲ್ಲವೆ! ಇದನ್ನು ಸರಿಪಡಿಸಲು ಮತ್ತೊಬ್ಬ ವ್ಯಕ್ತಿ ಬೇಕಲ್ಲವೆ? ಸ್ವರ್ಗವಾಸಿಗಳಲ್ಲಿಯೇ ಖ್ಯಾತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಸೂಚನೆ ಇದೆ.



ಈ ಚುನಾವಣೆ ಎಂದು? ಇದರ ಪರಿಣಾಮವೇನು? ಆತುರ ಬೇಡ! ಅಲ್ಲಿಗೆ ಹೋದಾಗ ಎಲ್ಲವೂ ತಿಳಿಯುತ್ತದೆ. ಮತದಾನದಲ್ಲಿ ನೀವೂ ಭಾಗವಹಿಸುವರಂತೆ!

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

ಮೂರ್ತಿ ಕನ್ನಡದ ಅತ್ಯಂತ ಪ್ರಸಿದ್ಧ ವ್ಯಂಗ್ಯಚಿತ್ರಕಾರರು. ಅವರು ತಮ್ಮ ರಭಸದ ಮತ್ತು ದಪ್ಪಗಿನ ಬ್ರಷ್ ಸ್ಟ್ರೋಕ್ಸ್‌ಗಳಿಂದಲೇ ಒಬ್ಬ ಅಸಮಾನ್ಯ ಕಾರ್ಟೂನಿಸ್ಟ್ ಎನಿಸಿ ಕೊಂಡಿದ್ದರು. ಆದರೆ ಕಾಲ ಕ್ರಮೇಣ ತೀರಾ ತೆಳ್ಳಗಿನ ಗೆರೆಗಳೊಂದಿಗೆ ಶೈಲಿ ಬದಲಾಯಿಸಿಕೊಂಡದ್ದು ಅವರ ಅಭಿಮಾನಿಗಳಿಗಂತೂ ಭಾರಿ ನಿರಾಸೆಯಾಗಿತ್ತು. ಮೂರ್ತಿ ಅವರು 'ಬ್ಯಾಕ್ ಟು ಬೇಸಿಕ್'ಗೆ ಹೋಗಿದ್ದರು! ಅಂದರೆ ಆರಂಭಿಕ ಹಂತದಲ್ಲಿರುವಾಗ ನಿಬ್ ಬಳಸಿಕೊಂಡು ರಚಿಸುತ್ತಿದ್ದ ತೆಳ್ಳಗಿನ ಗೆರೆಗಳೇ ಅವರ ಶೈಲಿಯಾಗಿತ್ತು ಎಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಆರ್.ಕೆ.ಲಕ್ಷ್ಮಣ್ ಅವರಂತೆ ಮೂರ್ತಿ ಒಂದೇ ಶೈಲಿಗೆ ಅಂಟಿಕೊಂಡವರಲ್ಲ.



1965





1967



1975



1975




1985



# ಯಾರಾರಾ ಹೆಂಡ್ತೀನ್ನ ದತ್ತಕ್ಕ ತೊಗೊತಾರೇನ್?

**- ಪ್ರಶಾಂತ್ ಆಡೂರ್**

ನನ್ನ ಹೆಂಡ್ತಿಗೆ ತನ್ನ ಮಗಗ ಹೆದರಿಸಿಗೊಳ್ಳಿಕ್ಕೆ ಮಾತ ಮಾತಿಗೆ ನೀ ನಾ ಹೇಳಿದ್ದ ಕೇಳಲಿಲ್ಲಾ ಅಂದರ ನಿಂಗ ಹಂಗ ಮಾಡ್ತೇನಿ, ಹಿಂಗ ಮಾಡ್ತೇನಿ ಅಂತ ಹೆದರಸೊ ಚಟಾ ಇತ್ತ, ಹಂಗ ಅಂವಾ ಅಕಿ ಹೇಳಿದ್ದ ಯಾವದಕ್ಕೂ ಜುಪ್ ಅನಲಿಲ್ಲಾ ಅಂದರ ಲಾಸ್ಟಿಗೆ ಅಗದಿ ಬ್ರಹ್ಮಾಸ್ತ್ರ ಅನ್ನೋರಗತೆ ಹಿಂಗ ನೀ ನಾ ಹೇಳಿದ್ದ ಮಾತ ಕೇಳಲಿಲ್ಲಾ ಅಂದರ ನಿಂಗ ಯಾರಿಗರ ದತ್ತಕ್ಕ್ ಕೊಟ್ಟ ಬಿಡ್ತೇನಿ ನೋಡ ಅಂತ ದಮ್ ಕೊಡ್ತಿದ್ದಳು.

ಮಕ್ಕಳನ್ನು ದತ್ತು
ತಗೋಬಹುದು ಆದರೆ
ಹೆಂಡ್ತೀನ.......

ಅಲ್ಲಾ ಹಂಗ ಮೊದ್ಲ ಅಕಿ ಸಾಲ್ಯಾಗಿನ ಟೀಚರ್ ಹೆಸರ ತೊಗೊಂಡ ಮಾತ ಮಾತಿಗೆ ನೀ ಹೇಳಿದ್ದ ಮಾತ ಕೇಳಲಿಲ್ಲಾ ಅಂದರ ಆ ಟೀಚರಗೆ ಹೇಳ್ತೇನಿ ಅಂತ ದಮ್ಮ್ ಕೊಡ್ತಿದ್ದಳು. ನಾ ಅದನ್ನ ಕೇಳಿ ಕೇಳಿ ಒಂದ ದಿವಸ ತಲಿ ಕೆಟ್ಟ ಸುಮ್ಮನ್ನ ನಾ ಆ ಟೀಚರನ ಕರಕೊಂಡ ಬಂದ ಮನ್ಯಾಗ ಇಟಗೊತೇನಿ, ಅಂದರ ನಿನ್ನ ಮಗಾ ನೀ ಹೇಳಿದ್ದ ಮಾತು ಕೇಳ್ತಾನ, ನಿಂದ ವಟಾ ವಟಾ ಅನ್ನೋದು ತಪ್ಪತದ ಅಂತ ಅಂದಮ್ಯಾಲೆ ಅದನ್ನ ಬಿಟ್ಟ ನಾ ನೀ ಹೇಳಿದ್ದ ಮಾತ ಕೇಳಲಿಲ್ಲಾ ಅಂದರ ನಿನ್ನ ದತ್ತಕ್ಕ್ ಕೊಟ್ಟ ಬಿಡ್ತೇನಿ ಅಂತ ಮಗನ್ನ ಹೆದರಸಲಿಕ್ಕೆ ಶುರು ಮಾಡಿದ್ದಳು. ಪಾಪ ನನ್ನ ಮಗಾ ದತ್ತಕ್ಕ್ ಹೋಗೊದು ಅಂದರ ಒಂಥರಾ ಲಗ್ನಾ ಮಾಡ್ಕೊಂಡ ಹೆಂಡ್ತಿಮನಿಗೆ ಹೊದಂಗ ಅಂತ ತಿಳ್ಕೊಂಡಿದ್ನೊ ಏನೊ ಹಿಂಗಾಗಿ ಅಕಿ ಹಂಗ ಅಂದಾಗೊಮ್ಮೆ ಸುಮ್ಮನ ಬಾಯಿ ಮುಚಗೊಂಡ ಅಕಿ ಹೇಳಿದ ಮಾತ ಕೇಳ್ತಿದ್ದಾ.

ನಾ ಅವಂಗ ಸುಮ್ಮನ ದತ್ತಕ್ಕ್ ಹೋಗಿ ಬಿಡ್ಲೇ, ಹೂಂ ಅನ್ನ ನಿಮ್ಮವ್ವ ಹಂಗ ಅಂದಾಗ, ಅಕಿ ಕಾಟರ ತಪ್ಪತದ, ನೀನರ ಒಬ್ಬೊಂವ ಸುಖವಾಗಿರ ಮಗನ ಅಂತ ನಾ ಎಷ್ಟ ಹೇಳಿದರು ಅಂವಾ ಏನ ನನ್ನ ಮಾತ ಕೇಳ್ತಿದ್ದಿಲ್ಲಾ. ಹಂಗ ಅವಂಗೂ ನನ್ನಂಗ ಅಕಿ ಸಮ್ಮಂದ ಸಾಕ ಸಾಕಾಗಿತ್ತ ಆ ಮಾತ ಬ್ಯಾರೆ, ಒಮ್ಮೊಮ್ಮೆ ಅಕಿ ನನಗ ಜೋರ ಮಾಡೋದ ನೋಡಿ ನೋಡಿ ತಡಕೊಳ್ಳಿಕ್ಕೆ ಆಗದ ಪಪ್ಪಾ, ಯಾರರ ಹೆಂಡ್ತಿನ್ನ ದತ್ತಕ್ಕ್ ತೊಗೊತಾರೇನ್ ಅಂತ ಕೇಳಿ ಅಮ್ಮಾನ ಯಾಕ ಕೊಟ್ಟ ನೀ ದತ್ತಕ್ಕ ಬಿಡಬಾರದ, ನೀನು ಇಷ್ಟ ಅನಿಸಿಗೊಂಡ ಹೆಂಗ ಜೀವನಾ ಮಾಡ್ತೀಯೊ ಏನೋ ಮಾರಾಯಾ ಅಂತ ನನಗ ಅಂದ ಬಿಟ್ಟಾ.

ಹಂಗ ಒಮ್ಮೆ ಅಂವಾ ಹೇಳಿದ್ದ ಖರೇ ಅನಸ್ತ, ಆದರ ಆಮ್ಯಾಲೆ ನೆನಪಾತ ಹಂಗ ಇಕಿನ್ನ ದತ್ತಕ್ಕ ಕೊಟ್ಟರ ತೊಗೊಳೊರ ಭಾಳ ಮಂದಿ ಇರಬಹುದು ಆದರ ನಾ ಅಕಿನ್ನ ಬಿಟ್ಟ ಬಿಟ್ಟರ ನಂಗ ಮತ್ತೊಂದ ಹೆಂಡ್ತಿ ಸಿಗಂಗಿಲ್ಲಾ, ಏನಿಲ್ಲದ ನಮ್ಮ ಮಂದ್ಯಾಗ ಕನ್ಯಾ ಕಡಮಿ ಆಗ್ಯಾವ. ಅಲ್ಲಾ ಹಂಗ ಮಕ್ಕಳ ದೊಡ್ಡವರಾಗ್ಯಾರ ಅವಕ್ಕೇನ ತಾಯಿ ಬೇಕಂತಿಲ್ಲಾ, ಆದರ ನಂದ ಇನ್ನೂ ಹೆಂಡ್ತಿ ಬಿಟ್ಟ ಬದಕೋ ವಯಸ್ಸಾಗಿಲ್ಲಲಾ. ಇನ್ನ ನಾ ಎಲ್ಲೆ ಮತ್ತ ಯಾರಿಗರ ನಮ್ಮ ಹೆಂಡ್ತಿನ್ನ ದತ್ತಕ್ಕ್ ಕೊಡ್ತಿರೇನ ಅಂತ ಕೇಳಕೋತ ಹೋಗಲಿ ಅಂತ ಸುಮ್ಮನಾದೆ.



ಆದರ ನನ್ನ ಹೆಂಡ್ತಿ ಹಿಂಗ ಮಗಗ ಮಾತ ಮಾತಿಗೆ ನಿಂಗ ದತ್ತಕ್ಕ ಕೊಟ್ಟ ಬಿಡ್ತೇನಿ ಅನ್ನೋದರಾಗ ಒಂದ ಚೂರ ಲಾಜಿಕ್ ಇತ್ತ ಅನ್ನರಿ. ಪಾಪ ಅಕಿ ತಾ ಮಿಡ್ಲ್ ಕ್ಲಾಸ್ ಫ್ಯಾಮಿಲಿ ಒಳಗ ಹುಟ್ಟಿದ್ಲು, ಮುಂದ ಅಕಿ ಹಣೇಬರಹಕ್ಕ ಅಕಿನ್ನ ಮಿಡ್ಲ್ ಕ್ಲಾಸ್ ಫ್ಯಾಮಿಲಿ ಹುಡಗನ್ನ ಹುಡಕಿ ಕೊಟ್ಟಿದ್ದರು, ಆದರ ಯಾವಾಗ ಇಕಿಗೆ ಆಸ್ತಿ ಇಲ್ಲದ ನಾಸ್ತಿಕ ಗಂಡನ ಕಟಗೊಂಡೇನಿ, ಇನ್ನ ನನ್ನ ಜೀವನದಾಗ ಮಿರಾಕಲ್ ಸಹಿತ ಆಗೋದ ಡೌಟ ಅಂತ ಗ್ಯಾರಂಟೀ ಆತ ಆವಾಗ ಮುಂದ ಮಗಾನರ ಶ್ರೀಮಂತ ಆಗಲಿ ಅಂತ ಯಾರಿಗರ ದತ್ತಕ್ಕ ಕೊಡೊ ವಿಚಾರ ಬಂದಿತ್ತೋ ಏನೋ. ಅಲ್ಲಾ ಹಂಗ ಅಕಿಗೆ ಗ್ಯಾರಂಟಿ ಇತ್ತ ಮಗಾ ಒಮ್ಮೆ ದೊಡ್ಡ ಮನಗೆ ದತ್ತಕ್ಕ ಹೋದನಂದರ ಮುಂದ ಇಕಿಗೂ ಫಾಯದೆ ಅದ ಅಂತ ಆ ಮಾತ ಬ್ಯಾರೆ. ಹಿಂಗಾಗಿ ಮಾತ ಮಾತಿಗೆ ಮಗಗ ನಿನ್ನ ದತ್ತಕ್ಕ ಕೊಡ್ತೇನಿ ಅಂತ ದಮ್ಮ ಕೊಟ್ಟ ಕೊಟ್ಟ ತನ್ನ ಮನಸ್ಸಿಗೆ ಸಮಾಧಾನ ಮಾಡ್ಕೋತಿದ್ಲು.

ಆದರೂ ಒಮ್ಮೊಮ್ಮೆ ಇಕಿ ಹಿಂಗ ಹುಚ್ಚುಚಾಕಾರ ಮಾಡೋದಕ್ಕ ಖರೇನ ಯಾರರ ಹೆಂಡ್ತಿನ್ನ ದತ್ತಕ್ಕ ತೊಗೊತಾರೇನ ಅಂತ ಕೇಳಿ ಕೊಟ್ಟ ಬಿಡಬೇಕ ಅನಸ್ತದ ಆದರ ಎಲ್ಲೇರ ಇಕಿ ತಲಿಕೆಟ್ಟ ಗಂಡನ್ನ ದತ್ತಕ್ಕ ಕೊಟ್ಟ ಗಿಟ್ಟಾಳ ಅಂತ ಹೆದರಿ ಸುಮ್ಮನ ಬಾಯಿ ಮುಚಗೊಂಡ ಇದ್ದೇನಿ ಇಷ್ಟ.

## ನಗುವಿನ ಒರಸೆ

ನಗಿಸಲೆಂದೇ ಹೇಳುವ ಜೋಕು
ಜೋಕಲ್ಲ ಬಿಡಿ

ಕೇಳಿದವರೆಲ್ಲಾ ನಕ್ಕಾರು ಎನ್ನುವ
ಗ್ಯಾರಂಟಿಯೂ ಇಲ್ಲ ನೋಡಿ

ಮಾತು ಮಾತುಗಳಲ್ಲೇ ಪೋಣಿಸಬೇಕು
ಹಾಸ್ಯದ ಕಿಡಿ

ಹೆಕ್ಕಬೇಕು ಹಾಸ್ಯದ ಗಟ್ಟಿಗಳನು
ಹಿಡಿದು ಬದುಕಿನ ಅನುಭವಗಳಿಗೆ ಜರಡಿ

ಅನುಭವದಿಂದ ಹರಿದು ಬಂದ ಹಾಸ್ಯ
ಅನುಭವಾಮೃತ ಹಾಸ್ಯ

**– ಸುಕೇಶವ**



# ಐಪಿಎಲ್ ದಾರಿಯಲ್ಲಿ ಯು-ಟರ್ನ್

**- ಇ.ಆರ್. ರಾಮಚಂದ್ರನ್**

'ಅವ್ನು ಆಟ ಆಡ್ಲಿ ಬಿಡೊ! ಓದು, ಓದು ಅಂತ ಯಾಕೆ ಅವ್ನ ಗೋಳು ಹೊಯ್ಕೋಳ್ತಿಯಾ?'

'ಇನ್ನೇನು ಪರೀಕ್ಷೆ ಹತ್ರ ಬಂತು ಅಜ್ಜಿ... ಶುದ್ಧ ಮುಠ್ಠಾಳ ಆಗಿದ್ದಾನೆ ನಿನ್ನ ಮರಿಮಗ.. ಹಗಲು ರಾತ್ರಿ ಕ್ರಿಕೆಟ್ ಹುಚ್ಚು... ಈಗ ಪ್ರಾಕ್ಟೀಸ್‌ಗೆ ಹೋಗ್ಬೇಕಂತೆ... ಹೀಗೇ ಆದ್ರೆ ಅವ್ನು ಈ ವರ್ಷ ಖಂಡಿತ ಫೇಲೇ.'

> ಮರಿಮಗ ಓದು ಬಿಟ್ಟು ಕೈಯಲ್ಲಿ ಬ್ಯಾಟು ಹಿಡಿದಾಗ

'ಯಾವಾಗ್ಲೂ ಸಿಡಿ ಸಿಡಿ! ಜೊತೆಗೆ ಬಾಯಲ್ಲಿ ಅಪಶಕುನ ಬೇರೆ.. ಅವ್ನಿಗೆ ಇಷ್ಟ ಆಗಿದ್ದನ್ನ ಮಾಡ್ಲಿ ಬಿಡು.. ನೀನು ಓದಿದ್ದು ನಾನು ನೋಡಿಲ್ವಾ? ಮಗ್ಗಿ ಉರು ಹೊಡ್ದಂಗೆ ಎಲ್ಲಾ ಸಬ್ಜೆಕ್ಟ್ಸ್ನ ನಮ್ಮ ಬೀದಿಲಿರೋ ಮನೆಗಳಿಗೆಲ್ಲಾ ಕೇಳ್ಸೋ ಹಾಗೆ ಉರು ಹೊಡ್ದು ಹಾಗೂ ಹೀಗೂ ಪಾಸ್ ಮಾಡ್ದೈಲ್ಲಾ.. ನಿಮ್ಮಪ್ಪನ ತಲೆ ನರ್ರಿದ್ದು, ಹಾರ್ಟು ವೀಕಾಗಿದ್ದು ನೀನು ಎಲ್ಲಾ ಪರೀಕ್ಷೇಲಿ ಗೋತಾ ಹೊಡೀದೆ ಪಾಸ್ ಆಗ್ತೀಯಾ ಇಲ್ವಾಂತ ಯೋಚ್ನೆಯಿಂದ್ಲೇ!'

'ಅಜ್ಜಿ! ಆವಾಗ ಈಗಿನ್ ತರಹ ಕಾಂಪಿಟೇಷನ್ ಇರ್ಲಿಲ್ಲ. ಈಗ ಎಲ್ಲಾದಕ್ಕೂ ಕಾಂಪಿಟೇಷನ್ ಇದೆ. ಇಂಜಿನಿಯರ್, ಮೆಡಿಕಲ್‌ಗೆ ಸೀಟು ಸುಲಭವಾಗಿ ಸಿಗೊಲ್ಲ.. ಕಾಮೆಡ್ಡು ಅದು ಇದೂಂತ ಇರೋ ಪರೀಕ್ಷೇಲಿ ಮಾರ್ಕ್ಸ್ ರ್‍ಯಾಂಕು ಎಲ್ಲಾ ಬೇಕು. ಇಲ್ದಿದ್ರೆ ಮುಂದೆ ಇವ್ನಿಗೆ ಫ್ಯೂಚರ್ ಏನೂ ಇರಲ್ಲ.'

'ಅದೂ ನಿಜಾನೆ.. ಕಾಂಪಿಟೇಷನ್ ಇದ್ದಿದ್ರೆ ನಿನ್ಗೆ ಎಲ್ಲಿ ಸೀಟು ಸಿಗ್ತಿತ್ತು! ಸುಮ್ನಿರೋ! ನೀನು ಸಿವಿಲ್ ಇಂಜಿನಿಯರ್ ಆಗಿ ಕಡಿದಿದ್ದು ನಾನು ಕಂಡೀದೀನಿ. ನೀನು ಕಟ್ಟಿದ್ದ ಮನೆಗಳೆಲ್ಲಾ ಸೂರಿನಿಂದ ಸೋರೋದು.. ದಿನಾ ಬೆಳಗಾದ್ರೆ ಮನೆ ಮುಂದೆ ಓನರ್ರು ಬಂದು ನಮ್ಮ ಮಾನ ಹೋಗೋ ಹಾಗೆ ಶಾಪ ಹಾಕೋರು! ನನ್ ಮರಿಮಗಾನೂ ಉರು ಹೊಡ್ದು ಮಂಕಾನೋ, ಮಡ್ಡಿನೋ ಆಗೋದು ಬೇಡ.. ಅವ್ನಿಗೆ ಏನು ಇಷ್ಟಾನೋ ಅದು ಮಾಡ್ಲಿ.. ಕ್ರಿಕೆಟ್ ಅವ್ನಿಗೆ ಇಷ್ಟ... ಆಡ್ಲಿ ಬಿಡು..... ಮೊನ್ನೆ ಪೇಪರ್‌ನಲ್ಲಿ ಓದಿದ್ನಲ್ಲಾ.. ವಿರಾಟ್ ಕೊಹ್ಲಿಗೆ ಎರಡು ತಿಂಗ್ಳು ಐಪಿಎಲ್ ಆಡಿದ್ರೆ 17 ಕೋಟಿ ಅಂತೆ. ಇನ್‌ಫೋಸಿಸ್ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ವರ್ಷ ಪೂರ್ತಿ ಕೆಲ್ಸ ಮಾಡಿದ್ರೂ ಬರೋದು 12 ಕೋಟಿ ಸಂಬಳ! ಕೊಹ್ಲಿ ಡಿಗ್ರಿ ಮಾಡಿದಾನೋ ಇಲ್ವೊ? ಮಾಡ್ದಿದ್ರೆ ಒಳ್ಳೇದೆ ಆಯ್ತು! ಮಾಡಿ ಏನು ಪ್ರಯೋಜನ? ಸಾಲದ್ದಕ್ಕೆ ಇನ್ಫೋಸಿಸ್ನಲ್ಲಿ ಆ ಎಮ್.ಡಿ.ಗೆ ಪಾಪ ಕೆಲ್ಸ ಮಾಡಕ್ಕೂ ಬಿಡಲ್ಲ.. ನಾರಾಯಣಮೂರ್ತಿ ಅವಾಗಾವಾಗ ಮಧ್ಯೆ ಕೊಕ್ಕೆ ಹಾಕ್ತಾ ಇರ್ತಾರೆ! ಮೈಯೆಲ್ಲಾ ಸಿಕ್ಕು ಮಾಡ್ಕೊಂಡು ಆ ಸಿಕ್ಕ ಓಡೋಗ್ಲಿಲ್ವ!'

'ಅದಕ್ಕೋಸ್ಕರ ನಿನ್ನ ಮರಿಮಗ ಓದು ಬಿಟ್ಟು ಕೈಲಿ ಬ್ಯಾಟ್ ಹಿಡೀಲಿ ಅಂತೀಯಾ? ಕರ್ಮ! ಕೊಹ್ಲಿಗೆ ಅಷ್ಟು ಬಂತೂಂತ ಎಲ್ಲಾರ್ಗೂ ಆ ತರಹ ದುಡ್ಡು ಸಿಗುತ್ತೇಂತ ಏನು ಗ್ಯಾರಂಟಿ?'

'ಪೆದ್ದೆ! ಅವನೊಬ್ಬನೇ ಅಲ್ಲ. ಈಗೀಗ ಕೈಲಿ ಬ್ಯಾಟ್ ಅಲ್ಲ.. ಸೌಟು ಹಿಡ್ದು ಕೂಡ ಲಕ್ಷಾಂತರ




ಸಂಪಾದಿಸ್ತಾರೆ! ಸಿಹಿ ಕಹಿ ಚಂದ್ರು ದಿನಾ ಟೀವೀಲಿ ಬಂದು ನಮಗೆಲ್ಲಾ ಒಂದೊಂದು ತಿಂಡಿ ತಿನ್ನಿಸ್ತಾರೆ.. ಮೊನ್ನೆ ನೋಡು, ಐಪಿಎಲ್‌ನಲ್ಲಿ ಮನೀಷ್ ಪಾಂಡೆ, ಕೆ.ಎಲ್. ರಾಹುಲ್‌ಗೆ ತಲ 11 ಕೋಟಿ ಕೊಟ್ಟರಲ್ಲೋ! ಕೃಷ್ಣಪ್ಪ ಗೌತಮ್‌ಗೆ 6 ಕೋಟಿ ಸಿಕ್ತಲ್ಲೋ... ನೀನು ಹತ್ತು ಜನ್ಮ ಕೆಲ್ಸ ಮಾಡಿದ್ರೂ ಅಷ್ಟು ದುಡ್ಡಿನ ಮುಖ ನೋಡಲ್ಲ!'

'ಅಜ್ಜಿ!'

'ಕಾಲ ಬದಲಾಗಿದ್ಯೋ ರಾಮು.... ಈಗ ತಾಪೇದಾರಿ ಕೆಲ್ಸ ಮಾಡ್ಲೇಬೇಕೂಂತ ಇಲ್ಲ. ಇದು ಮಾಸ್ಟರ್ ಬ್ಲಾಸ್ಟರ್, ಮಾಸ್ಟರ್ ಷೆಫ್ ಕಾಲ... ಯಾರಿಗೆ ಯಾವುದ್ರಲ್ಲಿ ಇಂಟರೆಸ್ಟ್ ಇದ್ಯೋ ಅವರಿಗೆ ಅದ್ರಲ್ಲಿ ಮುಂದೆ ಬರೋದ್ಕೆ ಬಿಟ್ಬಿಡ್ಬೇಕು. ಅದ್ರಲ್ಲಿ ಸ್ಕೋಪು ಇರುತ್ತೆ.. ನಾವು ಮನೇವ್ರು ಪ್ರೋತ್ಸಾಹ ಮಾಡ್ಬೇಕು.. ಅದು ಆಗ್ದಿದ್ರೆ ತೆಪ್ಪಗಿರ್ಬೇಕು.'

'ನಾಳೆ ಇವ್ನು ಪ್ರಾಕ್ಟೀಸ್ ಮಾಡ್ಬೇಕೂಂತ ಹೊರಟ್ರೆ ನಾನೂ ಇವನ್ ಜೊತೆ ಊರೂರು ಸುತ್ಬೇಕಾ?'

'ಸುತ್ತು! ತಪ್ಪೇನಿಲ್ಲ... ಅಷ್ಟೇ ಅಲ್ಲ, ಬೋರ್ನವೀಟಾನೋ, ಹಾರ್ಲಿಕ್ಸೋ ಇಟ್ಕೊಂಡಿರು.. ಅವ್ನಿಗೆ ಶಕ್ತಿಗೆ ಬೇಕಾಗುತ್ತೆ. ನೀನು ಸ್ವಲ್ಪ ಕುಡಿ.. ಅವ್ನ ಕಿಟ್ ಹೊರ್ಬೇಕಾದ್ರೆ ನಿನಗೂ ಎನರ್ಜಿ ಡ್ರಿಂಕ್ಸು ಬೇಕಾಗುತ್ತೆ! ಅವನಿಗೆ ಇಷ್ಟ ಇಲ್ದಿರೋ ಪಾಠಾನ ಒದ್ಸೋದು ಬಿಟ್ಟು ನೀನೂ ಅವನ್ ಜೊತೆ ಹೋಗಿ, ಅವ್ನಿಗೆ ಬೇಕಾದ ಕಿಟ್ಟೋ ಪಿಟ್ಟೋ ಕೊಡ್ಸಿ ಅವ್ನ ಕೋಚ್ ಹತ್ರ ಒಳ್ಳೆ ಸಂಬಂಧ ಇಟ್ಕೊಳ್ಳೋದು ಒಳ್ಳೇದು ಅನ್ಸುತ್ತೆ. ಈಗಿನ ಕಾಲದಲ್ಲಿ ಅವರೇ ತಂದೆ ತಾಯಿಗಿಂತಾ ಮುಖ್ಯ... ಸಚಿನ್ ತೆಂಡೂಲ್ಕರ್ ಮಾತು ಮಾತಿಗೂ ಅವನ ಕೋಚ್ ರಮಾಕಾಂತ್ ಅಚ್ರೇಕರ್ ಅವರ ಹೆಸರ್ನ ಜಪಿಸ್ತಿದ್ದ ಅಂತ ಎಲ್ಲೋ ಓದಿದ್ದೆ.'

'ಅದೆಲ್ಲಾ ಇರ್ಲಿ... ನನಗ್ ಮಾತ್ರ ಅವ್ನ ಹಿಂದೆ ಸುತ್ತೂ ಅಂತ ಹೇಳ್ಬೇಡ.. ಅವ್ನು ಏನು ಸುಡುಗಾಡು ಬೇಕಾದ್ರೂ ಮಾಡ್ಕೊಳ್ಳಿ!'

'ನಿನ್ ಬಾಯ್ಲಿ ಒಳ್ಳೇ ಮಾತು ಯಾವತ್ತೂ ಬರಲ್ಲ ಕಣೋ.'

★★★

'ಅಜ್ಜಿ! ಟಿವಿ ನೋಡ್ತಿಲ್ವ ಇವತ್ತು..?'

'ಹೋದ ವರ್ಷ ನಿನ್ನ ಓದಿನ ವಿಷಯದಲ್ಲಿ ಜಗಳ ಆಯ್ತಲ್ಲ ಮರೀ.... ಮೂರು ಹೊತ್ತು ಟಿವಿ ನೋಡ್ತಿರ್ತೀಯಾ ಅಂತ ನನಗೂ ನಿಮ್ಮಪ್ಪ ಬಯ್ದ.... ಅದಕ್ಕೆ ನಾನು ಜಾಸ್ತಿ ನೋಡೋದಿಲ್ಲ ಈಗ.'

'ಯಾವಾಗ್ಲೂ ಸಿಡಿ ಸಿಡಿ ಮಾತೇ ಅವರ್ದು... ರಿಟೈರ್ ಆದ್ಮೇಲೆ ಬೇರೆ ಏನು ಕೆಲ್ಸ ಇಲ್ಲ.. ಅದಕ್ಕೆ ಕೋಪ ಜಾಸ್ತಿ ಆಗಿದೆ.........'



'ನಾನು ಸಿಡಿ ಸಿಡಿ ಮಾಡ್ತಾ ಇರ್ತೀನಾ..... ಯಾರೋ? ಓ ಬ್ರಾಡ್ಮನ್ ಸಾಹೇಬ್ರಾ! ಓದು, ಬರ್ಯೋದು ಇಲ್ದೆ ಮೂರು ಹೊತ್ತೂ ಕೋಣನ ಹಾಗೆ ಊರು ಕೇರಿ ಬಿಡ್ದೆ ಅಲೀತಾ ಇರ್ತೀಯಾ.. ಅಜ್ಜಿ ಜೊತೆ ಲಲ್ಲೆ ಹೊಡೀತಾ ಕೂತಿದ್ದೀಯಾ?'

'ಓ ಹಿಟ್ಲರ್ ಬಂದ್ನಾ.... ಬಾಪ್ಪ.. ಅವ್ನು ನನ್ ಜೊತೆ ಲಲ್ಲೆ ಯಾಕೆ ಹೊಡೀಬೇಕೋ? ಲಲ್ಲೆ ಹೊಡೆಯೋದಕ್ಕೆ ಬರ್ತಾಳೆ ಮುಂದೆ..'

‘ಅಜ್ಜಿ.. ನೀನು ನಿನ್ ಮರಿಮಗಂಗೆ ಕುಮ್ಮಕ್ಕು ಕೊಟ್ಟು ಕೊಬ್ಬಿದಾನೆ.’

‘ಮಾತೆತ್ತಿದ್ರೆ ನೀನು ಅವನ್ ಮೇಲೆ ಯಾಕೆ ಉರಿ ಬೀಳ್ತೀಯ... ಈಗ ಅದೇ ಕೆಲ್ಸ ನಿನ್ಗೆ.. ನೀನು ಏನೋ ಹೇಳ್ತಿದ್ಯಲ್ಲೋ ಮರೀ... ಟೀವೀಲಿ ಏನೋ ತೋರ್ಸ್ತಿದಾರೇಂತ.. ಏನಿದೆ?’

‘ಟಿವಿ ಹಾಕಜ್ಜಿ. ಕರೆಂಟು ಖರ್ಚು ಆದ್ರೂ ಪರ್ವಾಗಿಲ್ಲ.. ತಡಿ.. ನಾನೇ ಹಾಕ್ತೀನಿ.’

‘ಮರೀ! ಏನೋ ನಿನ್ನ ಫೋಟೋ ಬರ್ತಿದೆ! ಕೆಳಗೆ ಹೆಸ್ರು ಕೂಡಾ!’

‘ನನ್ನನ್ನ ಐಪಿಎಲ್‌ಗೆ ಸೆಲೆಕ್ಟ್ ಮಾಡಿದಾರೆ ಅಜ್ಜಿ. ಆರ್‌ಸಿಬಿ ಕೊಂಡುಕೊಂಡ್ರು!’

‘ಹೌದೇನೋ ನನ್ನ ರಾಜಾ! ನಿನ್ನ ಐಪಿಎಲ್ನಲ್ಲಿ ಸೇರಿಸ್ಕೊಂಡ್ರೇನೋ...’

‘ಅಜ್ಜಿ! ಆರ್‌ಸಿಬಿ ಟೀಮ್ನವರು ಆಕ್ಷನ್‌ನಲ್ಲಿ ನನ್ನ ನಾಲ್ಕು ಕೋಟಿಗೆ ಕೊಂಡ್ಕೊಂಡ್ರು.’

‘ನಾಲಕ್ ಕೋಟಿಗೇನೋ! ನೋಡಿದ್ಯೇನೋ ನನ್ನ ಮರಿಮಗನ್ನ..... ಮುಠ್ಠಾಳ, ಸೋಮಾರಿ ಅಂತ ದಿನಾ ಬೈತಿದ್ಯಲ್ಲಾ...’

‘ಕಂಗ್ರಾಟ್ಸ್ ಕಣೋ! ನಿಜವಾಗ್ಲೂ ನೀನು ಹೇಳಿದ್ದು ಸಾಧಿಸ್ಬಿಟ್ಟೇ...’

‘ಥ್ಯಾಂಕ್ಸ್ ಅಪ್ಪ.. ಈಗ ಟೈಮಿಲ್ಲ.. ಟಿವಿ ರಿಪೋರ್ಟರ್ಸ್ ಮನೆಗೆ ಸ್ವಲ್ಪ ಹೊತ್ನಲ್ಲಿ ಬರ್ತಾರೆ.. ಇಂಟರ್‌ವ್ಯೂಗೆ... ಎಲ್ಲಾರ್ನೂ ನನ್ ಬಗ್ಗೆ ಕೇಳ್ತಾರೆ.. ರೆಡಿಯಾಗೋಣ...’

‘ಬಹಳ ಒಳ್ಳೇದಪ್ಪ. ನೀವೆಲ್ಲಾ ರೆಡಿಯಾಗಿ.’

‘ಅಜ್ಜಿ! ನೀನೂ ರೆಡಿಯಾಗ್ಬೇಕು.’

‘ನಾನು ಯಾಕೋ? ಮುತ್ತಜ್ಜಿ.. ಶಿವನ ಪೂಜೇಲಿ ಕರಡಿ ನುಗ್ದಂಗೆ.’

‘ನೀನು ಯಾವಾಗ್ಲೂ ನಮ್ಮೆಲ್ಲಾರ್ಗೂ ಅಜ್ಜೀನೇ! ನೀನೇ ನಂಗೆ ಇನ್ಸ್‌ಪಿರೇಷನ್.. ಆವತ್ತು ಅಪ್ಪನ ಹತ್ರ ಬೈಸ್ಕೊತ್ತಿದ್ದಾಗ ನೀನು ಕೆ.ಎಲ್. ರಾಹುಲ್, ಮನೀಷ್ ಪಾಂಡೆ, ಗೌತಮ್ ವಿಚಾರ ಹೇಳಿ ನನ್ನ ಇನ್ಸ್‌ಪೈರ್ ಮಾಡ್ದೆ. ನಾನು ಇನ್ನು ಮುಂದೆ ಅವ್ರ ಜೊತೆ ಆಟ ಆಡ್ತೀನಿ, ಅಜ್ಜಿ.. ನಿನ್ನ ಫೇವರೇಟ್ ಧೋನಿ, ತೆಂಡೂಲ್ಕರ್ ಅವರ ಜೊತೆಯೆಲ್ಲಾ ಮಾತಾಡಕ್ಕೆ ಆಡೋದಕ್ಕೆ ಛಾನ್ಸು ಸಿಗುತ್ತೆ.. ನೀನೂ ರೆಡಿಯಾಗು. ನಿನ್ನ ಒಂದೆರೆಡು ಮಾತು ಹೇಳಕ್ಕೆ ಅವ್ರು ಕೇಳ್ತಾರೆ.. ನೀನು ಏನು ಹೇಳ್ತಿಯಾಂತ ನನಗೂ ಕೇಳಕ್ಕೆ ಆಸೆ.’

★★★

ನಿಮ್ಮ ಮಗ ಆರ್.ಸಿ.ಬಿ.ಗೆ ಸೆಲೆಕ್ಟ್ ಆಗೀದಾನಲ್ಲಾ ಸಾರ್! ನಿಮಗೆಲ್ಲಾ ಬಹಳ ಸಂತೋಷ ಆಗಿರ್ಬೇಕು..

‘ನಮ್ಮ ಫ್ಯಾಮಿಲಿಗೆಲ್ಲಾ ಬಹಳ ಖುಷಿಯಾಗಿದೆ.’

‘ನಮ್ಮ ಚಾನೆಲ್ನಲ್ಲೂ ಎಲ್ಲರಿಗೂ ಹ್ಯಾಪಿ ಮೂಡ್! ನಮ್ಮೂರಿಂದ ಐಪಿಎಲ್ ಆಡ್ತಾನೇಂತ.... ಅಂಡರ್-19 ಯಾವುದ್ರಲ್ಲೂ ಆಡ್ದೆ ಸೆಲೆಕ್ಟ್ ಆಗಿದಾನೆ. ನಿಮ್ಮ ಮಗನಿಗೆ ನೀವೇ ಕೋಚ್ ಮಾಡ್ತಿದ್ರಾ ಸಾರ್?’

‘ಅವ್ನು ಹುಟ್ಟಿದಾಗ್಩ಲೇ ಬ್ಯಾಟ್ ಕೈಲಿ ಹಿಡ್ಕೊಂಡು ಹುಟ್ದ ಅಂತ ಹೇಳ್ಬಹುದು... ಅದನ್ನು ನೋಡಿ ಕೋಚಿಂಗ್ ಶುರು ಮಾಡ್ದೆ.. ಅವನ್ನ ಆಲ್-ರೌಂಡರ್ ಮಾಡೋಣಾಂತ ಅವನಿಗೆ ಬ್ಯಾಟಿಂಗ್,



ಬೋಲಿಂಗ್ ಎರಡೂ ಕೋಚ್ ಮಾಡ್ತಿದ್ದೆ.. ಇವ್ನು ಮುಂದೆ ಇಂಡಿಯಾಗೆ ಆಡ್ಬೇಕೂಂತ ನಮ್ಮೆಲ್ಲರ ಆಸೆ.'

'ಖಂಡಿತ ಆಗುತ್ತೆ ಸಾರ್. ನಿಮ್ಮ ಜೊತೆ ಬಂದು ಒಂದು ಇಂಟರ್ವ್ಯೂ ಮಾಡ್ತೀವಿ ಸಾರ್. ನೀವು ಮಗನ್ನ ಕ್ರಿಕೆಟರ್ ಮಾಡೋದಕ್ಕೆ ಎಷ್ಟು ಶ್ರಮ ಪಟ್ಟಿದ್ರೀ ಅಂತ ಎಲ್ಲಾರ್ಗೂ ಗೊತ್ತಾಗ್ಬೇಕು.'

'ಥ್ಯಾಂಕ್ಸ್!'

'ಐಪಿಎಲ್ ಸೇರಕ್ಕೆ ನಿಮ್ಮ ಮುತ್ತಜ್ಜಿ ಬಹಳ ಹೆಲ್ಪ್ ಮಾಡಿದ್ರು ಅಂತ ನೀವು ಸ್ಟುಡಿಯೋದಲ್ಲಿ ಹೇಳಿದ್ರಲ್ಲಾ, ಅದು ಹೇಗೆ?'

'ಅಜ್ಜಿ ಹೇಳು.'

'ಅದಾ.... ನನ್ನ ಮೊಮ್ಮಗಂಗೆ ಅವನ ಮಗ ಐಐಟಿ ಸೇರಿ ಇಂಜಿನಿಯರ್ ಆಗ್ಬೇಕೂಂತ ಆಸೆ ಇತ್ತು.. ಅದಕ್ಕೆ ಅವನು ಸದಾ ಹಗಲು ರಾತ್ರಿ ಅವನ ಬೆನ್ನು ಹತ್ತಿದ್ದ.. ಆದ್ರೆ ಮರಿಮಗ ಐಪಿಎಲ್ ರಸ್ತೆ ಹಿಡಿದ... ಅವನಿಗೆ ಯಾವುದು ಬೇಕೋ ಅದು ಮಾಡ್ಲಿ ಅಂತ ನಾನು ಹಠ ಹಿಡಿದೆ ಅಷ್ಟೆ'

'ಬಹಳ ಸಂತೋಷ.. ಫ್ಯಾಮಿಲಿ ಅಂದ್ರೆ ಹೀಗಿರ್ಬೇಕು.... ಎಲ್ರೂ ಪೋಸ್ ಮಾಡಿ... ಥ್ಯಾಂಕ್ಯು... ಇನ್ನು ಸ್ವಲ್ಪ ಹೊತ್ತಿನಲ್ಲಿ ಬ್ರೇಕಿಂಗ್ ನ್ಯೂಸ್‌ನಲ್ಲಿ ಬರುತ್ತೆ... ಖಂಡಿತ ನೋಡಿ... ನಾವು ಬರ್ತೀವಿ ಸಾರ್! ಬೈ..'

★★★

ನನ್ ಮರಿಮಗ ಬೈಸ್ಕೊಂಡು ಬೈಸ್ಕೊಂಡು ತನಗೆ ಬೇಕಾದ್ದನ್ನ ಸಾಧಿಸಿ ತೋರಿಸ್ದ. ಆದ್ರೆ ನನ್ನ ಮೊಮ್ಮಗ ಇವತ್ತು ಒಂದೇ ಸೆಕೆಂಡ್‌ನಲ್ಲಿ 'ಯು-ಟರ್ನ್' ಅಂದ್ರೆ ಏನೂಂತ ತೋರಿಸ್ದ!

## ನಕ್ಕವರ ವರಸೆ

ಸಂತೋಷಕೂಟದಲ್ಲಿ ಸೇರಿದವರು
ನಗೆಯ ರಾಯಭಾರಿಗಳಂತೆ ನಕ್ಕರು

ಬೊಚ್ಚುಬಾಯಿಯ ಕೆಲವರು ತುಟಿಮುಚ್ಚಿ ನಕ್ಕರು
ಹಲ್ಲು ಕೀಳಿಸಿದ್ದು ಕಾಣದಂತೆ

ಇನ್ನು ಕೆಲವರು ಅಗಲ ಬಾಯಿ ತೆರೆದು ನಕ್ಕರು
ಹೊಸ ಹಲ್ಲು ಸೆಟ್ಟು ಕಾಣುವಂತೆ

– **ಸುಕೇಶವ**



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- *ಸುಳ್ಳಿಗೆ ಶಕ್ತಿ ಬರುವುದು ಯಾರಾದರೂ ಅದನ್ನು ನಿಜ ಎಂದು ನಂಬಿದಾಗ.*
- ಬದುಕೊಂದು ಕಠಿಣ ಪರೀಕ್ಷೆ. ಅನೇಕರು ನಪಾಸಾಗುತ್ತಾರೆ. ಏಕೆಂದರೆ ಒಬ್ಬೊಬ್ಬರ ಪ್ರಶ್ನೆ ಪತ್ರಿಕೆಯೂ ವಿಭಿನ್ನ ಎಂದು ತಿಳಿಯದೆ ಇತರರನ್ನು ಕಾಪಿ ಮಾಡಲು ಯತ್ನಿಸುವುದರಿಂದ.
- *ಆಲ್ವೇಸ್ ಬಿ ಎ ಫಸ್ಟ್ ರೇಟ್ ವರ್ಷನ್ ಆಫ್ ಯುವರ್ ಸೆಲ್ಫ್ ಅಂಡ್ ನಾಟ್ ಎ ಸೆಕೆಂಡ್ ರೇಟ್ ವರ್ಷನ್ ಆಫ್ ಸಮ್‌ಒನ್ ಎಲ್ಸ್.*
- ಏಕಾಂತ ಬದುಕಿನಲ್ಲಿ ಖುಷಿ ಪಡುವವರು ನಿಜವಾಗಿಯೂ ಏಕಾಂಗಿಗಳಲ್ಲ.
- *ಅತ್ಯುತ್ತಮ ಸೂಜಿ ಕೂಡ ಎರಡೂ ಕಡೆ ಮೊನಚಾಗಿರುವುದಿಲ್ಲ.*
- ದಿ ಗ್ರೇಟ್ ಪ್ಲೆಷರ್ ಇನ್ ಲೈಫ್ ಈಸ್ ಇನ್ ಡೂಯಿಂಗ್ ವಾಟ್ ಪೀಪಲ್ ಸೆ ಯು ಕೆನಾಟ್ ಡು.
- *ಮರಗಳು ಮನುಷ್ಯರನ್ನು ನೋಡಿ ಹೀಗೆ ಕೇಳಿದವಂತೆ: ನಾವು 3000 ವರ್ಷಗಳಿಂದ ಲಕ್ಷಾಂತರ ಶಿಲುಬೆಗಳನ್ನು ಕೊಟ್ಟಿದ್ದೇವೆ. ಆದರೆ ಮನುಷ್ಯರೇ, ನಿಮ್ಮಿಂದ ಒಬ್ಬ ಏಸುವನ್ನು ಕೊಡಲಾಗಲಿಲ್ಲ.*
- ಎ ಡ್ರಾಯಿಂಗ್ ಈಸ್ ನಾಟ್ ವಾಟ್ ಒನ್ ಸೀಸ್ ಬಟ್ ವಾಟ್ ಒನ್ ಕೆನ್ ಮೇಕ್ ಅದರ್ಸ್ ಸೀ.
- *ಹುಡುಗ: ಮಾನವ ಮಂಗನಾಗಿದ್ದಕ್ಕೆ ಸಾಕ್ಷಿ ಎಲ್ಲಿದೆ?*

  *ಶಿವರಾಮ ಕಾರಂತ: ನೀನೇ ಉಂಟಲ್ಲವೊ!*
- ಸನ್ನಿ ಲಿಯೋನ್‌ಗೆ ಗಂಡಂದಿರು ಜೋರಾಗಿ ಚಪ್ಪಾಳೆ ತಟ್ಟಿದರೆ ಅವರ ಪತ್ನಿಯರು ಅವರನ್ನು ಮನೆಯಲ್ಲಿ ಸರಿಯಾಗಿ ವಿಚಾರಿಸಿಕೊಳ್ಳುತ್ತಾರೆ.
- *ಈಗ ಪರೀಕ್ಷೆಯ ಕಾಲ. ಅನೇಕರಿಗೆ ಪ್ರಶ್ನೆಗಳು ಸುಲಭವಾಗಿ ಕಾಣುತ್ತವೆ. ಆದರೆ ಉತ್ತರಗಳೇ ಕಷ್ಟ.*
- ಡೋಂಟ್ ವರಿ ಅಬೌಟ್ ವಾಟ್ ಅದರ್ಸ್ ಥಿಂಕ್ ಅಬೌಟ್ ಯು. ವರಿ ಅಬೌಟ್ ವಾಟ್ ದೆ ಥಿಂಕ್ ಆಫ್ ದೆಮ್‌ಸೆಲ್ವ್ಸ್ ವೆನ್ ದೆ ಆರ್ ವಿತ್ ಯು.
- *ನಾಳೆಗೆ ಮುಂದೂಡಗೊಳ್ಳುವ ಕೆಲಸ ಮುಖ್ಯವಲ್ಲ ಎಂದಾಗುತ್ತದೆ ಮತ್ತು ಅದು ಮಾಡದೆಯೇ ಉಳಿಯುವ ಸಂಭವವೂ ಇರುತ್ತದೆ.*
- ಎ ರೈಟರ್ ಥಿಂಕ್ಸ್ ವಿತ್ ಹಿಸ್ ಪೆನ್.
- *ಬೇರೆಯವರಿಗೆ ಹೋಲಿಸಿಕೊಳ್ಳುವುದು ಬೇಡ ಏಕೆಂದರೆ ಅವರು ಅಲ್ಲಿಗೆ ತಲುಪಲು ಎಷ್ಟು ಪರಿಶ್ರಮ ಪಟ್ಟಿದ್ದಾರೆ ಎಂದು ಗೊತ್ತಿರುವುದಿಲ್ಲ.*



# ಮಂಗದೇಶ

**- ಎಸ್. ದಿವಾಕರ್**

ಬಹುದೂರದ ಆ ಮಂಗದೇಶದಲಿ
ಮಂಗಹಣ್ಣು ತುಂಬಿರುವ ಮರ;
ಮಂಗಕಿಟಕಿಗಳ ಮಂಗಸರಳಿಂದ
ಮಂಗರಾಗಗಳ ಸುಸ್ವರ.

ಮಂಗಚೌಕದಲಿ ಮಂಗಬಯಲಲ್ಲಿ
ಮಂಗನಾಯಕರ ಕಾದಾಟ;
ಮಂಗ ಹುಚ್ಚರಾಸ್ಪತ್ರೆಗಳಲ್ಲಿಯೊ
ಮಂಗರೋಗಿಗಳ ಗೋಳಾಟ.

ಮಂಗಹುಡುಗಿಯಿದೊ ಮಂಗಜಾಣ್ಮೆಯಲಿ
ಮಂಗಾಕ್ಷರಗಳ ಕಲಿತವಳು;
ದುಷ್ಟಮಂಗವಿದೆ ಮಂಗಜೈಲಿನಲಿ,
ದಿಗಿಣ ಹಾಕುತಿದೆ ಹಗಲಿರುಳು.

ಮಂಗ-ಕೋಲ ತುದಿಗೇರಿದ ಮಂಗನ
ಮಂಗಭಾಷಣದ ಅಬ್ಬರಕೆ
ಕೆಲವರು ಹೋದರು ಮಂಗಸ್ವರ್ಗಕೆ,
ಮಂಗ ನರಕ ಇನ್ನೆಲ್ಲರಿಗೆ.

ಮಕಾಕ್ ಗೊರಿಲ್ಲಾ ಬಬೂನ್ ಚಿಂಪಾಂಜಿ
ಒರಾಂಗುತಾನ್ ಮಂಗಗಳು
ರಾತ್ರಿಯುಂಡು, ಓದುವುವು ತಪ್ಪದೆ
ಮಂಗಪತ್ರಿಕೆಯ ಹಾಳೆಗಳು.

ಮಂಗಭೋಜನದ ನೆನಪುಗಳಿಂದಲೆ
ಮಂಗಔಟ್‌ಹೌಸು ಗುರುಗುರು;
ಮಂಗಮಕ್ಕಳೇ ಹಿಡಿದು ಬಂದೂಕು;
ಲೆಫ್ಟ್ ರೈಟ್ ಲೆಫ್ಟ್ ರೈಟ್ ಶುರು.

ಮಂಗಮಿಲಿಟರಿಯ ಭಯದ ಬಿಂಬವಿದೆ
ಮಂಗಮುಖಗಳಲಿ ಯಾವತ್ತೂ;
ಮಂಗಮುಷ್ಟಿಯಲಿ ಮಂಗಬಂದೂಕು;
ಇದೆ ನಮ್ಮೆದುರಿಗೆ ಮಂಗ ಜಗತ್ತು.

*ಪ್ರೇರಣೆ:*
*ಹಂಗೇರಿಯನ್ ಕವಿ ಸ್ಯಾಂಡೋರ್ ವೋರೆ*



# RAMAIAH
Indic Specialty Ayurveda

RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA
ON MODERN METHODS OF ANALYSIS FOR FOOD / DRUG / ENVIRONMENT
FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಬಿಂ.ಗೋ. - ಜನಕರ ಜೊತೆ ಪ್ರಯಾಣ

**- ಶ್ಯಾಮಲ ರವಿಶಂಕರ್**

ಖಟ್ಮಾಂಡುವಿನಿಂದ ಮುಕ್ತಿನಾಥ್ ಪ್ರಯಾಣಕ್ಕೆ ಸನ್ನದ್ಧರಾಗಿ ತ್ರಿಭುವನ್ ವಿಮಾನ ನಿಲ್ದಾಣ ತಲುಪಿದಾಗ ಬೆಳಗ್ಗೆ 8 ಘಂಟೆ. 10:30ಕ್ಕೆ ಪೋಕಾರಾಗೆ ನಮ್ಮನ್ನು ಕೊಂಡೊಯ್ಯಬೇಕಾದ ವಿಮಾನ ರದ್ದಾಯಿತೆಂದು ತಿಳಿಸಿ ನಮಗಾಗಿ 3 ಎಸ್‌ಯುವಿಗಳನ್ನು ಸಿದ್ಧಪಡಿಸಿದ್ದನ್ನು ತಿಳಿಸಿದ ನಮ್ಮ ಗೈಡ್ ಹಾಗೂ ನಮ್ಮ ಟ್ರಾವೆಲ್ಸ್‌ನ ಪ್ರತಿನಿಧಿ, ಜನಕ್ ನಾವೆಲ್ಲಾ ಅವನನ್ನು 'ಜನಕ' ಮಹಾರಾಜ್ ಎಂದೋ ಜೀವನ್ಮುಕ್ತಾ ಎಂದೋ ಕರೀತಿದ್ವಿ. ಅವನೂ ತುಂಬಾ ಚುರುಕು ಮತ್ತು ಜಾಲಿ ಹುಡುಗ. ಒಂದು ಘಂಟೆಯ ವಿಮಾನಯಾನಕ್ಕಿಂತ 7-8 ಘಂಟೆಗಳ ಹಿಮಾಲಯ ಶ್ರೇಣಿಗಳ ಹಾಗೂ ಗಂಡಕಿ ನದಿಯ ಮಧ್ಯದ ರಸ್ತೆಯಾನ ಹೆಚ್ಚು ಆಹ್ಲಾದಕರ, ಅಲ್ಲವೇ. ಇಷ್ಟಕ್ಕೂ ಅಲ್ಲಾದರೂ ಗಡಿಯಾರದ ಹಿಂದೆ ಓಡಬೇಕಾದ ಪ್ರಮೇಯವೇನಿತ್ತು? ಹೀಗಾಗಿ ನಾವು ಹೊರಟಿದ್ದು 11 ಘಂಟೆಗೆ.

**ಪ್ರವಾಸಿಗರು ಅಂದ್ರೆ ಸ್ಥಾನಿಕ ಭಾಷೆಯ ಜ್ಞಾನ ಅನಿವಾರ್ಯವೇ**

ನಮ್ಮ ಚಾಲಕನ ಹೆಸರು ''ಬಿಂಗೋದ್ ಗುರಿಯ್‌ಕಾ'' (ಅಂತನೋ, ಏನೋ) ನಾವ್ಯಾರೂ ಉಚ್ಚರಿಸಲಾಗದೆ ಒದ್ದಾಡ್ತಿದ್ದನ್ನ ನೋಡಿ ನಕ್ಕವನೇ, 'ಹೋಗಲಿ ಬಹಾದೂರ್ ಅನ್ನಿ' ಅಂದ. 'ನೀವೆಲ್ಲರೂ ಬಹಾದೂರ್‌ಗಳೇ ಯಾಕಾಗ್ತೀರಿ, ಐ ಮೀನ್ ಅದೊಂದೇ ಹೆಸರಾ ನಿಮ್ಮಗಳಿಗೆ ಅಂದೆ. ನಮ್ಮೂರಿನ ಎಟಿಎಮ್ ಹಾಗೂ ಅಪಾರ್ಟ್‌ಮೆಂಟಿನ ಸೆಕ್ಯೂರಿಟಿಯವರನ್ನ ಜ್ಞಾಪಿಸ್ಕೊಳ್ತಾ 'ಹೋಗ್ಲಿ ಬಿಡಿ, ''ಬಿಂಗೋ'' ಅನ್ನಿ. ಹೇಗೂ ಬಿಂಗೋ ಚಿಪ್ಪಾನ ಗುರ್ತಿರತ್ತೆ' ಅಂದ. ಹೀಗೆ ನಮ್ಮ ಸ್ನೇಹ ಶುರು ಆಯ್ತು.

ಅವನ ಪ್ರಕಾರ ಅವನ ವಯಸ್ಸು 20 ವರ್ಷ, ಅವನು 8 ವರ್ಷಗಳಿಂದ ಇದೇ ದಾರಿಯಲ್ಲಿ ಗಾಡಿ ಓಡಿಸ್ತಿದಾನೆ. ಅಂದರೆ ಅವನಿಗೆ 12 ವರ್ಷಕ್ಕೆ ಡ್ರೈವಿಂಗ್ ಲೈಸೆನ್ಸ್ ಸಿಕ್ಕಿರಬೇಕು. 'ಶುದ್ಧ ಬುರುಡೆ, ಯಾರು ಕೊಡ್ತಾರೆ ನಿಂಗೆ. 12 ವರ್ಷಕ್ಕೆ ಲೈಸೆನ್ಸು' ಅಂದೆ. 'ಅಲ್ಲಾ ಮೇಂ ಸಾಬ್, 14ಕ್ಕೆ ಕೊಡ್ತಾರಲ್ಲ ಅಂತಂದ.

'ಹಾಗಾದ್ರೆ ನಿನಗೆ 22 ವರ್ಷ ವಯಸ್ಸು' ಎಂದು ತೀರ್ಪನ್ನು ಉಸುರಿದೆ. 'ಈಗ್ಲೇ ಹೇಳಿಲ್ವಾ, 20 ಅಂತ, ಮತ್ತೆ ನೀವ್ಯಾಕೆ 22 ಅಂತಿದ್ದೀರಿ?' ನಾವೆಲ್ಲಾ ಹೋ.. ಅಂತ ನಕ್ಕಿದ್ವಿ. ಸರಿನಪ್ಪಾ, ನಿನಗೆ 20 ವರ್ಷ ಅಂದೆ. ನನಗೆ ಮಾತ್ರ ಅವನ ಮಾತಿನ ಧಾಟಿಯಲ್ಲಿದ್ದ ಆತ್ಮವಿಶ್ವಾಸ ಬಹಳ ಹಿಡಿಸ್ತು. ಅತಿ ಸುಂದರವಾದ ದೃಶ್ಯಗಳನ್ನು ತೋರಿಸುತ್ತಾ ರಸ್ತೆ ಓಡುತ್ತಿತ್ತು. ಬಲಗಡೆಗೆ ನದಿ, ಅದರಾಚೆ ಹಾಗೂ ಎಡಗಡೆಗೆ ಪರ್ವತ ಶ್ರೇಣಿಗಳು ಅಲ್ಲಿನ ಸಸ್ಯರಾಶಿ, ಅದ್ಭುತ. ಅದರ ಅಂದ ಸವಿಯುತ್ತ ಅವುಗಳ ಹೆಸರುಗಳನ್ನು ನನ್ನ ಜೀವವಿಡೀ ಕಲಿತು-ಕಲಿಸಿರುವ ಸಸ್ಯಶಾಸ್ತ್ರದ ಮೇರೆಗೆ ನೆನಪಿಸಿಕೊಳ್ಳುತ್ತಾ ದಾರಿ ಸವೆಸುತ್ತಿದ್ವಿ. ಒಂದೊಂದು ಕಡೆ ನದಿ ಸಣ್ಣ ಕಾಲುವೆಯಂತೆ ಹರಿಯುತ್ತಿದ್ದರೆ ಹತ್ತಿರದಲ್ಲೇ ಭೋರ್ಗರೆಯುತ್ತಿರುವ ಜಲಪಾತದಿಂದ ಬಂದು ಸೇರುತ್ತಿದ್ದ

ನೀರನ್ನೊಳಗೊಂಡು ಇದ್ದಕ್ಕಿದ್ದಂತೆ ರಭಸವಾಗಿ ಹರಿದು ಸ್ವಲ್ಪ ದೂರ ಹೋದ ನಂತರ ಶಾಂತವಾಗುತ್ತಿದ್ದ ಗಂಡಕಿ. ಈ ದಾರಿ ಏರುತ್ತಿದ್ದಂತೆ ಆ ನದಿ ವಿಸ್ತಾರವಾಗಿ ಬದಿಗಳಲ್ಲಿರುವ ಬಂಡೆ ಕಲ್ಲುಗಳನ್ನೆಲ್ಲಾ ನುಣ್ಣಗೆ ನುಣುಪು ಮಾಡಿತ್ತು. ಅವೆಲ್ಲಾ ಸಾಲಿಗ್ರಾಮಗಳೆಂಬ ನಂಬಿಕೆ. ನಮ್ಮಲ್ಲಿ ಕೆಲವರಿಗೆ ಬಿಟ್ಟಿ ಸಿಕ್ಕರೆ ಬಿಡ್ತಾರಾ, ಸಣ್ಣ ಸಣ್ಣವುಗಳನ್ನೇ ಕೆ.ಜಿ. ತೂಕ ಆಗುವಷ್ಟು ಆರಿಸ್ಕೊಂಡರು. ಹಾಗಾಗಿ ಅಲ್ಲಲ್ಲಿ ನಿಲ್ಲಿಸಿ ಅವುಗಳಿಗಾಗಿ ಹುಡುಕಾಟ, ಸಿಕ್ಕಿದಾಗ ಶೋಷಣೆ ನಡೆಯುತ್ತಿತ್ತು. 'ಎಂಟರ್ ಅಥಾರಿಟಿ' –ಬಿಂಗೋ! ಚಿಕ್ಕ ಪುಟ್ಟ ಕಲ್ಲುಗ್ಗಳ ಮೇಲೆ ಮೂಡಿದ್ದ ಆಕಾರಗಳು ಬಹಳ ಅಂದವಾಗಿದ್ದವು. ಬಿಂಗೋನ ಕಾಮೆಂಟರಿ. ಪ್ರದಕ್ಷಿಣಾಕಾರವಾಗಿದ್ದ ಕಲ್ಲಿಗೆ ''ಏ ಚಕ್ರರ್ ಹೈ ಸುದರ್ಶನ್, ಶಾಲಿಗ್ರಾಂ ಲೇಲೋ' ಎಂದ. ಕೇಳಬೇಕೇ, ನಮ್ಮವರೆಲ್ಲಾ ಸರ್ತೋ ಬಿದ್ನೋ ಅಂತ ಬಾಚಿಕೊಂಡಿದ್ದೇ ಬಾಚಿಕೊಂಡಿದ್ದು! ಹಾಗೆಯೇ ಅಪ್ರದಕ್ಷಿಣವಾಗಿದ್ದವುಕೆ 'ಶಂಖ'ವೆಂದ. ಕೆಲವು ಅಂಕು–ಡೊಂಕು ಉದ್ದುದ್ದವಿದ್ದ ಆಕಾರಗಳನ್ನೊಳಗೊಂಡ ಕಲ್ಲುಗ್ಗಳಿಗೆ 'ಏ, ತೋ, ನಾಗ್ ಹೈ' ಅಂದ. ಹೀಗೆ ಪ್ರತಿ ಆಕೃತಿಗೂ ಒಂದೊಂದು ದೈವಿಕ ಸಂಬಂಧವಾದ ಉತ್ತರವಿರುತ್ತಿತ್ತು. ನಾನೇನೂ ನಾಸ್ತಿಕಳಲ್ಲ. ಆದರೂ ಈ ಆಕಾರಗಳೆಲ್ಲ 'ಮೊಲಸ್ಕ' ಗುಂಪಿಗೆ ಸೇರಿದ ಫಾಸಿಲ್ಸ್ ಅಂತ ಅನ್ನೋಕ್ಕೆ ಹೋದವಳು, ಅವರವರ ನಂಬಿಕೆ ಅವರವರಿಗೆ. ಇಷ್ಟಕ್ಕೂ 'ಯದ್ಭಾವಂತದ್ಭವತಿ' ನಾನ್ಯಾಕೆ ಇದಕ್ಕೆ ಜೀವಶಾಸ್ತ್ರದ ಮೂಗು ತೂರಿಸಬೇಕು ಅಂದ್ಕೊಂಡು ಕಷ್ಟ ಪಟ್ಟು ಸುಮ್ಮನಾದೆ. ಅದೂ ಅಲ್ಲದೆ ಕಲ್ಲಲ್ಲೂ ಹುಲ್ಲಲ್ಲೂ ದೇವರನ್ನು ಕಾಣಬೇಕೆಂಬುದೇ ನಮ್ಮ ಮತಧರ್ಮವಲ್ಲವೇ.

ಇನ್ನು ಬಿಂಗೋ ವಿಷಯಕ್ಕೆ ಬರೋಣ. ಹುಚ್ಚಾಪಟ್ಟೆ ವೇಗವಾಗಿ ನಡೆಸಿ ನಮಗೆ ಇಲ್ಲದ ಜೀವಭಯ ತಂದಿರಿಸಿದ. ಎಲ್ಲೆಲ್ಲೋ ನದಿಯ ಮೂಲಕ 80 ಕಿ.ಮೀ. ವೇಗದಲ್ಲಿ ಓಡಿಸ್ತಿದ್ದಾಗ ಹಲವರಿಗಾದರೂ ಬಿ.ಪಿ. ಹೆಚ್ಚಾಯ್ತು. 'ಹೆಚ್ಚು ಆಳವಿಲ್ಲ, ಜೊತೆಗೆ ಮಜವಾಗಿರೊಲ್ವಾ, ಯಾವತ್ತಾದ್ರೂ ನದೀ ಮಧ್ಯ ವ್ಯಾನ್‌ನಲ್ಲಿ ಹೋಗಿದ್ದೀರಾ, ಯಾಕೆ ಈ ಗಲಾಟೆ?' ಅಂದ್ಬಿಟ್ಟು ಶಾರ್ಟ್‌ಕಟ್ ಹೊಡೆದು ಮುಂದಿದ್ದ ವಾಹನಗಳಿಗೆ ಸವಾಲೆಸೆದು ಸಾಗಿದ! ತದನಂತರ ಮಿಕ್ಕವರೆಲ್ಲ ಇವನನ್ನೇ ಹಿಂಬಾಲಿಸುತ್ತಿದ್ದರು. ಇವನು ಒಂಥರಾ ಬಾರ್ನ್ ಲೀಡರ್. ಲೈಫ್ ಕೋಚ್‌ಗಳ ಸಹಾಯವಿಲ್ಲದೇನೇ 'ರಿಸ್ಕ್ ಟೇಕರ್!' ಇಂಥಾ ಶೂರ ಅಲ್ಲೆಲ್ಲೋ ನಿಲ್ಲಿಸಿ (ಸದ್ಯ, ನದಿ ಮಧ್ಯದಲ್ಲಲ್ಲಾ) ಅದೃಶ್ಯವಾಗಿಬಿಟ್ಟ. ಸ್ವಲ್ಪ ಹೊತ್ತು ಚೆನ್ನಾಗೇಯಿತ್ತು. ಬರ್ತಾ ಬರ್ತಾ, ಈ ಮಹಾಶಯ ಎಲ್ಹೋದ ಅಂತ ಯೋಚನೆ, ವಿಮರ್ಶೆ ನಡೆಯಿತು. ಕಡೆಗೆ ಎಲ್ರೂ ಸುಸ್ತಾಗಿ ಬಾಯಿಗೆ ಬೀಗ ಬಡಿದ್ರು. ಹೇಗೆ ಹೋದನೋ ಅಷ್ಟೇ ಅನಿರೀಕ್ಷಿತವಾಗಿ ಪ್ರತ್ಯಕ್ಷನಾದ ನಮ್ಮ ಸಾಮಿ! ಎಲ್ಲಾ ಗಾಡಿ ಹತ್ತಿ 'ಉಶ್ಯಪ್ಪಾ' ಅನ್ನೋಷ್ಟರಲ್ಲಿ ಮತ್ತೆ ತನ್ನ ಪೀಠದಿಂದ ಜಿಗಿದು ಹೊರಬಿದ್ದವನೇ ಅವನು ಜುಟ್ಟು (ನನ್ನ ಜಡೆಗಿಂತ ಉದ್ದವಾಗಿತ್ತು) ಬಿಚ್ಚಿ ರಪರಪ ಅಂತ ಅದಕ್ಕೆ ಬಡಿದ. 'ಓಹೋ, ಹೋಗಿ ಸ್ನಾನ ಮುಗಿಸಿ ಬಂದ್ಯಾ! ಅಂತ ತರಾಟೆಗೆ ತೊಗೊಂಡ್ವಿ. ಹೇಳಿ ಹೋಗ್ಬಹುದಿತ್ತಲ್ಲ, ಸುಮ್ನೆ ನಮಗೆಲ್ಲಾ ಆತಂಕ' ಅಂತ ಆಕ್ಷೇಪಿಸ್ದೆ. ಸ್ನಾನ ಮಾಡಿಲ್ಲ ತಲೆ ಮಾತ್ರ..... ಕುತ್ಗೆ ವರ್ಗೆ ಮಾತ್ರ ನದೀಲಿ ಮುಳುಗಿ ಅಂತ ಬಡಬಡಿಸ್ದ. ವ್ಯಾನ್‌ನ ಏರುತ್ತಾ ನಾವು ಕಣ್ಕಣ್ಣು ಬಿಡ್ತಿದ್ವಿ. ಹೇಗಪ್ಪಾ ಅಂತದ್ದನ್ನು ಕಂಡು ಹೀಗೆ ಉಲ್ಟಾ ಉಲ್ಟಾ, ಸಣ್ಣದಾಗಿ ಸೈಡ್ ಸೈಡ್ ಪಟ್ಟಿ ಹೊಡ್ದೆ, ನದೀಲಿ!' ಇವನ ಕತೆ ನಮಗೆ ಅರ್ಥಾನೇ ಆಗವಲ್ಲದು. ಅಂತೂ ಪ್ರಯಾಣ ಮುಂದುವರೀತು.



ಎದುರು ಬಂದ ಯಾವುದೇ ಗಾಡಿಯಾಗಲಿ ಅದರ ಚಾಲಕನೂ ಇವನೂ ಏನೋ ಜನ್ಮ ಜನ್ಮಾಂತರಗಳ ಸ್ನೇಹಿತರಂತೆ ಬಹಳ ಆತ್ಮೀಯವಾಗಿ ಮಾತಾಡುತ್ತಾ ಹಲವು ನಿಮಿಷಗಳ ಕಾಲ

ಕಳೆದು ಏನೋ ವಿಚಾರ ಚರ್ಚಿಸಿ ಮುಂದೆ ಸಾಗುತ್ತಿದ್ದರು. ಒಂದೋ ಎರಡೋ ಸಲ ಸುಮ್ಮನಿದ್ವಿ. ಆಮೇಲೆ ಇದು ಯಾಕೋ ಅತಿ ಆಯ್ತು ಅಂತೆನಿಸಿದಾಗ ನಾಜೂಕಾಗಿ 'ನಾವು ಹೊರಡೋಣವೇ' ಅಂದ್ವಿ. ಇದರಿಂದ ಸೊಳ್ಳೆಕಡಿದಷ್ಟೂ ಪರಿಣಾಮವಾಗಲಿಲ್ಲ ಬಿಂಗೋಗೆ. ಅವನ ಸಂಭಾಷಣೆ ಮುಗಿದ ಮೇಲೇನೇ ಅವನು ಹೊರಡೋದು ಅಂತ ಜ್ಞಾನೋದಯವಾದ ಮೇಲೆ ತೆಪ್ಪಗೆ ಕೂತ್ವಿ. ಅದೂ ಸಾಧ್ಯವಾಗದ ಪರಿಸ್ಥಿತಿಯಲ್ಲಿ ನಿನಗೆ ಎಲ್ಲಾ ವಾಹನ ಚಾಲಕರೂ 'ಬೆಸ್ಟ್ ಫ್ರೆಂಡ್ಸಾ' ಅಂದೆ.

'ದಿನಾ ನೋಡ್ತಾ ಇರ್ತೀವಲ್ಲಾ, ಆದರಿಂದ ಲೋಕಾಭಿರಾಮ, ಹಿ.. ಹ್ಹಿ! ಇನ್ನೂ ಕೆಲವರು ಹೊಸಾ ಪಿಳ್ಳೆಗಳು, ಅವಕ್ಕೆ ಏನೂ ತಿಳಿದಿರೋಲ್ಲಾ, (ಇವನೇನೋ ಮಹಾ ವೃದ್ಧ ಚಾಲಕ ಅನ್ನೋ ಹಾಗೆ!) ಅವಕ್ಕೆಲ್ಲಾ ಮಾರ್ಗದರ್ಶನ ಮಾಡಬೇಕಲ್ವಾ?' ಬಲೇ ದೊಡ್ಡವನು ಅಂದ್ಕೊಂಡು, ''ಯಾವ ಟರ್ನಿಂಗ್‌ನಲ್ಲಿ ಪೋಲೀಸರು ಹಿಡಿತಾ ಇದ್ದಾರೆ, ಅದಕ್ಕೆ ಯಾವ ಬೈಪಾಸ್ ತೊಗೋಬೇಕು ಅಂತ ಕಲಿಸ್ತಿದೀಯಾ? ಮೂದಲಿಕೆ ಅಂತ್ಲೇ ಅಂದ್ಕೋಳ್ಳಿ ''ಹ್ಹಿ ಹ್ಹಿ ಹ್ಹಿ' ಅಂತ ಮತ್ತೆ ಜುಟ್ಟು ಬಿಚ್ಚಿ ವದರಿದ.

''ಹೋಗ್ಲಿ, ಹಾಡು ಹಾಕ್ಲಾ'' ಅಂದು ನೇಪಾಳಿ ಭಾಷೆಯ ಜಾನಪದಗಳನ್ನು ಹಾಕ್ದ. ಒಂದೊಂದು ಹಾಡೂ 25–30 ನಿಮಿಷಗಳ ಉದ್ದಕ್ಕೆ ನಡೆಯುತ್ತಿತ್ತು, ಪಂಚರತ್ನ ಕೀರ್ತನೆಗಳೋ ಎಂಬಂತೆ. ಹೀಗೆ ಒಂದೂವರೆ ಘಂಟೆ ನಡೀತು. ಅಷ್ಟರಲ್ಲಿ ಅಬ್ಬಾ ಎಂದರೆ ಮೂರು ಹಾಡುಗಳು. ಹೇಗೂ ಸಾಹಿತ್ಯ ಅರ್ಥವಾಗೋ ಬಾಬತ್ತೇ ಇರಲಿಲ್ಲ ಹಾಗಾಗಿ ರಾಗಗಳ ಸವಿ ಅನುಭವಿಸಬೇಕು ಅಂದ್ರೆ, ನಮ್ಮ ಕರ್ನಾಟಕ ಸಂಗೀತದ ಹಿಂದೋಳ ಮತ್ತು ಮೋಹನ. ಇನ್ನೇನೂ ಬೇರೆ ಟ್ಯೂನು ಗಳೇ ಇಲ್ವಾ, ನಿಮ್ಮ ಹಾಡುಗಳಲ್ಲಿ ಅಂದದ್ದಕ್ಕೆ 'ಹಾಕ್ಲಾ' ಎಂದ್ಬಿಟ್ಟು ಮತ್ತೆ ಮೋಹನ ರಾಗದ್ದೇ ಹಾಕ್ದ! ಅವನು ಹಳೇ ಹಾಡನ್ನೇ ಹಾಡಿದ್ರೂ ನಮಗೆ ಅರ್ಥವಾಗ್ತಿರ್ಲಿಲ್ಲ. ''ಅಯ್ಯೋ, ದೇವ ನಮ್ಮಪ್ಪಾ, ನಮಗೆ ಮೋಕ್ಷ ಕರುಣಿಸಪ್ಪಾ ಹಾಗೂ ಮುಕ್ತಿನಾಥಗೆ ತಾನೇ ನಾವು ಹೋಗ್ತಿರೋದು ಅಂದ್ಕೊಂಡು, ಇವನಿಗೆ ಪೂಸಿ ಹೊಡೆದು ಹಿಂದಿ ಸಿನಿಮಾ ಹಾಡುಗಳನ್ನು ಹಾಕ್ಸಿದ್ವಿ, ಬದುಕಿತೋ ಬಡಜೀವ ಅಂತ ಕಣ್ಣು ಮುಚ್ಚಿದೆ ಹಾಗೂ ಹಾಡುಗಳನ್ನು ಗುನುಗುನುಸ್ತಾಯಿದ್ದೆ.

ಇದ್ದಕ್ಕಿದ್ದಂತೆ ನನ್ನ ತುರೀಯ ಸ್ಥಿತಿಯಿಂದ ವಾಸ್ತವಕ್ಕೆ ತಂದ ನಮ್ಮ ಜನಕ್ ಮಹಾರಾಜ್, ನಿಮಗೆ ಎಲ್ಲಾ ಹಾಡುಗಳೂ ಬರತ್ತಾ, ಆಂಟಿ? ಅಂಟಿ ನನ್ನ ಅಭಿಮಾನಿ ಸಂಘಕ್ಕೆ ಸೇರೋ ಯತ್ನದಲ್ಲಿ!

''ಹೂಂನಪ್ಪಾ, 'ಅಂತಾಕ್ಷರೀ ಸ್ಪರ್ಧೆ'ಯಲ್ಲಿ ಭಾಗವಹಿಸೋ ಮಟ್ಟಿಗೆ.'' ಮಿಕ್ಕಿದವರೆಲ್ಲಾ ಘೊಳ್ಳೆಂದು ನಕ್ಕಾಗೆ ಏತಕ್ಕೆಂದು ಅರ್ಥವಾಗದ ಜನಕ ತನ್ನ ಹಿಂದಿನ ಜೀವನ್ಮುಕ್ತ ಸ್ಥಿತಿಗೆ ಹಿಂತಿರುಗಿದ, ತೆಪ್ಪಗೆ! ಈಗ ಜನಕ್‌ನ ವಿಷಯ. ಹಿಂದೆಯೇ. ಹೇಳಿದಂತೆ ಇವನು ವಿನಯವಂತ, ಬಹಳ ಡೀಸೆಂಟ್ ಜಂಟ್ಲ್‌ಮನ್. ಬಹಳ ಓದಿದವನೇನೋ ಅಂದ್ಕೊಂಡು ''ಏನು ಓದಿದ್ದೀಯ' ಅಂದೆ. +2 ಅಂದ. ಇದೊಳ್ಳೆ ಕಥೆ, ಯಾವುದಕ್ಕೆ +2 ಅಂದೆ 'ಸೊನ್ನೆಗೆ ಅಂದ. ನಮ್ಮ ಶಾಕ್ ನಿಮ್ಮ ಊಹೆಗೆ ಬಿಟ್ಟಿರುತ್ತೇನೆ. ಏನೂ 2ನೇ ಕ್ಲಾಸ್ ಡ್ರಾಪ್ ಔಟ್ ಇಷ್ಟು ಕಲಿತವನ ಹಂಗೆ ಇದಾನಲ್ಲ! ಇಷ್ಟು ಸ್ಮಾರ್ಟ್ ಹಾಗೂ ಇನ್ಫಾರ್ಮ್ಡ್ ಹುಡುಗ! ನಮ್ಮ ಆಶ್ಚರ್ಯಾರ್ಥಕ ಚಿಹ್ನೆ ಪ್ರದರ್ಶಿಸುತ್ತಿದ್ದ ಮುಖಗಳ ನೋಟವನ್ನೇ ನೋಡಿ ಆನಂದಿಸುತ್ತ, 'ಸೊನ್ನೆ ಹಿಂದೆ ಒಂದು!' ಅಂದಾಗ 'ಹೋ ಹೋ' ಎಂದು ಎಲ್ಲರೂ ನಕ್ಕರು!



ವರ್ಷದಲ್ಲಿ ಎಷ್ಟು ದಿನ ಸಂಪಾದನೆ ಇರತ್ತೋ, ಇನ್ನೆಷ್ಟು ದಿನ ಇರೋಲ್ಲವೋ, ಇವರ ಮನೋ

ವೃತ್ತಿಯನ್ನು ಮಾತ್ರ ಅಭಿನಂದಿಸಬೇಕು.

ಇದ್ದವರಲ್ಲಿ ವೃದ್ಧರು 'ಬಿಂಗೋ ಮದುವೆ ಮಾಡ್ಬೇಕು' ಎಂದರು, ಅದೇನೋ ಅವರ ಬಾಧ್ಯತೆ ಎಂಬಂತೆ ಜನಕ್ 'ಯಾಕೆ, ನಿಮ್ಗೆ ಮಗಳಿದ್ದಾಳ, ಮದುವೆಗೆ? ಹಾಗೂ ಎರಡನೆಯ ಸಂಬಂಧಕ್ಕೆ ಕೊಡ್ತೀರಾ ಅಂದ. 'ಹೋ, ಹೋ' ಅಂತ ನಗು ಮತ್ತೆ!

ಅಂದರೆ ಈ ಚಿಲ್ಟು ಬಿಂಗೋಗೆ ಮದುವೆ ಆಗಿದೆ! ಆಮೇಲೆ ಅವನೇ ಉಸುರಿದ ನನ್ನ ಮಗನಿಗೆ 4 ವರ್ಷ.

ಈಗ ಹೋ ಹೋ... ಅಲ್ಲ ಮೈ ಗಾಡ್! ಎಂದಿತು ಎಸ್.ಯು.ವಿ. ಇವನ ಹೆಂಡತಿ ಮತ್ತು ಮಗ ಇವನ ತಂದೆಯ ತುಂಬು ಕುಟುಂಬದಲ್ಲಿದ್ದಾರೆ, ಖಟ್ಮಾಂಡುವಿನಿಂದ 180 ಕಿ.ಮೀ ದೂರದ ಹಳ್ಳಿಯಲ್ಲಿ ಮೂವರು ಅಣ್ಣಂದಿರೂ ಇವನೂ ಎಲ್ರೂ ಡ್ರೈವರುಗಳು. ಆಗಾಗ ಊರಿಗೆ ಹೋಗಿ ಬರ್ತಿರ್ತಾರೆ. ಎಂಥಾ ಕಷ್ಟ ಜೀವಿಗಳು, ಎಷ್ಟು ಹಾಯಾಗಿರೋ ಪಿಕ್ಚರ್ ಕೊಡ್ತಾರೆ, ಎಷ್ಟು ನಗ್ತಾ ನಗಿಸ್ತಾ ಇರ್ತಾರೆ ಅಂದ್ಕೊಳ್ತಾ ಯಾವುದೋ ಯೋಚನೇಲಿ ಮುಳುಗಿದ್ದ ನನ್ನನ್ನು 'ಆಂಟಿ, ನಿಮಗೆ ವಾಪಸ್ಸು ಬರೋಕೆ ನಾನೇ ಬರಬೇಕು. ಬೇಕಿದ್ರೆ ಹೇಳಿ ಈಗ್ಲೇ, ನಾನು ಅಡ್ಜಸ್ಟ್ ಮಾಡ್ಕೊಂಡು ಹಾಜರಾಗ್ತೀನಿ ಅಂದ. ಏನೋ ನಾನೊಬ್ಬ ಅಧಿಕಾರಿಣಿ ಅನ್ನೋ ಹಾಗೆ.

ನಾನು, ಜನಕ ಮಹಾರಾಜನ ಒಪ್ಪಿಗೆಯಿದ್ದಲ್ಲಿ ನನ್ನ ಅಭ್ಯಂತರವೇನೂ ಇಲ್ಲ ಅಂದಾಗ ಬಸ್ಸೆಲ್ಲ ಘೊಳ್ಳೆಂದು ನಕ್ಕರು, ಪೋಕಾರಾನಲ್ಲಿ ಇಳಿಯುತ್ತಾ!

## ಇಂದಿನ ಆಫೀಸಿನ ಲೆಕ್ಕ

ಒಂದೂ ಎರಡು
ಆಫೀಸಿಗೆ ಹೊರಡು
ಮೂರೂ ನಾಲ್ಕು
ಫಂಕ ಹಾಕು
ಐದು ಆರು
ಕಾಫಿ ಹೀರು
ಏಳು ಎಂಟು
ಎಣಿಸು ಗಂಟು
ಒಂಭತ್ತು ಹತ್ತು
ಮನೆಗೆ ಕಾಲ್ಕಿತ್ತು
ಆಫೀಸಿನ ವೇಳೆಯು ಮುಗಿದಿತ್ತು
ಕೆಲಸವು ಹಾಗೆಯೇ ಉಳಿದಿತ್ತು

– **ಸುಕೇಶವ**



# ಫೋನ್ ರಿಂಗ್ ಆದಾಗ

- ನುಗ್ಗೆಹಳ್ಳಿ ಪಂಕಜ

**ಸ**ರಸ್ವತಿ : (ಸ್ವಗತ) ಅಲ್ಲಾ, ದೀಪಾವಳಿ ಹತ್ರ ಬಂತು, ಮಾಮೂಲಂತೆ ನಂಗೆ ಯಾವ ಪತ್ರ ಆಗ್ಲಿ, ಫೋನ್ ಕಾಲ್ ಆಗ್ಲಿ ಬರ್ಲೇ ಇಲ್ವಲ್ಲಾ, ನಮ್ಮ ದೀಪಾವಳಿ ಸಂಚಿಕೆಗೆ ಏನಾರ ಬರ್ಕೊಡಿ ಅಂತ? ನನ್ನನ್ನ ಮರ್ತೇಬಿಟ್ಟಿದಾರೋ ಹೇಗೆ? ಊಹೂ.. ಹಾಗಾಗೋದಿಕ್ಕೆ ಬಿಡಬಾರ್ದು - ನಾನೇ ಫೋನ್ಮಾಡಿ ಕೇಳ್ಕೊಳ್ಳಲೇ, ಏನಾರ - ಕೊನೆಗೆ ಒಂದೆರ್ಡು ಅಡಿಗೆನಾದ್ರೂ ಬರ್ಕೊಡ್ತೀನಿ ಅಂತ? ಛೇ, ಅಡಿಗೆ ನಂಗೆ ಸರಿಯಾಗಿ ಬರಲ್ವಲ್ಲಾಪ್ಪಾ, ಏನ್ಮಾಡೋದು? ಸಂಪಾದಕರಿಗೆ ಎಲ್ಲೋ ಮರೆತುಹೋಗಿರಬೇಕು, ನನ್ನನ್ನ ಕೇಳೋದು - ಇರ್ಲಿ, ನಾನೇ ಫೋನ್ಮಾಡಿ ಜ್ಞಾಪುಸ್ತೀನಿ.... (ಅಷ್ಟರಲ್ಲಿ ಫೋನ್ ರಿಂಗಾಗಲು, ಸಂತಸದಿಂದ) ಆ - ಬಂತು ಫೋನು..... ಯಾವ ಪತ್ರಿಕೆಯ ಸಂಪಾದಕರಿರಬಹುದು? ಕೇಳಿದ್ರಾಯ್ತು - (ರಿಸೀವರನ್ನು ಕಿವಿಗೆ ಆನಿಸಿಕೊಂಡು ಮಧುರವಾಗಿ ಉಲಿಯುವರು) ನಮಸ್ಕಾರ - ನಾನು ಪ್ರಸಿದ್ಧ ಲೇಖಿಕಿ ಸರಸ್ವತಿ..... (ಬಾಲ್ಕನಿಯಲ್ಲಿ ಅವಳ ಮಾವನವರು ಮತ್ತು ಕೆಲಸದಾಕೆ ಲಿಂಗಿ ಗಟ್ಟಿಯಾಗಿ ಮಾತಾಡೋದು ಕೇಳ್ಬರ್ತೆ - ಅದರಿಂದಾಗಿ ಫೋನ್‌ನಲ್ಲಿ ಬರೋ ಗಂಟಲು ಕೇಳಿಸೋದೇ ಇಲ್ಲ - ಸರಸ್ವತಿ ಇನ್ನೂ ಗಟ್ಟಿಯಾಗಿ ತನ್ನ ಧ್ವನಿ ಏರಿಸುವಳು) ಹಲೋ? ಹಲೋ? ಹಲೋ? (ಆದರೂ ಆ ಪಕ್ಕ ಮಾತನಾಡುವವರ ಗಂಟಲು ಸ್ವಲ್ಪಾನೂ ಕೇಳಿಸೋದೇ ಇಲ್ಲ - ಬಾಲ್ಕನಿಯಲ್ಲಿ ಮಾತನಾಡುವವರ ಗಂಟಲೇ ಇನ್ನೂ ಎತ್ತರದಲ್ಲಿ ರತ್ತೆ! (ಸಿಟ್ಟಿನಿಂದ ಕೂಗಿಕೊಳ್ಳುವಳು) ಏನಿದು ಗಲಾಟೆ? ಲಿಂಗಿ! ನಂಗೆ ಫೋನ್ ಬಂದಿರೋದು ನಿಂಗೆ ಕೇಳಿಸ್ಲಿಲ್ವಾ?

> **ಫೋನ್‌ನಲ್ಲಿ ಮಾತಾಡೋಣ ಅಂದ್ರೆ ಎಷ್ಟೊಂದು ಅಡೆತಡೆ**

ಲಿಂಗಿ : (ಅಲ್ಲಿಂದಲೇ ಕೂಗಿಕೊಳ್ಳುವಳು) - ಕೇಳಿಸ್ತು ಅಮ್ಮಾವ್ರೇ.....

ಸರಸ್ವತಿ : ಆ ಹೊತ್ತು - ನಂಗೆ ಫೋನ್ ಬಂದಾಗ, ಮಾತಾಡ್ಬಾರ್ದು ಅನ್ನೋದು ನಿಂಗೆ ಗೊತ್ತಿಲ್ವಾ?

ಲಿಂಗಿ : ಗೊತ್ತು ಅಮ್ಮಾವ್ರೆ.....

ಸರಸ್ವತಿ : (ಮತ್ತೂ ಸಿಟ್ಟಿನಿಂದ) - ಮತ್ತೆ ಯಾಕ್ ಹೀಗೆ ಜೋರಾಗಿ ಮಾತಾಡ್ತಿದೀ, ಒಳ್ಳೆ ಲೌಡ್‌ಸ್ಪೀಕರ್ ಹಾಗೆ! ಏನು ಲೆಕ್ಚರ್ ಕೊಡ್ತಿದೀಯಾ ಬಾಲ್ಕನೀಲಿ ನಿಂತು, ರಸ್ತೇಲಿ ಹೋಗಿಬರೋವ್ರಿಗೆಲ್ಲಾ? ನಂಗೋ, ಯಾರು ಫೋನ್ಮಾಡಿದ್ರೋ ಕೇಳಿಸ್ತಾನೇ ಇಲ್ಲ! (ಫೋನಿನಲ್ಲಿ ಕೂಗುವಳು) - ಹಲೋ, ಹಲೋ? (ಮತ್ತೂ ಜೋರಾಗಿ) ಯಾರು? ಹಲೋ? ಊಹೂ... ಕೇಳಿಸ್ತಾ ಇಲ್ಲ, ಯಾರದು ಮಾತಾಡ್ತಿರೋದು? ಹಲೋ..



ಲಿಂಗಿ : (ಅಲ್ಲಿಂದಲೇ ಕೂಗಿಕೊಳ್ಳುತ್ತಾ ಬರುವಳು) ''ಕರೆದ್ರಾ ಅಮ್ಮಾವರೇ?''

ಸರಸ್ವತಿ : (ವ್ಯಂಗ್ಯವಾಗಿ) ಹೌದು ಕಣೇ, ಅಕ್ಷತೆ ಕೊಟ್ಟು ನಿನ್ನನ್ನ ಕರೆದೆ – ಬೆಳಗ್ಗೆ ಬೆಳಗ್ಗೆ ಯಾಗೊತ್ಲೂ ನನ್ ಮೂಡ್‌ನ್ನೆಲ್ಲಾ ಹಾಳ್ಮಾಡಿಬಿಟ್ಟೆ! ಚೆನ್ನಾಗಿ ಕಟ್ಕೊಂಡ್ನಲ್ಲಾ ನಿನ್ನನ್ನ!

ಲಿಂಗಿ : ನೀವು ನಂಗೆ ಇನ್‌ಸಲ್ಟ್ ಮಾಡ್ತಿದೀರಿ ಅಮ್ಮಾವ್ರೆ! ಯಾಪಾಟಿ ಮಂದಿ ಬಂದು ನನ್ ಕಾಲಿಗ್ ಬಿದ್ರು – ''ನಮ್ಮನೆ ಕೆಲಸಕ್ ಬಾ, ನಮ್ಮನೆ ಕೆಲಸಕ್ ಬಾ'' ಅಂತ! ಹೋದ್ನಾ ನಾನು? ಏನೋ, ನೀವು ಒಳ್ಳೇವ್ರು, ನನ್ನನ್ ಚೆಂದಾಗಿ ನೊಡ್ಕೊತೀರಿ ಅಂತ, ಒಸಿ ಕಮ್ಮಿ ಸಂಬಳ ಆದ್ರೂ, ನನ್ ಗಂಡ ಬ್ಯಾಡ ಬ್ಯಾಡ ಅಂದ್ರೂ, ಬಂದ್ ಸೇರ್ಕೊಂಡಿವ್ನಿ, ಈ ಮನ್ಯಾಗೆ..... ಹಂಗಿರೋವಾಗ, ಹಿಂಗಾ ಏಳೋದು ನೀವು?

ಸರಸ್ವತಿ : ಏನೇ ಇದು, ತುಂಬಾ ಮಾತಾಡೋದನ್ನ ಕಲ್ತಿದೀಯಲ್ಲೇ!

ಲಿಂಗಿ : ನೀವೂ ಅಂಗೇ – ಸದಾ ಫೋನಲ್ಲಿ ಏನಾರ ವಟಗುಟ್ತಾನೇ ಇರ್ತೀರಿ!

ಸರಸ್ವತಿ : ಅ – ಜ್ಞಾಪಕ ಬಂತ್ನೋಡು – ಮರೆತೇಬಿಟ್ಟಿದ್ದೆ, ನಿನ್ಮಾತ್ನಲ್ಲಿ! ಯಾರೋ ಫೋನ್ಮಾಡ್ತಿದಾರೆ ನಂಗೆ, ಅಷ್ಟು ಹೊತ್ನಿಂದ – ಯಾರೂ ಅಂತಾನೆ ಗೊತ್ತಾಗ್ತಿಲ್ಲ..... (ಮತ್ತೆ ಫೋನಿನ ಶಬ್ದವಾಗಲು, ಸಂಭ್ರಮದಿಂದ ) ಚೂರೂ ಮಾತಾಡ್ದೆ , ಸುಮ್ನಿರು ಒಂದ್ ಹತ್ನಿಮಿಶ ಲಿಂಗಮ್ಮ – ಯಾರು ಎತ್ತ ಅಂತ ಕೇಳಿ ತಿಳ್ಕೋತೀನಿ. (ಮುದ್ದಾಗಿ) ಹೆಲೋ? ಹೆಲೋ? ನಾನು ಸರಸ್ವತಿ ದೇವಿ – ಪ್ರಸಿದ್ಧ ಲೇಖಕಿ ಸರಸ್ವತಿ ದೇವಿ..... ಮೊನ್ನೆ ಅತ್ಯುತ್ತಮ ಕಾದಂಬರಿಗಾರ್ತಿ ಅಂತ, ದೊಡ್ಡ ಪ್ರಶಸ್ತಿ ಬಂತು ನೋಡಿ, ಆ ಸರಸ್ವತಿದೇವಿ..... ನೀವು ಯಾರೂಂತ ಸ್ವಲ್ಪ ತಿಳಿಸಿದ್ರೆ.....

(ಅಷ್ಟರಲ್ಲಿ ಬಾಲ್ಕನಿಯಿಂದ ಜೋರಾಗಿ ಸರಸ್ವತಿಯ ಮಾವನವರು ಕೂಗುವರು, ಲಿಂಗಿಯನ್ನ – ಫೋನ್ ಅವರ ಗಂಟಲಲ್ಲಿ ಮುಳುಗಿ ಹೋಗುವುದು)

ಮಾವನವರು : (ಗಟ್ಟಿಯಾಗಿ) ಲಿಂಗೀ? ಏಯ್ ಲಿಂಗಿ? ಎಲ್ ಸತ್ತೋದ್ಯೆ ನೀನು, ಅರ್ಧಂಬರ್ಧ ಸುದ್ದೀನ ಹೇಳಿ? ವಿಚಾರಿಸ್ಕೊಂಡು ಬಂದ್ಯೇನೇ, ನಾನು ಹೇಳಿದ್ದನ್ನ? ಯಾರದ್ದೇ ಆ ಹೆಣ?

ಲಿಂಗಿ : (ಇನ್ನೂ ಗಟ್ಟಿಯಾಗಿ) ಆ ಹೆಣ ಇದ್ರೆ ತಾನೆ ಇಚಾರ್‌ಸೊಕ್ಕೆ ದೊಡ್ಡಯಜಮಾನ್ರೇ? ನಾ ಇಲ್ಲಿಂದ ಹೋಗೋ ಅಷ್ಟೊತ್ತಿಗೇ ಒಂಟೋಗಿತ್ತು.....

ಮಾವನವರು : (ರೇಗುವರು – ಬಾಲ್ಕನಿಯಿಂದಲೇ) ಒಂಟೋಗಿತ್ತು? ಎಲ್ಲಿಗೆ?

ಲಿಂಗಿ : (ಇಲ್ಲಿಂದಲೇ ರೇಗುವಳು) ಇನ್ನೆಲ್ಲಿಗೆ? ಸ್ಮಶಾನಕ್ಕೆ.... ಅಷ್ಟೂ ಗೊತ್ತಿಲ್ವಾ ನಿಮಗೆ, ದೊಡ್ಡಯಜಮಾನ್ರೇ? ಇನ್ನೇನು ನೀವೂ ಅಲ್ಲಿಗೇ ಓಗೋದು.....

ಮಾವನವರು : ನಾ ಹೋದಾಗ ನಿನ್ನನ್ನೂ ಕರ್ಕೊಂಡು ಹೋಗ್ತೀನೆ – ಅಧಿಕಪ್ರಸಂಗಿ!! ಕೇಳಿದ್ದಕ್ ಮಾತ್ರ ಉತ್ತರ ಕೊಡು.... ಅ, ಹೆಣ ಹೆಂಗ್ಸಿಂದೋ – ಗಂಡ್ಸಿಂದೋ?

ಲಿಂಗಿ : ಸ್ಮಶಾನಕ್ಕೇ ಹೋಗಿ ನೋಡ್ಕೊಂಡು ಬರೋಣ ಬನ್ನಿ ಯಜಮಾನ್ರೆ? ಶಾನೆ ದೂರ ಏನಿಲ್ಲ – ಆಟೋ ತರ್‌ಲೋ, ಟ್ಯಾಕ್ಸಿ ತರ್‌ಲೋ?



ಮಾವನವರು : (ಸಿಟ್ಟಾಗಿ) ಎತ್ತಿನ್ ಗಾಡಿ ತಗೊಂಡ್ಬಾ! ಶುದ್ಧ ತಲೆಹರಟೆ!

ಸರಸ್ವತಿ : ಏನೇ ಅದು ಲಿಂಗಿ, ಬೆಳಗ್ಗೆ ಬೆಳಗ್ಗೇನೇ ರಗಳೇ? ಮಾವನವರು ದೊಡ್ಡವರು, ಈ ಮನೆಗೆ ಹಿರಿಯರು, ಅವ್ರ ಹತ್ರ ಜಗಳ ಕಾಯ್ಬೇಡ ಅಂತ, ಎಷ್ಟು ಸಲ ಬಡ್ಕೊಂಡಿಲ್ಲ? ಆದ್ರೂ ಸುಮ್ ಸುಮ್ನೆ ರೇಗಿಸ್ತೀ, ಆಮೇಲೆ ಇಡೀ ದಿನ ಮನೇಲಿ

ರಂಪ ಮಾಡ್ತಾರೆ ನೋಡ್ಕೊಂಡಿರು. ನಿಂಗೇನು, ಹಾಯಾಗಿ ಮನೆಗೆ ಹೊರಟುಹೋಗ್ತಿ, ನಮಗ್ತಾನೆ ತಲೆನೋವು?

ಲಿಂಗಿ : (ಸಿಟ್ಟಿನಿಂದ) ಅಯ್ಯೋ ಬಿಡಿ ಅಮ್ಮಾವ್ರೆ, ಅವ್ರ ಹತ್ರ ಏಗೋದು ಬಾಳ ಕಷ್ಟ ಅಲ್ಲಾ, ರಸ್ತೇಲಿ ಹೋಗೋಬರೋವ್ರ ಪಿರಾಣ ಎಲ್ಲಾ ಬೇಕು ಆ ಅಯ್ಯಪ್ಪಂಗೆ – ಅಲ್ಯಾರಾದ್ರೂ ಜಗಳ ಕಾಯ್ತಿದ್ರೆ ಸರಿ, ಹೋಗಿ ತಿಳ್ಕೊಂಡು ಬರ್ಬೇಕು, ಏನು ಎತ್ತ ಅಂತ! ಮದ್ವೆಗಂಡು ಹೋಗ್ತಿದ್ರೆ ಸರಿ, ಯಾರ್ದು ಮದ್ವೆ? ಹೆಣ್ಣು ಯಾವ ಕಡೇದು? ಎಲ್ಲಾ ಕಥೆ ಬೇಕು, ಮುದುಕಪ್ಪನಿಗೆ. ಅಲ್ಲಾ, ಸಾಯೋ ಕಾಲ್ದಲ್ಲಿ ಇವೆಲ್ಲಾ ಯಾಕೆ ಅಂತೀನಿ? ಯಾವ ಸೀಮೆ ಪುಣ್ಯ ಬರತ್ತೆ ಏಳಿ? ನೀವೇ ಒಸಿ ಬುದ್ದಿ ಏಳಿ ಅಮ್ಮಾವ್ರೆ?

ಸರಸ್ವತಿ : ಅದ್ಸರಿ, ನೀನ್ಯಾಕೆ ಒಳ್ಳೆ ಲೌಡ್‌ಸ್ಪೀಕರ್ ಹಾಗೆ ಮಾತಾಡ್ತಿದ್ದೆ ಅವರ ಕೂಡ? ನಂಗೆ ಫೋನ್ ಬಂದಾಗ ಹಾಗ್ಮಾಡಿದ್ರೆ ತೊಂದ್ರೆ ಆಗತ್ತೆ ಅನ್ನೋದು ನಿಂಗೊತ್ತಿಲ್ವೆ? ಈಗ್ನೋಡು, ಯಾರು ಫೋನ್ ಮಾಡಿದ್ರೋ ಕೇಳಿಸ್ಲೇ ಇಲ್ಲ, ನಿಮ್ಮ ಗಲಾಟೇಲಿ!

ಲಿಂಗಿ : ಒಳ್ಳೆ ಚೆಂದಾಗಿ ಹೇಳ್ತಿರಲ್ಲಾ ಅಮ್ಮಾವ್ರೆ! ದೊಡ್ಡಯಜಮಾನ್ರು ಪೂರ್ತಿ ಕಿವುಡು ಅನ್ನೋದು ನಿಮಗ್ ಗೊತ್ತಿಲ್ವಾ? ಆ ಪಾಟಿ ಕೂಗಿ ಏಳಿದ್ರೇನೇ ಕೇಳ್ಸೊಲ್ಲ – ಇನ್ನು ಮೆತ್ತಗೆ ಮಾತಾಡಿದ್ರೆ ಸುಮ್ಕಿರ್ತಾರಾ? ಊರಿಗೆಲ್ಲಾ ಕೇಳೋ ಹಾಗೆ ರಂಪ ಮಾಡ್ತಾರೆ, ಚಿಕ್ಕಮಕ್ಕಳ್ಹಂಗೆ ಅಷ್ಟೆ – ಅದೂ ಬಾಲ್ಕನೀಲಿ! ಆಗ ರಸ್ತೇಲಿ ಹೋಗಿಬರೋವ್ರೆಲ್ಲ ತಮಾಷೆ ನೋಡ್ತಾ ನಿಂತ್ರೆ, ನಿಮಗೆ ಬೇಸರ ಆಗಲ್ವಾ ಏಳಿ ಮತ್ತೆ? ಫೋನ್ಗೇನು ಗಡಗಡ ಮಾಡ್ತಾನೇ ಇರತ್ತೆ (ಮತ್ತೆ ಫೋನ್ ಶಬ್ದ ಆಗಲು) ಓ, ಮತ್ ಬಂತು ನೋಡಿ ಬೇತಾಳ – ತಗೊಳ್ಳಿ, ಎಷ್ಟೊತ್ತಾದ್ರೂ ಮಾತಾಡಿ ಮಾತಾಡಿ, ಫೋನೇ ಸುಸ್ತಾಗಿ ಕೆಳಗ್ ಬೀಳೋವರ್ಗೂ..

ಸರಸ್ವತಿ : ಸಧ್ಯ ನೀನ್, ಬಾಯ್ಮುಚ್ಕೊಂಡಿರು, ನಾನ್ ಮಾತಾಡೋವಾಗ (ಮುದ್ದಾಗಿ ಪ್ರಶ್ನಿಸುವಳು) ಹಲೋ, ಯಾರು ಫೋನ್ಮಾಡ್ತಿರೋದು? (ಅಷ್ಟರಲ್ಲಿ ಬಾಲ್ಕನಿಯಿಂದ ಮಾವನವರ ಗಂಟಲು, ಜೋರಾಗಿ)

ಮಾವನವರು : ಲಿಂಗೀ, ಆ ಕಡೆ ಕಾರಿಂದ ಇಳಿದ್ರಲ್ಲಾ ಇಬ್ರು – ಗಂಡ ಹೆಂಡ್ತಿ ಅಂತ್ಕಾಣತ್ತೆ.... ನಾನವರನ್ನ ಎಲ್ಲೋ ಕಂಡ ಹಾಗಿದೆ.... ಯಾರವರು, ಕೇಳಿ ತಿಳ್ಕೊಂಡು ಬರ್ತೀಯಾ? ಬೇಗ್ ಹೋಗೇ, ಅವರು ವಾಪಸ್ ಹೋಗೋದ್ರೊಳಗೆ....

ಲಿಂಗಿ : ನಾನ್ಯಾರನ್ನ ಇಚಾರಿಸ್ಲೀ, ದೊಡ್ಡಯಜಮಾನ್ರೇ? ಅಲ್ಲಿ, ಗಾಡಿಲಿ ಕಸ ತುಂಬ್ತಾ ಇದಾನಲ್ಲಾ, ಆ ಅಯ್ಯನ್ನ ಕೇಳ್ಲೇ?

ಮಾವನವರು : ಎಲ್ಲಾಬಿಟ್ಟು ಅವನಿಗಾ ಗೊತ್ತಿರೋದು! ನಿಂಗಷ್ಟೂ ಗೊತ್ತಾಗಲ್ವಾ? ಆಹಾಹಾಹಾ, ಅದೇನ್ ಬುದ್ಧಿನೋ! ಹೋಗಿ ಅವರ ಕಾರ್‌ಡ್ರೈವರನ್ನೇ ವಿಚಾರಿಸೇ.... ಕರೆಕ್ಟಾಗಿ ಗೊತ್ತಾಗತ್ತೆ....

ಸರಸ್ವತಿ : (ರೇಗುವಳು) ಸ್ವಲ್ಪ ಹೊತ್ತು ಸುಮ್ನಿರು ಅಂತ ಹೇಳೇ ನಿನ್ನ ಯಜಮಾನ್ರಿಗೆ – ನಂಗೆ ಫೋನ್‌ನಲ್ಲಿ ಏನೂ ಕೇಳಿಸ್ತಾನೇ ಇಲ್ಲ – ಅದ್ಯಾರ್ ಫೋನ್ ಮಾಡ್ತಿದಾರೆ ಅನ್ನೋದು ಕೂಡ ಗೊತ್ತಾಗ್ತಿಲ್ಲ.....



ಲಿಂಗಿ : (ರೊಚ್ಚಿಗೇಳ್ತಾಳೆ) ಏಯ್, ಈ ಮುದುಕಪ್ಪ ಯಾವೂರ ಯಜಮಾನ ನಂಗೆ,

ಅಮ್ಮಾವ್ರೇ! ನೀವೀಗ ಏಳಿದ್ದು ನನ್ ಯಜಮಾನನ ಕಿವಿಗೆ ಏನಾರ ಬಿತ್ತೋ, ಆಮೇಲೇನಿಲ್ಲಾ, ಕೈಗೆ ಮಚ್ಚು – ಮಚ್ ತಗೋತಾನೆ ಅಷ್ಟೆ!

ಸರಸ್ವತಿ : (ವ್ಯಂಗ್ಯವಾಗಿ) ಆಹಾಹಾ ವೀರಾಧಿವೀರ ರಾಣಾ ಪ್ರತಾಪಸಿಂಹ ನಿನ್ನ ಗಂಡ – ನಾ ಕಂಡಿಲ್ವೇ? ಗೂನು–ಊನು–ಕುಳ್ಳು, ನಾಕಂಡಿಲ್ವೇನೇ ನಿನ್ನ ಆ ಶೂರ ಗಂಡನ್ನ! ಸುಮ್ನಿರೇ! (ಅಷ್ಟರಲ್ಲಿ ಮಾವನವರು ಮತ್ತೆ ಕೂಗಿಕೊಳ್ಳುವರು – ಏಯ್ ಲಿಂಗೀ, ಲಿಂಗೀ?)

ಲಿಂಗಿ : (ಅಸಹನೆಯಿಂದ ಮತ್ತೂ ಜೋರಾಗಿ ಬದಲೀಯುವಳು) ಅಯ್ಯಾಯ್ಯ, ಅದೇನ್ ಆ ಪಾಟಿ ಕೂಗ್ತಿರಿ, ದೊಡ್ಡ ಯಜಮಾನ್ರೆ! ಒಸಿ ಸುಮ್ಗಿರ್ಬೇಕಂತೆ ನೀವು!

ಮಾವನವರು : (ಗದರಿಸುವ ಧ್ವನಿಯಲ್ಲಿ) ಏನು, ನಾನು – ಸುಮ್ಗಿರ್ಬೇಕಂತ! ಹಾಗಂತ ಯಾರೇ ಆರ್ಡರ್ ಮಾಡಿದ್ದು?

ಲಿಂಗಿ : ಇನ್ಯಾರು? ಸೊಸೆ ಅಮ್ಮ ಏಳ್ತು, ನಿಮಗೆ ಏಳೂಂತ... ಬೇಕಾದ್ರೆ ನೀವೇ ವಸಿ ಬಂದು ಇಚಾರಿಸ್ರಿ.....

ಮಾವನವರು : (ಗದರುತ್ತಲೇ ಬರುವರು) ಸೊಸೆ – ಅಮ್ಮ ಯಾರೇ, ನಂಗ್ ಆರ್ಡರ್ ಮಾಡೋಕ್ಕೇ – ನಾನ್ ಯಾವಾಗ ಮಾತಾಡ್ಬೇಕು, ಯಾವಾಗ ಮಾತಾಡ್ಬಾರ್ದು, ಅಂತೆಲ್ಲಾ? ಈ ಮನೆಗೆ ದೊಡ್ಡ ಯಜಮಾನ ಅಲ್ವೇನೇ ನಾನು?

ಲಿಂಗಿ : ಹೌದು ಯಜಮಾನ್ರೇ, ನೀವೇ ಈ ಮನೆಗೆಲ್ಲಾ ಯಜಮಾನ್ರು – ದೊಡ್ಡ ಯಜಮಾನ್ರು....

ಮಾವನವರು : (ಮತ್ತೂ ದರ್ಪದ ಧ್ವನಿಯಲ್ಲಿ) ಮತ್ತೆ, ನಾ ಯಾಕ್ ಬಾಯ್ಮುಚ್ಚ್ಕೊಂಡಿರ್ಬೇಕು, ಅಂತ ಕೇಳೇ, ನಿನ್ನ ಆ ಸೊಸೆ – ಅಮ್ಮನ್ನ!

ಲಿಂಗಿ : (ಜೋರಾಗಿ) ಸೊಸೆ–ಅಮ್ಮಾವ್ರೆ, ನಾ ಯಾಕ್ ಸುಮ್ನಿರಬೇಕೂಂತ ಕೇಳ್ತತ್ತೆ ಮುದುಕಪ್ಪ

ಸರಸ್ವತಿ : ಹೇಳೇ ಅವರಿಗೆ, ನಾನು ಫೋನ್‌ನಲ್ಲಿ ಮಾತಾಡ್ತಿದೀನಿ ಅಂತ......

ಲಿಂಗಿ : (ಮತ್ತೂ ದೊಡ್ಡ ಗಂಟಲಲ್ಲಿ) ಸೊಸೆ–ಅಮ್ಮ, ಯಾರ ಹತ್ರಾನೋ ಫೋನ್‌ನಲ್ಲಿ ಮಾತಾಡ್ಬೇಕಂತೆ, ಅದಕ್ಕೆ ಎಲ್ರನ್ನೂ ಸುಮ್ಗಿರಿ, ಸುಮ್ಗಿರಿ, ಅಂತವ್ರೆ. ದೊಡ್ಡ ಯಜಮಾನ್ರೆ......

ಮಾವನವರು : (ಕೂಗಿ ಕೇಳುವರು ಜಬರ್ದಸ್ತಿನಿಂದ) – ಫೋನಾ? ಯಾರ ಹತ್ರಾನಂತೆ?

ಲಿಂಗಿ : (ಅಷ್ಟೇ ಎತ್ತರದ ಗಂಟಲಲ್ಲಿ ಕೂಗಿ ಕೇಳುವಳು) ಯಾರ ಹತ್ರಾ ಮಾತಾಡ್ತಿದೀರಿ ಫೋನ್‌ನಲ್ಲಿ, ಅಂತ ಮುದುಕಪ್ಪ ಕೇಳ್ತಿದೆ, ಸೊಸೆ – ಅಮ್ಮಾವ್ರೇ....

ಸರಸ್ವತಿ : (ಸಿಟ್ಟಿನಿಂದ) ನಿಮ್ಮ ಹೆಂಡ್ತಿ ಹತ್ರ ಅಂತ, ಹೇಳೇ ಮಾರಾಯ್ತೀ – ಬೆಚ್ಕೊಂಡು ಓಡ್ ಹೋಗ್ತಾರೆ! ಎಲ್ಲಿ ಮತ್ತೆ ಬಂದ್ಬಿಟ್ಳೋ, ಆ ಪತಿವ್ರತೆ, ಅಂತ!



ಲಿಂಗಿ : (ನಗುತ್ತಾ) ಭೇಷ್, ಪಸಂದಾಗೈತೆ ನಿಮ್ಮ ಪಿಲಾನೂ (ಗಟ್ಟಿಯಾಗಿ ಕೂಗಿ ಹೇಳುವಳು, ಮಾವನವರಿಗೆ) ದೊಡ್ಡ ಯಜಮಾನರೆ, ನಿಮ್ಮ ಹೆಂಡ್ತಿ ಬಂದವ್ರಂತೆ ಫೋನ್ನಲ್ಲಿ – ಆಕೆ ಜೊತೆ ಮಾತಾಡ್ತಿದಾರಂತೆ ಸೊಸೆ – ಅಮ್ಮ.

ಮಾವನವರು : (ಗಾಬರಿಯಿಂದ) ಹಾ! ಮತ್ತೆ ಬಂದ್ಬಿಟ್ತಾ ಆ ಶನಿ, ನರಕದಿಂದ! ನರಸಿಂಹಾ!

ನರಸಿಂಹಾ! (ಬೇಗ ಬೇಗ ಹಿಂತಿರುಗುವ ಅವರ ಚಪ್ಪಲಿ ಹಾಗೂ ವಾಕಿಂಗ್ ಸ್ಟಿಕ್ ಶಬ್ದ)

ಲಿಂಗಿ : (ನಗುತ್ತಾ) ಅದ್ರ ರೂಮಿಗೆ ಹೊರಟೋಯ್ತು ಮುದುಕಯ್ಯ, ಅಮ್ಮಾವ್ರೆ.... ಇನ್ ಹಾಯಾಗಿ ಫೋನ್ ಮಾಡ್ಬಹುದು ಕಣವ್ವಾ – ಯಾರ ತೊಂದ್ರೇನೂ ಇಲ್ದೆ...

ಸರಸ್ವತಿ : (ಫೋನಿನಲ್ಲಿ) ಹೆಲೋ, ಯಾರದು, ರಿಂಗ್ ಮಾಡ್ತಿರೋದು? (ಅಷ್ಟರಲ್ಲಿ ಬೀದಿಬಾಗಿಲ ಕರೆಗಂಟೆಯಾಗಲು ಅಸಹನೆಯಿಂದ) – ಇದೊಂದು, ಹೊತ್ತಿಲ್ಲ–ಗೊತ್ತಿಲ್ಲ! ಎಲ್ಲಾ ಕೆಲಸಾನೂ ಬಿಟ್ಟು ಓಡ್ಬೇಕು! ಯಾರು ವಕ್ರಿಸಿದಾರೋ ಜೀವ ತಿನ್ನೊಕ್ಕೆ.....

ಲಿಂಗಿ : (ಕರೆಗಂಟೆ ನಿಲ್ಲದಿರಲು) ಅಮ್ಮಾವ್ರೇ, ಇನ್ನಾ ಶಬ್ಧ ಆಗ್ತಾನೇ ಇದೀಯಲ್ಲಾ, ಏನ್ಮಾಡೋದು?

ಸರಸ್ವತಿ : (ಅಷ್ಟರಲ್ಲಿ ಮತ್ತೆ ಫೋನ್ ರಿಂಗಾಗಲು) ಹೆಲೋ? ಹೆಲೋ? (ಕರೆಗಂಟೆಯ ಶಬ್ದದಲ್ಲಿ ಆ ಕಡೆ ಮಾತನಾಡೋದು ಏನೇನೂ ಕೇಳಿಸದಿರಲು, ಅಸಹನೆಯಿಂದ) ಹಾಳಾದ್ದು! ಒಂದ್ ಫೋನ್ ಮಾಡೊಕ್ಕೂ ಆಗಲ್ಲ, ಈ ಮನೇಲಿ! ಏನಾದ್ರೊಂದು ಕಿರುಕುಳ! ಹಾಯಾಗಿ ನಮ್ಮ ಪಾಡಿಗೆ ನಾವು ಇರೋಣ ಅಂದ್ರೆ, ಯಾರಾದ್ರೊಬ್ರು ಹೀಗೆ ವಕ್ರಿಸ್ಕೊಂಡು ಬರ್ತಾರೆ, ಡಿಸ್ಟರ್ಬ್ ಮಾಡೋಕ್ಕೆ! ಸಂಸಾರ ಗಿಂಸಾರ ಅಂತ ಯಾರಿಗೂ ಇಲ್ವೆ? ಇನ್ನೊಬ್ರ ಬಗ್ಗೆ ಕನ್ಸಿಡರೇಶನ್ ಬೇಡ್ವೆ? ಅಲ್ಲಾ, ಈ ಮನೇಲಿ ಇರೋದು ಮೂರೇ ಜನ, ಆದ್ರೂ ಒಬ್ರಿಗೆ ಒಂದು ಫೋನ್ಮಾಡೋಕ್ಕೆ ಆಗಲ್ಲ ಅಂದ್ರೆ ಏನರ್ಥ? ಛೇ, ಎಲ್ಲಾದ್ರೂ ವನವಾಸ ಹೋಗ್ಬಿಡಬೇಕು ಅಂತನ್ಸುತ್ತೆ.. (ಅಷ್ಟರಲ್ಲಿ ಮತ್ತೆ ಕರೆಗಂಟೆಯಾಗಲು, ಕೂಗಿಕೊಳ್ಳುವಳು) ಲೇ ಲಿಂಗೀ, ಒಳ್ಳೆ ಕಲ್ ಗೊಂಬೆ ಹಾಗ್ ನಿಂತಿದೀಯಲ್ಲೇ – ಸ್ವಲ್ಪ ಹೋಗ್ನೋಡೆ, ಅದ್ಯಾರು ಅಂತ?

ಲಿಂಗಿ : (ಗಟ್ಟಿಯಾಗಿ) ಅಮ್ಮಾವ್ರೇ, ಬಾಗಿಲಿಗೆ ಚೈನ್ ಹಾಕಿ ತೆಗೀಲೋ, ಇಲ್ಲ ಹಾಗೇ ತೆಗೀಲೋ?

ಸರಸ್ವತಿ : ಮೆತ್ತಗ್ ಮಾತಾಡೇ, ಬೆಂಗಳೂರು ಪೇಟೆಗೆಲ್ಲಾ ಕೇಳ್ಸೊ ಹಾಗೆ ಕಿರಚ್ಬೇಡ.

ಲಿಂಗಿ : (ಪಿಸುಗುಟ್ಟಿ ಕೇಳುವಳು) ಚೈನ್ ಹಾಕಿ ಬಾಗಿಲನ್ನ ತೆಗೀಲೋ, ಹಾಗೇ ತೆಗೀಲೋ?

ಸರಸ್ವತಿ : ನೀನೊಬ್ಳು! ಅಲ್ಲಾ, ಬೆಳಗ್ಗೆ ಬೆಳಗ್ಗೆ ಆಗೊತ್ಲೂ ಯಾವ ಕೇಡಿ ಬರ್ತಾನೆ, ಲೂಟಿ ಮಾಡೋಕ್ಕೆ?

ಲಿಂಗಿ : ಅಲ್ಲಾ ಅಮ್ಮಾವ್ರೇ, ನೀವೇ ತಾನೆ ದಿನಬೆಳಗಾದ್ರೆ ಪೇಪರ್ ಓದಿ ನಂಗೆ ತಿಳ್ಸೋದು – ಹಗಲು ಹೊತ್ನಲ್ಲೇ ತುಂಬಾ ತಿಳಿದೋರ ಹಾಗೆ ಮೆಲ್ಲಗೆ ಒಳನುಗ್ಗಿ, ಕೊಲೆ–ದರೋಡೆ ಎಲ್ಲಾ ಮಾಡತ್ವೆ..... ಉಸಾರಾಗಿರು, ಬಲೇ ಉಸಾರಾಗಿರು, ಚೈನ್ ಹಾಕಿ, ಯಾರು ಎತ್ತ ಅಂತ ನೋಡಿ ಬಾಗಿಲ್ ತೆಗೀ, ಅಂತೆಲ್ಲಾ? ಈಗ್ನೋಡಿದ್ರೆ ಹೀಗಂತೀರಿ?

ಸರಸ್ವತಿ : ತಲೆಹರಟೆ, ಜಾಸ್ತಿ ಮಾತಾಡ್ಬೇಡ, ಒಳ್ಳೆ ಎಲಕ್ಷನ್ ಸ್ಪೀಚ್ ಕೊಡೋವಳ ಹಾಗೆ ನಿಂತ್ಬಿಟ್ಟಳು! ಏನೋ ಮೈತುಂಬಾ ಕೋಟ್ಯಾಂತರ ಒಡವೆ ಹಾಕ್ಕೊಂಡವಳ ತರಹ!

ಲಿಂಗಿ : (ಸಿಟ್ಟಾಗಿ) ಏಯ್, ಯಾಕಮ್ಮಾವ್ರೆ ಹೀಗಂತೀರಿ! ನಾನೇನ್ ಅಷ್ಟು ಬೀಳಾ! ಇನ್ನೂ ನೀವೆ ತಾನೇ ಏನೂ ಒಡವೆ ಹಾಕ್ಕೊಂಡಿಲ್ಲ– ಅದೆಂಥಾದ್ದೋ ಫ್ಯಾಷನ್ನೂ ಅಂತ,

ಬಿಚ್ಚೋಲೆ ಗೌರಮ್ಮನ ಹಾಗಿದೀರಿ! ಅದೇ ನನ್ ನೋಡಿ? ಮೊನ್ನೆ ತಾನೇ ನನ್ ಗಂಡ ಎರಡೆಳೆ ಚೈನು ತಕ್ಕೊಡ್ಲಿಲ್ವಾ? ಹಾಕ್ಕೊಂಡಿಲ್ವಾ? ನಿಮಗ್ ತೋರಿಸ್ಲಿಲ್ವಾ? ನೀವು ನೋಡಿ ಪಸಂದಾಗಿದೆ ಅಂತ ಹೇಳ್ಲಿಲ್ವಾ, ಮರೆತ್ಬಿಟ್ರಾ ಇಷ್ಟು ಬೇಗ? ಮತ್ತೆ, ''ಹೊರಗಡೆ ಸರಾನ ಆಕ್ಕೊಂಡು ಓದ್ರೆ, ಬರೀ ಸರಾನಷ್ಟೇ ಎಗರಿಸ್ತಾರೆ ಕಳ್ಳ್ತಕ್ಕಳು, ಆದ್ರೆ ಮನೆಗೆ ನುಗ್ಗಿದ್ರೆ ಪಿರಾಣನೂ ತೆಗೀತಾರೆ – ಉಸಾರಾಗಿರು'' ಅಂತೆಲ್ಲಾ ನೀವೇ ಏಳಿದ್ರೀ? ಅವತ್ತು?''

ಸರಸ್ವತಿ : (ಸ್ವಗತ) ಎಲಾ ಇವಳ ಜಂಬಾನೇ! ನಾವು ಯಾರೂ ಕಾಣದ ಒಡವೇನ ಮೈಮೇಲೆ ಹೇರಿಕೊಂಡವಳ ಹಾಗೆ ಮಾತಾಡ್ತಿದಾಳೆ ಅದೂ ಏನು, ಮುಂಬಾಗಿಲ ಹತ್ರಾನೇ ನಿಂತ್ಕೊಂಡು. ಒಳ್ಳೇ ಲೌಡ್‌ಸ್ಪೀಕರ್ ಸ್ಟೈಲ್‌ನಲ್ಲಿ ಮಾತಾಡ್ತಿದಾಳೆ – ಬೆಂಗಳೂರು ಪೇಟೆ ದರೋಡೆಗಾರರಿಗೆಲ್ಲಾ ಆಹ್ವಾನಕೊಟ್ಟು ಕರೆಸಿಕೊಳ್ಳೋ ಹಾಗೆ! ಹೀಗೇ ಬಿಡಬಾರ್ದು ಅವಳನ್ನ, ಬಹಳ ಹೆಚ್ಕ್ಕೊಂಡು ಬಿಟ್ಟಿದಾಳೆ! ಅವಳ ಖಾಲಿ ಜಂಬಾನ ಮಟ್ಟ ಹಾಕ್ಲೇಬೇಕು! (ಗಂಟಲನ್ನ ಸರಿಮಾಡಿಕೊಂಡು, ಹೀಯಾಳಿಸುವ ಧ್ವನಿಯಲ್ಲಿ) ಬಿಡೆ, ಇಂದೆಲ್ಲಾ ಅದು ರೋಲ್ಡ್ ಗೋಲ್ಡ್ ಸರ, ನಿನ್ನ ರಾಜಕುಮಾರ ಅಷ್ಟೊಂದು ಪ್ರೀತಿಯಿಂದ ತಂದುಕೊಟ್ಟಿರೋ ಆ ಸರ! ಅದನ್ಯಾರೇ ಎಗರಿಸ್ತಾರೆ? ಕಣ್ಣೆತ್ತಿ ಕೂಡ ನೋಡಲ್ಲಾ......

ಲಿಂಗಿ : (ಸೋಲದೆ) ಆದ್ರೆ ಕಳ್ಳನಿಗೆ ತಕ್ಷಣಕ್ಕೆ ಏನ್ ತಿಳಿತೈತೆ ಯೇಳಿ? ಕೈಗೆ ನಾಲ್ಕು ಕಾಸು ಬಂದ್ರೆ ಸಾಕು, ಅವನಿಗೆ ಕುಡಿದ್ಬೀಳೋಕ್ಕೆ! ಅರೆರೆ, ಮಲಗಿದ್ ದೊಡ್ಡ ಯಜಮಾನ್ರು ಯಾಕ್ಬಂದ್ರು ಮತ್ತೆ? ಕೈಲಿರೋ ಕೋಲನ್ನೂ ಬಿರಬಿರ್ನೆ ತಿರುಗಿಸ್ತಾ, ಒಳ್ಳೇ ರಾಜರುಗಳ ಹಂಗೆ! ಹೌದವ್ವಾ, ಸಿನಿಮಾದಲ್ಲಿ ರಾಜರುಗಳು ಹಿಂಗೇ ಯುದ್ಧಕ್ಕೆ ಹೊರಡೋದು!

ಮಾವನವರು : (ಗಟ್ಟಿಯಾಗಿ) ಕುಡುಕಾ! ಎಲ್ಲಿ ಆ ಕುಡುಕಾ! ನನ್ನ ಕೈಲಿ ಸಿಗಲಿ, ತಕ್ಕ ಶಾಸ್ತಿ ಮಾಡ್ತೀನಿ – ಬೆಂಗಳೂರು ಪೇಟೆ ಆಚೆ ಒದ್ದು ಓಡಿಸ್ತೀನಿ – ಸುಮ್ಮನೆ ಬಿಡಬಾರ್ದು, ಈ ಕುಡುಕರನ್ನ ಕಂಡ್ರೆ ನಂಗಾಗಲ್ಲ.... ಎಲ್ಲಿ ಅವನು? ನಾ ಬಂದದ್ದೇ ಹೆದರಿ ಮುಚ್ಚಿಟ್ಟುಕೊಂಡುಬಿಟ್ಟಾ ಅಲ್ವೇ? ನಾ ಬಿಡ್ತೀನೇ? ಎಲ್ಲಿದ್ರೂ ಸರಿ, ಹುಡುಕಿ ಪಾತಾಳಕ್ಕೆ ಅಟ್ಟಿಬಿಡ್ತೀನಿ (ನಾಟಕೀಯವಾಗಿ) ಎಲೈ ಲಿಂಗಿಯೇ, ಅಂಜದಿರು, ನಾ ಬಂದಿರುವೇ... ಅಂಜದೆ ಅಳದೆ, ಹೇಳುವವಳಾಗು.... (ಯಾವುದೋ ಸಿನಿಮಾದ ಅಥವಾ ನಾಟಕದ ಹಾಡನ್ನು ಹೇಳಲು ಆರಂಭಿಸುವನು)

ಸರಸ್ವತಿ : ಮಾವನವರು ನಾಟಕದಲ್ಲಿ ಪಾತ್ರ ಮಾಡ್ತಿದ್ರು ಕಣೇ ಲಿಂಗಿ. ಆಗಾಗ ಆವೇಶ ಬರತ್ತೆ – ಈಗ್ಬಂದಿದೆ ಅಂತ್ಕಾಣತ್ತೆ – ಏನಾರ ಉಪಾಯ ಮಾಡಿ ಅವ್ರನ್ನ ಇಲ್ಲಿಂದ ಸಾಗಿಸು ದಮ್ಮಯ್ಯ! ಇಲ್ದಿದ್ರೆ ಸಂಜೆ ಪೂರ್ತಿ ಹೀಗೇ ನಾಟಕಾಭಿನಯ! ಹುಚ್ಚು ಹಿಡಿದ್ಬಿಡತ್ತೆ ಅಷ್ಟೆ!



ಲಿಂಗಿ : (ಪುನಃ ಆತ ನಾಟಕದ ಡೈಲಾಗ್‌ಗಳನ್ನು ಹೇಳಲು ಆರಂಭಿಸಲು) ಯಾವ್ದೋ ಮದ್ವೆ ಪಾರ್ಟಿ ಬರ್ತಿರೋ ಹಂಗಿದೆ ದೊಡ್ಡ ಯಜಮಾನ್ರೇ, ಚಂದಾಗಿರತ್ತಲ್ವಾ, ಗಂಡು ಹೆಣ್ಣನ್ನ ನೋಡೋಕ್ಕೆ? ನಿಮಗದೆಲ್ಲ ಇಷ್ಟ ನಂಗೊತ್ತು, ಯಾಕ್ ನಾಚ್ಕೊತೀರಿ ದೊಡ್ಡಯಜಮಾನ್ರೆ? ಅಲ್ಲ, ನಿಮಗ್ ಮದ್ವೆ ಆದಾಗ, ಎಷ್ಟು ವಯಸ್ಸು, ಅಂತೀನಿ... ತುಂಬಾ ಚಿಕ್ಕವಯಸ್ಸಿಗೇ ಆಗಿರ್ಬೇಕಲ್ಲಾ? ಆಗಿನ ಕಾಲ್ದಲ್ಲಿ

ಸೂಟ್ ಹಾಕ್ತಿರಲಿಲ್ವಂತೆ? ಪಂಚೆ ಉಡಿಸಿ, ಟೋಪಿ ಹಾಕಿ, ಕೂರಿಸ್ತಿದ್ರಂತೆ, ಮಣೆಮ್ಯಾಲೆ ವರಪೂಜೆ ಗಂಡನ್ನ? ಬೋ ಪಸಂದಾಗಿ ಕಾಣ್ತಿರಬೇಕಲ್ಲ ನೀವು? ಬನ್ನಿ ಬನ್ನಿ, ಬಿರ್ರನೆ ಬ್ಯಾಲ್ಕನಿಗೆ ಹೋಗೋಣ – ಇಲ್ದಿದ್ರೆ ಮದ್ವೆ ಗಂಡು ಹೊರಟ್ ಹೋಗ್ಬಿಡತ್ತೆ, ಆಮೇಕೆ ಎಲ್ಲೀಂತ ಹುಡುಕೋದು, ಅವ್ರ ಇಚಾರ ಎಲ್ಲಾ ಕೇಳಿ ತಿಳ್ಕೊಳೋದು......

ಮಾವನವರು : (ಉತ್ಸಾಹದ ಧ್ವನಿಯಲ್ಲಿ) ಹೌದಲ್ಲಾ, ಬೇಗ್ಬಾ, ನಂಗೆ ಮದ್ವೆಗಂಡು ನೋಡೋದು ಅಂದ್ರೆ ಸರಿ, ಬಾಳ ಇಷ್ಟ ! ನನ್ನ ಮದ್ವೇಲಿ ಏನಾಯ್ತೂಂತೀಯಾ..... (ನಿಷ್ಕ್ರಮಣ–ವಾಕಿಂಗ್ ಸ್ಟಿಕ್–ಚಪ್ಪಲಿ ಶಬ್ದದ ಸಮೇತ)

ಸರಸ್ವತಿ : (ಸ್ವಗತ–ನಿಟ್ಟುಸಿರೆಳೆಯುತ್ತಾ) ಸಧ್ಯ, ಹೋದ್ರಲ್ಲಾ ಆ ಇಬ್ರೂ..... ಈಗ್ಲಾದ್ರೂ ಯಾರ್ದು ಫೋನು ಕೇಳ್ತಿಳ್ಕೊಳೋಣ (ಗಟ್ಟಿಯಾಗಿ) ಹಲೋ, ಹಲೋ? ಛೇ, ಏನಿದು, ಆ ಕಡೆಯಿಂದ ಮಾತಾಡ್ತಿರೋದು ಕೇಳಿಸ್ತಾನೇ ಇಲ್ವಲ್ಲ? ಯಾವ ಪತ್ರಿಕೆ ಸಂಪಾದಕರು ಹೀಗೆ ಆಗಿಂದ ಫೋನ್ ಮಾಡ್ತಿರೋದು? ನನ್ನ ಕಥೆ ಬೇಕೋ, ಕವನ ಬೇಕೋ, ನಾಟಕ ಬೇಕೋ? ಪಾಪ, ಎಷ್ಟು ಹೊತ್ನಿಂದ ಮಾಡ್ತಿದಾರೆ, ನಾನವ್ರಿಗೆ ನಿರಾಶೆ ಮಾಡ್ಬಾರ್ದು – ಏನೋ ಒಂದು, ಬರೆದುಕೊಡಲೇಬೇಕು, ಆದ್ರೆ..... ಅವರ ಗಂಟಲೇ ಕೇಳಿಸ್ತಿಲ್ಲವಲ್ಲಾ.... ಏನ್ಮಾಡೋದು?

ಆಕೆಯ ಗಂಡ : (ಪ್ರವೇಶಿಸಿ) ಸ್ಪೀಕರ್ ಹಾಕ್ಕೊ ಅರ್ಧಾಂಗಿ.

ಸರಸ್ವತಿ : (ವಿಸ್ಮಯದಿಂದ) ನೀವೆಲ್ಲಿಂದ ಬಂದ್ರಿ, ಡಿಯರ್ ಹಸ್ಬೆಂಡ್? ಆಫೀಸಿಗೆ ಹೋಗಿದೀರಿ ಅಂತ ಅಂದ್ಕೊಂಡಿದ್ದೆ.

ಆಕೆಯ ಗಂಡ : ಹೋಗಿದ್ದೆ ಕಣೇ, ಆದ್ರೆ ತುರ್ತಾಗಿ ಯಾವ್ದೋ ಸ್ವಂತ ಕೆಲಸ ನೆನಪಿಗೆ ಬಂತು, ಮನೆಗೆ ಬಂದ್ರೆ ನಿನ್ನ ಮತ್ತು ಲಿಂಗಿ ಸಂಭಾಷಣೆ ಜೋರಾಗಿ ನಡೀತಿತ್ತು – ಅದಕ್ಕೇ ಕಂಪ್ಯೂಟರ್ ರೂಮಿನ ಬಾಗ್ಲನ್ನ ಹಾಕ್ಕೊಂಡು ನನ್ನ ಪಾಡಿಗೆ ನಾನು ಕೈಗೊಂಡ ಪ್ರಾಜೆಕ್ಟ್‌ನ್ನ ಮುಗಿಸಿದೆ. ಅಬ್ಬಬ್ಬಾ, ಅದೇನ್ ಕೂಗಾಟ – ಕಿರುಚಾಟ ಮನೇಲಿ! ಕೇಳಿಕೇಳಿ, ನನ್ ಕಂಪ್ಯೂಟರ್ – ತಲೆ ಕೆಟ್ಟುಹೋಯ್ತು! ಈಗ, ವಾತಾವರಣ ತಣ್ಣಗಾಗಿರೋ ಹಂಗೆ ಕಂಡ್ತು, ಹೊರಬಂದೆ. (ನಗುತ್ತಾ ಹಾಸ್ಯಮಾಡುವನು) ಆಯ್ತಾ ನಿನ್ನ ಫೋನ್ ಅವಾಂತರ?

ಸರಸ್ವತಿ : (ಅಳುವ ಧ್ವನಿಯಲ್ಲಿ) – ಇಲ್ಲಾರೀ.... ನಿಮ್ತಂದೆ ಮತ್ತು ಲಿಂಗಿ, ಇವರುಗಳ ಗಲಾಟೇಲಿ ಆ ಕಡೆಯಿಂದ ಫೋನ್‌ನಲ್ಲಿ ಮಾತಾಡ್ತಿರೋವ್ರ ಗಂಟಲೇ ಕೇಳಿಸ್ತಿಲ್ಲ ಕಣ್ರೀ! ಅಷ್ಟೊತ್ತಿನಿಂದ ಬರೀ ಹಲೋ ಹಲೋ ಅನ್ನೋದೊಂದೆ ಕೇಳಿಸ್ತಿರೋದು! ಯಾರೋ ಸಂಪಾದಕರು ಇರ್ಬೇಕು, ನಾಳೆ ಬರೋ ದೀಪಾವಳಿ ಸಂಚಿಕೇಗೆ ನನ್ನ ಆರ್ಟಿಕಲ್ ಅನ್ನ ಕೇಳೋಕ್ಕೆ ಫೋನ್ಮಾಡ್ತಿರಬೇಕು..... ಆದ್ರೆ, ಯಾವ ಪತ್ರಿಕೆ ಸಂಪಾದಕರು ಅನ್ನೋದೇ ಗೊತ್ತಾಗ್ತಿಲ್ಲ – ಮನೆ ಬಾಗಿಲಿಗೆ ಬಂದ ಒಳ್ಳೇ ಚಾನ್ಸ್ ಅನ್ನ ಮಿಸ್ಮಾಡ್ತಿದೀನಿ ನೋಡಿ! ಏನ್ ಮಾಡ್ಲಿ?





ಆಕೆಯ ಗಂಡ : ಅಯ್ಯೋ, ಅದಕ್ಯಾಕೆ ಅಷ್ಟೊಂದು ತಲೆ ಕೆಡಿಸ್ಕೊತಿದೀ! ಸ್ಪೀಕರ್ ಇಲ್ವೆ? ಮರೆತುಬಿಟ್ಯಾ? ಈಗ್ಲೂ ಕಾಲ ಮಿಂಚಿಲ್ಲ – ಹಾಕ್ಕೋಡು..... ಏಯ್, ಯಾಕೆ ಇಷ್ಟೊಂದು ಯೋಚ್ನೆ ಮಾಡ್ತಿದೀ? ದೇಶದ ಸಮಸ್ಯೇನ ಕುರಿತು ಯೋಚನೆ

ಮಾಡ್ತಿರೋ ಹಾಗೆ!

ಸರಸ್ವತಿ : ಅ.... ಏನಿಲ್ಲ ಆಗ ನಾವು ಮಾತಾಡೋದೆಲ್ಲಾ ಎಲ್ರಿಗೂ ಕೇಳ್ತಿತ್ತಲ್ಲ ಅಂತ ಒದ್ದಾಟ, ಅಷ್ಟೆ

ಆಕೆಯ ಗಂಡ : (ನಗುತ್ತಾ) ಈಗ್ ಮಾತ್ರ ಯಾರಿಗೂ ಕೇಳಿಸ್ಲಿಲ್ಲಾ ಅಂತ ಅಂದ್‌ಕೊಂಡ್ಯೇನು? ನಾಲ್ಕು ಬೀದಿಗೂ ಕೇಳಿಸಿರ್ಬೇಕು, ಲಿಂಗಿ ಮಹಾರಾಣಿಯ ಜೊತೆ ನಡೆದ ನಿನ್ನ ಸಂಭಾಷಣೆ! ಸ್ವಾರಸ್ಯವಾಗಿತ್ತು, ಕೇಳೋದಿಕ್ಕೆ! ಒಳ್ಳೇ ಜೋಡಿ! ರಿಕಾರ್ಡ್ ಮಾಡಿ ಯಾವ್ದಾದ್ರೂ ಹಾಸ್ಯಸಮ್ಮೇಳನಕ್ಕೆ ಕಳಿಸ್ಬೇಕು......

ಸರಸ್ವತಿ : ಅರೆ ಲಿಂಗಿ, ನೀ ಯಾಕೆ ನಗ್ತಿದೀ?

ಲಿಂಗಿ : ಸಂತೋಸ ಆಯ್ತು ಕಣಮ್ಮ, ಬುದ್ದಿಯೋರು ನನ್ನನ್ನ ಲಿಂಗಿ ಮಹಾರಾಣಿ ಅಂದದ್ದಕ್ಕೆ! ನನ್ನ ಗಂಡಂಗೆ ಏಳ್ಬೇಕು.... ಖುಶಿ ಪಡ್ತಾವ್ನೆ.... ಉ, ಇನ್ನೀವು ಸಂಜೆಗಂಟ ಪೋನ್ಮಾಡ್ತಿರಿ – ನಾ ವಂಟೆ.

ಸರಸ್ವತಿ : (ಸ್ಪೀಕರ್ ಆನ್ಮಾಡಿ ಉಲಿಯುವಳು) ಹೆಲೋ, ನಾನು – ನಾನೇ ಪ್ರಸಿದ್ಧ ಲೇಖಕಿ, ಸರಸ್ವತಿ ದೇವಿ... ನಿಮಗೆ ಏನ್ ಬೇಕಾಗಿತ್ತು?

ಧ್ವನಿ : (ಆ ಕಡೆಯಿಂದ) ಹೆಲೋ ಮೇಡಮ್, ಇದು ಮೆಟರ್ನಿಟಿ ಹೋಮಾ? ಹೆರಿಗೆ ಆಸ್ಪತ್ರೇನಾ?

ಸರಸ್ವತಿ : (ಒಂದೇ ಕೋಪದಿಂದ) ಇಲ್ಲ, ಮೆಂಟಲ್ ಹಾಸ್ಪಿಟಲ್ – ಹುಚ್ಚಾಸ್ಪತ್ರೆ...... (ರೊಯ್ಯೆಂದು ಟೆಲಿಫೋನ್ ಅನ್ನು ಕೆಳಗೆ ಬಿಸಾಕುವಳು)

✤

## ಕಾಕತಾಳೀಯ

ನಾಲ್ಕು ಮಂದಿ ಕಾಕತಾಳೀಯ ಘಟನೆಗಳ ಬಗ್ಗೆ ಮಾತನಾಡುತ್ತಿದ್ದರು.

ನನ್ನ ಹೆಂಡತಿ 'ಎರಡು ಮಕ್ಕಳು' ಕಾದಂಬರಿ ಓದುತ್ತಿದ್ದಳು. ಅವಳ ಮಕ್ಕಳಿಗೆ ಜನ್ಮ ನೀಡಿದಳು ಎಂದ ಒಬ್ಬ.

ಹೌದೆ? ನನ್ನ ಹೆಂಡತಿ 'ಮನೆಯೊಂದು ಮೂರು ಬಾಗಿಲು' ನೋಡ್ತಾ ಇದ್ದಳು. ತ್ರಿವಳಿ ಹಡೆದಳು ಎಂದ ಇನ್ನೊಬ್ಬ.

ಮಗದೊಬ್ಬ ನಂದೂ ಅಂತಹುದೇ ಕೇಸ್. 'ಪಂಚ ಪಾಂಡವರು' ಓದಿದ ನನ್ನಾಕೆ ಐದು ಮಕ್ಕಳನ್ನು ಹೆತ್ತಳು ಎಂದ.

ಕೊನೆಯವನು ಅಯ್ಯೋ ನನ್ನ ಗತಿ? ಎಂದು ಹಲುಬಿದ.

ಏಕೆ? ಏನಾಯಿತು? ಎಂದು ಕೇಳಿದರು ಇತರರು.

ನಾನು ಮನೆಯಿಂದ ಹೊರಟಾಗ ನನ್ನ ಹೆಂಡತಿ 'ಅಲಿಬಾಬ ಮತ್ತು 40 ಮಂದಿ ಕಳ್ಳರು' ಓದ್ತಿದ್ದಳು ಎಂದ.



# ಮಾತಿನ ಮಲ್ಲರು

**- ಭುವನೇಶ್ವರಿ ಹೆಗಡೆ.**

ಕೆಲವರು ಮಾತಿಗೆ ನಿಂತರೆ ಅಥವಾ ಕೂತರೆ ಅದೇನು ಮೋಡಿಯೋ ಕೇಳುವವರಿಗೆ ಹೊತ್ತು ಹೋಗಿದ್ದೇ ತಿಳಿಯದು. ಅವರ ಸುದ್ದಿ ಸಂಗ್ರಹದ ಶಕ್ತಿ ಅಂತಹದ್ದು ಹಾಗೂ ಅದನ್ನು ಒಂದಾದ ಮೇಲೊಂದರಂತೆ ತೆಗೆ ತೆಗೆದು ಪ್ರಸ್ತುತಿ ಪಡಿಸುವ ಅವರ ಕಲೆಗಾರಿಕೆ, ವಿರಾಮದ ಭಂಗಿ, ತಿಳಿಹಾಸ್ಯ 'ಬೇಜಾರು ಬಂದ್ಹೋಗಿತ್ತು ಮಾರಾಯಾ ನಿನ್ನತ್ರ ಮಾತಾಡಿ ಸ್ವಲ್ಪ ಗೆಲುವಾಯ್ತು' ಎನ್ನುತ್ತಲೇ

ತೃಪ್ತಿಯಿಂದ ಎದ್ದು ಹೊರಡುತ್ತಾರೆ, ಮಾತುಕತೆ ಮುಗಿಸಿದ ಕೇಳುಗರು.

**ಮಾತು ಆಡಿದರೆ ಮೀನಿಂಗು ಇರಲೇಬೇಕು ಎಂಬ ನಿಯಮ ಇದೆಯೇ**

ನಗರದ ದಿನಚರಿಯಲ್ಲಿ ಸದಾ ಓಡುತ್ತ ಇರುವವರಿಗೆ ಮಾತಾಡಲೂ, ಮಾತು ಕೇಳಲೂ ಪುರುಸೊತ್ತಿರುವುದಿಲ್ಲ. ಇನ್ನೂ ಕೆಲವರಲ್ಲಿ ಮಾತೇ ಇರುವುದಿಲ್ಲ. ಅಂತಹವರು ಎದುರಿಗೆ ಬಂದರೆ ಕೇಳಿದ್ದಕ್ಕೆ ಉತ್ತರ.

'ಏನಪ್ಪಾ ಚೆನ್ನಾಗಿದೀಯಾ?'' ಹೂಂ ಚೆನ್ನಾಗಿದೀನಿ.'

'ಊರ ಕಡೆ ಮತ್ತೇನು ವಿಶೇಷ?' ವಿಶೇಷ ಏನಿಲ್ಲ, ಎಲ್ಲ ಮಾಮೂಲು.'

ಮುಗಿದೇ ಹೋಯ್ತು. ಅವನ ಬಂಡವಾಳ. ಅದೇ ನಮ್ಮ ಮಾತಿನ ಮಲ್ಲರನ್ನು 'ಏನಪ್ಪಾ ಆರಾಮಾ' ಎಂದಷ್ಟು ಕೇಳಿಬಿಡಿ ಸಾಕು. 'ಹೂಂ ನಾನೇನೋ ಆರಾಮ ಅಂತ್ಲೇ ತಿಳ್ಕೊಂಡಿದ್ದೆ ಮಾರಾಯ. ಆದ್ರೆ, ನನ್ನ ಡಾಕ್ಟ್ರಿಗೆ ಸಮಾಧಾನವೇ ಇಲ್ಲ. ರಕ್ತಪರೀಕ್ಷೆ ಆಗಬೇಕು ಅಂದ್ರು, ಮಾಡಿ ಬಿಸಾಡಿದೆ. ಡಾಕ್ಟ್ರದ್ದು ಮಾತಿಲ್ಲ. ನಿಮ್ಮ ಶುಗರ್ ಎಲ್ಲ ಬಾಯಲ್ಲೇ ಜೇನಾಗಿ ಹೊರಬರ್ತಿವೆ. ಶುಗರ್ ಇಲ್ಲ ಹೋಗಿ ಅಂದ್ರು...' ಅಂತ ತನ್ನ ಡಾಕ್ಟ್ರನ್ನ ತಮಾಷೆ ಮಾಡಲಿಕ್ಕೇ ಶುರು ಮಾಡ್ತಾರೆ. ಊರಿನ ವಿಶೇಷಗಳ ಪಟ್ಟಿಯನ್ನು ಎದುರಿಡ್ತ ಹೋಗುತ್ತಾರೆ. ನಿಮಗೆ ಅರ್ಜಂಟ್ ಇಲ್ಲದಿದ್ದರೆ ಅವರ ಮಾತು ಕೇಳ್ತಾ ಕೂತುಬಿಡಬೇಕು. ಅವರ ಹೆಂಡತಿಯೋ ನಿಮ್ಮ ಮಕ್ಕಳೋ ಪಿರಿಪಿರಿ ಮಾಡಿ ಎಬ್ಬಿಸಬೇಕು ನಿಮ್ಮನ್ನು.

ನನ್ನ ತಂದೆ ಇಂತಹ ಒಬ್ಬ ಮಾತಿನ ಸವಿಬಲ್ಲ ಮಾತುಕತೆಗಾರರಾಗಿದ್ದರು. ಹೆಚ್ಚು ವಿದ್ಯಾಭ್ಯಾಸವೇನೂ ಇಲ್ಲದ ಅವರ ಬಳಿ ಮನುಷ್ಯ ಸ್ವಭಾವ ವೈಚಿತ್ರ್ಯದ ನೂರಾರು ಕತೆಗಳಿದ್ದವು ಮತ್ತು ಅದನ್ನು ನಮಗೆಲ್ಲ ಎಷ್ಟೋ ಬಾರಿ ಹೇಳಿ ಹೇಳಿ ಆ ಕತೆ ಬಾಯಿಗೇ ಬರುತ್ತಿತ್ತು. ನಮ್ಮ ಹಳ್ಳಿಯ ವಿರಾಮದ ದಿನಚರಿಯ ತೋಟದ ಕೆಲಸ ಮುಗಿಸಿ ಬರುವ ಆಳುಕಾಳುಗಳು, ಮನೆಬಾಗಿಲಿಗೇ ಸುಣ್ಣತರುವ ಸಾಯಬರು, ಕಲಾಯಿಗಾರರು, ಅಡಕೆ ಕೊಳ್ಳುವವರು, ಸೀರೆ ಮಾರುವವರು... ಎಲ್ಲರಿಗೂ ಅವರ ಮಾತು ಕೇಳಲು ಪುರುಸೊತ್ತಿರುತ್ತಿತ್ತು, ಕುತೂಹಲವಿರುತ್ತಿತ್ತು. ಎಲೆ ಅಡಕೆಯೋ, ಮಜ್ಜಿಗೆಯೋ, ಚಹಾವೋ... ಏನಾದರೊಂದು ತೆಗೆದುಕೊಂಡು ಹೊಟ್ಟೆತುಂಬ ಮಾತು ಕೇಳಿ ಹೋಗುತ್ತಿದ್ದರು. ಊಟಕ್ಕೆ ಉಳಿಯುವವರಿಗೆ ಊಟ, ಕವಳ (ಎಲೆ - ಅಡಕೆ)ಗಳ ಮಾತುಕತೆಗಳ ಸುಗ್ರಾಸ. ನಮ್ಮ



ತಂದೆಯವರ ಬಾಲ್ಯದ ಕತೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ಸ್ವಾನುಭವದ ಸುದ್ದಿಗಳೇ ತುಂಬಿದ್ದವು. 'ಕರ್ನಾಟಕದ ಬಾರ್ಡೋಲಿ' ಎಂದೇ ಪ್ರಸಿದ್ಧವಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹಳ್ಳಿಹಳ್ಳಿಗಳಲ್ಲೂ ಸ್ವಾತಂತ್ರ್ಯ ಹೋರಾಟಗಾರರಿದ್ದರು. ಅವರ ಜತೆ ಸೇರಿದ ನಮ್ಮ ತಂದೆ ಶಾಲೆಯನ್ನು ಅರ್ಧಕ್ಕೇ ಮೊಟಕುಗೊಳಿಸಿ ಹೋರಾಟಗಾರರ ಪಡಿಚಾಕರಿಗೆ ನೆರವಾಗುತ್ತಿದ್ದರು. ಅದರಲ್ಲಿ ಬೇರೆ ಊರುಗಳಿಂದ ಬರುವ ಮುಖಂಡರನ್ನು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಮುಖಂಡರ ಮನೆಗೆ ಕರೆದುಕೊಂಡು ಹೋಗಿ ತಲುಪಿಸಬೇಕಿತ್ತಂತೆ. ಅದೂ ಕತ್ತಲಾದ ಬಳಿಕ ಯಾರಿಗೂ ಕಾಣದ ದಾರಿಯಲ್ಲಿ. ಇವರಿನ್ನೂ ಬಾಲಕ. ಲಾಟೀನು ಹಿಡಿದು ತೋಟ ಬೆಟ್ಟ ದಾಟಿಸಿ ನಮ್ಮೂರ ಪಕ್ಕದ ಹೂನಮನೆ ಎಂಬ ಹಳ್ಳಿಗೆ ಮಹಾರಾಷ್ಟ್ರದಿಂದ ಬಂದ ಕನ್ನಡ ಬಾರದ ಒಬ್ಬ ಮುಖಂಡರನ್ನು ತಲುಪಿಸಲು ಹೊರಟಿದ್ದರು. ಮೊದಲೇ ತಾಕೀತು. ಯಾರಾದರೂ ಎದುರು ಬಂದರೆ ಇವರ್‍ಯಾರೋ ಆಯುರ್ವೇದ ಔಷಧಕ್ಕೆ ಬಂದವರು, ಹೂನ ಮನೆಯಲ್ಲಿರುವ ವೈದ್ಯರ ಮನೆಗೆ ಬಿಟ್ಟು ಬರಲು ಹೇಳಿದ್ದಾರೆ ಎನ್ನಬೇಕು. ಇತ್ಯಾದಿ.

ಬ್ರಿಟಿಷರು ಹಳ್ಳಿ ಹಳ್ಳಿಗಳಲ್ಲಿ ಕರನಿರಾಕರಣೆ ಚಳವಳಿಯಲ್ಲಿ ತೊಡಗಿರುವ ಮುಖಂಡರನ್ನು ಬಂಧಿಸಿ ಒಯ್ಯುವ ತುಂಬ ಬಿಗಿ ಕ್ರಮ ಕೈಗೊಂಡ ಸಂದರ್ಭದಲ್ಲಿ ಬಂದಿಳಿದ ಇಬ್ಬರು ಮುಖಂಡರು – ಈ ಮಾರ್ಗದರ್ಶಕ ಮಾಣಿಯ ಜತೆ ತೋಟ ದಾಟಿ ಬೆಟ್ಟದಲ್ಲಿ ಹೋಗುತ್ತಿರುವಾಗ ಎದುರಿನ ಬೆಟ್ಟದಿಂದ ಇಬ್ಬರು ಲಾಠಿ ಪೊಲೀಸರು ಬರುತ್ತಿರುವುದು ಕಂಡು – ಇದ್ದಕ್ಕಿದ್ದಂತೆ ಅಂತರ್ಧಾನರಾಗಿ ಬಿಟ್ಟರಂತೆ. ಚಿಕ್ಕ ಹುಡುಗ ಕತ್ತಲಲ್ಲಿ ಲಾಟೀನು ಹಿಡಿದು ಒಬ್ಬನೇ ನಿಂತಿದ್ದಾನೆ.

'ಏನೋ ಬದ್ಮಾಶ್ ಲಡಕಾ, ಇಲ್ಲಿ ಒಬ್ಬನೇ ಏನು ಮಾಡ್ತೀಯಾ?' ಎಂದರಂತೆ ಪೊಲೀಸರು. ಅವರಿಗೆ ತರಬೇತಿ ಇತ್ತು, 'ವೈದ್ಯರಲ್ಲಿಗೆ ಹೋಗಿ ಮದ್ದು ತರಲು ಕಳಿಸಿದ್ದಾರೆ' ಎಂದು ಹೇಳಿ ಮುಂದೆ ಹೋಗಲೂ, ಹಿಂದೆ ಬಾರಲೂ ತಿಳಿಯದೆ ಹೆದರಿ ನಿಂತರಂತೆ. ಹೋಗು ಹೆದರ್ಕೋಬ್ಯಾಡ ಎಂದು ಪೊಲೀಸರು ತಮ್ಮ ದಾರಿ ಹಿಡಿದು ಹೋದ ಬಳಿಕ ಸಣ್ಣಗೆ ಸಿಳ್ಳೆ ಹಾಕಿ ಅಡಗಿದ್ದವರನ್ನು ಕರೆದರಂತೆ. ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿದ ಇಂಥ ನೂರು ಸುದ್ದಿಗಳಿದ್ದವು ನಮ್ಮ ತಂದೆಯವರ ಬಳಿ. ಅವೆಲ್ಲ ನಮಗೆ ಕೇಳಿದ್ದೇ ಕೇಳಿ ಬಾಯಿಗೆ ಬರುತ್ತಿತ್ತು. ಸಿದ್ದಾಪುರದಲ್ಲಿ ನಡೆದ ಒಂದು ಸ್ವಾತಂತ್ರ್ಯಪೂರ್ವದ ಪ್ರಭಾತ ಪೇರಿಯ ವರ್ಣನೆ ಸಂದರ್ಭದಲ್ಲಿ ಅಲ್ಲಿ ಹಾಡಲಾದ ಒಂದು ಕವಾಯತು ಪದ್ಯ ಸಾಭಿನಯವಾಗಿ ಹಾಡಿ ತೋರಿಸುತ್ತಿದ್ದರು. ಆಗಿನ ಕಾಲಕ್ಕೆ ವಿದ್ಯಾವಂತರಾಗಿದ್ದು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅಡಕೆ ಬೆಳೆಗಾರರೊಬ್ಬರು ಆ ಹಾಡು ರಚಿಸಿದ್ದರಂತೆ.

ಮುಂದೆ ಮುಂದಕೆ ಸಾಗಿ ಬಿಡುವೆವೂ...

ಹಿಂದೆ ಸರಿಯೆವೂ ಪ್ರಾಣ ಹೋದರೂ...

ದೇಶಕಾಗಿ ಸರ್ವವನ್ನೂ ತೊರೆಯಬಲ್ಲೆವೂ...

ಮನೆಮಾರೆಲ್ಲವ ಬಂಧು ಬಾಂಧವರ ಮೋಹವನೂ...



ಸಾಲು ಸಾಲುಗಳನ್ನೂ ಸಾಭಿನಯವಾಗಿ ಹಾಡಿ ತೋರಿಸುತ್ತಿದ್ದರು. ಅದೆಷ್ಟು ಸಲ ಕೇಳಿದ ಸುದ್ದಿಯೋ ಇದು. ಪ್ರತಿ ಬಾರಿ ಹೊಸತೆಂಬಂತೆ ಅವರು ಹೇಳುವುದು. ಅಷ್ಟೇ ಆಸ್ಥೆಯಿಂದ ನಾವು ಕೇಳುವುದು. ಸ್ವಾತಂತ್ರ್ಯ ಸಂಗ್ರಾಮವೇ ಕಣ್ಮುಂದೆ ಸಾಗಿ ಹೋದಂತಾಗುತ್ತಿತ್ತು.

ಹಾಗೆಯೇ ಯಕ್ಷಗಾನದ ಭೀಮನ ವೇಷಧಾರಿಯೊಬ್ಬರಿಗೆ ಭೀಮ 'ಮೈಮೇಲೆ ಬಂದು' ಚೌಕಿ ಮನೆಯಲ್ಲಿ ಬೆಡ್‌ಶೀಟ್ ಮುಚ್ಚಿ ಅಡಗಿದ್ದ ದುರ್ಯೋಧನನನ್ನು ಎಳೆ ತಂದು, ಚಚ್ಚಿ ಬಿಡಿಸಲು ಬಂದ ಭಾಗವತರಿಗೂ ಚಚ್ಚಿ ಪ್ರೇಕ್ಷಕರೆಲ್ಲ ದಿಕ್ಕಾಪಾಲು ಓಡಿದ ಪ್ರಸಂಗ, ಆಮೇಲೆ ಮೇಳದ ಮೆನೇಜರರು ಭೀಮನ ಪಾತ್ರಕ್ಕೆ ತಣ್ಣೀರೆರಚಿ ಎಚ್ಚರಗೊಳಿಸಿದ್ದು ಕಣ್ಣಾರೆ ಕಂಡಿದ್ದಕ್ಕಿಂತ ರೋಚಕವಾಗಿ ಅವರ ಮಾತುಗಳಲ್ಲಿ ಕೇಳುತ್ತಿದ್ದೆವು.

ಈ ಬಗೆಯ 'ಮಾತುಕತೆ'ಯನ್ನು ಆಸ್ವಾದಿಸಲು ಮೊದಲು ಬೇಕಾದ್ದು ವ್ಯವಧಾನ ಹಾಗೂ ಜೀವನ ಪ್ರೀತಿ. ಮಾತೆತ್ತಿದರೆ ಸ್ವಂತದ್ದೇನೋ ಗೋಳಿನ ಕಂತೆ ಬಿಚ್ಚುವ ಸೆಲ್ಫವೆಟಿ (ಪಿಟಿ)ಗಳಿಗೆ, ಅದರಲ್ಲೇನು ಮಹಾ... ಎಂಬ ಸಿನಿಕರಿಗೆ ಇವೆಲ್ಲ ಆಗಿಬರದು. ಒಂದೆಡೆ ಸ್ವಸ್ಥಕೂತು ನೆನಪಿನ ರಸಗವಳ ಬಿಚ್ಚಿ ನಮ್ಮನ್ನು ಹಗುರಾಗಿಸುವ ಇಂಥ ಸ್ವಸ್ಥ ಮನಸ್ಕರು ಊರಿಗೊಬ್ಬರಾದರೂ ಇದ್ದರೆ ಆ ಊರಿಗೆ ಹೋಗುಳಿದರೆ ಸಾರ್ಥಕವಾದೀತು.

ಅದರ ಬದಲು ಅಂಡುಸುಟ್ಟ ಬೆಕ್ಕನಂತೆ ಆಚೀಚೆ ಓಡಾಡುತ್ತ, ಬಂದ ಜನರನ್ನು ಸಾಗಹಾಕಲು ಪೇಚಾಡುತ್ತ ನಮ್ಮ ದುರ್ದೆಸೆಯನ್ನು ಬಣ್ಣಿಸಿ ರೇಜಿಗೆ ಹುಟ್ಟಿಸುವ ಮನುಷ್ಯ ಮಾತ್ರರು ಭವಿಷ್ಯವನ್ನು ನೆನೆದು ಹೆದರಿಕೊಳ್ಳುತ್ತ ಒಟ್ಟೂ ಪರಿಸರವನ್ನೇ ಕಂಗಾಲು ಮಾಡಿಬಿಡುವ ಸಾಮರ್ಥ್ಯ ಹೊಂದಿರುತ್ತಾರೆ.

'ಅಯ್ಯಾ ನೀನು ಹೀಗೆ ಲಬಲಬ ಮಾಡುವುದು ಸರಿಯಲ್ಲ ಸ್ವಲ್ಪ ಆರಾಮಾಗಿರೋದು ಕಲಿತುಕೋ' ಎಂದು ಅಂಥವರಿಗೆ ಬುದ್ಧಿ ಹೇಳಲು ಸಹ ಯಾರೂ ಮುಂದೆ ಬರುವುದಿಲ್ಲ. ಸಹವಾಸ ಬೇಡ ಮಾರಾಯ ಎಂದು ದೂರವೇ ಉಳಿಯುತ್ತಾರೆ. ಈಗೀಗ ಕುಶಲೋಪರಿ ಹರಟೆಕಟ್ಟೆಗಳೇ ಮಾಯವಾಗಿವೆ. ನಗರವಾಸಿ ಪರದೇಸಿಗಳಿರಲಿ, ಗ್ರಾಮವಾಸಿಗಳಿರಲಿ ಬಿಡುವು ಸಿಕ್ಕರೆ ಮೂರ್ಖರ ಪೆಟ್ಟಿಗೆಯ ಮುಂದೆ ಕೂತು ಅದರೊಳಗಿನ ಕಿರುಚಾಟ ಕೆಸರೆರಚಾಟಗಳಿಗೆ ಮೂಕ(?) ಪ್ರೇಕ್ಷಕರಾಗಿ ಗರಬಡಿದಂತೆ ಕೂತಿರುತ್ತಾರೆ. ಅದರ ಬದಲು 'ಹರಟಿ ಹಗುರಾಗು'ವ ಸೊಗಸಾದ ಅನುಭವವನ್ನು ಹಂಚಿಕೊಳ್ಳ ಹೊರಟರೆ... ರೆ... ಪ್ರಪಂಚವಾಗಿ ಹೋಯಿತೆ? ಗುಜರಾತಿನ ಚಿಕ್ಕ ಪಟ್ಟಣವೊಂದಕ್ಕೆ ಹೋಗುಳಿದಿದ್ದ ನನ್ನ ಸ್ನೇಹಿತೆ ಮಂಗಳೂರಿನಲ್ಲಿ ಕಾಣಲು ಸಾಧ್ಯವಿಲ್ಲದ ಒಂದು ದೃಶ್ಯ ತನ್ನನ್ನು ನಿತ್ಯವೂ ಮುದಗೊಳಿಸುತ್ತಿದೆ ಎಂದು ಹೇಳಿದಳು. ಪ್ರತಿ ಬೀದಿಯ ಮನೆಗಳ ಮುಂದೂ ಒಂದು ಜೋಕಾಲಿ. ಸಂಜೆಯಾಗುತ್ತಿದ್ದಂತೆ, ಆ ಜೋಕಾಲಿಯ ಮೇಲೆ ಆ ಮನೆಯ ವೃದ್ಧ ಪತಿ - ಪತ್ನಿಯರು ಕೂತು ಹರಟೆಗಿಳಿಯುತ್ತಾರೆ. ಅಕ್ಕಪಕ್ಕದವರು, ಮಕ್ಕಳು, ಅವರೆದುರು ಸ್ಟೂಲು, ಹಗ್ಗದ ಮಂಚ ಯಾವುದಾದರೂ ಸರಿ, ಬಂದು ಕೂತು ಕತ್ತಲಾಗುವ ತನಕವೂ ಮಾತು ಮಾತು ನಗು ಸವಿಯುತ್ತಾರೆ. 'ಕಷ್ಟಸುಖ' ಮಾತಾಡಿಕೊಳ್ಳುವುದು ಎಂದರೆ ಇದೇ ಇರಬೇಕು. ಮಾತೇ ಬೇಡದ ಮೂಕಪ್ಪಗಳನ್ನು ಏನು ಮಾಡೋಣ, (ದೂರದಿಂದ) ನಮಸ್ಕಾರ.



# ಗಂಡನ ಹಾ(ಪಾ)ಡು

ಎಚ್. ಡುಂಡಿರಾಜ್

ತರಕಾರಿ ತಂದರೆ ಸರಿಯಿಲ್ಲ ಅನುವಳು
ಬರಿಗೈಲಿ ಬಂದರೆ ತರಲಿಲ್ಲ ಎನುವಳು
ಹಣ್ಣು ಒಯ್ದರೆ ರೇಟು ಹೆಚ್ಚೆಂಬ ಟೀಕೆ
ಇವಳು ಮೆಚ್ಚುವ ಗಂಡ ಹುಟ್ಟಿಲ್ಲ ಜೋಕೆ!

ಬೇಗ ಬಂದರೆ ಮನೆಗೆ ಕೇಳುವಳು ಏಕೆ?
ತಡವಾಗಿ ಹೋದರೆ ಸಿಬಿಐ ತನಿಖೆ!
ಕುಡಿಯದಿದ್ದರೂ ಮೂಸಿ ಹೇಳುವಳು ನಾತ
ಇವಳು ಮೆಚ್ಚುವ ನಾಥ, ಎಲ್ಲಿರುವನಾತ?

ಬರೆಯುತ್ತ ಕುಳಿತರೆ ಅನ್ನುವಳು  ಮಲಗಿರಿ
ಮಲಗಿದರೂ ದೂರು ಗೊರಕೆ ಹೊಡೆಯುವಿರಿ
ಬೇಗ ಎದ್ದರೆ ಅದಕೂ ಇವಳ ತಕರಾರು
ಇವಳು ಮೆಚ್ಚುವ ಪತಿ ಇರುವನೆ? ಯಾರು?

ದೂರವಿದ್ದರೆ "ನಾನು ಬೇಡವೆ?" ಎನುವಳು
ಬಳಿ ಸಾರಿ ತಬ್ಬಿದರೆ ದೂರ ತಳ್ಳುವಳು
ಮನದೊಳಗೆ ಏನುಂಟೊ ದೇವರೇ ಬಲ್ಲ
ಇವಳು ಮೆಚ್ಚುವ ನಲ್ಲ ನಾನಲ್ಲ ಅಲ್ಲ!



**ವಿಶೇಷ ಸೂಚನೆ: ಈ ಹಾಡು ಬರೆಯಲು ಮಲ್ಲಿಗೆಯ ಕವಿ ಕೆ.ಎಸ್. ನರಸಿಂಹಸ್ವಾಮಿಯವರ "ಚಳಿಗಾಲ ಬಂದಾಗ ಎಷ್ಟು ಚಳಿ ಎಂದರು" ಎಂದು ಆರಂಭವಾಗುವ 'ಇಕ್ಕಳ' ಎಂಬ ಕವಿತೆಯೇ ಪ್ರೇರಣೆ ಹೊರತು ನನ್ನ ಹೆಂಡತಿ ಅಲ್ಲವೇ ಅಲ್ಲ!**

# ಗುಂಡಣ್ಣ ಕನ್ಯೆ ನೋಡಿದ್ದು

**- ಕುಮುದಾ ಪುರುಷೋತ್ತಮ್**

**ಕೋ**ರಮಂಗಲದ ಹತ್ತನೇ ಹಂತ, ಹನ್ನೊಂದನೇ ಮೇನ್, ಹನ್ನೆರಡನೇ ಕ್ರಾಸ್, ಹದಿಮೂರನೇ ನಂಬರ್ ಮನೆಗೆ ಗುಂಡಣ್ಣ ಕನ್ಯಾವೀಕ್ಷಣೆಗೆ ಅಮ್ಮ ಮಾಲಕ್ಷ್ಮಿಯ ಜೊತೆ ಹೋದಾಗ ಎದುರಾದದ್ದು ಬಣ್ಣಬಣ್ಣದ ರಂಗೋಲಿ, ಮಾವಿನೆಲೆ ಬಾಳೆ ಕಂಬಗಳಿಂದ ಅಲಂಕೃತವಾದ ಮುಂಭಾಗ, ಒಳಗಿನಿಂದ ಪ್ರವಹಿಸುತ್ತಿದ್ದ ನಾದಸ್ವರವಾದನ!

**ಕನ್ಯೆ ನೋಡಲು ಹೋದಾಗ ಆದದ್ದೇನು**

" ಏನಮ್ಮಾ? ಈಗ್ಲೇ ಮದುವೆ ತಯಾರಿ ನಡೆಸಿರುವಂತಿದೆ? ಒಳ ಹೋದೊಡನೆ ಹೆಡಮುರಿಗೆ ಕಟ್ಟಿ ಮದ್ವೆ ಮಾಡಿಬಿಟ್ರೆ? ನಾ ಬರೊಲ್ಲ. ವಾಪಸ್ ಹೋಗಿಬಿಡೋಣ."

"ಹಾಗೇನೋ ಆಗೊಲ್ಲ ಬಾರೋ. ಅವರ ಮನೇಲಿ ಇದರ ಜೊತೆ ಇನ್ನೇನೋ ವಿಶೇಷವಿರ್ಬೇಕು."

" ನಾನಿಂಗೆ ಮೊದ್ಲೇ ಹೇಳಿದ್ದೆ. ಹೆಣ್ಣು ನೋಡೋ ಶಾಸ್ತ್ರ ಅನ್ನೋದು ಓಬೀರಾಯನ ಕಾಲದ್ದು ಬೇಡಾಂತ. ನೀನು ಕೇಳ್ದೆ ಸಂಪ್ರದಾಯ ಅಂತ ಎಳ್ಕೊಂಡು ಬಂದೆ. ಈಗ್ಲೇ ಹೇಳಿದ್ದೀನಿ. ಅವರು ಮನೆ ತುಂಬಾ ಬಂಧು ಬಳ್ಗಾಂತ ಕರೆದು ಅವಾಂತ್ರ ಮಾಡಿ ನನ್ನನ್ನ ಪ್ರದರ್ಶನ ವಸ್ತು ಮಾಡಿ ಮುಜುಗರ ಪಡ್ಸಿದ್ರೆ ನಾನೆದ್ದು ಬಂದು ಬಿಡ್ತೀನಿ."

"ನಾನು ಮದ್ವೆ ಏಜಂಟ್ ಕಲ್ಯಾಣರಾಮನಿಗೆ ಇದೆಲ್ಲಾ ಹೇಳಿದ್ದೀನಿ, ನಿನಗೆ ಮುಜುಗರವಾಗದಂತೆ ನಾನು ನೋಡ್ಕೋತೀನಿ ಬಾ" ಎಂದು ಕರೆಗಂಟೆಯೊತ್ತಿದರು.

ಬಾಗಿಲು ತೆರೆದು ಹಾರ್ದಿಕವಾಗಿ ಸ್ವಾಗತಿಸಿದ್ದು ಬಾಗಿಲು ತುಂಬುವಂತೆ ಸೊಂಪಾಗಿ ಬೆಳೆದಿದ್ದ ಆಜಾನುಬಾಹು ವೆಂಕಟಾಚಲಪತಿಗಳು. ಪಕ್ಕದಲ್ಲಿ ನಿಂತಿದ್ದಳು ಪುಟ್ಟದಾಗಿದ್ದ ಪತ್ನಿ ಪದ್ಮಾವತಿ. ಅವರಿಬ್ಬರ ಎತ್ತರಾಂತರವನ್ನು ಗಮನಿಸಿ ಸರಾಸರಿ ಎತ್ತರದ ಕನ್ಯೆಯನ್ನು ಊಹಿಸಿಕೊಂಡ ಗುಂಡಣ್ಣ. ಎತ್ತರದಲ್ಲೂ ಚಹರೆಯಲ್ಲೂ ಪದ್ಮಾವತಿಯನ್ನು ಹೋಲುತ್ತಿದ್ದ ಹುಡುಗನೊಬ್ಬ ತಾನೇ ಪರಿಚಯಿಸಿಕೊಂಡ. "ನಾನು ಇವರ ಮಗ ಕೋದಂಡ ಅಂತ. ಇಂಜನಿಯರಿಂಗ್ ಎರಡನೇ ವರ್ಷ. ಡೊನೇಶನ್ ಕೇಸು. ನನ್ನ ಸ್ನೇಹಿತರೆಲ್ಲಾ ತಮಾಷೆಗೆ ಕೋ ಬಿಟ್ಟು ಸಿಂಪಲ್ ಆಗಿ ದಂಡ ಅಂತ ಕರೀತಾರೆ. ಬೇಕಾದ್ರೆ ನೀವೂ ಹಾಗೇ ಕರೀರಿ" ಎಂದು ಮುಗ್ಧನಗೆ ಬೀರಿ ಪರವಾನಗೆ ಕೊಟ್ಟ.

ವಿಶಾಲವಾದ ಹಾಲಿನಲ್ಲಿ ಸೋಫಾ ಸೆಟ್ಟು, ಟಿ,ವಿ. ಇದ್ದರೆ ಎದುರು ಗೋಡೆಗೆ ಸಾಲಾಗಿ ಸುಮಾರು ಹದಿನೈದು ಕುರ್ಚಿ ಹಾಕಿದ್ದರು!. ವ್ಹೀಲ್ ಚೇರಿನಲ್ಲಿ ಆಸೀನರಾಗಿದ್ದ ಅಜ್ಜಿಯನ್ನು ದಂಡ ಕರೆತಂದ. ತೊಂಬತ್ತು ದಾಟಿದ್ದ ಆಕೆ ಮಾಲಕ್ಷ್ಮಿಯ ಬಳಿ ಇವರ ಕುಲದ ಪರಂಪರಾಗತ ಚರಿತ್ರೆಯನ್ನು ಕೇಳಿ ಕೂಡಲೇ ಮರೆತು ಮತ್ತೆಮತ್ತೆ ಕೇಳಿ ಚಿಟ್ಟುಹಿಡಿಸಿದರು.



ಪ್ರತಿ ಎರಡು ನಿಮಿಷಗಳಿಗೊಮ್ಮೆ ಬಾಗಿಲ ಕರೆಗಂಟೆ. ಒಳಬರುತ್ತಿದ್ದುದು ಚಲಪತಿಗಳ ಸಮಸ್ತ ಬಂಧುಗಳು. ತಂಗಿ ಅವಳ ಗಂಡ, ಅಕ್ಕ ಬಾವ, ನಾದಿನಿ ಷಡ್ಡಕ, ಅಣ್ಣ ಅತ್ತಿಗೆ ಮುಂತಾದವರು ಬಂದು ಕಾದಿದ್ದ ಕುರ್ಚಿಗಳನ್ನು ಅಲಂಕರಿಸಿದರು. ಚಲಪತಿಗಳ ಹಿರಿಯಣ್ಣ ನಡುಕಲ ಕುರ್ಚಿಯಲ್ಲಿ ಕುಳಿತು ಸಂದರ್ಶನ ಸಮಿತಿಯ ಅಧ್ಯಕ್ಷ ಸ್ಥಾನವನ್ನು ತುಂಬಿದರು.

ದಂಡ ಟ್ರೇಯಲ್ಲಿ ತಂದ ತುಂಡು ಮೈಸೂರುಪಾಕ್ ಓಂಪುಡಿಯ ಸೇವನೆಯ ನಂತರ (ಇದನ್ನು ನಮ್ಮಮ್ಮ ಮಾಡಿದ್ದಲ್ಲ. ಎದುರಿಗಿರುವ ಸಾಪಾಟ್ಟುರಾಮನ್ ಸ್ವೀಟ್ಸ್‌ನಿಂದ ತಂದಿದ್ದು. ಭಯಪಡದೆ ತಿನ್ನಬಹುದು ಎಂಬ ಹಳಸಲು ಜೋಕ್ ಮಾಡಿ ತಂದೆಯಿಂದ ಉಗಿಸಿಕೊಂಡ.) ಅಧ್ಯಕ್ಷರಿಂದ ಗುಂಡನ ಸಂದರ್ಶನ ಆರಂಭವಾಯಿತು.

"ಏನಪ್ಪ ನಿನ್ನ ಕ್ವಾಲಿಫಿಕೇಶನ್ನು?" ಗುಂಡ ಹೆತ್ತಮ್ಮನ ಕಡೆ ಉರಿನೋಟ ಬೀರುತ್ತಲೇ ಉತ್ತರಿಸಿದ.

"ಪ್ರತಿ ಪರೀಕ್ಷೇಲೂ ಒಂದೇ ಸಲಕ್ಕೆ ಪಾಸಾಗ್ತಿದ್ಯೋ ಅಥ್ವಾ ಘಸ್ನೀ ಮಹಮದ್ದನ ದಂಡಯಾತ್ರೆ ಗಿರಾಕೀನೋ?"

"ಯಾರೀ ಘಸ್ನೀ ಮಹಮದ್ದ? ಹೆಸರೇ ಕೇಳಿಲ್ಲ?"

"ಸರಿ ಬಿಡು. ಚರಿತ್ರೇಲಿ ಖಂಡಿತಾ ಫೇಲಾಗಿರ್ತೀಯ." ಇದಕ್ಕೆ ದಂಡ ಕೇಕೆ ಹಾಕಿ ತನಗಾದ ಹರ್ಷ ಪ್ರಕಟಿಸಿದ.

"ಎಷ್ಟು ಸಂಬ್ಳ ಕೊಡ್ತಾರೆ ನಿಂಗೆ?" ಗುಂಡಣ್ಣ ಇದಕ್ಕೆ ಉತ್ತರ ಕೊಡುವ ಮುನ್ನ ತಾಯಿ ಮಗನ ರಕ್ಷಣೆಗೆ ಬಂದಳು.

"ಕ್ಷಮಿಸಿ. ಈ ಪ್ರಶ್ನೇನ ನಾವು ಇವನ ಹೆತ್ತವರು ಈವರೆಗೂ ಕೇಳಿಲ್ಲ. ಒಂದು ಮಾತ್ರ ಹೇಳಬಲ್ಲೆ. ಹೆಂಡ್ತೀನ ಸಾಕಿ ಕುಟುಂಬ ನಡೆಸುವಷ್ಟು ಸಂಬಳ ಬರತ್ತೆ. ಚಿಂತೆ ಬೇಡ."

"ತಪ್ಪು ತಿಳಿಬೇಡೀಮ್ಮ. ನಾನು ಜೀವನ ಕಂಡೋವ್ನು. ಒಮ್ಮೆ ನಮ್ಮೂರ್‍ನಲ್ಲಿ ಸಾಕಷ್ಟು ಸ್ಥಿತಿವಂತರಾಗಿದ್ದವರು ಒಬ್ಬಳೇ ಮಗಳ ಮದುವೆ ಮಾಡಿದ್ರು. ಹುಡುಗನಿಗೆ ರೈಲ್ವೇನಲ್ಲಿ ಕೆಲಸ ಎಂದು ತಿಳಿದೊಡನೆ ಹೆಚ್ಚು ವಿಚಾರಿಸಲು ಹೋಗ್ಲಿಲ್ಲ. ಸ್ಟೇಷನ್ ಮಾಸ್ಟರೋ ಅಥ್ವ ಟಿಕೆಟ್ ಕಲೆಕ್ಟರೋ ಇರ್ಬೇಕು ಅಂದ್ಕೊಡ್ರು. ಬೀಗರ ಅಪೇಕ್ಷೆ ಮೇರೆಗೆ ಗಂಡಿನವರ ಊರಿನಲ್ಲಿಯೇ ಮದ್ವೇನೂ ಮಾಡಿಕೊಟ್ರು. ಮರುದಿನ ಬೀಗರದೌತಣ ನಡೆಸಿಕೊಟ್ಟು ಹೆಣ್ಣಿನವರು ಊರಿಗೆ ಹೊರಟರು. ಮದುಮಗನೂ ಡ್ಯೂಟಿ ಇದೆ ಎಂದು ಅವಸರದಿಂದ ಹೊರಟ. ಪಾಪ, ಜವಾಬ್ದಾರಿಯುತ ಹುದ್ದೆ ತಮ್ಮ ಅಳಿಯಂದು. ಸ್ಟೇಷನ್ ಮಾಸ್ಟರ್ ಅಂದ್ರೆ ಸುಮ್ನೆ ಆಯ್ತೆ ಎಂದು ಹಿಗ್ಗುತ್ತಾ ಸ್ಟೇಷನ್ ತಲಪಿ ಗಾಡಿಹತ್ತಿ ಕುಳಿತರು. ಗಾರ್ಡ್ ಸೀಟಿ ಊದಿದ. ಗಾಡಿ ಇನ್ನೇನು ಹೊರಡಬೇಕು. ಖಾಕಿ ಷರ್ಟು ಖಾಕಿ ನಿಕ್ಕರು ಹಾಕಿದ್ದ ಅಳೀಮಯ್ಯ ಗಾಡಿ ತಳ್ಳಿಕೊಂಡು 'ಪಾನ್ ಬೀಡ ಬೀಡಿ ಸಿಗರೇಟ್' ಎಂದು ಕೂಗುತ್ತಾ ಡ್ಯೂಟಿ ಮಾಡುತ್ತಿದ್ದ! ಮತ್ತೊಮ್ಮೆ ಹೀಗಾಗ್ಬಾರ್ದಲ್ಲ ಅಂತ ಕೇಳ್ದೆ" ಎಂದು ತಮ್ಮ ಸಂದರ್ಶನ ಮುಂದುವರೆಸಿದರು. ಹಿರಿಯಣ್ಣ.



"ರಜಾ ದಿನಗಳನ್ನು ಹೇಗಪ್ಪಾ ಕಳೀತಿ? ಕ್ಲಬ್ಬು, ಪಬ್ಬು ಗಿಬ್ಬು ಅದರ ಅಭ್ಯಾಸ

ಇದ್ಯೋ?" ಗುಂಡಣ್ಣ ಯಾವುದಕ್ಕೂ ಇರಲಿ ಎಂದು ಎಲ್ಲಾ ದಿಕ್ಕಿನಲ್ಲೂ ತಲೆಯಾಡಿಸಿದ.

"ಯೋಗಗೀಗ, ಪೂಜೆಪುನಸ್ಕಾರ, ಧ್ಯಾನ ಉಪ್ವಾಸ ಇಂಥಾದ್ದು ಉಂಟೋ?"

ಇದಕ್ಕೂ ಹಿಂದಿನಂತೇ ಕುರಿಯಂತೆ ತಲೆಯಾಡಿಸಿದ.

"ಎಲ್ಲಿ ನಿಮ್ಮ ಮಗ್ಳು ಕಾಣ್ತಿಲ್ಲ. ಕರೀತೀರಾ?" ಮಾಲಕ್ಷ್ಮಿ ತಾನು ಸಂದರ್ಶನ ಪ್ರಾರಂಭಿಸಲು ಕೇಳಿದಳು.

"ಅದೂ.....ನೋಡಿ. ಬ್ಯೂಟೀಶಿಯನ್ ಲೇಟಾಗಿ ಬಂದ್ಲು. ಮೇಕಪ್ ಇನ್ನೇನು ಮುಗೀತಾ ಬಂತು. ಐದೇ ನಿಮಿಷ. ಬಂದ್ಬಿಡ್ತಾಳೆ" ಎಂದಳು ಪದ್ಮಾವತಿ.

ವೆಂಕಟಾಚಲಪತಿಗಳು ಸಿಕ್ಕ ಅವಕಾಶ ಸದುಪಯೋಗ ಮಾಡಲು ತಮ್ಮ ಮಗಳ ಸಾಧನೆ ಸಿಧ್ಧಿಗಳನ್ನು ವರ್ಣನೆಗೆ ಎತ್ತಿಕೊಂಡರು. "ನನ್ನ ಮಗ್ಳು ಸೊಗ್ಸಾಗಿ ಹಾಡ್ತಾಳೆ. ಅವ್ಳು ಭಾಗವಹಿಸಿದ ಸ್ಪರ್ಧೆಗಳಲ್ಲಿ ಪ್ರತಿ ಸಲವೂ ಮೊದಲನೆಯ ಬಹುಮಾನ ಗ್ಯಾರಂಟಿ"

"ಆಂಟೀ, ನಾನೂ ಚೆನ್ನಾಗಿ ಹಾಡ್ತೀನಿ. ನಂಗೂ ಕಾಲೇಜ್ ಫೆಸ್ಟಿವಲ್‌ನಲ್ಲಿ ಬಹುಮಾನ ಬಂದಿದೆ." ದಂಡ ಮೂಗು ತೂರಿಸಿದ.

"ಅವ್ರು ಬಂದಿರೋದು ನಿನ್ನಕ್ಕನ್ನ ನೋಡೋಕ್ಕೆ. ನಿನ್ನನ್ನಲ್ಲ. ಬಾಯಿ ಮುಚ್ಕೊಂಡು ಕೂತ್ಕೋ". ಚಲಪತಿಗಳ ಗುಡುಗಿಗೆ ಗುಂಡಣ್ಣನೂ ಬೆದರಿ ಬಾಯಿ ಮುಚ್ಕೊಂಡ!

ಅವನ ಗ್ರಹಚಾರಕ್ಕೆ ಪಕ್ಕದ ಟಿ.ವಿ. ಸ್ಟ್ಯಾಂಡಿನ ಬಳಿ ಇದ್ದ ಪ್ರಾಣಿ ಕಣ್ಣಿಗೆ ಬೀಳಬೇಕೇ? ಎರಡೂ ಕಾಲು ಮೇಲೆತ್ತಿ "ಅಲ್ನೋಡು, ದಂಡಾ ಮೊಸಳೇ ಮರಿ" ಅವನತ್ತ ನೋಡುತ್ತಾ ತೊದಲಿದ.

"ಅದು ಮೊಸಳೆ ಅಲ್ಲಾರೀ. ಅದರಷ್ಟು ಅಗಾಧವಾಗಿ ಬೆಳೆದಿರೋ ಹಲ್ಲಿ. ಪಾಪ ಸತ್ತುಹೋಗಿದೆ. ಏನೂ ಮಾಡೋಲ್ಲ. ಇಲ್ನೋಡಿ" ಹೇಳುತ್ತಾ ಎಡಗಾಲಿನ ಹೆಬ್ಬೆಟ್ಟಿನಿಂದ ಮತ್ತೆ ಟೇಬಲ್ ಕೆಳಗೆ ತಳ್ಳಿ ತಣ್ಣಗೆ ಕುಳಿತ! ಇದವರ ಮನೆಯಲ್ಲಿ ದಿನವೂ ನಡೆಯುವ ಘಟನೆಯಂತಿತ್ತು ಅವನ ನಡವಳಿಕೆ!

ಗುಂಡಣ್ಣ ಕಣ್ಣರಳಿಸಿದ. ಈಗ ಡಿಸೆಂಬರ್ ತಿಂಗಳೇ? ಅಲ್ಲವಲ್ಲ! ಎದುರಿದ್ದ ಕ್ಯಾಲೆಂಡರೂ ಅದೇ ಹೇಳುತ್ತಾ ಇದು ಏಪ್ರಿಲ್ ಎಂದು ಸಾರುತ್ತಿತ್ತು. ಇವರ ಮನೆಯಲ್ಲಿ ಈಗಿನಿಂದಲೇ ಕ್ರಿಸ್‌ಮಸ್ ಟ್ರೀಯ ಪ್ರದರ್ಶನವೇ? ನೋಡುತ್ತಿದ್ದಂತೆ ಕ್ರಿಸ್ಮಸ್ ಟ್ರೀ ಚಲಿಸಿತು! ಕಣ್ಣು ತಿಕ್ಕಿ ನೋಡಿದ. ಆಗ ಕನ್ನಡಕ ಮನೆಯಲ್ಲಿಯೇ ಮರೆತು ಬಂದಿದ್ದು ಅರಿವಿಗೆ ಬಂತು. ಅದಕ್ಕೇ ಹಲ್ಲಿ ಮೊಸಳೆಯಂತೆ ಕಂಡಿದ್ದು, ಹಸಿರು ಸೀರೆಯುಟ್ಟು ಅಡಿಯಿಂದ ಮುಡಿಯವರೆಗೆ ಸಿಂಗರಿಸಿಕೊಂಡಿದ್ದ ಅಲಂಕೃತ ಕನ್ಯೆ ಕ್ರಿಸ್ಮಸ್ ಟ್ರೀಯಂತೆ ಕಂಡಿದ್ದು. ಕನ್ಯೆ ಬಂದು ಎದುರಿನ ಸೋಫಾ ಮೇಲೆ ಕುಳಿತಳು.

"ನಿಮ್ಮ ತಂದೆ ನೀನು ಸೊಗಸಾಗಿ ಹಾಡ್ತೀಯಾಂತ ಹೇಳಿದ್ರು. ಹಾಡ್ತೀಯಾಮ್ಮಾ?" ಮಾಲಕ್ಷ್ಮಿ ವಧು ಪರೀಕ್ಷೆ ಮೊದಲಿಟ್ಟಳು. ಅಷ್ಟರಲ್ಲಿ ಎಲ್ಲಿಂದಲೋ ಹಾರಿಬಂದ ಸೊಳ್ಳೆಯೊಂದು ಗುಂಡಣ್ಣನ ಕಿವಿಯ ಬಳಿ ಗುಂಯ್ಗುಟ್ಟಲು ಶುರುವಿಟ್ಟಿತು. ಛೀ ಅನಿಷ್ಟ. ಒಳ್ಳೆ ಸಮಯದಲ್ಲಿ ಇದೆಲ್ಲಿಂದ ವಕ್ರಿಸಿತಪ್ಪಾ ಎಂದು ಎರಡೂ ಕೈ ಅಗಲಿಸಿ ಹೊಡೆಯಲು ನೋಡಿದ. ಕನ್ನಡಕವಿಲ್ಲದ ಕಣ್ಣುಗಳಿಗದು ಬೀಳಲೇ ಇಲ್ಲ. ಅಲ್ಲಿಯವರೆಗೆ ತೂಕಡಿಸುತ್ತಿದ್ದ



ಅವನ ಆರನೇ ಇಂದ್ರಿಯ ಎಚ್ಚರಗೊಂಡು ತಲೆಗೆ ಮೊಟಕಿತು. ಅದು ಸೊಳ್ಳೆ ಸಂಗೀತವಲ್ಲ. ಕನ್ಯೆಯ ಕಂಠದಿಂದ ಹೊಮ್ಮಿದ ಸಂಗೀತಸುಧೆ! ರಾಗ ತಾಳ ಭಾವದ ಗೋಜಿಲ್ಲದೆ ಮುನ್ನುಗ್ಗಿದ ಗುಂಗುಟ್ಟುವಿಕೆಯಲ್ಲಿ ತಾಯಿ ಮಗ ಇಬ್ಬರೂ ಮಿಂದೆದ್ದರು. ಎರಡಿಂಚು ಮೇಕಪ್ಪು, ಮುಖ ಸಂಪೂರ್ಣ ಮರೆಮಾಚಿದ್ದ ಕೇಶಶೈಲಿ, ತೂಗಾಡುತ್ತಿದ್ದ ಆಭರಣಗಳ ನಡುವೆ ಕನ್ಯೆಯ ಚಹರೆ ಕಾಣಲು ತವಕಿಸಿದ ಗುಂಡಣ್ಣ ಸಂಪೂರ್ಣ ಸೋತುಹೋದ.

ಮಿ. ಗುಂಡಣ್ಣ, ನೀವು ಈಗಿನಕಾಲದ ಹುಡಗ್ರು. ಮದ್ವೇಗೆ ಮುಂಚೆ ಅಭಿಪ್ರಾಯಗಳನ್ನು ಹಂಚಿಕೊಳ್ಳೋದಕ್ಕೆ ಇಷ್ಟ ಪಡ್ತೀರಿ. ಬೇಕಿದ್ರೆ ಬಾಲ್ಕನಿಗೆ ಹೋಗಿ ನನ್ನ ಮಗಳೊಡನೆ ಮಾತನಾಡಬಹುದು." ಚಲಪತಿಗಳು ಪರವಾನಗೆ ಕೊಟ್ಟರು. ಗುಂಡಣ್ಣನಿಗೆ ಅದೆಲ್ಲಿಂದ ಒದ್ದುಕೊಂಡು ಬಂತೋ ಆವೇಶ. "ಈಗದರ ಅವಶ್ಯಕತೆ ಇಲ್ಲ ಅಂಕಲ್. ಮತ್ಯಾವಾಗ್ಲಾದ್ರೂ ನೋಡೋಣ. ಈಗ ಸಧ್ಯಕ್ಕೆ ನನಗೆ ಅರ್ಜಂಟ್ ಕೆಲ್ಸ ಇದೆ." ಹೇಳುತ್ತಾ ಹೊರಗೆ ನಡೆದೇಬಿಟ್ಟ!

ಅಂದಿನಿಂದ ಕೋರಮಂಗಲದ ದಿಕ್ಕಿಗೆ ತಲೆಯಿಟ್ಟೂ ಮಲಗುವುದಿಲ್ಲವಂತೆ ಗುಂಡಣ್ಣ. ಪಾಪ, ಇದರಲ್ಲಿ ಕೋರಮಂಗಲದ್ದೇನು ತಪ್ಪು?

## ವಾ2ಡೂ...?

ಅದೊಂದು ಭಯಾನಕ ಸಿನೆಮಾ. ಅದರಲ್ಲಿ ನನ್ನದು ಖಳನಾಯಕನ ಪಾತ್ರ.

ಮುಂಬೈನ ಬೆಡಗಿಯೊಬ್ಬಳನ್ನು ಮುಖ್ಯ ಪಾತ್ರಕ್ಕೆ ಕರೆಸಿದ್ದರು. ಒಂದು ಸನ್ನಿವೇಶದಲ್ಲಿ ನಾನು ಆಕೆಯ ರಟ್ಟೆ ಹಿಡಿದು ದೂರ ತಳ್ಳಬೇಕಾಗಿತ್ತು. ಎಲ್ಲವೂ ಸಿದ್ಧವಾಯಿತು.

ಆದರೆ ಚಿತ್ರೀಕರಣಕ್ಕೆ ಮೊದಲು ಆಕೆಯ ಸಹಾಯಕ ಬಂದು ನನಗೆ 'ಸಾರ್, ಮೇಡಂ ಹೇಳ್ತಿದಾರೆ ನಿಮ್ಮ ಕೈನ ಸೋಪು ಹಾಕಿಕೊಂಡು ತೊಳ್ಕೊಂಡು, ಯುಡಿಕೊಲೋನ್ ಹಾಕ್ಕೊಂಡು ಆಮೇಲೆ ಮುಟ್ಟಬೇಕಂತೆ..' ಅಂದ.

ಅಲೆಲೆ! ಎಷ್ಟೊಂದು ಕೊಬ್ಬೆ ಅಲ್ಲಿಯವರಿಗೆ.. ನಮ್ಮಿಂದ ಮುಟ್ಟಿಸಿಕೊಳ್ಳಲು ಅಸಹ್ಯ ಪಡುವಷ್ಟು. ಅನ್ನಿಸಿತು. 'ನೋಡಪ್ಪಾ, ನಾನು ಸಿಗರೇಟ್ ಸೇದಲ್ಲ, ಹೆಂಡ ಕುಡಿಯಲ್ಲ, ನಾನ್ ವೆಜ್ ತಿನ್ನಲ್ಲ. ದಿನಾ ಸ್ನಾನ ಮಾಡ್ತೀನಿ.. ಹಾಗಂತ ಹೇಳು ನಿಮ್ಮ ಮೇಡಂಗೆ..' ಅಂದೆ.

ಆಮೇಲೆ ಅನ್ನಿಸ್ತು ಆಕೆಗೆ ಏನು ಖಾಯಿಲೆಯೋ.. ಏನು ಕರ್ಮವೋ.. ನಮ್ಮ ಮುಂಜಾಗ್ರತೆಗೆ ಆಕೆ ಹಾಗೆ ಹೇಳಿದಳೇನೋ ಅಂತ.

ವಾ2ಡೂ...?

– ನಾಗೇಂದ್ರ ಶಾ



# ಶುಭ ಶಕುನ

**– ಎಂ.ಎಸ್.ನರಸಿಂಹಮೂರ್ತಿ**

ವಿಶ್ವನ ಮನೆಗೆ ಹೋದ ಕೂಡಲೇ ವಿಶ್ವನನ್ನು ಕೇಳಿದೆ.

"ನೀನು ಗೂಬೆ ಮುಖ ನೋಡಿದ್ದೀಯಾ?"

"ಓಹೋ, ನಿತ್ಯ ನೋಡ್ತೀನಲ್ಲ" ಎಂದ ವಿಶ್ವ.

"ಹೌದಾ? ಯಾವ ಮರದಲ್ಲಿ ಬಂದು ಕೂತ್ಕೊಳ್ಳುತ್ತೆ?"

"ಮರದಲ್ಲಿ ಅಲ್ಲಪ್ಪಾ... ನನ್ನ ಬೆಡ್‌ರೂಮಲ್ಲಿ ಬಂದು ಕೂತ್ಕೊಳ್ಳುತ್ತೆ..."

"ಅಯ್ಯೋ ಬೆಡ್‌ರೂಮಿಗೆ ಗೂಬೇನ ಬಿಡಬಾರದು... ಬುದ್ಧಿ ಇದೆಯಾ ನಿನಗೆ?" ಎಂದು ರೇಗಿದೆ. ವಿಶ್ವ ಅಷ್ಟೇ ಕೂಲಾಗಿ ಶಾಂತವಾಗಿ ನಕ್ಕ.

**ಶಕುನವನ್ನು ನಂಬಬಹುದೇ ಬೇಡವೇ ಅನ್ನೋ ಜಿಜ್ಞಾಸೆ ಯಾರಿಗೆ**

ವಿಶಾಲು ಒಂದು ಲೋಟದಲ್ಲಿ ಕಾಫಿಯನ್ನು ತಂದು ನನ್ನ ಮುಂದೆ ಕುಕ್ಕಿದಳು.

"ಗೂಬೆ ಮಾಡಿದ ಕಾಫಿ ನೀವು ಕುಡೀತೀರ ತಾನೇ?" ಎಂದು ಕೊಂಕು ನುಡಿದು ನನ್ನ ಚುಚ್ಚಿದಳು.

"ತಮಾಷೆಗೆ ಮೇಡಂ, ಯಾಕೆ ಸಿಟ್ಟಾಗ್ತೀರಾ?" ಎಂದು ಪ್ರಕರಣ ತಿಳಿಗೊಳಿಸಲು ಯತ್ನಿಸಿದೆ.

"ನಾನು ತಮಾಷೆಗೆ ನಿಮ್ಮನ್ನು 'ಸಿಂಗಳೀಕ' ಅಂತ ಕರೆದರೆ ನೀವು ಸುಮ್ಮನಿರ್ತೀರಾ?" ಎಂದು ಸವಾಲೆಸೆದಳು. ನನಗೆ ಗಾಬರಿಯಾಯಿತು.

"ಹೇಳಿ ಹೇಳಿ ನಿಮ್ ಫ್ರೆಂಡ್ ಹತ್ರ... ಏನು ಬೇಕಾದ್ರೂ ಹೇಳಿ... ನೋಡೀ ಅವರ ಯೋಗ್ಯತೆ ಅವರಿಗೆ ಇರುತ್ತೆ ಚೆನ್ನಾಗಿ ತಿಳ್ಕೊಳ್ಳಿ... ವಜ್ರಾನ ಕೊಳಕು ಕರ್ಚೀಫಲ್ಲಿ ಸುತ್ತಿಟ್ರೆ ಅದರ ಬೆಲೆ ಕಡಿಮೆಯಾಗೊಲ್ಲ..."

"ವಿಶಾಲೂ, ವಿನಾಕಾರಣ ಅಪ್ಸೆಟ್ಟಾದ ಹಾಗಿದೆ? ನಾನು ಶಕುನದ ಬಗ್ಗೆ ಮಾತಾಡ್ತಾ ಇರೋದು. ವಿಶ್ವ ಅಂತ ಹೇಳಿದ್ದು ನಿಮ್ಮ ಬಗ್ಗೇನೇನು?

ವಿಶ್ವ ಮುಗುಳ್ನಕ್ಕು ವಿವರಿಸಿದ.

"ಹೌದು. ನನ್ನ ಹೆಂಡ್ತೀನೇ ಗೂಬೇ. ಅವಳೇ ಬೆಡ್‌ರೂಮಿಗೆ ಬರ್ತಾಳೆ. ಅವಳ ಮುಖ ನೋಡಿದ್ರೆ ನನಗೆ ತುಂಬಾ ಒಳ್ಳೇದೇ ಆಗ್ತಿದೆ."

ದಿನಪತ್ರಿಕೆಗಳಲ್ಲಿ ಮೀಡಿಯಾಗಳಲ್ಲಿ ನಾನು ಗೂಬೆ ಬಗ್ಗೆ ಕೇಳಿದ್ದೆ. ಗೂಬೆ ಮುಖ ನೋಡಿದ್ರೆ ಎಲ್ಲಾ ರೀತಿಯ ಜಯ ಸಿಗುತ್ತೆ ಅಂಬೋದನ್ನ ದೊಡ್ಡ ದೊಡ್ಡ ಜ್ಯೋತಿಷಿಗಳೇ ಹೇಳಿದ್ದರು. ಅದರಲ್ಲಿ ಕೆಲವು ವಿಶೇಷವಾದ ಗೂಬೆಗಳನ್ನ ನಿತ್ಯ ನೋಡ್ತಿದ್ರೆ ತಿಂಗಳಲ್ಲಿ ಜಯ ಕಟ್ಟಿಟ್ಟ ಬುತ್ತಿಯಂತೆ!

ಆದರೆ ವಿಶ್ವ ತನ್ನ ಹೆಂಡತಿಯನ್ನು ಗೂಬೆ ಎಂದು ಕರೆಯುತ್ತಿದ್ದ. ಅವಳ ಬಗ್ಗೆ ವಿವರಿಸಿ ಹೇಳಿದ್ದ.



"ನನಗೆ ಈ ಶಕುನಗಳ ಬಗ್ಗೆ ಸ್ವಲ್ಪಾನೂ ನಂಬಿಕೆ ಇಲ್ಲ." ಎಂದು ವಿಶಾಲು ನಮ್ಮ ಜೊತೆ ತಾನೂ ಬಂದು ಕಾಫಿ ಕುಡಿಯುತ್ತಾ ಕುಳಿತಳು.

"ಪಂಚಾಂಗದಲ್ಲೆಲ್ಲಾ ಶಕುನದ ಬಗ್ಗೆ ಹೇಳ್ತಾರಲ್ಲಾ? ನೀವು ಯಾಕೆ ನಂಬೋದಿಲ್ಲ?" ಎಂದೆ.

"ಪಂಚಾಂಗ ಬರಿಯೋವರಿಗೆ ಏನು ಗೊತ್ತು? ಅವರು ಯಾವತ್ತಾದ್ರೂ ಗೂಬೆ ಮುಖ ನೋಡಿದ್ದಾರಾ? ಗೂಬೆ ಅಂದ್ರೆ ಗೊತ್ತಾ ಅವರಿಗೆ? ಗೂಬೆಯ ರಾಶಿ, ನಕ್ಷತ್ರ ಗೊತ್ತಾ?"

ವಿಶ್ವ ಗೂಬೆ ಬಗ್ಗೆ ಈಗ ಯೋಚನೆ ಮಾಡಿದ.

"ಪಕ್ಷಿ ಪ್ರಪಂಚದಲ್ಲಿ ಗೂಬೆಗೆ ಯಾಕಿಷ್ಟು ಕೆಟ್ಟ ಸ್ಥಾನ ಸಿಕ್ಕಿದೆ?" ಎಂದು ಕೇಳಿದ.

"ಗೂಬೆ ರೈತರ ಮಿತ್ರ. ಬೇರೆ ಯಾವುದೇ ಹಕ್ಕಿಗೆ ಇಲ್ಲದ ಶಕ್ತಿ ಅದಕ್ಕಿದೆ. ಗೂಬೆ ರಾತ್ರಿ ಮಾತ್ರ ಕಣ್ಣಿಗೆ ಕಾಣುತ್ತೆ. ಹೀಗಾಗಿ ರಾತ್ರಿ ಹೊಲಕ್ಕೆ ನುಗ್ಗಿ ಬೆಳೆಯನ್ನ ಹಾಳು ಮಾಡೋ ಹಾವುಗಳು, ಇಲಿಗಳ್ನ ಧ್ವಂಸ ಮಾಡೋದು ಗೂಬೆ ಮಾತ್ರ. ಗೂಬೆ ಸಾಕ್ಕೊಂಡ್ರೆ ರೈತನಿಗೆ ಒಳ್ಳೇದಾಗುತ್ತೆ. ಆದರೆ ಗೂಬೆ ಅಂದ್ರೆ ಸಾಕು ಜನ ಹೆದರ್ತಾರೆ. ಇನ್ನು ಗೂಬೆ ಕೂತ ತೆಂಗಿನಕಾಯಿಯಲ್ಲಂತೂ ತಿರುಳು ಇರೋದಿಲ್ಲ, ನೀರೂ ಇರೋದಿಲ್ಲ."



"ಕಾಗೆ ಮತ್ತು ಗೂಬೆ ಹೊಕ್ಕ ಮನೆ ಕೇಡು ಅಂತಾರೆ"

"ಎರಡು ತಲೆ ಹಾವಿನ ಬಗ್ಗೆ ಏನು ಹೇಳ್ತೀರಾ" ಎಂದು ವಿಶಾಲು ನನ್ನನ್ನು ಪ್ರಶ್ನಿಸಿ ಗಂಡನ ಮುಖವನ್ನು ನೋಡಿದಳು. ವಿಶ್ವನಿಗೆ ಸಿಟ್ಟು ಬಂತು.

"ಎರಡು ತಲೆ ಹಾವು ಅಂತ ನನ್ನ ಮುಖ ಯಾಕೆ ನೋಡ್ತೀಯಾ?" ಎಂದು ರೇಗಿದ.

ನಿಮ್ಮ ಬಗ್ಗೆ ಅಲ್ರೀ, ಮೊನ್ನೆ ಪೇಪರ್‌ನಲ್ಲಿ ಬಂದಿತ್ತಲ್ಲಾ, ಎರಡು ತಲೆ ಹಾವನ್ನ ಯಾರೋ ಸಾಗಿಸ್ತಾ ಇದ್ರಂತೆ ಕಡೆಗೆ ಸಿಕ್ಕಿ ಬಿದ್ದಿದ್ದಾರೆ.



ಎರಡು ತಲೆಯ ಹಾವು ಅಂದ್ರೆ ಎರಡೂ ಕಡೆ ತಲೆ ಇದೆ ಅನ್ನೋ ಅರ್ಥದಲ್ಲಿ ಹೇಳ್ತಾರೆ. ಎರಡು ಹೆಡೆಯ ಹಾವಿಲ್ಲ... ನಾನು ಹಿಂದೊಮ್ಮೆ ಪತ್ರಿಕಾಲಯದಲ್ಲಿ ಕೆಲಸ ಮಾಡ್ತಾ ಇದ್ದಾಗ ಕೋಲಾರದ ಹಳ್ಳಿಯೊಂದರ ಬಳಿ ಏಳು ಹೆಡೆಯ ಸರ್ಪ ಒಂದಿತ್ತು ಅಂತ ಒಬ್ಬ ಅರ್ಚಕ ಹಾವಿನ ಚಿತ್ರ ತಂದುಕೊಟ್ಟಿದ್ದ.

ನನಗೆ ಆಶ್ಚರ್ಯವಾಯ್ತು. ಆ ಸುದ್ದೀನ ಪ್ರಕಟ ಮಾಡಬೇಕು ಎಂದು ಅರ್ಚಕ ಒತ್ತಾಯಿಸಿದ್ದ. ಸಂಪಾದಕರು ಬಂದು ಅರ್ಚಕನನ್ನು ಪ್ರಶ್ನೆ ಮಾಡಿದರು.

“ನಿಮ್ಮ ದೇವಸ್ಥಾನದ ಹತ್ರ ಬಂದಿತ್ತಾ ಈ ಹಾವು?”

“ಹೌದು ಸ್ವಾಮಿ... ಈಶ್ವರ ಲಿಂಗದ ಮೇಲೆ ಏಳು ಹೆಡೆ ಬಿಚ್ಚಿ ನಿಂತಿತ್ತು. ಮಂಗಳಾರತಿ ಮಾಡಿದ ಮೇಲೆ ಹಾವು ಹೊರಟು ಹೋಯ್ತು...” ಎಂದ.

“ಹಾವಿಗೆ ಸಾಮಾನ್ಯವಾಗಿ ಐದು ಹೆಡೆ ಇರುತ್ತೆ ಏಳು ಹೆಡೆ ಸರ್ಪ ಅಪರೂಪ. ನೀನು ಸರಿಯಾಗಿ ಹೆಡೆಗಳು ಎಣಿಸಿದೆಯಾ” ಎಂದಾಗ ಅರ್ಚಕ ಚೌಕಾಶಿಗೆ ಇಳಿದ.

“ಬಹುಶಃ ಅದು ಐದು ಹೆಡೇನೇ ಇರಬೇಕು. ನಾನು ಗಾಬರಿಯಲ್ಲಿ ಸರಿಯಾಗಿ ಎಣಿಸಲಿಲ್ಲ. ಹೆಡೆಗಳ್ನ ಎಂದ. ಹಾವಿನ ತಲೆ ಎಣಿಸುವುದು ಬಹಳ ಕಷ್ಟ ಎಂದು ಎಲ್ಲರಿಗೂ ಗೊತ್ತು.

“ನಿಮ್ಮ ಏರಿಯಾದಲ್ಲಿ ಮೂರು ಹೆಡೆ ಹಾವಿದೆ ಅಂತ ಕೇಳಿದ್ದೀನಿ. ಅದು ಇರಬಹುದಾ?” ಎಂದು ಸಂಪಾದಕರು ಪ್ರಶ್ನೆ ಮಾಡಿದರು.

“ಇರಬಹುದು ಸ್ವಾಮಿ. ಮೂರು ಹೆಡೇನೇ ಇರಬೇಕು. ದೊಡ್ಡದಾಗಿತ್ತಲ್ಲಾ, ಒಂದೊಂದು ಹೆಡೇನ ನಾನು ಎರಡು ಅಂತ ಲೆಕ್ಕ ಮಾಡಿದೆ.” ಎಂದು ಅರ್ಚಕ ಒಪ್ಪಿದ.

ಅನಂತರ ಕೈ ಮುಗಿದು “ದಯವಿಟ್ಟು ನಮ್ಮ ದೇವಸ್ಥಾನಕ್ಕೆ ಏಳು ಹೆಡೆಯ ಹಾವು ಬಂದಿತ್ತು. ಪೂಜೆ ಮಾಡಿಸಿಕೊಂಡು ಹೋಯ್ತು ಅನ್ನೋದನ್ನ ಸುದ್ದಿ ಮಾಡಿ” ಎಂದು ಅಂಗಲಾಚಿದ.

“ಐದು ಹೆಡೆ, ಏಳು ಹೆಡೆ ಇವೆಲ್ಲಾ ಕವಿ ಕಲ್ಪನೆ ಅಷ್ಟೇ. ಪುರಾಣಗಳಲ್ಲಿ ಕೇಳಿದ್ದೀವಿ, ಫೋಟೋಗಳಲ್ಲಿ ನೋಡಿದ್ದೀವಿ. ನಿಜ ಜೀವನದಲ್ಲಿ ಇಂಥಾ ಹಾವುಗಳು ಇಲ್ಲ. ಹಾಗೆ ಇದ್ದಿದ್ರೆ ಯಾವುದಾದ್ರೂ ಮೃಗಾಲಯದಲ್ಲಿ ಆದ್ರೂ ಇರಬೇಕಲ್ಲ? ಸುಳ್ಳು ಸುದ್ದಿ ಹೇಳಬಾರದು” ಎಂದಾಗ ಅರ್ಚಕ ತಲೆ ತಗ್ಗಿಸಿ ನಂತ.

“ಸ್ವಾಮಿ, ನಮ್ಮ ದೇವಸ್ಥಾನಕ್ಕೆ ಬರೋ ಭಕ್ತರ ಸಂಖ್ಯೆ ಕಡಿಮೆಯಾಗಿದೆ. ತಟ್ಟೆಕಾಸೂ ಸಿಕ್ತಾ ಇಲ್ಲ. ದಕ್ಷಿಣೆ ನಾವು ಬೇಡಿ ತಗೋಬೇಕಾಗುತ್ತೆ. ಈ ಸುದ್ದಿ ನಿಮ್ಮ ಪತ್ರಿಕೆಯಲ್ಲಿ ಹಾಕಿದ್ರೆ ಜಾಸ್ತಿ ಜನ ಬರ್ತಾರೆ. ಎಷ್ಟೋ ದೇವಸ್ಥಾನಗಳು ಹೀಗೇ ಅಭಿವೃದ್ಧಿ ಆಗಿರೋದು ಸ್ವಾಮಿ” ಎಂದು ಆತ ಕೈ ಮುಗಿದ.

ಶಕುನಗಳು ಬೇಕು ನಿಜ. ಆದರೆ ಈ ಶಕುನದಿಂದ ಜನ ತಪ್ಪು ದಾರಿಗೆ ಎಳೆಯುವಂತಾಗಬಾರದು. ಎಲ್ಲಿಗಾದರೂ ಹೊರಟಾಗ ಎಲ್ಲಿಗೆ ಎಂದು ಕೇಳಬಾರದು ಎಂಬ ಮಾತಿದೆ. ಅದರಲ್ಲಿ ಅರ್ಥವಿದೆ.

ಆದರೆ ಶಕುನವನ್ನು ನಂಬಿ, ಎದುರಿಗೆ ಅಜ್ಜಿ ಬರಬಾರದು, ಬ್ರಾಹ್ಮಣ ಬರಬಾರದು, ಹೆಣ ಬರಬಾರದು, ಸೌದೆ ಬರಬಾರದು ಎಂದು ನಂಬಿದರೆ ಕಷ್ಟ.

ಶಕುನಗಳು ನಾವು ನಂಬ್ತೀವಿ, ಆದರೆ ವಿದೇಶದವರು ಶಕುನಗಳು ನಂಬೋದೇ ಇಲ್ಲವಲ್ಲ, ಅವರು ಆರಾಮವಾಗಿಲ್ಲವೇ?

ಬೆಳಿಗ್ಗೆ ನನಗೆ ಒಳ್ಳೆ ಕನಸು ಬಿದ್ದಿತ್ತು. ಕನಸಲ್ಲಿ ಮನೆ ಮುಂದೆ ಕಾಮಧೇನು ಬಂದು ಹಾಲನ್ನ ನೀಡಿತು. ನಾನು ಹಾಲನ್ನು ಕರೆದುಕೊಂಡೆ. ಒಳ್ಳೆ ಶಕುನ ಎಂದುಕೊಳ್ಳುತ್ತಿದ್ದಂತೆ ಅದು ತನ್ನ ಬಾಲದಿಂದ ರಪ್ಪನೆ ಹೊಡೆಯಿತು. ಕಣ್ಣು ತೆರೆದೆ. ನಮ್ಮಾಕೆ ನಿಂತಿದ್ದಳು.

“ಇವತ್ತು ಭಾನುವಾರ ಮನೆ ಕೆಲಸ ಇದೆ. ಬೇಗ ಎದ್ದು ಕಸ ಗುಡಿಸಿ” ಎಂದು ಎಚ್ಚರಿಸಿದಳು.

**ಇದಕ್ಕಿಂತ ಒಳ್ಳೆಯ ಶಕುನ ಇದೆಯೇ?**



# ಸಿಂಪಲ್ಲಾಗಿರೋದು

**ಹ. ಶಿ. ಭೈರನಟ್ಟಿ**

**ಸಿಂ**ಪಲ್ಲಾಗಿರೋದು ಒಳ್ಳೆಯದು, ಸಿಂಪಲ್ಲಾಗಿ ಇರಬೇಕು ಅಂತ ಅಂತಿರ್‍ತಾರೆ ಜನ. ಆದರೆ ಈಗಿನ ಕಾಲದಲ್ಲಿ ಅದು ಸಾಧ್ಯವೇ? ಅದರಂತಹ ಕಠಿಣ ಕೆಲಸ ಬೇರೊಂದಿಲ್ಲ. ನನ್ನ ದೃಷ್ಟಿಯಲ್ಲಿ ಸತ್ಯ ಅಹಿಂಸೆಗಳಂತೆಯೇ ಸಿಂಪಲ್ಲಾಗಿರೋದು ಕೂಡ ಒಂದು ಆದರ್ಶ.

> **ಸಿಂಪಲ್ಲಾಗಿರಬೇಕು ನಿಜ ಆದರೆ ರಸ್ತೆ ಹೆಸರುಗಳೂ ಸಿಂಪಲ್ಲೇ**

ಈಗ ಇದೇ ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿನಲ್ಲಿಯ ಯುವಕರ ಉದಾಹರಣೆಯನ್ನೇ ತೆಗೆದುಕೊಳ್ಳಿ. ವಾಯರಿನ ತುದಿಯೊಂದನ್ನು ಮೊಬೈಲಿಗೆ ಸಿಗಿಸಿ, ಇನ್ನೊಂದು ತುದಿಯ ಕಡೆ ಸೀಳಿ ಎರಡಾಗಿರುವುದನ್ನು ತಮ್ಮ ಕಿವಿಗಳಲ್ಲಿ ಹಾಕಿಕೊಂಡು ಸ್ವರ್ಗಸುಖ ಅನುಭವಿಸುತ್ತಿದ್ದಾರೆ. ದೇವಮಾನವರಿವರು. ಇವರನ್ನು ಮಾತಾಡಿಸಲಿಕ್ಕಾಗದು. ಏನಾದರಾಗಿ, ಮೊದಲು ಮಾನವರಾಗಿ, ನನಗೊಂದು ಸಣ್ಣ ಮಾಹಿತಿ ನೀಡಿ ಪುಣ್ಯಕಟ್ಟಿಕೊಳ್ಳಿ ಎಂದರೆ ಕೇಳುತ್ತಾರೆಯೇ? ಓ ಒಬ್ಬ ಸಾದಾ ಮಾನವ ಕಾಣಿಸುತ್ತಿದ್ದಾನೆ! ತಾಳಿ.

ಗಡಬಡಿಸಿ ಅವನ ಎದುರಿಗೆ ಹೋಗಿ ಮುಗುಳ್ನಗೆ ಬೀರಿ 'ಮಹಾತ್ಮಾ ಗಾಂಧಿ ಮಾರ್ಗಕ್ಕೆ ಹೋಗಬೇಕಾಗಿದೆ' ಅಂತ ಶುರು ಮಾಡುತ್ತಿದ್ದಂತೆಯೇ 'ಈ ಕಾಲದಲ್ಲಿ ಯಾರು ಸಾರ್ ಅಲ್ಲಿಗೆ ಹೋಗ್ತಾರೆ? ಆ ಕಾಲ ಎಂದೋ ಮುಗಿದುಹೋಗಿ ಆಗಿದೆಯಲ್ಲಾ, ಗಲ್ಲಿಗೊಂದು ಎರಡು ವೈನ್ ಶಾಪ್ ಆಗಿವೆ' ಅಂದ. 'ಹಾಗಲ್ಲ' ಅಂತ ತಿಳಿಸಿ ಹೇಳಬೇಕೆಂದರೆ 'ನೀವು ಎಲ್ಲಿಂದ ಬಂದಿರಿ?' ಎಂದು ಕೇಳಿದ. 'ಧಾರವಾಡದಿಂದ. ರಾತ್ರಿ ಹತ್ತು ಗಂಟೆಗೆ ಬಸ್ಸಿನಲ್ಲಿ ಕುಳಿತು ಇದೀಗ ಇಲ್ಲಿ ಬಂದಿಳಿದೆ' ಅಂದೆ. 'ಓ ನೀವು ಧಾರವಾಡದವರು, ಹೆಗಲಿನ ಬ್ಯಾಗ್ ನೋಡಿದರೆ ಸಾಹಿತಿ ಅಂತ ಕಾಣ್ತೀರಿ. ಮಹಾತ್ಮಾ ಗಾಂಧಿ ಅಂದಕೂಡ್ಲೆ ಅನ್ನಿಸಿತ್ತು ಆ ಕಡೆಯವರೇ ಇದ್ದಿರಬಹುದು ಅಂತ. ಆದರೂ ಕೇಳಿ ಕನ್‌ಫರ್ಮ್ ಮಾಡಿಕೊಂಡೆ. ಈ ಬೆಂಗಳೂರಿನಲ್ಲಿ ಸತ್ಯ ಅಹಿಂಸೆ ಅಂಥವೇನೂ ಉಳಿದಿಲ್ಲ' ಎನ್ನುತ್ತ ಹೋಗಿಯೇಬಿಟ್ಟ. ದೇವಮಾನವರಿಗಿಂತಲೂ ಒಂದು ಹೆಜ್ಜೆ ಮೇಲಿನವ! ಕೈಬಿಡಿ, ಬೆರಳು ಎತ್ತಿ ತೋರಿಸಿ ದಿಕ್ಕು ತೋರಿಸಿದ್ದರೆ ಸಾಕಿತ್ತು ಪುಣ್ಯ ಕಟ್ಟಿಕೊಳ್ಳುತ್ತಿದ್ದ!

ಇನ್ನೊಬ್ಬ ಬಂದ. ವರಸೆ ಬದಲಿಸಿ 'ವಿಚಾರಣೆ ಕೌಂಟರ್ ಎಲ್ಲಿ?' ಎಂದು ಕೇಳಿದೆ. 'ಏಂಥದ್ದು?' ಅಂದ. 'ವಿಚಾರಣೆ, ಎನ್‌ಕ್ವೈರಿ ಕೌಂಟರ್' ಅಂದೆ. ಬೆರಳುಮಾಡಿ ತೋರಿಸಿದ. ಹೋಗಿ ಅವರನ್ನು ಕೇಳಿದೆ – 'ಮಹಾತ್ಮಾ ಗಾಂಧಿ ಮಾರ್ಗಕ್ಕೆ ಹೋಗಬೇಕಾಗಿದೆ. ಯಾವ ಬಸ್ಸು?' ಅನ್ಯಗ್ರಹ ಜೀವಿಯನ್ನು ನೋಡಿದಂತೆ ಅನ್ನಿಸಿತೇನೋ. 'ಸಿಂಪಲ್ಲಾಗಿ ಎಮ್ಜಿರೋಡ್ ಅನ್ಲಿಕ್ಕೆ ಏನಾಗ್ತದೆ ನಿಮಗೆ? ಆ ಬಸ್ಸುಗಳೆಲ್ಲಾ ಅದೇ ರೋಡಿಗೆ ಹೋಗ್ತವೆ, ಹೋಗಿ ಬೇಗ' ಎಂದ.



ಇದಕ್ಕೂ ‘ಸಿಂಪಲ್ಲಾಗಿರೋದು’ ಅನ್ತಾರೆ ಅನ್ನೋದು ಗೊತ್ತಾಯಿತು.

ಬೆಂಗಳೂರಿನಲ್ಲಿಯ ಕೆಲಸ ಮುಗಿದ ಮೇಲೆ ತಿರುಗಿ ಧಾರವಾಡಕ್ಕೆ ಹೋಗಬೇಕು. ಹೋಗಲಿಲ್ಲ. ಕಾರಣ ಇದೆ. ನನ್ನವಳು ತನ್ನ ತಮ್ಮ ನೌಕರಿ ಮಾಡುತ್ತಿರುವ ನೆಲ್ಲೂರಿಗೆ ಹೋಗಿದ್ದಳು. ಅವನು ಕುಟುಂಬ ಸಮೇತ ಕ್ವಾರ್ಟರ್ಸಿನಲ್ಲಿದ್ದಾನೆ. ನನ್ನನ್ನೂ ಕರೆದುಕೊಂಡೇ ಹೋಗುವ ಪ್ಲಾನ್ ಇವಳಿಗೆ ಇತ್ತು. ಬೆಂಗಳೂರಲ್ಲಿ ಕೆಲಸ ಇದೆ ಅಂತ ಹೇಳಿ ಬಚಾವಾಗಿದ್ದೆ. ತನ್ನ ತಂಗಿಯ ಮಗಳು ಪುಟ್ಟಿಯನ್ನು ಜೊತೆಗೆ ಕರೆದು ಕೊಂಡು ಹೋಗಿದ್ದಳು.




ಹೋಗಿ ನಾಲ್ಕು ದಿನ ಆಗಿರಲಿಲ್ಲ, ಫೋನು! ಪುಟ್ಟಿಗೆ ಅರ್ಜೆಂಟ್ ವಾಪಸ್ ಅವಳ ಊರಿಗೆ ಹೋಗ ಬೇಕಿತ್ತಂತೆ, ಅದಕ್ಕಾಗಿ ನಾನು ನೆಲ್ಲೂರಿಗೆ ಬರಬೇಕಂತೆ! ನೆಲ್ಲೂರಿನ ಸಮೀಪವೇ ಇದೆ ಪಾಂಡಿಚೆರಿ, ಇಬ್ಬರೂ ಹೋಗಿ ಬರೋಣ ಎಂದು ಆಸೆ ಬೇರೆ ಹಚ್ಚಿದ್ದಳು. ಒಂದು ರೀತಿಯಲ್ಲಿ ಇವಳೂ ದೇವಮಾನವಳೇ. ಯದ್ವಾ ತದ್ವಾ ಭಕ್ತಿಯಿದೆ ದೇವರ ಮೇಲೆ, ದೇವಸ್ಥಾನಗಳ ಮೇಲೆ! ನೆಲ್ಲೂರಿಗೆ ಸಮೀಪವೇ ಇರುವ ತಿರುಪತಿ, ಕಾಳಹಸ್ತಿ ಎಟ್ಸೆಟ್ರಾ ದೇವಸ್ಥಾನಗಳಿಗೆ ಅವರೆಲ್ಲರ ಜೊತೆ ಹೋಗಿಬಂದು ಪುಣ್ಯ ಸಂಪಾದಿಸಿಕೊಂಡು ಬಂದಿದ್ದಾಳೆ. ಸಿಂಪಲ್ಲಾಗಿ ಆರಾಮಾಗಿ ಇರು ಮಹಾರಾಯ್ತಿ, ಮೊದಲು ಮಾನವಳಾಗು ಅಂತ ಬೇಕಾದಷ್ಟು ಸಲ ವಿನಂತಿ ಮಾಡಿಕೊಂಡಿದ್ದೇನೆ, ಕೇಳ್ತಾಳೆಲ್ಲಿ? ಇವಳೊಬ್ಬಳೇ ಹೀಗಲ್ಲ, ಇತಿಹಾಸ, ಪುರಾಣ ಕೆದಕಿನೋಡಿ ಬೇಕಾದರೆ, ಪತಿದೇವರು ಹೇಳಿದ ಮಾತನ್ನು ಯಾರೂ ಕೇಳಿಲ್ಲ, ಕೇಳಲ್ಲ. ಹೋಗಲಿ ಬಿಡಿ, ವಿಷಯಕ್ಕೆ ಬರ್ತೇನೆ.

ನೆಲ್ಲೂರಿಗೆ ಹೋಗಿ ನಾಲ್ಕು ದಿನ ಆರಾಮಾಗಿ ಇದ್ದು ಪಾಂಡಿಚೆರಿಗೆ ನಾವಿಬ್ಬರೂ ಹೋದೆವು. ಎಲ್ಲಾ ಕಾಟೇಜುಗಳು, ಗೆಸ್ಟ್ ಹೌಸ್‌ಗಳು ಫುಲ್. ಅಡ್ವಾನ್ಸ್ ಬುಕ್ಕಿಂಗ್ ಮಾಡಿಹೋಗಿರಲಿಲ್ಲ ನಾವು. ಅಂತೂ ಕೊನೆಗೆ ಒಂದು ಕಡೆ ಖಾಸಗಿ ಲಾಜಿಂಗ್ ಸಿಕ್ಕಿತು. ಚೌಕಾಶಿ ಮಾಡದೆ ಒಪ್ಪಿಕೊಂಡೆವು.



ಅಲ್ಲಿಯವರಿಗೂ ಸಿಂಪಲ್ಲಾಗಿ ಇದ್ದು ಗೊತ್ತಿಲ್ಲ! ಹೆಸರಿಟ್ಟಿದ್ದಾರೆ ನಮ್ಮ ಲಾಜಿಂಗ್ ಇರೋ ಗಲ್ಲಿಗೆ – ಎಸ್. ವಿ. ಪಟೇಲ್ ರೋಡ್ ಅಂತ! ಇಲ್ಲಿಯವರ ಯಾರದೋ ಲೀಡರ್ ಹೆಸರು ಇದ್ದಿರಬಹುದು. ಆಟೋದಲ್ಲಿ ಹತ್ತಿ ತಿರುಗಿ ಬರುವಾಗ ಈ ರಸ್ತೆಯ ಹೆಸರು ಹೇಳಲೇಬೇಕು, ಅನಿವಾರ್ಯ. ಅಷ್ಟುದ್ದದ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳೋದು ನಮ್ಮಂಥ ವಯೋವೃದ್ಧರಿಗೆ ಹೇಗೆ ಸಾಧ್ಯ? ನಾನು ಇಂಥದಕ್ಕೆಲ್ಲ ಉಪಾಯ ಕಂಡುಕೊಂಡಿದ್ದೇನೆ. ಎಸ್. ವಿ. ಪಟ್ಟಣಕೋಡಿ ಅಂತ ನಮ್ಮ ಗುರುಗಳೊಬ್ಬರಿದ್ದರು. ಎಲ್ಲಾ ವಿದ್ಯಾರ್ಥಿಗಳು ಅವರ ಬೆತ್ತದ ರುಚಿ ಸವಿದವರೇ! ಅವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಆಗಾಗ್ಗೆ ನೆನಪಿಸಿಕೊಳ್ಳತೊಡಗಿದೆ. ಸಮಸ್ಯೆ ಬಗೆಹರಿಯಿತು.

ಮೂರು ದಿನ ಇದ್ದು ಎಲ್ಲಾ ಕಡೆ ಸುತ್ತಾಡಿ, ತಿರುಗಿ ಧಾರವಾಡದ ಕಡೆ ಮುಖ ಮಾಡಿ ಹೊರಟಾಗ ಗೊತ್ತಾಯಿತು – ಎಸ್. ವಿ. ಪಟೇಲ್ ಅಂದರೆ ಸರದಾರ್ ವಲ್ಲಭಭಾಯಿ ಪಟೇಲ್ ಅಂತ! ಉಕ್ಕಿನ ಮನುಷ್ಯ ಅಂತ ಇದೇ ಪಟ್ಟಣಕೋಡಿ (ಬೆತ್ತದ) ಗುರುಗಳು ಬೆತ್ತ ಎತ್ತಿಹಿಡಿದೇ ಬಾಯಿಪಾಠ ಮಾಡಿಸಿದ್ದರು!

ಅಂತೂ ನಮ್ಮೂರಿಗೆ ಬಂದೆವು, ಯಾವ ಊರಿಗೂ ಹೋಗಬಾರದಿನ್ನು, ಯಾವ ಊರಿನವರೂ ಸಿಂಪಲ್ಲಾಗಿರೋದಿಲ್ಲ ... ಅಂತ ಅಂದುಕೊಳ್ಳುವಾಗಲೇ ಕಣ್ಣಿಗೆ ಬಿತ್ತು – ಮದುವೆಯ ಆಮಂತ್ರಣ ಪತ್ರಿಕೆಯೊಂದು. ಪರಿಚಯದವರೊಬ್ಬರ ಮಗನ ಮದುವೆಯ ಮಮತೆಯ ಕರೆಯೋಲೆ! ಮರುದಿವಸವೇ ಮದುವೆ! ಸಕುಟುಂಬ ಸಪರಿವಾರದೊಡನೆ ಆಗಮಿಸಿ ಅಂತಿತ್ತು. ಎಲ್ಲಾ ಸರಿ, ಆಗಮಿಸೋದು ಎಲ್ಲಿಗೆ? ಎಂಬೀ ನಗರ ಅಂತೆ! ಪಿನ್ ಕೋಡ್ ಸಹಿತ ಹಾಕಿಲ್ಲ.

ಐವತ್ತು ವರ್ಷವಾಯ್ತು ಧಾರವಾಡದಲ್ಲಿದ್ದು. ಈ ಹೆಸರೇ ಕೇಳಿಲ್ಲ. ಈಗ ಯಾರನ್ನೇ ಕೇಳಿದರೂ ನಗೆಗೇಡು! ಇಬ್ಬರೂ ಯೋಚಿಸಿಯೇ ಯೋಚಿಸಿದೆವು. ಏನಾಗಿಬಿಟ್ಟಿತು ಈ ಧಾರವಾಡ ಜನಕ್ಕೂ ಅಂತ ಯೋಚನೆಯಾಯ್ತು. ಇವರೂ ಸಿಂಪಲ್ಲಾಗಿ ಉಳಿಯಲಿಲ್ಲವಲ್ಲ? ದಿನನಿತ್ಯ ಇಲ್ಲೇ ಇರಬೇಕು, ಇವರ ಜೊತೆಗೇ ವ್ಯವಹರಿಸಬೇಕು, ಇಲ್ಲಿಯವರೂ ಬದಲಾಗಿಬಿಟ್ಟರಲ್ಲಾ... ಅಂತ ಯೋಚಿಸುವಾಗಲೇ ಪೋಸ್ಟ್‌ಮನ್ ಬಂದ, ದೇವರ ಹಾಗೆ. ಕೇಳಿದೆವು. ಉತ್ತರಿಸಿದ – ಎಂಬೀ ನಗರ ಅಂದರೆ ಮಹಾತ್ಮಾ ಬಸವೇಶ್ವರ ನಗರ! ಹಣೆ ಹಣೆ ಬಡಿದುಕೊಂಡೇ ಪೋಸ್ಟ್‌ಮನ್‌ಗೆ ಧನ್ಯವಾದ ಹೇಳಿದೆವು.

## ಹೋದರೆ ಹೋಗಲಿ

ಒಂದು ಸರಗಳ್ಳತನ ಆಗಿದೆ. ನೇರವಾಗಿ ಕತ್ತಿಗೆ ಕೈ ಹಾಕಿ ಚಿನ್ನದ ಸರ ಎಗರಿಸಲಾಗಿದೆ. ಕಳ್ಳ ಅಷ್ಟೇ ವೇಗದಲ್ಲಿ ಪರಾರಿ ಆಗಿದ್ದಾನೆ ಸಹ. ಗೊಂದಲ ಮತ್ತು ಆಘಾತದ ಸ್ಥಿತಿಯಲ್ಲಿದ್ದ ಮಹಿಳೆ ಏನು ಮಾಡಲೂ ತೋಚದೆ ಕೂತಲ್ಲೇ ಸ್ತಬ್ಧರಾಗಿದ್ದಾರೆ. ನಂತರ 'ಚಿನ್ನದ ಸರ ಹೋದರೆ ಹೋಗಲಿ ತಲೆಯನ್ನೇ ಕಳಚಿಕೊಂಡು ಹೋಗಲಿಲ್ಲವಲ್ಲಾ, ಅದೇ ದೊಡ್ಡದು' ಎಂದರು ಸಾವರಿಸಿಕೊಂಡು ನಗುತ್ತಾ...



# ನಾನು ಹಿಂಗೇನೆ....

*** ಸಹನಾ ಪ್ರಸಾದ್**

**ಧ**ಡ ಧಡ ನಡೆಯುತ್ತಿದ್ದ ನನ್ನನ್ನು ಬಲವಂತವಾಗಿ ಹಿಡಿದು ನಿಲ್ಲಿಸಿದಳು ಗೆಳತಿ. ಯಾಕೆ, ಯಾವಾಗಲೂ ಇಷ್ಟು ಅರ್ಜೆಂಟು? ನೀ ನಡೆದಿದ್ದೆ ನಾ ನೋಡಿಲ್ಲವಲ್ಲ, ಸ್ವಲ್ಪ ನಿಧಾನವಾಗಿ ಹೋಗು. ಈ ರೀತಿ ಓಡಲು ನೀ ಎಳೆ ಹುಡುಗಿಯಲ್ಲ! ಎಂದು ನಕ್ಕು ಮುಂದೆ ನಡೆದ ಅವಳನ್ನು ನೋಡಿ ನನ್ನ ಹೆಜ್ಜೆಗಳು ನಿಧಾನವಾದವು. ಹೌದು, ನಾನೇಕೆ ಯಾವಾಗಲು ಧಾವಂತದಲ್ಲಿರುವುದು?

**ಟೆನ್ಷನ್ ಗಿರಾಕಿಯೊಬ್ಬಳ ಸ್ವಗತ**

ಸ್ಥಿರ ದೂರವಾಣಿಯು ಕಾಲದಲ್ಲಿ ನನ್ನ ಗಂಡ ರೇಗಿಸುತ್ತಿದ್ದರು

ದಯವಿಟ್ಟು ನನ್ನ ಅಫೀಸಿಗೆ ಕರೆ ಮಾಡಬೇಡಮ್ಮ. 'ಮನೆಗೆ ಬೆಂಕಿ ಹೊತ್ತಿದೆ ನೋಡಪ್ಪಾ..' ಎಂದು ಎಲ್ಲರೂ ರೇಗಿಸುತ್ತಾರೆ. ಆ ರೀತಿ ಗಾಬರಿ ಇರುತ್ತದೆ ನಿನ್ನ ಮಾತಿನಲ್ಲಿ!

ಏನೇ, ಯಾವತ್ತಾದರೂ ಆರಾಮವಾಗಿ ಕೂತು ಕಾಫಿ ಕುಡಿದಿದ್ಯಾ? ಕೋಸಂಬರಿ ತಿನ್ನುವುದು ಹೀಗಾ? ರೈಲು ತಪ್ಪಿ ಹೋಗಬಹುದು ಎನ್ನುವ ತರಹ ಮುಕ್ಕುತ್ತಿದ್ದೀಯಾ? ಆರಾಮವಾಗಿ ಕಾಲು ಚಾಚಿ ಕೂತು ಮೆಣಸಿನಕಾಯಿ ಚೂರುಗಳನ್ನು ಮೆಲ್ಲಗೆ ಕಚ್ಚಿ ತಿನ್ನು. ನಿಂಬೆ ಹಣ್ಣಿನ ಸವಿ, ಹೆಸರು ಬೇಳೆಯ ರುಚಿ, ಉಪ್ಪಿನ ಘಾಟು, ಮೆಣಸಿನ ಚುರುಕು, ಕೊತ್ತಂಬರಿಯ ಸುವಾಸನೆ, ಇಂಗಿನ ಘಮ ಸೇರಿ ಕೋಸಂಬರಿ. ಅದು ಗೊತ್ತಾಗುವುದು ನಿಧಾನವಾಗಿ ತಿಂದರೇನೆ! ಗೆಳತಿಯ ಉವಾಚ.

ಯಾಕ್ರೀ ಮೇಡಮ್. ಯಾವಾಗಲೂ ಅರ್ಜೆಂಟ್. ಇರಿ ಸ್ವಲ್ಪ, ಅಂಗಡಿಯಲ್ಲಿ ಬೇರೆಯವರೂ ಇದ್ದಾರಲ್ಲವೆ. ಅವರನ್ನೂ ನೋಡಿಕೊಬೇಕು ತಾನೆ ಇದು ಅಂಗಡಿಯವನ ಮಾತು.

ಈಗಲೆ ಹೇಳುವೆನು ಮೇಡಮ್. ಉತ್ತರ ಭಾರತದ ತಿನಿಸುಗಳು ತಯ್ಯಾರಾಗಲು ಕಡಿಮೆ ಎಂದರೂ 15 ನಿಮಿಷಗಳು ಹಿಡಿಸುತ್ತವೆ. ದೋಸೆ ಕಾವಲಿ ತಣ್ಣಗಾಗಿದೆ. ಅದು ರೆಡಿ ಆಗಲು 10 ನಿಮಿಷಗಳಾಗುತ್ತದೆ. ನಿಮ್ಮ ಮಾಮೂಲಿ ಅವಸರಕ್ಕೆ ಇಡ್ಲಿ ಮಾತ್ರ ಸಿಗುತ್ತದೆ. ಆದರೆ ಬಿಸಿ ಅಲ್ಲ. ಬೆಳಗ್ಗಿನದು.

ಉಫ್. ಇದು ನನ್ನ ಕಿರು ಪರಿಚಯ. ನಾನ್ಯಾಕೆ ಹೀಗೆ? ಎಂದು ನನಗೆ ಉತ್ತರ ಸಿಕ್ಕಿಲ್ಲ. ಆತುರಗಾರನ ಬುದ್ಧಿಯ ಬಗ್ಗೆ ಎಲ್ಲರಿಗೂ ತಿಳಿದಿದೆ. ಅದರ ಬಗ್ಗೆ ನಾನೇ ಬರೆದು ಕೊಂಡಿದ್ದೇನೆ. ಈಗ ವಯಸ್ಸಾಗುತ್ತಾ, ತಲೆಕೂದಲು ಬೆಳ್ಳಗಾಗುತ್ತಿದೆ ಆದರೆ ಬುದ್ಧಿ ಅದೇ ರೀತಿ ಇದೆ. ಸುಮಾರು ಸಲಹೆಗಳು ಬರುತ್ತಲೇ ಇರುತ್ತವೆ. ಬಹಳ ಜನ ಹೇಳಿದ್ದು – 'ಪ್ರಾಣಾಯಾಮ ಮಾಡು' ಎಂದು. ಅದು ಮಾಡುವಾಗ ಪ್ರಾಣ ಹೋದಂತಾಗಿದ್ದು ಸುಳ್ಳಲ್ಲ. ಮಲಗುವಾಗ ಮಾತ್ರ ನನ್ನ ಬಾಯಿ ಮುಚ್ಚುವುದು. ಸುಮ್ಮನೆ ಕೂರುವುದು ನನ್ನ ಜಾಯಮಾನಕ್ಕೆ ಬಂದಿಲ್ಲ.



ಪ್ರಾಣಾಯಾಮ ಒಂದು ನಿಮಿಷ 30 ಸೆಕೆಂಡುಗಳಿಗೆ ಮುಗಿಯಿತು. ಅದಕ್ಕೆ ಕಾರಣ ನಾ ಅಷ್ಟರಲ್ಲಿ ನಿದ್ದೆಗೆ ಜಾರಿದ್ದು.

'ಆರಾಮವಾಗಿ ಇರುವವರ ಜತೆ ಇರು, ಅವರ ಗುಣ ನಿನಗೂ ಬರುತ್ತದೆ ಎನ್ನುವುದು ಮತ್ತೊಂದು ಸಲಹೆ'. ಅದಕ್ಕೆ ನಾನು ಆಯ್ದುಕೊಂಡದ್ದು ನನ್ನೊಟ್ಟಿಗೆ ಕೆಲಸ ಮಾಡುವ ಶ್ಲೋಕ. ಹೆಸರು, ಹೆಣ್ಣೂ ಬಹಳ ಸೌಮ್ಯ. ಯಾವಾಗಲೂ ಒಂದೇ ತರಹದ ಪ್ರತಿಕ್ರಿಯೆ. ಇಂಗ್ಲೆಂಡಿನ ಜನದ ಬಗ್ಗೆ ಒಂದು ಜೋಕ್ ಇದೆ. ಮನೆಗೆ ಬೆಂಕಿ ಬಿದ್ದು, ಅದು ಆರಿಸಿ ಲೇಟಾಗಿ ಪಾರ್ಟಿಗೆ ಬಂದ ಒಬ್ಬಾತ  ಸಾರಿ ಎಂದು ಮಾತ್ರ ಹೇಳುತ್ತಾನೆ. ಯಾಕೆ ಎಂದು ಕೇಳಿದರೆ,  ಹೆಚ್ಚೇನಿಲ್ಲ. ಮನೆಗೆ ಬೆಂಕಿ ಬಿದ್ದಿತ್ತು. ಆರಿಸಿ ಬರಲು ಇಷ್ಟೊತ್ತಾಯಿತು ಎಂದು ನಿಧಾನವಾಗಿ ಹೇಳುತ್ತಾನೆ. ಅದೇ ರೀತಿ ನಮ್ಮ ಶ್ಲೋಕ. ಅವಳ ಮುಖದ ಮೇಲೆ ಒಂದು ನೆರಿಗೆಯಿಲ್ಲ. ಯಾಕೆಂದರೆ ನನ್ನ ಹಾಗೆ ಘಳಿಗೆಗೊಮ್ಮೆ ಅವಳ ಮನದಲ್ಲಿ ಏರಿಳಿತಗಳಗುವುದಿಲ್ಲ. ಮಾತೂ ಕಡಿಮೆ, ಯೋಚನೆಯೂ ಕಡಿಮೆ. ಇವಳ ಜತೆ ಇರುವುದು, ತಡವಾದರೆ ಆರಾಮವಾಗಿ ಮೊಬೈಲ್ ನೋಡುತ್ತಾ ಕೂರುವುದು ಬಹಳ ತ್ರಾಸವಾಗತೊಡಗಿತು. ಇನ್ನು ಒಂದೆರಡು ದಿನವಾದರೆ ಇವಳ ಜತೆ ಇರಲು ತೊಡಗಿ ವಾರವಾಗುತ್ತದೆ. ಆಮೇಲೆ ಮೆಲ್ಲಗೆ ಕಳಚಿಕೊಳ್ಳೋಣ ಎಂದು ನಾನು ಲೆಕ್ಕ ಹಾಕುತ್ತಿದ್ದೆ. ಆದರೆ ಮಾರನೆಯ ದಿನದಿಂದ ಅವಳು ನನ್ನನ್ನು ಅವಾಯ್ಡ್ ಮಾಡಲು ಶುರು ಮಾಡಿದಳು. ನೇರ ಹೋಗಿ ಕೇಳೇಬಿಟ್ಟೆ.

ಅಯ್ಯೋ. ನಿನ್ನ ಆತುರ ನನಗಾಗಲ್ಲಮ್ಮ. ಎಲ್ಲದಕ್ಕೂ  ಟೆನ್ಷನ್ ಮಾಡಿಕೊಳ್ಳುತ್ತೀಯ. ಅದೇ ಬುದ್ಧಿ ನನಗೂ ಬರಲು ಶುರುವಾಗಿದೆ. ನಿನ್ನೆ  ಮನೆಗೆ ಹೋದಾಗ ಅವರು (ನನ್ನ ಗಂಡ) ಅದೇ ತಾನೆ ಬಂದು ಬಟ್ಟೆಗಳನ್ನು ಮೆಶೀನಿಗೆ ಹಾಕುತ್ತಿದ್ದರೆ ಕಾಫಿ ಕೊಡಲಿಲ್ಲ ಅಂತ ಸಿಕ್ಕಾಪಟ್ಟೆ ರೇಗಿಬಿಟ್ಟೆ. ಅದಕ್ಕವರು ಮನನೊಂದು ಸಕ್ಕರೆ ಇಲ್ಲದ ಕಾಫಿ ಕೊಟ್ಟಿದಲ್ಲದೆ, ಪಾತ್ರೆಗಳನ್ನು ಸರಿಯಾಗಿ ತೊಳೆಯಲಿಲ್ಲ. ಪಲ್ಯಕ್ಕೆ ಉಪ್ಪೂ ಕಡಿಮೆ ಹಾಕಿದ್ದರು. ಅದಕ್ಕೂ ರೇಗಾಡಿದೆ. ಸೀರಿಯಲ್ ಮಧ್ಯೆ ಕೇಬಲ್ ಕಟ್ ಆದಾಗ, ಆಪರೇಟರ್‌ಗೆ ಕರೆ ಮಾಡಿ ಉಗ್ರಕಾಳಿಯಂತೆ ಅರಚಾಡಿದೆ. ನಾ ಯಾವತ್ತೂ ಹಾಗೆ ಆಡಿರಲಿಲ್ಲ. ಕೇಬಲ್ ಮತ್ತೆ ಬರುವವರೆಗೂ  ರೀ,  ಸ್ವಲ್ಪ ಕಾಲು ಒತ್ತಿ.. ಇವತ್ತು ತುಂಬ ಸುಸ್ತಾಗಿದೆ ಎಂದು ಜೇನಿನ ದನಿಯಲ್ಲಿ ಹೇಳುವವಳು ನಾನು.  ಪಾಪ, ಅವರು ಶಾಕ್ ತಡೆಯಲಾಗದೆ ಮೂರ್ಛೆ ಹೋದರು. ನನ್ನ ಗಂಡನ ಮೋರೆ ಇನ್ನು ಸೊಟ್ಟಗಿದೆ.  ನೀ ಹೋಗಮ್ಮ. ನಿನ್ನ ನೋಡಿದರೇ ಸಾಕು, ನನಗೆ ಬೀಪೀ ಜಾಸ್ತಿ ಆಗುತ್ತಾ ಇದೆ.  ನಿನ್ನ ಜತೆ ಇದ್ದರೆ ನನ್ನ ಆರೋಗ್ಯಕ್ಕೆ ಒಳ್ಳೆಯದಲ್ಲ.

ಒಂದು ನಿಮಿಷವೂ ನಿಲ್ಲದೆ ಅಲ್ಲಿಂದ ನಡೆದೆ. ತಕ್ಷಣ ಕರೆ ಮಾಡಿದ್ದು ಯಾರಿಗೆ ಗೊತ್ತಾ? ಸರಿಯಾಗಿ ಊಹಿಸಿದ್ರಿ. ಪತಿ ದೇವರಿಗೆ. ಶ್ಲೋಕ ಮಾಡಿದ ಅವಮಾನವನ್ನು ತೋಡಿಕೊಳ್ಳಲು ಹಾಗೂ ಅವಳ ಗಂಡ ಮನೆಯಲ್ಲಿ ಮಾಡುವ ಕೆಲಸದ ಬಗ್ಗೆ ಹೇಳಲು. ಅವರ ಫೋನು ಕಾರ್ಯನಿರತವಾಗಿತ್ತು. ಸ್ವಲ್ಪ ನಿನ್ನ ಮೊಬೈಲ್ ಕೊಡೆ ಎಂದು ಎದುರು ಬಂದವಳ ಸೆಲ್ ಇಸ್ಕೊಂಡು ಡಯಲ್ ಮಾಡಿದೆ. ಮಾಡುತ್ತಲೇ ಇದ್ದೆ. ಅದನ್ನು ನೋಡಿದ ಅವಳು ಅಯ್ಯೋ ನಿನ್ನ ಆತುರಕ್ಕಿಷ್ಟು, ಯಾರ ಮೊಬೈಲ್ ಯೂಸ್ ಮಾಡಿದರೂ ಕಾರ್ಯನಿರತವಾಗಿರುವ ಫೋನಿನಿಂದ ಅದೇ ಸಂದೇಶ ಬರುವುದು, ಸ್ವಲ್ಪ ಆರಾಮವಾಗಿರು. ನಿನ್ನ ಮಿಸ್ಡ್ ಕಾಲ್ ನೋಡಿ ಅವರೇ ಕರೆ ಮಾಡುವರು ಎಂದಾಗಲೇ ನನಗೆ ಅರಿವು ಮೂಡಿದ್ದು. ಹೌದಲ್ಲವಾ ಎಂದು. ಹಿಂದಿನಿಂದ ಹಾಡೊಂದು ಕೇಳಿಸುತ್ತಿತ್ತು...ನಾವು ಹಿಂಗೇನೆ, ನೀವು ಹಂಗೇನೆ!!



# ಜೀವನ ಮೌ(ಮ)ಲ್ಯಗಳು!

**• ಗಣೇಶ್ ಹೆಗ್ಗಡೆ**

“ಇವತ್ತು ನಮ್ಮ ಚರ್ಚೆಯ ವಿಷಯ ‘ಜೀವನ ಮಲ್ಯಗಳು’...”

ಅಧ್ಯಕ್ಷ ಪೀಠದಿಂದ ರಾಯರು ಹೀಗೆಂದಾಗ ಕಾಮನ್ ರೂಮಿನ ಸಭಾ ಕೊಠಡಿಯಲ್ಲಿ ಸೈಲೆಂಟಾಗಿ ಕುಳಿತಿದ್ದ ನಮಗೆಲ್ಲಾ ತಬ್ಬಿಬ್ಬಾಯಿತು.

ಈಚೀಚೆಗೆ ಟಿ. ವಿ. ಯಲ್ಲಿ ಕನ್ನಡ ಛಾನೆಲ್ಲುಗಳನ್ನು ನೋಡುವ ಅಭ್ಯಾಸ ಮಾಡಿಕೊಂಡಿದ್ದ ರಾಯರ ಮೇಲೆ ಟಿ. ವಿ. ನಿರೂಪಕರ ಪ್ರಭಾವ ಬೀರಿತೊ? ಎಂಬ ಆತಂಕದ ಸಮುದ್ರದೊಳಗೆ ನಾವೆಲ್ಲಾ ಮುಳುಗಿರುವಾಗ, ರಾಯರು ನಮ್ಮತ್ತ ದೃಷ್ಟಿ ಹರಿಸಿ ತುಂಟ ನಗೆ ನಕ್ಕರು.

**ಈಗ ಕಾಲಾಯ ತಸ್ಮೈ ನಮ: ಅಲ್ಲ ಸಾಲಾಯ ತಸ್ಮೈ ನಮ:**

“ಸ್ಸಾರಿ ಟು ಇಂಟರ್‌ಪ್ರೇಟ್ ಸರ್, ಅದು ಮೌಲ್ಯಗಳಲ್ಲವೇ? ತಾವು ಬಾಯಿ ತಪ್ಪಿ ‘ಮಲ್ಯ’ ಅಂತನ್ನುತ್ತಿದ್ದೀರಿ” ಎಂದೆ ಎದ್ದು ನಿಂತು.

‘ನೊ ಫ್ರೆಂಡ್ಸ್, ಐ ಆ್ಯಮ್ ಸ್ಪೀಕಿಂಗ್ ದಿ ಟ್ರೂತ್. ಮೌಲ್ಯಗಳ ಮೇಲೆ ಮಲ್ಯಗಳಂಥಹವರ ಪ್ರಭಾವದ ಪರಿಣಾಮಗಳನ್ನೇ ಇತ್ತೀಚೆಗೆ ನೀವು ಮರೆತು ಹೋಗಿದ್ದೀರಿ. ಕೆಲವು ಸ್ವಾರಸ್ಯಕರ ಪೂರಕ ಘಟನೆಗಳು ಇನ್ನೂ ನನ್ನ ಮನಸ್ಸನ್ನು ಕಾಡುತ್ತವೆ. ಈ ವಿಚಾರಗಳನ್ನೆಲ್ಲಾ ಈ ಕಾಮನ್ ರೂಮಿನಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುವ ಬಯಕೆ ನನ್ನದು. ಕಹಾನಿ ಪ್ರಾರಂಭಿಸಲೇ?’ ಎಂದು ಕೇಳಿದರು ರಾಯರು.

‘ಯೆಸ್ ಸರ್’ ಎಂದೆವು.

‘ಮೊನ್ನೆ ಟಿ.ವಿ.ಯಲ್ಲಿ ಒಂದು ಸೋಪಿನ ಪುಡಿಯ ಜಾಹಿರಾತು ನೋಡಿದೆ. ಅಜ್ಜಿ–ಮೊಮ್ಮಗ ತರಕಾರಿ ತರಲು ಪೇಟೆಗೆ ಬಂದಿದ್ದಾರೆ. ತರಕಾರಿ ಕೊಂಡ ಅಜ್ಜಿ ದುಡ್ಡು ಕೊಡಲು ಪರ್ಸ್ ತೆರೆದಾಗ, ಆಕೆಗೆ ಗೊತ್ತಿಲ್ಲದಂತೆ ಪರ್ಸಿನಿಂದ 10 ರೂ. ನ ಗರಿಗರಿಯ ನೋಟು ಜಾರಿ ಬಿದ್ದು, ಗಾಳಿಯಲ್ಲಿ ತೂರಾಡುತ್ತಾ, ತಳ್ಳುವ ಗಾಡಿಯ ಕೆಳಗೆ ಬೀಳುತ್ತದೆ. ಇದನ್ನು ಗಮನಿಸಿದ ಮೊಮ್ಮಗ ತಡಮಾಡದೆ ಅಜ್ಜಿಯ ಕೈ ಕೊಸರಿಕೊಂಡು ಸೀದಾ ಗಾಡಿಯ ಕೆಳಗೆ ಡೈವ್ ಹೊಡೆದು ಕೆಸರಿನ ಮಣ್ಣಿನಲ್ಲಿ ಈಜಿ, ಹತ್ತು ರೂ. ನ ನೋಟನ್ನು ಹಿಡಿದು ಮೇಲೆದ್ದು, ಅಜ್ಜಿಗೆ ಕೊಡುತ್ತಾನೆ ಮತ್ತು ಅವಳ ಶ್ಲಾಘನೆಗೆ ಪಾತ್ರನಾಗುತ್ತಾನೆ. ಆ್ಯಮ್ ಐ ರೈಟ್?”

“ಹೌದು ಸರ್”

“ಇದು ನಿಜವಾದ ಬದುಕಿನ ಮೌಲ್ಯ. ಈ ಬಾಲಕ ಮುಂದೆ ನಮ್ಮ ನಿಮ್ಮಂಥಹವರಂತೆ ಪ್ರಾಮಾಣಿಕನಾಗುತ್ತಾನೆ. ಆದರೆ ಫ್ರೆಂಡ್ಸ್ ಇದು ರೀಲ್ ಲೈಫಿನಲ್ಲಿ ಮಾತ್ರ. ರಿಯಲ್ ಲೈಫಿನಲ್ಲಿ ಆಗುವುದೇ ಬ್ಯಾರೆ. ಅಜ್ಜಿಯ ಪರ್ಸಿನಿಂದ ನೋಟು ಜಾರಿ ಬಿದ್ದುದನ್ನು ಕಂಡ ಆ ಬಾಲಕ ಗಮನಿಸಿಯೂ ಗಮನಿಸದಂಥಹ ಮುಖಚರ್ಯೆ ಹೊಂದಿದ್ದಾನೆ. ಅಜ್ಜಿ ಮೊಮ್ಮಗನ ಕೈ ಹಿಡಿದು ಅಷ್ಟು ದೂರ ಕ್ರಮಿಸುವಷ್ಟರಲ್ಲಿ ಆ ಛಾತಿವಂತ ಬಾಲಕ “ಅಜ್ಜಿ ನೀವು ಮುಂದೆ



ಹೋಗುತ್ತಿರಿ, ನನ್ನ ಕ್ಲಾಸು ಮೇಟು ಅಲ್ಲಿ ದೂರದಲ್ಲಿ ನಿಂತಿದ್ದಾನೆ. ಮಾತನಾಡಿಸಿಕೊಂಡು ಬರುತೇನೆ" ಎಂದು 'ರೈಲು' ಬಿಟ್ಟು ಮತ್ತೆ ಗಾಡಿಯ ಬಳಿಗೆ ಬಂದು ಗಾಡಿಯ ಕೆಳಗೆ ಡೈವ್ ಹೊಡೆದು ಆ ಹತ್ತು ರೂಪಾಯಿಯನ್ನು ಜೇಬಿಗಿಳಿಸುತ್ತಾನೆ. ಅಕಸ್ಮಾತ್ ಆ ಗಾಡಿಯವನು ಈ ದೃಶ್ಯವನ್ನು ನೋಡಿದ ಅಂತಿಟ್ಟುಕೊಳ್ಳಿ. ಕೊಂಚವೂ ವಿಚಲಿತನಾಗದ ಬಾಲಕ ಆ ನೋಟನ್ನು ಗಾಡಿಯವನಿಗೇ ಕೊಟ್ಟು 'ಫಿಫ್ಟಿ–ಫಿಫ್ಟಿ' ಅನ್ನುತ್ತಾನೆ. ಇದು ರಿಯಲ್ ಲೈಫ್! ಮೋಸ ಮಾಡುವ ಕಲೆ ಆ ಬಾಲಕನಿಗೆ ರಕ್ತದಲ್ಲೇ ಕರಗತವಾಗಿದೆ. ಈಗ ಹೇಳಿ ಇದು ಜೀವನ ಮೌಲ್ಯವೋ? ಅಥವಾ ಜೀವನ ಮಲ್ಯವೋ?"

"ಯುವರ್ ಥಿಂಕಿಂಗ್ ಈಸ್ ಆನ್ ದಿ ರೈಟ್ ಪಾತ್ ಸರ್' ಎಂದೆವು.

'ಥ್ಯಾಂಕ್ಸ್' ಎಂದ ರಾಯರು ಕಹಾನಿ ಮುಂದುವರೆಸಿದರು.

'ನಿಮಗೆ ಮುಂದಿನ ಈ ಪ್ರಸಂಗ ಹೇಳಲು ನನಗೇ ನಾಚಿಕೆಯಾಗುತ್ತದೆ. ಜತೆಗೆ ವಿಷಾದವೂ ಕೂಡ. ಮೊನ್ನೆ ನನ್ನ ಆಪ್ತರೊಬ್ಬರು ಅಚಾನಕ್ ವಿಧಿವಶರಾದ ಸುದ್ದಿ ಬಂತು. ತಡಮಾಡದೆ ಮಾರ್ಕೆಟ್ಟಿಗೆ ತೆರಳಿ ಒಂದು ಗಂಧದ ಹಾರವನ್ನು ಖರೀದಿಸಿ, ಶೋಕತಪ್ತನಾಗಿ ಆ ಆಪ್ತರ ಮನೆಗೆ ತೆರಳಿ ಶವಕ್ಕೆ ಗಂಧದ ಹಾರ ಹಾಕಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದೆ. ನನ್ನಂತೆಯೆ ಅನೇಕ ಬಂಧು ಮಿತ್ರರು ಗಂಧದ ಹಾರವನ್ನು ತಂದಿದ್ದರು. ಇಂಥ ಸಂದರ್ಭಗಳಲ್ಲಿ ನಾವೂ ನೊಂದ ಕುಟುಂಬದ ಸದಸ್ಯರಲ್ಲೊಬ್ಬರಾಗಿ, ಸಮನಾಗಿ ದುಃಖ ಹಂಚಿಕೊಳ್ಳುವುದು ನಮಗೆ ಹಿರಿಯರು ಕಲಿಸಿರುವ ದೊಡ್ಡ ಜೀವನ ಮೌಲ್ಯ. ಆದರೆ ಕ್ರಿಮೆಟೋರಿಯಂನಲ್ಲಿ ಜರುಗುವ ಈ ವೈರುಧ್ಯ ಘಟನೆ ನೋಡಿ. ಅಲ್ಲಿನ ನಿರ್ವಹಣಾಕಾರ ನಮಗರಿವಿಲ್ಲದಂತೆ ಆ ಶವದ ಮೇಲಿದ್ದ ಗಂಧದ ಹಾರಗಳನ್ನು ಇತರೇ ಹಾರಗಳಿಂದ ಬೇರ್ಪಡಿಸಿ, ಒಂದು ಗೋಣಿ ಚೀಲಕ್ಕೆ ತುಂಬಿಸಿ, ಶವಬೂದಿಯಾಗುವ ವೇಳೆಗೆ ಆ ಚೀಲವನ್ನು ಮತ್ತದೇ ಮಾರ್ಕೆಟ್ಟಿಗೆ ಸಾಗಿಸಿ ಬಿಟ್ಟಿದ್ದಾನೆ. ಅಂದರೆ ಇವತ್ತು ನಾನು ಕೊಂಡ ಹಾರ. ನಿನ್ನೆ ಯಾರದೋ ಕೊರಳಿನಲ್ಲಿ.... ಫ್ರೆಂಡ್ಸ್ ಈಗ ನೀವೇ ನಿರ್ಧರಿಸಿ. ಸತ್ತಿರುವುದು ನಮ್ಮ ಆಪ್ತನೋ? ಅಥವಾ ನಮ್ಮ ಬದುಕಿನ ಮೌಲ್ಯಗಳೋ?"

ಈ ಪ್ರಶ್ನೆಗೆ ಉತ್ತರಿಸಲಾಗದ ನಾವು ಯಾಕೊ ದೀರ್ಘಮೌನಕ್ಕೆ ಜಾರಿಬಿಟ್ಟೆವು.

ಕಹಾನಿ...ಮುಂದುವರೆಸಲೆ? ಎಂದು ಅನುಮಾನದಿಂದ ಕೇಳಿದರು ರಾಯರು.

'ಕಂಟಿನ್ಯೂ ಸರ್' ಎಂದೆವು ಗದ್ಗಿತರಾಗಿ.

'ನೋಡಿ ಈ ಮಲ್ಯ, ನೀರವ್ ಮೋದಿ, ಲಲಿತ್ ಮೋದಿ ಮುಂತಾದದವರು ಈ ದೇಶ ಬಿಟ್ಟು ಓಡಿ ಹೋದರೆಂದು ನಮಗೆಲ್ಲಾ ತುಂಬಾ ಸಿಟ್ಟಿದೆ. ಆದರೆ ಅವರು ಈ ದೇಶ ಬಿಟ್ಟು ಎರಡು ದೊಡ್ಡ ಉಪಕಾರವನ್ನಂತೂ ಖಂಡಿತಾ ಮಾಡಿದ್ದಾರೆ. ನಾವು ಅವರಿಗೆ ಕೃತಜ್ಞತೆ ಸಲ್ಲಿಸುವ ಸಮಯ ಈಗ ಬಂದಿದೆ...'

ರಾಯರ ಈ ಸ್ಟೇಟ್‌ಮೆಂಟ್ ನನ್ನ ಕೈಲಿ ಅರಗಿಸಿಕೊಳ್ಳಲೇ ಆಗಲಿಲ್ಲ. ಮೈ ನಖಶಿಖಾಂತ ಉರಿದು ಹೋಯಿತು.



'ಸಾರ್ ಅವರು ಹತ್ತಾರು ಸಾವಿರ ಕೋಟಿ ಈ ದೇಶಕ್ಕೆ ನಷ್ಟ ಉಂಟುಮಾಡಿದ್ದಾರೆ...'

'ಕೂಲ್ ಡೌನ್ ಮೈ ಬಾಯ್' ಎಂದರು ರಾಯರು ಅಷ್ಟೇ ತಾಳ್ಮೆಯಿಂದ.

ಪ್ರಧಾನ ಮಂತ್ರಿ ಮೋದಿಯವರ 'ಸ್ವಚ್ಛ ಭಾರತ್ ಮಹಾನ್' ಎಂಬ ಕಾರ್ಯಕ್ರಮ ಬೆಂಬಲಿಸಿ ಇವರೆಲ್ಲಾ ದೇಶವೇ ಬಿಟ್ಟು ಓಡಿಹೋದುದು ಒಂದು ದೊಡ್ಡ ಕೊಡುಗೆಯೇ ಆಯಿತು.

ಇನ್ನು, ನಮ್ಮ ದೇಶದಲ್ಲಿ ಅಮಾಯಕ ರೈತರ ಸಾವಿನ ಸಂಖ್ಯೆಯಲ್ಲೂ ಗಣನೀಯ ಇಳಿಮುಖ ಕಂಡಿತು. ಸ್ವಾಭಿಮಾನಿ ರೈತ, ಈ ಹಿಂದೆ ಬ್ಯಾಂಕಿನವರ ಕಠಿಣ 'ಸಾಲ ರಿಕವರಿ' ನೀತಿಗೆ ಬೆದರಿ ನೇಣಿನ ಹಗ್ಗಕ್ಕೆ ಕುತ್ತಿಗೆ ಒಡ್ಡುತ್ತಿದ್ದ. ಸಾವಿರಾರು ಕೋಟಿ ಸಾಲ ಪಡೆದವರು, ವಿದೇಶಕ್ಕೆ ಹಾರಿ ಐಷಾರಾಮಿ ಜೀವನ ಸಾಗಿಸುತ್ತಿರುವುದು ರೈತರಿಗೆ ಈಗ ಮನದಟ್ಟಾಗಿ, ಆತ್ಮಹತ್ಯೆಯ ದಾರಿ ಹಿಡಿಯಬಾರದು ಎಂಬ ಅರಿವು ಅವರಿಗುಂಟಾಗಿದೆ. ಈಗ ನೀವೇ ನಿರ್ಧರಿಸಿ, ಹತ್ತಾರು ಸಾವಿರ ಕೋಟಿ ನಷ್ಟ ಮುಖ್ಯವೋ? ಅಥವಾ ಬೆನ್ನೆಲುಬಾಗಿರುವ ನಮ್ಮ ರೈತರ ಪ್ರಾಣ ಮುಖ್ಯವೋ?"

ರಾಯರ ಈ ಪ್ರಶ್ನೆ ನಮ್ಮ ಮೊಬೈಲಿನ ಜತೆ ಸೈಲೆಂಟ್ ಮೂಡಿಗೆ ಹೋಗಿದ್ದ ನಮ್ಮೆಲ್ಲರನ್ನೂ ಬಡಿದೆಬ್ಬಿಸಿತ್ತು.

"ನೊ ಹರ್ರಿ. ಈ ಪ್ರಶ್ನೆಗೆ ಉತ್ತರವನ್ನು ನೀವೇ ಕಂಡುಕೊಳ್ಳಿ" ಎಂದ ರಾಯರು ಸಭೆ ಬರಖಾಸ್ತು ಮಾಡಿ, ಹೊರಡಲು ಮೇಲೆದ್ದರು. ಸಾಮಾನ್ಯವಾಗಿ ಸಭೆ ಮುಗಿದ ಮೇಲೆ ರಾಯರ ಜತೆಯಲ್ಲೇ ನಾವೂ ನಡೆದು ಹೋಗಿ, ಅವರ ಮನೆಯವರೆಗೆ ಬಿಟ್ಟು ಬರುವ ವಾಡಿಕೆ ನಮ್ಮದು. ಇದು ರಾಯರಂಥಹ ಜ್ಞಾನ ಜೀವಿಗಳಿಗೆ ನಾವು ಕೊಡುವ ಗೌರವದ ದ್ಯೋತಕವೂ ಕೂಡ.

ದಾರಿಯಲ್ಲಿ ನಡೆಯುವಾಗ ಒಂದು ಕಮರ್ಶಿಯಲ್ ಕಟ್ಟಡದ ಮುಂದೆ ಗಕ್ಕನೆ ನಿಂತ ರಾಯರು

'ಅಯ್ಯೋ...' ಎಂದು ಕೂಗಿಕೊಂಡಾಗ ಏನಾಯ್ತು ಸರ್? ಎಂದೆವು ಗಾಬರಿಯಿಂದ.

'ಅಲ್ನೋಡಿ, ಆ ಕಟ್ಟಡದಲ್ಲಿ ಮೊನ್ನೆಯವರೆಗೂ ಒಂದು ಬ್ಯಾಂಕ್ ಕೆಲಸ ನಿರ್ವಹಿಸುತ್ತಿತ್ತು. ಈಗ ಬ್ಯಾಂಕೇ ನಾಪತ್ತೆಯಾಗಿದೆ. ಹೀಗೂ ಉಂಟೆ?" ಎಂದು ಉದ್ಗಾರ ತೆಗೆದರು ರಾಯರು.

ನಮಗೂ ಯಾಕೊ ತೀರಾ ಸಂದೇಹವಾಗಿ, ಫುಟ್‌ಪಾತ್ ಬದಿಯಲ್ಲಿ ಎಳನೀರು ಮಾರುತ್ತಿದ್ದವನನ್ನು ಈ ಬಗ್ಗೆ ಸೂಕ್ಷ್ಮವಾಗಿ ವಿಚಾರಿಸಿದೆವು.

"ಅಯ್ಯೋ ಸಿವನೆ, ಮೊನ್ನೆಯಿಂದ್ಲೂ ಹಿಂಗೇ ಆಗ್ಹೋಗದೆ, ವಿಸ್ಯ ಗೊತ್ತಾಗ್ದೆ ತುಂಬಾ ಜನ ಗಾಬರಿಗೊಂಡು ಎಳನೀರು ರಾಶಿ ಮೇಲೇ ಬಿದ್ಹೋಗ್ಬುಟ್ಟವ್ರೆ. ಈ ಬ್ಯಾಂಕು ಎಲ್ಲೂ ಹೋಗಿಲ್ಲ, ಇದೇ ರೋಡ್‌ನ ಐದನೇ ಬಿಲ್ಡಿಂಗ್‌ಗೆ 'ಸಿಪ್ಟ್' ಆಗಿದೆ. ಒಂದು ತಿಂಗಳ ಹಿಂದೆ ಬ್ಯಾಂಕ್‌ನ ಬಾಗಿಲು ಮುಂದೆ ಅಂಟಿಸಿದ್ದ ಸಣ್ಣ ನೋಟಿಸ್ ಚೀಟಿ ಇಷ್ಟೆಲ್ಲಾ ಅನಾಹುತ ಮಾಡ್ಬುಟ್ಟಿದೆ.

ಅವನ ವಿವರಣೆ ಕೇಳಿ ರಾಯರು ನಿಧಾನವಾಗಿ ಉಸಿರೆಳೆದುಕೊಂಡರು.

"ಹಂಗೆ, ಹೋಗ್ಬೇಡಿ....ಎಲ್ರೂ ಒಂದೊಂದು ಎಳನೀರು ಕುಡ್ದು ಹೋಗಿ, ಕಾಸುಬ್ಯಾಡಿ ಅಂತ ಮ್ಯಾನೇಜರ್ ಹೇಳವ್ರೆ."

'ಹಾಗಂದ್ರೆ ಹೇಗಪ್ಪಾ?'

'ಈ ಬ್ಯಾಂಕಿನಿಂದ ನಾನು ಎಳನೀರು ವ್ಯಾಪಾರಕ್ಕೆ ಸಾಲ ತಂಗೊಂಡಿವ್ನಿ. ಆ ಮಲ್ಯ ಸಾಲ ತೀರ್ಸೋವರ್ಗೂ ಅಸ್ಲೂ ಕಟ್‌ಬ್ಯಾಡ ಬಡ್ಡೀನೂ ಕಟ್ಬ್ಯಾಡ...' ಎಂದಿದ್ದಾರೆ ಬ್ಯಾಂಕಿನ ಮ್ಯಾನೇಜರು.

ಸಂತೃಪ್ತಿಯಿಂದ ಎಳನೀರು ಕುಡಿದ ರಾಯರು ಹಳೆಯ ಬ್ಯಾಂಕಿನ ಕಟ್ಟಡದತ್ತ ಕೈ ಮುಗಿದು ನಮ್ರಭಾವದಿಂದ ಸಾಲಾಯ ತಸ್ಮೈ ನಾಮಃ! ಎಂದರು.

ನಾವೂ ಅವರೊಟ್ಟಿಗೆ ಕೈ ಮುಗಿದೆವು.



# ಬೆಳ್ಳಗಿರುವುದೆಲ್ಲಾ ಹಾಲೇ..?

**• ಜಿ.ವಿ.ನಿರ್ಮಲ**

‘ರೀ.... ರೀ....’ ಒಳಗಿಂದ ರಾಗ ಬಂತು.

ಈ ರಾಗಾನ ಯಾರೇ ಕೇಳಿದ್ರೂ, ಓಲ್ಡ್ ಮಾಡೆಲ್ ಹೆಂಡತಿ ತನ್ನ ಗಂಡನ್ನ ಕೂಗ್ತಿದಾಳೆ ಅಂತ ಸುಲಭವಾಗಿ ಊಹಿಸಬಹುದು ಅಲ್ವೇ? ನಿಜ. ಅರವತ್ತು ದಾಟಿದ್ದ ನೀರಜ ತನ್ನ ಗಂಡ ವಿಶ್ವನನ್ನು ಕೂಗುವುದೇ ಹೀಗೆ. ಈಗಿನ ಕಾಲದ ಹೆಂಡತಿಯರಾದರೆ ‘ವಿಶ್ವ, ವಿಶು, ವಿಚು, ವೀ ಬಾರೋ ಇಲ್ಲಿ’ ಎಂದು ಕೂಗುವುದೂ ಸಹಜ.

ಅದಿರ್ಲಿ. ಈಗ ನೀರಜ ಕೂಗಿದ್ಯಾಕೆಂದು ನೋಡೋಣ.

> **ಬೆಳ್ಳಗಿರುವುದೆಲ್ಲಾ ಒಂದೇ ತರಹ ಕಂಡಾಗ**

‘ನಾಳೆ ಮಧ್ಯಾಹ್ನ ನೀವು ಮನೇಲೇ ಇರ್ತೀರಲ್ವಾ?’ ಎಂದು ಕೇಳುತ್ತಾ ಪತಿರಾಯರೆದರು ಪ್ರತ್ಯಕ್ಷಳಾದಳು ಸತಿ ಶಿರೋಮಣಿ.

‘ಇದು ಕೇಳುವ ಪ್ರಶ್ನೆಯೇ? ರಿಟೈರ್ ಆದ್ಮೇಲೆ ಟೈರ್ ಪಂಕ್ಚರ್ ಆದ ಗಾಡಿಯಂತೆ ಮನೇಲೇ ಇರ್ತೀನಲ್ಲಾ’ ಎಂದು ಮನಸ್ಸಿನಲ್ಲೇ ಗೊಣಗಿದ ವಿಶ್ವನಾಥ ‘ಹೌದು ಖಂಡಿತವಾಗ್ಲೂ ಇರ್ತೀನಿ ಮಾರಾಯ್ತಿ. ದಿನಾಗ್ಲೂ ಎಲ್ಲಿಗ್ಹೋಗ್ತೀನಿ?’ ಮರು ಪ್ರಶ್ನೆ ತೂರಿದ.

‘ಅಲ್ಲಾ ರೀ, ನಾಳೆ ಕ್ರಿಕೆಟ್ ಮ್ಯಾಚ್ ಇದ್ಯಲ್ಲಾ. ನೀವು ಮನೆ ಬಿಟ್ಟು ಹೋಗೋದಿರ್ಲಿ, ಟಿವಿ ಮುಂದಿನ ಸೋಫಾ ಬಿಟ್ಟು ಕದಲಲ್ಲಾ ಅಂತ ನಂಗೊತ್ತು’ ಎಂದು ದೊಡ್ಡ ರಹಸ್ಯ ಭೇದಿಸಿದವಳಂತೆ ತುಟಿಯಂಚಿನಲ್ಲೇ ಸ್ವಲ್ಪ ನಕ್ಕಳು.

ಎಲಾ ಇವಳಾ! ಗೊತ್ತಿದ್ದೂ, ಗೊತ್ತಿದ್ದೂ ಕೇಳ್ತಾಳಲ್ಲಾ? ಇದು ಕೇವಲ ಪೀಠಿಕೆ ಅಂತ ಕಾಣ್ಸತ್ತೆ. ಈಗ್ಗೆ ನಲವತ್ತು ವರ್ಷಗಳ ಹಿಂದೆ ಇವಳು ಹೀಗೇ ನಕ್ಕು ನನ್ನ ಬುಟ್ಟೀಲಿ ಹಾಕ್ಕೊಂಡ್ಲಲ್ವೇ? ನಮ್ಮಮ್ಮ ಎಷ್ಟೋ ಸಲ ‘ನಿನ್ನ ಹೆಂಡ್ತಿ ನಿನ್ನ ಬುಟ್ಟೀಲಿ ಹಾಕ್ಕೊಂಡ್ಬಿಟ್ಟಿದಾಳೆ ಕಣೋ’ ಎಂದು ಹೇಳ್ದಾಗ ನಂಗೆ ಅರ್ಥವೇ ಆಗಿರ್ಲಿಲ್ಲ. ಈಗೇನು ಗ್ರಹಚಾರ ಕಾದಿದ್ಯೋ ಎಂದು ತಲೆಯೊಳಗೇ ಲೆಕ್ಕಾಚಾರ ಹಾಕಿದ. ಇತ್ತೀಚಿಗೆ ವಿಶ್ವ ಮಾತು ವ್ಯರ್ಥ, ಮೌನ ಲೇಸು ಎಂದು ಅರ್ಥ ಮಾಡ್ಕೊಂಡಿದಾನೆ. ಜೋರಾಗಿ ಮಾತಾಡಕ್ಕಿಂತ ಮನಸ್ನೊಳಗೇ ಗೊಣಕ್ಕೊಳ್ಳೊದೇ ಅಭ್ಯಾಸವಾಗ್ಹೋಗಿದೆ. ಊಹುಂ ಹೆಂಡತಿಯ ಪೀಠಿಕೆಯ ಕಾರಣ ಮಾತ್ರ ಅರ್ಥವಾಗ್ತಾನೇ ಇಲ್ಲ. ತಲೆ ಓಡ್ತಾನೇ ಇಲ್ಲ. ಕ್ರಿಕೆಟ್ ಗ್ರೌಂಡ್‌ನಲ್ಲಿ ಗ್ರೌಂಡ್ ಆಗ್ಹೋಗಿತ್ತು.



ಅಷ್ಟ್ರಲ್ಲಿ ‘ನಾಳೆ ನಾನು ವಿಮಲನ ಮನೆಗೆ ಹೋಗ್ಬೇಕು. ಸ್ನೇಹಿತೆಯರ ಪಾರ್ಟಿ’ ಎಂದು ನೀರಜ ಹೇಳೇ ಬಿಟ್ಳು. ಅದನ್ನ ಕೇಳಿ ವಿಶ್ವನಾಥನಿಗೆ ನಿರಾಳವಾಯ್ತು. ಜೊತೆಗೆ ಸಂತೋಷವೋ ಸಂತೋಷ. ನಾಳೆ ಮಜವಾಗಿ ನಾನೊಬ್ನೇ ಕುಳಿತು ಮ್ಯಾಚ್ ನೋಡ್ಬಹುದು. ‘ವಾಲ್ಯೂಮ್ ಕಡಿಮೆ ಮಾಡಿ, ಅದ್ಯಾಕೆ ಹಾಗೆ ಕೂಗ್ತೀರಾ? ತೆಂಗಿನ ಕಾಯಿ ಒಡ್ಕೊಡ್ತೀರಾ? ಫೋನ್ ಬಡ್ಕೋತಾ ಇದೆ ನೋಡ್ಬಾರ್ದಾ?’ ಎನ್ನುವ ಕಿರಿಕಿರಿ ಇರುವುದಿಲ್ಲ ಎಂದ್ಕೊಂಡ.

ಮಾತು ಮುಂದುವರಿಸಿದ ನೀರಜ 'ನಾಳೆ ಪುಟ್ಟು ಸ್ಕೂಲ್ ವ್ಯಾನ್ ಬಂದಾಗ ಗೇಟ್ ಹತ್ರಾನೇ ಇದ್ದು ಅವನ್ನ ಇಳಿಸಿಕೊಳ್ಳಿ. ಅವನ ಬಟ್ಟೆ ಬದಲಾಯಿಸಿ ಊಟ ಮಾಡಿಸಿಬಿಡಿ.' ಅಂದಳು.

'ಓ ಅಷ್ಟೇ ತಾನೆ. ಮೊಮ್ಮಗನ್ನ ನೋಡ್ಕೊಳೋದು ಅಂದ್ರೆ ನಂಗೆ ಖುಷೀನೇ. ನೀನು ನಿರಾತಂಕವಾಗಿ ಹೋಗಿ ಬಾ" ಅಂತ ಅನುಮತಿ ನೀಡಿದ ವಿಶ್ವ. ವಿಶ್ವನ ಅನುಮತಿ ಮುಖ್ಯವೋ ಅಥವಾ ನೀರಜನ ಆಣತಿ ಹೆಚ್ಚು ಪವರ್‌ಫುಲ್ಲೋ ಗೊತ್ತಿಲ್ಲ. ಅಂತೂ ದಂಪತಿಗಳ ನಡುವೆ ಒಪ್ಪಂದ ಆಯ್ತು. ಆದ್ರೆ ಆ 'ಅಷ್ಟೇ ತಾನೆ' ವಿಶ್ವನಾಥನಿಂದ ಎಷ್ಟು 'ತನನ' ಹಾಡಿಸಿ, ಮತ್ತೆಷ್ಟು 'ಥೈಥಕ' ಕುಣಿಸ್ತು ಅನ್ನೋದೇ ಗೊತ್ತು ಮಾಡ್ಕೋಬೇಕಾದ ವಿಷ್ಯ.

ಮರು ದಿನ ನೀರಜ ಬೇಗ, ಬೇಗ ಅಡುಗೆ, ಕೆಲಸ ಮುಗ್ಸಿ ವಿಮಲನ ಮನೆಗೆ ಹೊರಟಿದ್ದೂ ಆಯ್ತು. ಅಬ್ಬಾ.... ಎಂದು ಟಿವಿ ಮುಂದೆ ಕೂರುತ್ತಿದ್ದ ಹಾಗೆ ವಿಶ್ವನ ಮೊಬೈಲ್ ಟ್ರಿಂಗುಟ್ಟಿತು. 'ಅಯ್ಯೋ, ಇದೊಂದಿದ್ರೆ ಸಾಕು ಮನಃಶಾಂತಿ ಕೆಡಿಸುವುದಕ್ಕೆ' ಎಂದು ಬೈಕೊಂಡೇ ಮೊಬೈಲ್ ಎತ್ತಿದ ವಿಶ್ವನಿಗೆ ಕೇಳಿಸಿದ್ದು ನೀರಜಳ ಧ್ವನಿ. ಅಯ್ಯೋ ಈಗ್ತಾನೆ ಹೊರಟ್ಳಲ್ಲ. ಮತ್ಯಾಕೆ ಮೊಬೈಲ್ ಕರೆ ಅಂದ್ಕೊಂಡ. 'ರೀ, ಪುಟ್ಟುಗೆ ಫ್ರಿಡ್ಜ್‌ನಿಂದ ಮೊಸರು ತೆಗೆದಿಡೋದು ಮರ್ತು ಬಿಟ್ಟೆ. ಈಗ್ಲೆ ತೆಗೆದಿಡಿ. ಅವನು ಬರೋ ಹೊತ್ಗೆ ಸ್ವಲ್ಪ ಬೆಚ್ಚಗಾಗಿರತ್ತೆ. ವಿಪರೀತ ತಣ್ಣಗಿದ್ರೆ ಮಗೂಗೆ ಶೀತ ಆಗತ್ತೆ. ಮೊಸರಿಲ್ದೆ ಇದ್ರೆ ಅವನು ಊಟಾನೇ ಮಾಡಲ್ಲ. ಗಲಾಟೆ ಮಾಡಿಬಿಡ್ತಾನೆ' ಅಂತ ಹೇಳಿದಳು. ಅಬ್ಬಾ! ಅಜ್ಜಿಯರಿಗೆ ಮೊಮ್ಮಕ್ಕಳ ಮೇಲೆ ಬಲು ಪ್ರೀತಿ ಅಂದ್ಕೊಂಡ.

ಮತ್ತೆ ಬಂದು ಟಿವಿ ಮುಂದೆ ಕುಳಿತ ವಿಶ್ವ ಕ್ರಿಕೆಟ್ ನೋಡ್ತಿದ್ರೂ ಅವನ ಗಮನವೆಲ್ಲಾ ಗಡಿಯಾರದ ಮುಳ್ಳಿನ ಮೇಲೇ ಇತ್ತು. 1.30ಕ್ಕೆ ಸರ್‍ಯಾಗಿ ಗೇಟ್ ಬಳಿ ಸ್ಕೂಲ್ ವ್ಯಾನ್ ಬರತ್ತೆ. ಮನೆಯವರು ಯಾರೂ ಇಲ್ದಿದ್ರೆ ಮಗೂನ ಸ್ಕೂಲ್‌ಗೇ ವಾಪಸ್ಸು ಕರ್ಕೊಂಡು ಹೊರಟ್ಹೋಗತ್ತೆ. ತಾನು ಮೈಮರೆಯುವಂತಿಲ್ಲ ಎಂದು ಮೈಯೆಲ್ಲಾ ಕಣ್ಣಾಗಿ ಗಮನಿಸುತ್ತಿದ್ದ. ನೀರಜ ಇದ್ದಿದ್ದರೆ ನಂಗೆ ಈ ಕಳವಳವೇ ಇರ್‍ತಿರಲಿಲ್ಲ. ನಿಶ್ಚಿಂತೆಯಾಗಿ ಟಿವೀಲಿ ಕಣ್ಣು ಹುದುಗಿಸಿಕೊಂಡು ಕೂಡಬಹುದಿತ್ತು. ಅವಳಿಲ್ಲದಿದ್ರೆ ನಿರಾತಂಕವಾಗಿ ಮ್ಯಾಚ್ ನೋಡ್ಬಹುದು ಎಂದುಕೊಂಡಿದ್ದೆನೆಲ್ಲಾ ಎಂದು ತನ್ನ ದಡ್ಡತನಕ್ಕೆ ತಾನೇ ಬೈದುಕೊಂಡ. ಅಷ್ಟರಲ್ಲಿ ಟೆಲಿಫೋನ್ ಗಂಟೆ ಬಾರಿಸಿತು. 'ಹಲೋ' ಅನ್ನುತ್ತಿದ್ದಂತೆ 'ಗುಡ್ ಮಾರ್ನಿಂಗ್ ಸರ್. ನಾನು ಇನ್ಶೂರೆನ್ಸ್ ಕಂಪನಿಯಿಂದ ಮಾತಾಡ್ತಿದ್ದೀನಿ' ಎಂದು ಧ್ವನಿಸುತ್ತಿದ್ದಂತೆ 'ನಾನು ರಿಟೈರ್ಡ್ ಆಗಿ ಸುಖವಾಗಿದ್ದೇನ್ರಿ. ಇನ್ಶೂರ್ ಮಾಡೋಕ್ಕೆ ಏನೂ ಇಲ್ಲ' ಎಂದು ರಿಸೀವರ್ ಕುಕ್ಕಿದ. ಟಿವಿ ಕಡೆ ಕಣ್ಣು ಹಾಯಿಸಿದ್ರೆ ಮತ್ತೊಂದು ವಿಕೆಟ್ ಬಿದ್ದಿದೆ! ಹೇಗೆ ಬಿತ್ತು? ಯಾರ ಬೌಲಿಂಗ್? ಎಲ್ಲಾ ಕಸಿವಿಸಿ. ಅಯ್ಯೋ ರಿಟೈರ್ ಆದ ಮೇಲೆ ಎಷ್ಟೊಂದು ಮರೆವು. ಈಗ ಕಂಡಿದ್ದು ಆಗ್ಲೇ ಮರ್ತು ಹೋಗತ್ತೆ ಎಂದು ಹಲುಬಿದ. ಈ ಕಸಿವಿಸಿ, ಕನ್‌ಫ್ಯೂಷನ್‌ಗಳಿಂದ ಹೊರಬರುವಷ್ಟರಲ್ಲಿ ಗಡಿಯಾರ 'ಢಣ್' ಎಂದು ಬಡಿಯಿತು. ಅಯ್ಯೋ ನನ್ನಷ್ಟೇ ವಯಸ್ಸಾಗಿದ್ರೂ ಈ ಗಡಿಯಾರ ಮಾತ್ರ ಸಮಯಕ್ಕೆ ಸರಿಯಾಗಿ ಚಾಚೂತಪ್ಪದೆ ಬಡಿಯತ್ತಲ್ಲಾ! ಎಂದ್ಕೊಂಡ. ವಿಶ್ವನಾಥನಿಗೆ ಈಗ ಬಡಿದಿದ್ದು ಹನ್ನೆರಡೂವರೆಯಾ? ಒಂದಾ? ಒಂದೂವರೆಯಾ? ಎಂದು ಮತ್ತೊಂದು ಕನ್‌ಫ್ಯೂಷನ್. 'ಅಯ್ಯೋ ನೀರಜ. ನೀನ್ಯಾಕೆ ತೆಗೆದುಕೊಂಡೆ ರಜ' ಎಂದ್ಕೊಂಡೇ ಗಡಿಯಾರದ ಕಡೆ ನೋಡಿದ. ಒಂದು ಗಂಟೆ ಎಂದು



ಖಚಿತವಾದ ಮೇಲೆ 'ಉಸ್ಸಪ್ಪಾ" ಎಂದು ಟಿವಿ ಮುಂದಿನ ಆಸನ ಅಲಂಕರಿಸಿದ. 'ಟ್ರಿಣ್, ಟ್ರಿಣ್' ಧ್ವನಿ ಕೇಳಿಸಿತು. ಇದು ಯಾವ ಟ್ರಿಣ್? ಎಲ್ಲಿಂದ ಬಂತು? ಕಾಲಿಂಗ್ ಬೆಲ್ ಧ್ವನಿಯಾ? ಮೊಬೈಲ್ ನಾದವಾ? ಎಂದು ಗಡಿಬಿಡಿಗೊಳ್ಳುತ್ತಿದ್ದಂತೆ ಮತ್ತೊಂದು ಸಲ ಹೊಡೆಯಿತು. ಆಗ ತಿಳಿಯಿತು ಅದು ಟಿವಿಯ ಜಾಹೀರಾತಿನಿಂದ ಬರುತ್ತಿರುವುದೆಂದು. ನಿಟ್ಟುಸಿರು ಬಿಟ್ಟು ಟಿವಿ ಕಡೆ ಕಣ್ಣು ಹಾಯಿಸಿದ. ಆದರೂ ನಿಮಿಷಕ್ಕೊಂದು ಸಲ ಗಡಿಯಾರ ನೋಡುವುದು ನಡದೇ ಇತ್ತು. ಮ್ಯಾಚ್ ಮೇಲೆ ಗಮನ ಇಡಲಾಗಲೇ ಇಲ್ಲ. ಕೊನೆಗೆ ಗೇಟ್ ಬಳಿ ನಿಲ್ಲುವುದೇ ಮೇಲೆಂದು ಎದ್ದು ನಡದೇ ಬಿಟ್ಟ.

ವ್ಯಾನ್ ಬಂದೇ ಬಂತು. ಮೊಮ್ಮಗ ನಿಹಾಲ್ ವ್ಯಾನ್‌ನಿಂದ ಛಂಗನೆ ಇಳಿದ.

'ತಾತ, ಅಜ್ಜಿ ಎಲ್ಲಿ?' ಎನ್ನುತ್ತಲೇ ಒಳಗೆ ಬಂದ.

ಈಗಿನ ಕಾಲದ ಮೊಮ್ಮಕ್ಕಳಿಗೆ ಅಪ್ಪ-ಅಮ್ಮ ಕೆಲಸಕ್ಕೆ ಹೋಗುವುದು ಒಗ್ಗಿ ಹೋಗಿದೆ. ಅಜ್ಜಿ-ತಾತಂದಿರೇ ಮನೆಯಲ್ಲಿರುವುದೆಂದು ಚೆನ್ನಾಗಿ ಗೊತ್ತು. ಅಜ್ಜಿಯಂತೂ ಕಾಣಲೇ ಬೇಕು. ಮೊಮ್ಮಗನಿಗೆ ಅಜ್ಜಿಯ ವಿಷಯ ಹೇಳಿ,

'ಇವತ್ತು ನಾನೇ ನಿಂಗೆ ಊಟ ಹಾಕ್ತೀನಿ ನಿಹಾಲ್ ಮರಿ.' ಎಂದಾಗಲೇ ನೆನಪಾಗಿದ್ದು ಮೊಸರು ತೆಗೆದಿಟ್ಟಿಲ್ಲವೆಂಬ ವಿಷಯ. ಮೊಮ್ಮಗನಿಗೆ ಸರಿಯಾಗಿ ಉಣ ಬಡಿಸದಿದ್ದರೆ ಅಜ್ಜಿಯಿಂದ ತನಗೆ ಪೂಜೆ ಖಂಡಿತ ಎಂದುಕೊಂಡ ವಿಶ್ವ ಧಡಧಡನೆ ಫ್ರಿಡ್ಜ್ ಕಡೆಗೆ ಓಡಿದ. ಅದನ್ನು ನೋಡಿದ ನಿಹಾಲ್‌ಗೆ ನಗು ಬಂತು.

'ತಾತ, ನಂಗೆ ಅಷ್ಟೊಂದು ಹಸಿವಿಲ್ಲ. ನಿಧಾನವಾಗಿ ಊಟ ಬಡಿಸಿ' ಎಂದ. ಅಂತೂ ಚಪಾತಿ, ಪಲ್ಯ, ಹುಳಿಯನ್ನಗಳನ್ನ ಟಿವಿ ಮುಂದೆ ಕೂಡಿಸಿ ತಿನ್ನಿಸಿದ್ದಾಯಿತು. ಪಲ್ಯ ಖಾರವೆಂದು ಕೂಗಿದಾಗ ನೀರು ಕುಡಿಸಿದ. ಹುಳಿಯನ್ನಕ್ಕೆ ತುಪ್ಪ ಹಾಕಿದ ನಂತರವೇ ಮೊಮ್ಮಗ ತುತ್ತು ಬಾಯಿಗಿಟ್ಟುಕೊಂಡ. ಅಬ್ಬಾ! ಮೊಸರನ್ನ ತಿನ್ನಿಸಿದ್ರೆ ತಾನು ಗೆದ್ದೆ ಎಂದ್ಕೊಂಡು ಅನ್ನ ಹಾಕಿ, ಮೊಸರು ಹಾಕುವ ವೇಳೆಗೆ ಮತ್ತೊಂದು ವಿಕೆಟ್ ಬಿದ್ದಿದ್ದಕ್ಕೆ 'ಔಟ್' ಎಂದು ಜನರ ಗುಂಪು ಕೂಗಿದ್ದು ಕೇಳಿಸ್ತು. ವಿಶ್ವನಾಥನಿಗೆ ಮ್ಯಾಚ್‌ನ ತಲೆಬುಡ ಅರ್ಥವಾಗ್ತಿಲ್ಲ.

'ತಾತಾ, ಔಟ್ ಅಂತ ಕೂಗಿದ್ರು. ಯಾರು ಔಟಾಗಿದ್ದು? ಹೇಗೆ?' ಎಂದು ಕೇಳಿದ ನಿಹಾಲ್.

'ನಾನೂ ನೋಡ್ಲಿಲ್ಲ ಮರಿ. ತಾಳು ನೀನು ಮೊಸರನ್ನ ತಿನ್ನು. ಇಬ್ರೂ ಕೂತು ಮ್ಯಾಚ್ ನೋಡೋಣ' ಎಂದ. ಅಷ್ಟ್ರಲ್ಲಿ ಮೊಸರನ್ನ ಬಾಯಿಗಿಟ್ಟಿದ್ದ ನಿಹಾಲ್.

'ಥೂ..., ತಾತಾ ಇದು ಮೊಸರನ್ನ ಅಲ್ಲ. ಚೂರೂ ಚೆನ್ನಾಗಿಲ್ಲ. ಏನೋ ವಾಸನೆ' ಅಂತ ನಾಲಗೆ ಹೊರಚಾಚಿದ.

'ಇಲ್ಲ ಮರಿ, ಅದು ಮೊಸರನ್ನವೇ. ಈಗ ತಾನೆ ಫ್ರಿಡ್ಜ್‌ನಿಂದ ಮೊಸರು ತೆಗೆದೆನಲ್ಲಾ ಅದಕ್ಕೆ ಸ್ವಲ್ಪ ತಣ್ಣಗಿದೆ' ಎಂದು ಸಮಜಾಯಿಷಿ ನೀಡಿದ. ನಿಜವೆಂದು ನಂಬಿದ ನಿಹಾಲ್ ಮತ್ತೊಂದು ತುತ್ತು ಬಾಯಿಗಿಟ್ಟುಕೊಂಡ.



'ಇಲ್ಲ ತಾತಾ, ಇದು ನಿಜ್ವಾಗ್ಲೂ ಚೆನ್ನಾಗಿಲ್ಲ. ನಂಗೆ ಚೆನ್ನಾಗಿರೋ ಮೊಸರನ್ನ ಕೊಡಿ ಪ್ಲೀಸ್' ಎಂದು ಗೋಗರೆದ.

‘ಇದೊಳ್ಳೆ ಕಥೆಯಾಯ್ತಲ್ಲ. ಮೊಸರು ಮಾಡಿ ಇಟ್ಟಿರೋಳು ನಿಮ್ಮಜ್ಜಿನೇ ಪುಟ್ಟ. ನಾನು ಅನ್ನದ ಜೊತೆ ಕಲಸ್ದೆ  ಅಷ್ಟೆ. ಹೋಗ್ಲಿ ಸೇರ್ದೇ ಇದ್ರೆ ಬಿಟ್ಬಿಡು. ಅದ್ರ ಬದ್ಲು ದೊಡ್ಡ ಚಾಕ್ಲೇಟ್ ಕೊಡ್ತೀನಿ. ಇವತ್ತೊಂದು ದಿನ ಮೊಸರನ್ನ ಇಲ್ದೇ ಇದ್ರೆ ಪರವಾಗಿಲ್ಲ. ಆಯ್ತಾ?’ ಎಂದು ಸಮಾಧಾನ ಮಾಡಿ, ತಾನೂ ಉಂಡು, ಊಟದ ಆಟ ಮುಗಿಸಿದ ವಿಶ್ವ. ಈ ಹೆಂಗಸರು ಅದ್ಹೇಗೆ ದಿನನಿತ್ಯ ಈ ಎಲ್ಲಾ ಕೆಲಸ್ಗಳನ್ನ ಮಾಡ್ತಾರೋ? ನಂಗಂತೂ ಒಂದೇ ದಿನಕ್ಕೆ ಸುಸ್ತಾಯ್ತು ಎಂದ್ಕೊಂಡು ಮೊಮ್ಮಗನಿಗೆ ಚಾಕ್ಲೇಟ್ ಕೊಟ್ಟು ನಿಶ್ಚಿಂತನಾದ. ಅಷ್ಟರಲ್ಲಿ ಕ್ರಿಕೆಟ್ ಮ್ಯಾಚ್ ಮುಗಿದಿತ್ತು. ಟಿವಿ ಆರಿಸಿ ಇಬ್ರೂ ಪವಡಿಸಿದರು.

ಸಂಜೆ 6 ಗಂಟೆಗೆ ಸರ್ಯಾಗಿ ಬಂದಿಳಿದ ನೀರಜನ ಮುಖ ಸ್ನೇಹಿತೆಯರ ಜೊತೆ ಕಳೆದ ಫಲವಾಗಿ ನಳನಳಿಸ್ತಾ ಇತ್ತು. ಅರೆ ಇವಳಾ! ಎಪ್ಪತ್ತರ ಹರೆಯದಲ್ಲೂ ಇಪ್ಪತ್ತರ ಉತ್ಸಾಹವಿದ್ಯಲ್ಲಾ ಎಂದು ಮನಸ್ಸಿನಲ್ಲಿಯೇ ಗುಣಾಕಾರ ಹಾಕಿದ. ಬಂದವಳೇ ಮೊಮ್ಮಗನ ಯೋಗಕ್ಷೇಮ ವಿಚಾರಿಸಿದಳು. ಅಜ್ಜಿ ಬಂದದ್ದನ್ನು ಆಟವಾಡುತ್ತಿದ್ದ ಕಡೆಯಿಂದಲೇ ನೋಡಿದ ನಿಹಾಲ್ ‘ಅಜ್ಜೀ...’ ಎಂದು ಕೂಗುತ್ತಾ ಓಡೋಡಿ ಬಂದ.

‘ಪುಟ್ಟ ನಾನಿಲ್ದೇ ಬೇಜಾರಾಯ್ತೇನೋ? ಊಟ ಮಾಡಿದ್ಯಾ ಮರಿ?’ ಎಂದು ಮೊಮ್ಮಗನನ್ನು ಎತ್ತಿಕೊಂಡ ನೀರಜ ಅವನಿಗೆ ಲೊಚಲೊಚನೆ ಮುತ್ತಿಟ್ಟಳು.

‘ಹುಂ ಅಜ್ಜಿ, ಊಟ ಮಾಡ್ದೆ. ಅದ್ರೆ ಮೊಸರನ್ನ ಸ್ವಲ್ಪಾನೂ ಚೆನ್ನಾಗಿರ್ಲಿಲ್ಲ. ಯಾಕಜ್ಜೀ?’ ಎಂದು ಅತಿ ಮುಗ್ಧವಾಗಿ ತನ್ನ ಪ್ರಶ್ನೆ ಮುಂದಿಟ್ಟ.

‘ಯಾಕೋ ಪುಟ್ಟ? ನಿಂಗೋಸ್ಕರ ಒಳ್ಳೆ ಮೊಸರು ಎತ್ತಿಟ್ಟಿದ್ನಲ್ಲ?’ ಎಂದು ಯೋಚಿಸುತ್ತಾ ಅವನು ತಿಂದು ಬಿಟ್ಟಿದ್ದ ಮೊಸರನ್ನದ ತಟ್ಟೆ ಕೈಲೆತ್ತಿಕೊಂಡು ಮೂಸಿದಳು. ಕೂಡ್ಲೆ ಅವಳಿಗೆ ಗೊತ್ತಾಯ್ತು.

‘ರೀ, ಇದೇನ್ರಿ, ದೋಸೆ ಹಿಟ್ಟಿನ ವಾಸನೆ ಬರ್ತಾ ಇದೆ? ನೀವು ಯಾವ ಪಾತ್ರೆಯಿಂದ ಮೊಸರು ತೆಗೆದ್ರಿ?’ ಆ ಗುಂಡು ಪಾತ್ರೆ ಮೊಸರು ಅಂತ ಹೇಳಿದ್ನಲ್ಲ. ಗೊತ್ತಾಗ್ಲಿಲ್ಲವಾ?’ ಎಂದಾಗ ವಿಶ್ವನಿಗೆ ತನ್ನ ತಪ್ಪಿನ ಅರಿವಾಯ್ತು. ಮುಖವೂ ದೋಸೆಹಿಟ್ಟಿನ ಹುಳಿಯಷ್ಟೇ ಹುಳ್ಳಗಾಯ್ತು.

“ಹಾಳು ಕ್ರಿಕೆಟ್ ಮ್ಯಾಚ್‌ನಿಂದ್ಲೇ ಇಷ್ಟೆಲ್ಲಾ ಅವಾಂತರ’ ಎಂದು ಮುಖ ಕಿವಿಚಿದ.

ಮೊಮ್ಮಗನಿಗೆ ತಾತನ ಕಿವಿಚಿದ ಮುಖ ನೋಡಿ ನಗು ಬಂತು. ‘ಓ, ತಾತಾ, ದೋಸೆ ಹಿಟ್ನ ಅನ್ನಕ್ಕೆ ಕಲ್ಸಿ ತಿನ್ಸಿಸ್ತಿದ್ರು ನಂಗೆ’ ಅಂತ ಜೋರಾಗಿ ನಗಕ್ಕೆ ಶುರು ಮಾಡಿದ. ನೀರಜನಿಗೂ ನಗು ತಡೆಯಲಾಗಲಿಲ್ಲ.

‘ಪುಟ್ಟಾ ನಿಮ್ಮ ತಾತಂಗೆ ಬೆಳ್ಳಗಿರೋದೆಲ್ಲಾ ಒಂದೇ ತರಹ ಕಾಣ್ಸತ್ತೆ. ಅವತ್ತೊಂದು ದಿನ ನಾನು ಊರಲ್ಲಿಲ್ಲಾಗ, ಬೆಣ್ಣೆ ಕಡೆದ ಮಜ್ಜಿಗೇನೇ ದೋಸೆ ಹಿಟ್ಟು ಅಂದ್ಕೊಂಡು, ಕಾವಲಿ ಮೇಲೆ ಹಾಕಿ ದೋಸೆ ಮಾಡಿದ್ದೇ ಮಾಡಿದ್ದು. ಅದು ಕಾವಲಿಯಿಂದ ಎದ್ರೆ ತಾನೆ? ಕೊನೆಗೆ ಸುಸ್ತಾಗಿ, ಹೋಟೆಲ್‌ಗೆ ಹೋಗಿ ದೋಸೆ ತಿಂದ್ರಂತೆ’ ಎಂದು ಹಳೆಯ ಕಥೆ ಹೇಳಿದಾಗ ಮತ್ತೊಮ್ಮೆ ಎಲ್ರೂ ಒಟ್ಟಾಗಿ ನಕ್ಕಿದ್ದೇ ನಕ್ಕಿದ್ದು. ಆಗ ವಿಶ್ವನಿಗೆ ಕ್ರಿಕೆಟ್ ಮ್ಯಾಚ್ ನೋಡ್ಲಿಲ್ಲ ಅನ್ನೋ ದುಃಖ ಮರ್ತೇ ಹೋಯ್ತು.



# ಸ್ಯಾರಿ ಸೆಲೆಕ್ಷನ್ನೂ...ಮ್ಯಾಚಿಂಗ್ ಬ್ಲೌಸೂ...

**• ಶರತ್ ಕಲ್ಕೋಡ್**

**ಕೆ**ಲವು ಪ್ರಶ್ನೆಗಳು ಸಮಕಾಲೀನ ಸಮಸ್ಯೆ ಮಾತ್ರವಾಗಿರುವುದಲ್ಲದೆ, ಸಾರ್ವಕಾಲಿಕ ಸತ್ಯದ ಮಹತ್ವ ಪಡೆದು ಶೇಷಪ್ರಶ್ನೆಗಳಾಗಿ ಜ್ವಲಂತವಾಗಿ ನಿಗಿನಿಗಿ ಕೆಂಡದಂತೆ ಧಗಧಗಿಸುತ್ತಿರುತ್ತವೆ! ಆಡುವ ಹಾಗಿಲ್ಲ; ಅನುಭವಿಸುವ ಹಾಗಿಲ್ಲ ಎಂಬಂತೆ ಒಡಲ ಸುಡುತ್ತಿರುತ್ತವೆ!! ಕುಕ್ಕರಿಗೆ ಪ್ರೆಶ್‌ರ್ ಜಾಸ್ತಿಯಾದಾಗ "ಪುಸ್...ಪುಸ್...ಠುಸ್...ಠುಸ್" ಭೀಕರವಾಗಿ ಆಸ್ಫೋಟಿಸುವಂತೆ ಒಡಲಬೇಗೆ ಒತ್ತಡವೂ ಮಿತಿಮೀರಿದಾಗ ಆಸ್ಫೋಟಿಸುವುದು ಸಹಜತಾನೇ? ಮೊನ್ನೆ ಸಂಜೆ ಪಾರ್ಕ್‌ನ ಕಲ್ಲುಬೆಂಚ್ ಮೇಲಿನ ಮುದಿಯರ ಮಹಾಅಧಿವೇಶನದ ಚರ್ಚೆಯಲ್ಲಿ ಅಚಾನಕ ಬಾಂಬ್ ಸ್ಫೋಟಗೊಂಡದ್ದು ಬಹಳ ಅನಿರೀಕ್ಷಿತವಾದರೂ, ಸತ್ಯಸ್ಯ ಸತ್ಯಘಟನೆ ಕಣಾ....!

**ಮುದಿಯರ ಮಹಾಧಿವೇಶನದಲ್ಲಿ ಅಚಾನಕ್ ಬಾಂಬ್ ಸ್ಫೋಟಗೊಂಡಾಗ**

ಗಂಡಂದಿರ ದುಃಖದುಮ್ಮಾನ ಗಂಡಂದಿರು ಮಾತ್ರಬಲ್ಲರು! ಹೆಂಗಸರ ದುಃಖದುಮ್ಮಾನ, ನೋವು ಸಂಕಷ್ಟಗಳನ್ನು ತೋಡಿಕೊಳ್ಳಲು ತೌರಾದರೂ ಇರುತ್ತದೆ. ನತದೃಷ್ಟ ಗಂಡಸರಿಗೆ ಏನಿರುತ್ತದೆ ಹೇಳಿ? ಕಾಲಲ್ಲಿರುವ ಗುಂಡು, ಕೊರಳಲ್ಲಿ ಬೆಂಡು, ಮುಳಗಿಸಲಾರದು ತೇಲಿಸಲಾರದು ಎಂಥ ಅನುಭವಾಮೃತದ ವಚನದು. ಗಂಡಸರಿಗೆ ಇರುವ ಏಕೈಕ ಪರಿಹಾರ ಮಾರ್ಗವೆಂದರೆ ಸಂಕಷ್ಟಗಳನ್ನು ಪರಸ್ಪರ ತೋಡಿಕೊಂಡು ನೋವಿನಲ್ಲೂ ನಕ್ಕು ಹಗುರಾಗುವುದು. ಪಾರ್ಕಿನ ಕಲ್ಲುಬೆಂಚಿನ ಮೇಲೆ ಮೊನ್ನೆ ನಡೆದ ಮುದಿಯರ ಮಹಾಧಿವೇಶನದಲ್ಲೂ ನಡೆದದ್ದು ಅದೇ!

ಮಹಾಧಿವೇಶನದಲ್ಲಿ ನಡೆದ ಸರಳ–ಸಹಜ ಬಿಸಿಬಿಸಿ ಚರ್ಚೆ ವ್ಯಕ್ತಿ–ಪಕ್ಷಾತೀತವಾದದ್ದು. ಕಾಲ–ಪರಿಸರ–ಸನ್ನಿವೇಶ ಎಲ್ಲಾ ಎಲ್ಲೆಗಳ ಮೀರಿದಂತಹದ್ದು. ಪ್ರಾಚೀನವಾದದ್ದೆಂತೋ ಅಂತೆಯೇ ಸಮಕಾಲೀನವಾದದ್ದು. ಹಾಗೆಯೇ ಅರ್ವಾಚೀನವಾದದ್ದು ಕೂಡ! ಅದರಿಂದಾಗಿ ಮೊದಲೇ ಹೇಳಿದ ಹಾಗೆ ವ್ಯಕ್ತಿ, ಕಾಲ, ಪರಿಸರ, ಸನ್ನಿವೇಶ ಬೇರೇಬೇರೆಯಾದರೂ ನಡೆಯುವ ಘಟನೆ, ಆಗುವ ಅನಾಹುತ, ಬೀರುವ ಫಲಿತಾಂಶ ಒಂದೇ. ಆದುದರಿಂದ ಓದುಗರು ತಮ್ಮತಮ್ಮ ಅನುಭವಕ್ಕೆ ತಕ್ಕಂತೆ ಕಾಲ, ಪರಿಸರ, ಸನ್ನಿವೇಶಗಳನ್ನು ಸೃಷ್ಟಿಸಿಕೊಳ್ಳುವುದು, ಅನ್ವಯಿಸಿಕೊಳ್ಳುವುದು ಸುಲಭ ಸಾಧ್ಯವೆಂಬ ದೃಢವಿಶ್ವಾಸ ಲೇಖಕನದು. ಪೀಠಿಕಾ ಪ್ರವೇಶಕ್ಕೆ ನಾಂದಿ ಹಾಡಿ, ಮುಂದೆ ಬೇರೇಬೇರೆ ಪಾತ್ರಧಾರಿಗಳಾಡಿದ ಸಂಭಾಷಣೆಯನ್ನು ಯಥಾವತ್ತಾಗಿ ಹಸಿಹಸಿಯಾಗೇ ನಿರೂಪಿಸಿದ್ದೇನೆ. ಆ ಸಂಭಾಷಣೆ ಕೇವಲ ಕೆಲವೇ ಕೆಲವು ಪಾತ್ರಧಾರಿಗಳದ್ದು ಮಾತ್ರವಾಗಿರದೆ, ಉಗಳಲು ಆರದೆ, ನುಂಗಲೂ ಆರದೆ ಸಂಕಷ್ಟ ಅನುಭವಿಸುವ ಅಸಂಖ್ಯ ಗಂಡಂದಿರ ಮೂಕವೇದನೆ ಪಡೆದ ರೋಷಾವೇಷ ಭಾಷಾಸ್ವರೂಪ....



**ಪೀಠಿಕಾ ಪ್ರವೇಶವು:**

"ಜಗತ್ತಿನಲ್ಲಿ ಹೆಂಗಸರ ಉಡುಗೆ–ತೊಡುಗೆ ಬೇರೆಯವರು ತಂದದ್ದಿರಲಿ, ಅವರೇ ಮೆಚ್ಚಿ ಆರಿಸಿ ಕೊಂಡುಬಂದಿದ್ದರೂ, ಅವರಿಗೇ ಸಂಪೂರ್ಣ ಮೆಚ್ಚುಗೆ, ಸಮಾಧಾನ, ತೃಪ್ತಿ ತರುವುದುಂಟೇ?"

"ಅಸಂಭವ... ಅಸಂಭವ..." ಗಂಡಂದಿರ ಮಹಾಧಿವೇಶನದ ಒಕ್ಕೊರಲಿನ ನಿರ್ಣಯ.

"ಕಷ್ಟಕಾರ್ಪಣ್ಯಗಳನ್ನು ಸಹಿಸಿ, ಪ್ರೀತಿಯಿಂದ ವಸ್ತ್ರ-ಒಡವೆ ತಂದು ಕೊಟ್ಟರೂ, ಹೆಂಡತಿ ಒಲಮೆಗೆ ಪಾತ್ರರಾದ ಗಂಡಂದಿರುಂಟೋ?"

"ಇಲ್ಲಾ...ಇಲ್ಲ...." ಪ್ರಶ್ನೆಗೆ ಸರ್ವಾನುಮತದುತ್ತರ.

"ಹೆಂಡತಿ ಬಟ್ಟೆ-ಚಿನ್ನ ಖರೀದಿಸುವಾಗ ನಾನು ಅಂಗಡಿ ಒಳಗೆ ಕಾಲಿಡುವುದಿಲ್ಲ. ಹೊರಗೆ ಬಾಗಿಲಬಳಿ ಕಾಯುತ್ತಲೋ ಇಲ್ಲಾ ಎದುರಿನ ಬೀದಿಯಲ್ಲಿ ಗಸ್ತು ಹೊಡೆಯುತ್ತಲೋ ಇರುತ್ತೇನೆ. ವ್ಯವಹಾರ ಮುಗಿದ ಬಳಿಕ ಹೋಗಿ ದುಸರಾ ಮಾತಾಡದೆ ಬಿಲ್ಲಿನ ಹಣ ತೆರುವುದಷ್ಟೇ ನನ್ನ ಕರ್ತವ್ಯ. ಚೌಕಾಶಿ ಮಾಡಿಯೂ ಖರೀದಿಸದೇ ಹೊರಟರೆ ಅಂಗಡಿಯವರು ಗಂಡಂದಿರನ್ನು ಕೆಕ್ಕರಿಸಿ ನೋಡುವಾಗ ಹೇಸಿಗೆ ಹುಟ್ಟಿಸಿ ಮರ್ಯಾದೆ ಮೂರುಕಾಸಾಗಿ ಬಿಡುತ್ತದೆ ಮಾರಾಯ್ರೇ...."

"ಹೋಯ್, ನೀವು ಅಂಗಡಿವರೆಗಾದರೂ ಹೋಗುತ್ತೀರಿ. ನನ್ನ ಹೆಂಡತಿ ಚಿನ್ನ-ಬಟ್ಟೆ ಖರೀದಿಗೆ ಹೊರಟಾಗ ಟಾಟಾ ಹೇಳಿ ನಾನು ಬೇರೆ ದಾರಿ ಹಿಡಿಯುತ್ತೇನೆ. ಅವಳ ವ್ಯವಹಾರ ಅವಳಿಗೆ. ನನ್ನ ವ್ಯವಹಾರ ನನಗೆ. ಆದರೂ ಕೊನೆಗೂ ಬೋಳಾಗುವುದು ನನ್ನ ತಲೆಯೇ! ಕಟ್ಟಿಕೊಂಡ ಮೇಲೆ ಏನ್ ಮಾಡೋಕಾಗುತ್ತೆ ಹೇಳಿ? ಒಂದು ಸಾರಿ ಎಂಥ ಆದ್ದು ಗೊತ್ತುಂಟಾ ನಿಮ್ಗೆ? ಮದುವೆಯಾದ ಹೊಸ್ತರಲ್ಲಿ ನನಗೆ ದುಬಾಯಿನಲ್ಲಿ ಕೆಲ್ಸ. ಅವಳನ್ನ ಊರಲ್ಲೇ ಬಿಟ್ಟಿದ್ನಲ್ಲೇ. ದುಬಾಯಿಂದ ಬಪ್ಪುವಾಗ ಅವಳಿಗೇಂತಾ ಒಡವೆ-ಬಟ್ಟೆ ತಂದಿದ್ದೆ ಕಾಣಿ. ಅದನ್ನ ಕಂಡವಳೇ ಮುಖ ಸಿಂಡರಿಸಿ, "ಎಂಥಯಿದು, ಅಸಹ್ಯ... ಒಂದು ಚೆಂದಿಲ್ಲೆ..." ಅಂತ ಬದಿಗೊತ್ತಿ ಸಿಡಿಕಿ ಎದ್ದು ಹೋಪುದಾ?. ಹೆಂಗಾಯ್ತು ಗೊತ್ತಿತ್ತಾ ನಂಗೆ. ಅವತ್ತೇ ಫಸ್ಟ್ ಅಂಡ್ ಲಾಸ್ಟ್ ನೋಡಿ. ಮುಂದೆ ಜೀವಮಾನವೀಡೀ ಅವಳಿಗೆ ಚಿನ್ನ-ಬಟ್ಟೆ ತಂದ್ ಕೊಟ್ಟಿದ್ದರೆ ಕೇಳಿ!"

"ಮದುವೆಮನೆ ಹಾಗೂ ಮತ್ತಿತರ ವಿಶೇಷ ಸಮಾರಂಭಗಳಿಗೆ ಹೆಂಡತಿ ಜೊತೇಲಿ ಹೋಗೋದೇ ಎಡವಟ್ಟು ಕಣ್ರೀ. ಮದುವೆಗಿಂತ ಅಲ್ಲಿ ಬರೋ ಹೆಂಗಸ್ರ ಚಂದದ ಉಡುಗೆ-ತೊಡಗೆ ಮೇಲೆ ಇವರ ಕಣ್ಣು! "ನೋಡರ್ರೀ ಆ ಸೀರೆ ಕಲರ್ ಹ್ಯಾಗಿದೆರ್ರೀ.... ಅವಳ ಕುತ್ತಿಗೇಲಿರೋ ನೆಕ್ಲೇಸ್ ನೋಡಿದಿರಾ? ಏನ್ ಡೌಲು ಅವಳಿಗೆ? ಸಾಹುಕಾರಿಕೆ ಇದ್ದರೆ ಅವಳ ಮನೆಗೆ ಆಯ್ತು. ಅವಳಿಗಿಂತಾ ನಾವೇನ್ ಕಮ್ಮಿ? ನಾ ಏನ್ ಕೇಳಿದ್ರೂ ನೀವು ಕೊಡಿಸ್ತೀರಲ್ವಾ? ನೋಡಿ, ಇವಳ ಕೈಯಲ್ಲಿ ಇರುವ ಬಳೆ ಡಿಸೈನ್ ಎಷ್ಟು ಚೆನ್ನಾಗಿದೆರ್ರೀ? ಲೇಟೆಸ್ಟ್ ಡಿಸೈನ್ ಅಂತೆ ಕಣ್ರೀ ಅದು! ಅಂಥದ್ದೇ ನನಗೂ ಕೊಡಿಸ್ರೀ ಪ್ಲೀಸ್...." ವಾರಾತ ಪ್ರಾರಂಭವಾಗಿ ಮನೆಗೆ ಬಂದ ಮೇಲೆ ಪೀಡೆ, ರಗಳೆ-ರಂಪವಾಗುವುದು ಮಾಮೂಲು ತಾನೇ?"

"ವಾರತ, ರಗಳೆ-ರಂಪ ತಡೆಯಲಾರದೇ ಅಂಗಡಿಗೆ ಕರೆದುಕೊಂಡು ಹೋದರೆ ಅದೇ ಡಿಸೈನಿನ ನೆಕ್ಲೇಸ್ ಅಥವಾ ಕಲರ್ ಸೀರೆ ಎಲ್ಲಿ ಸಿಗುತ್ತೆ ಹೇಳಿ? ನೆಕ್ಲೆಸ್ ಡಿಸೈನ್ ಸ್ವಲ್ಪ ಹೆಚ್ಚುಕಮ್ಮಿಯಾದರೂ ಸಿಡಿಮಿಡಿ. ಸೀರೆ ಕಲರ್ ಬೇರೆಯಾದರೂ ರಗಳೆ, ಬಾರ್ಡರ್ ಹೆಚ್ಚುಕಮ್ಮಿಯಾದರೂ ರಂಪ...."



"ಸೀರೆ ಕಲರ್ ಮಾತ್ರವಲ್ಲ ರಾಯರ್ರೇ ಬಾರ್ಡ್‌ರ್ ಡಿಸೈನ್ ಬೇರೆಯಾದರೂ ಸಾಕು, ಗಂಡಂದಿರಿಗೆ ಗ್ರಹಚಾರ ತಪ್ಪಿದ್ದಲ್ಲ. ಭಾರತ-ಪಾಕಿಸ್ತಾನ ಬಾರ್ಡ್‌ರ್ ಸಮಸ್ಯೆಗಿಂತಲೂ

ಇದು ಭೀಕರ! ಅಷ್ಟೇ ಅಲ್ಲ; ಅಂಗಡಿ ಒಳಗಿನ ಟ್ಯೂಬ್‌ಲೈಟ್‌ಗೆ ಹಿಡಿದರೆ ಕಾಣುವ ಕಲರೇ ಬೇರೆ! ಸೂರ್ಯನ ಬೆಳಕಿಗೆ ಹಿಡಿದರೆ ಕಾಣುವ ಕಲರೇ ಬೇರೇ!! ಏನ್ ಮಾಡ್ತೀರಿ ಅದಕ್ಕೆ!?"

"ಹೋಗ್ಲಿ ಅತ್ಲಾಗಿ ಅಂತ ರಗಳೇ ತಡೆಯಲಾರದೆ ದುಡ್ಡು ತೆತ್ತು ಸೀರೆ ತಂದರೆ ಸಮಸ್ಯೆ ಬಗೆ ಹರೀತು ಅಂತೀರಾ? ಇಲ್ಲವೇಇಲ್ಲ! ಸೀರೆ ಕಲರ್ ತೃಪ್ತಿಯಾಗದೇ ಇದ್ದರೆ ಅದನ್ನು ಅಕ್ಕ–ತಂಗಿಯರಿಗೋ, ಬೇರೇ ಯಾರಿಗೋ ಉಡುಗೊರೆ ನೆವದಲ್ಲಿ ದಾಟಿಸಿ ನಿಟ್ಟುಸಿರು ಬಿಡುತ್ತಾರೆ. ಆದ್ರೆ ದುಡ್ಡು ಕೊಟ್ಟು ಕೊಡಿಸಿದ ನಮ್ಮ ಸಂಕಟ ಯಾರಿಗೆ ಹೇಳೋಣ ಹೇಳಿ....!?"

"ಇಷ್ಟೇ ಅಲ್ಲ ರಾಯ್ರೇ, ಆ ಪಾಯಂಟ್‌ನಲ್ಲೇ ಇನ್ನೊಂದು ಬಗೆಯ ಸಂಕಷ್ಟವಿದೆ. ಸೀರೆ ತೆಗೆದುಕೊಂಡರೂ ಆ ಸೀರೆ ಕಲರ್‌ಗೆ, ಬಾರ್ಡ್ ಡಿಸೈನ್‌ಗೆ ಮ್ಯಾಚ್ ಆಗೋ ಬ್ಲೌಸ್ ಪೀಸ್ ಹುಡುಕೋದು ಹರಿಹರಬ್ರಹ್ಮರಿಗೂ ಕಷ್ಟಸಾಧ್ಯವಾದ ಸಾಹಸದ ಕೆಲಸ ಕಂಡ್ರೀ...."

"ಹೌದ್ರೀ ಬ್ಲೌಸ್ ಪೀಸ್ ಕಲರ್‌ನಲ್ಲಿ ಎಷ್ಟೊಂದು ವೆರೈಟಿ. ಸ್ವಲ್ಪ ಶೇಡ್ ಬದಲಾದರೂ ಬಣ್ಣ ಬೇರೆಯಾಗಿ ಸೀರೆ ಕಲರ್‌ಗೆ ಮ್ಯಾಚ್ ಆಗೋಲ್ಲ. ಮ್ಯಾಚ್ ಆಗೋಲ್ಲಾಂದ್ರೆ ಮ್ಯಾಚಿಂಗ್ ಕಲರ್‌ಗಾಗಿ ಮತ್ತೆ ಬಟ್ಟೆ ಅಂಗಡಿ ಮೆಟ್ಟಲು ಹತ್ತಿ ಇಳಿಯೋಕೆ ಶುರು. ನಮ್ಮ ಪಾಡಿಗೆ ನಮ್ಮನ್ನ ಬಿಡ್ತಾರಾ? ಎಂದಿಗೂ ಇಲ್ಲ. ಅವರ ಜೊತೆಯಲ್ಲಿ ನಾವೂ ಬಟ್ಟೆ ಅಂಗಡಿ ಮೆಟ್ಟಲು ಹತ್ತಿ ಇಳಿಯಬೇಕು. ಎಂಥ ಗ್ರಹಚಾರ ಮಾರಾಯ್ರೇ...!?

"ಏನೇ ಹೇಳಿ ನಾವು ಗಂಡಸರೇ ಅದೃಷ್ಟವಂತರು! ಪ್ಯಾಂಟ್–ಶರ್ಟ್ ಇಲ್ಲಾ ಪಂಚೆ ಜುಬ್ಬಾ ಸಿಕ್ಕಿಸಿಕೊಂಡರಾಯ್ತು. ಹೆಂಗಸರ ಥರ ಡ್ರೆಸ್‌ನ ರಗಳೆರಂಪ ರಾಮಾಯಣವಿಲ್ಲ ನಮಗೆ..."

"ಆದರೂ ಏನೇ ಹೇಳಿ ನೀವು, ಗಂಡಸರಿಗಿಂತ ಹೆಂಗಸರು ಬುದ್ಧಿವಂತರು!"

"ಹೇಗೆ?"

"ನೋಡಿ ಅಂಗಡಿಯಿಂದ ತಂದ ಬ್ಲೌಸ್ ಪೀಸ್, ಸೀರೆ ಕಲರ್‌ಗೆ ಮ್ಯಾಚಾಗದೇ ಇದ್ದರೆ, ಅವರ ಹತ್ತಿರ ಅದಕ್ಕೊಂದು ಸುಲಭ ಪರಿಹಾರದ ಉಪಾಯ ಉಂಟು!"

"ಏನದು?"

"ಮ್ಯಾಚ್ ಆಗದ ಬ್ಲೌಸ್ ಪೀಸ್‌ಗಳನ್ನು ಅವರು ವೇಸ್ಟ್ ಮಾಡದೇ ಮನೆಗೆ ಬಂದ ನೆಂಟರಿಷ್ಟ ಸುಮಂಗಲಿಯರನ್ನು ಬೀಳ್ಕೊಡುವಾಗ ಅರಿಶಿನ–ಕುಂಕುಮ ಕೊಡುವುದರ ಜೊತೆಗೆ ಬ್ಲೌಸ್‌ಪೀಸ್ ನೀಡುವ ಸಂಪ್ರದಾಯವಿಲ್ಲವೇ? ಮುತ್ತೈದೆಯರಿಗೆ ಅರಿಶಿನ–ಕುಂಕುಮದ ಜೊತೆಗೆ ಬ್ಲೌಸ್ ಪೀಸ್ ನೀಡುವುದರೊಂದಿಗೆ ನಿಮಗೂ, ಸಂಸಾರಕ್ಕೂ ಪುಣ್ಯ ಬರುವುದಲ್ಲವೇ!?

"ಸೀರೆಗಳನ್ನೂ ಹಾಗೇ ಪುಣ್ಯದ ಕಾರ್ಯಗಳಿಗೆ ಬಳಸುತ್ತಾರೆ ಕಣ್ರೀ..."

"ಹೇಗೇ?"

"ಹರಕೆ ಹೊತ್ತು ದೇವರುಗಳಿಗೆ ಸೀರೆ ಅರ್ಪಿಸುವುದಿಲ್ಲವೇ!?"

"ಹೌದಲ್ಲ ಮಾರಾಯ್ರೇ!"



ಅರಗಿಸಿಕೊಳ್ಳಲು ಅಸಾಧ್ಯವಾದ ಕಠೋರಸತ್ಯದೊಂದಿಗೆ ಆ ಸಂಜೆ ಮಂಗಳದ ಸಮಯ ಸಮೀಪಿಸಿದ್ದರಿಂದ ಅಪೂರ್ಣಗೊಂಡ ಚರ್ಚೆಯೊಂದಿಗೆ ಅಧಿವೇಶನದ ಕಾರ್ಯಕಲಾಪಗಳನ್ನು ಅನಿರ್ಧಿಷ್ಟಾವಧಿಕಾಲ ಮುಂದೂಡಲಾಯಿತು!

# ಹಳೆಯ ಗಾದೆಗಳ ಹೊಸ ನೆಟ್ಟಾವತಾರಗಳು

**- ಆಂಡಾಳ್ ಶರ್ಮ**

ದೇವಲೋಕದಲ್ಲಿ ಎಲ್ಲಾ ದೇವತೆಗಳ ಮುಖಗಳಲ್ಲೂ ಏನೋ ಆತಂಕ, ಗಾಬರಿ ''ಹುಲುಮಾನವರಿಗಿಂತ ನಾವೇನೂ ಕಡಿಮೆ ಇಲ್ಲ ಅನ್ನೋದನ್ನ ತೋರಿಸ್ಕೊಡಬೇಕು'' ಅಂತ ಬ್ರಹ್ಮದೇವ ಆಜ್ಞೆಹೊರಡಿಸಿ, ಭೂಲೋಕದಿಂದ ನಾಲ್ಕು 'ಟೆಕ್ಕೀ'ಗಳ ಕರೆಸಿ ಎಲ್ಲಾರ್ರಿಗೂ ಕಂಪ್ಯೂಟರ್ ಟ್ರೇನಿಂಗ್ ಕಡ್ಡಾಯ ಮಾಡಿಬಿಟ್ಟಿದ್ದ. 3 ತಿಂಗಳ ಟ್ರೇನಿಂಗ್ ಮುಗಿದ ಮೇಲೆ ಅವತ್ತು ಮೊದಲನೇ ಟೆಸ್ಟ್. ಟೆಕ್ಕೀಗಳು ಮೊದಲೇ 'ವಾರ್ನಿಂಗ್' ಕೊಟ್ಟಿದಾರೆ ''ಪ್ರಾಬ್ಲಮ್ ಸಾಲ್ವ್ ಮಾಡೋಕೆ ಒಂದೇ ಒಂದು ಅವಕಾಶ. ತಪ್ಪಾದ ಕೂಡಲೇ ಸಿಸ್ಟಮ್ ಹಾಳಾಗಬಾರದು ಅಂತ ಕಂಪ್ಯೂಟರ್ 'ಷಟ್ ಡೌನ್' ಆಗಿಬಿಡತ್ತೆ'' ಅಂತ.

**ದೇವತೆಗಳಿಗೂ ಕಂಪ್ಯೂಟರ್ ಕಲಿಕೆ ಅನಿವಾರ್ಯವೇ**

ಮೊದಲು ದೇವೇಂದ್ರನ ಸರದಿ. ''ಸ್ವರ್ಗದಲ್ಲಿ ಎಷ್ಟು ದೇವತೆಗಳಿದ್ದಾರೆ, ಯಾರ್‍ಯಾರು ಏನೇನು ಕೆಲಸ ಮಾಡ್ತಾರೆ, ಒಂದು ಹೊತ್ತಿನಲ್ಲಿ ಯಾರ್‍ಯಾರು ಎಲ್ಲೆಲ್ಲಿ ಇರ್‍ತಾರೆ ಅನ್ನೋದಕ್ಕೆ ಒಂದು 'ಆ್ಯಪ್' ಮಾಡಿ'' ಅಂತ. ದೇವೇಂದ್ರ ತಲೆ ಕೆರ್‍ಕೊಂಡು ಏನೇನೋ ಒಂದು ಪಟ್ಟಿ ಮಾಡಿದ. ಮುಂದಕ್ಕೆ ಗೊತ್ತಾಗಲಿಲ್ಲ. ಅಲ್ಲೇ ಹೋಗ್ತಾ ಇದ್ದ ಮಗನ್ನ ಕರೆದು ''ಜಯಂತ, ಸ್ವಲ್ಪ ಹೆಲ್ಪ್ ಮಾಡೋ ಅಂತ ಗೋಗರೆದ.'' ಅವನು ಏನೇನೋ ಮಾಡಿ ''ಅಪ್ಪಾ, ಎಲ್ಲಾ ರೆಡಿ, ಒಂದು ಫೈಲ್‌ನಲ್ಲಿ ಹಾಕಿ ಸೇವ್ ಮಾಡಿಬಿಡಿ. ಭೂಲೋಕದಲ್ಲಿ 'ಬಂಗಲ್' ಅನ್ನೋ ಒಳ್ಳೇ ಸಿನಿಮಾ ಬಂದಿದೆಯಂತೆ. ನನ್ನ 'ಗರ್ಲ್ ಫ್ರೆಂಡ್' ಜೊತೆ ಹೋಗಬೇಕು, ಹೊತ್ತಾಯಿತು'' ಅಂತ ಓಡಿಬಿಟ್ಟ. ಅಲ್ಲೇ ಇದ್ದ ಇಂದ್ರನ ಬಾಡಿಗಾರ್ಡ್ ಒಬ್ಬ ಮೈನರ್ ದೇವತೆ. ಸಾರ್, ನನಗ್ಗೊತ್ತು, ಮಾಡಿಕೊಡ್ತೀನಿ ಅಂತ ಯಾವ್ಯಾವ್ದೋ ಕೀಗಳನ್ನ ಒತ್ತಿ ಕೊನೆಗೆ 'ಸೇವ್' ಅನ್ನೋದರ ಬದಲು 'ಡಿಲೀಟ್' ಬಟನ್‌ನ ಒತ್ತಿಬಿಟ್ಟ! 'ಫೈಲ್ ಡಿಲೀಟೆಡ್' ಅಂತ ಕಂಪ್ಯೂಟರ್ ಆಫ್ ಆಯ್ತು. ದೇವೇಂದ್ರ ಕೆಂಗಣ್ಣು ಬಿಟ್ಕೊಂಡು ''ತಾನು ಮಾಡಿದ್ದು ಉತ್ತಮ, ಮಗ ಮಾಡಿದ್ದು ಮಧ್ಯಮ, ಆಳು ಮಾಡಿದ್ದು ಹಾಳು'' ಅನ್ಕೊಂಡು ಮುಖ ಊದಿಸ್ಕೊಂಡು ಎದ್ದು ಹೋದ.

ಗುರು ಉರುಫ್ ಬೃಹಸ್ಪತಿಗೆ ಮೂರುಲೋಕದ ವಿಚಾರಗಳೂ ಗೊತ್ತಿರಬೇಕಲ್ಲ. ಅವನಿಗೊಂದು 'ಕ್ವಿಜ್'. ''ಮುಂದಿನ ಚುನಾವಣೆ ವೇಳೆಗೆ ಎಷ್ಟು ಜನ ಪಾರ್ಟಿ ಬದಲಾಯಿಸಬಹುದು? ಟ್ರಂಪ್ ಮಹಾಶಯ ಮುಂದೆ ಯಾರನ್ನು 'ಯು ಆರ್ ಫೈರ್ಡ್' ಅನ್ನಬಹುದು? ಯಾರ ಪುಕ್ಕಟೆ ಕ್ಯಾಂಟೀನ್‌ಗಳಲ್ಲಿ ಇಡ್ಲಿ, ಚಟ್ನಿ ರುಚಿಯಾಗಿರತ್ತೆ? ದೇವಲೋಕದಲ್ಲಿ ಯಾರ ಮನೆ ರೇಡ್ ಆಗಬಹುದು? ಅಪ್ಸರೆಯರಲ್ಲಿ ಯಾರಿಗಾದರೂ ಹಾಲಿವುಡ್‌ನಲ್ಲಿ ಅವಕಾಶ ಸಿಗಬಹುದಾ? 'ಬ್ರೆಕ್ಸಿಟ್' ಅನ್ನೋದು ಯಾವ ಖಾಯಿಲೆ?'' ಅಂತೆಲ್ಲಾ ಅಡಾವುಡಿ, ಅಸಂಬದ್ಧ ಪ್ರಶ್ನೆಗಳು. ಮಲ್ಟಿಪಲ್ ಛಾಯ್ಸ್ ಉತ್ತರಗಳು, ಒದ್ದಾಡಿದ ಬೃಹಸ್ಪತಿ ಯಾವ್ಯಾವುದೋ ಉತ್ತರಗಳಿಗೆ 'ಟಿಕ್' ಮಾಡಿದ. ಟೋಟಲ್ ಸ್ಕೋರ್ 20. ಸಾರಿ, ಫೇಲ್ಡ್, ಬೆಟರ್ ಲಕ್ ನೆಕ್ಸ್ಟ್ ಟೈಮ್ ಅಂತ



ಕಂಪ್ಯೂಟರ್ ಮುಚ್ಕೊಂಡ್ತು. ''ಎಂಟು ವರ್ಷಕ್ಕೆ ಮಗ ದಂಟು ಅಂತ ಕೊಚ್ಕೋತಾರೆ, ಎಂಟು ಸಾವಿರ ವರ್ಷ ಆಗಿದ್ರೂ ನಾನು ದಂಟಿರಲಿ, ಸೊಪ್ಪೂ ಆದ ಹಾಗೆ ಕಾಣೆ ಅಂತ ಬೃಹಸ್ಪತಿ ಸಪ್ಪೆಮುಖ ಹಾಕ್ಕೊಂಡು, ಇನ್ಮೇಲೆ ನಾನು 'ಇಗೋ ಬಿಸಿ ಸುದ್ದಿ' 'ರಣರಾಜ್ಯ' ಅಂತಹ ಟಿ.ವಿ. ನ್ಯೂಸ್ ಚಾನೆಲ್‌ಗಳ್ನ ನೋಡಬೇಕು'' ಅಂತ ನಿರ್ಧಾರ ಮಾಡಿದ.

ಕುಬೇರ ಫೈನಾನ್ಸಿಯರ್ ಅಲ್ವಾ. ಅವನೊಂದು ಅವನ ಅಕೌಂಟ್‌ಗೆ ಹಾಕಿದ್ದ 'ಬಿಟ್‌ಕಾಯಿನ್ಸ್'ನಲ್ಲಿ ಟ್ರ್ಯಾನ್ಸ್ಯಾಕ್ಷನ್ ಮಾಡಿ 'ಬ್ಯಾಲೆನ್ಸ್ ಷೀಟ್ ಆ್ಯಪ್' ಮಾಡಬೇಕಾಗಿತ್ತು. ತಿಪ್ಪರಲಾಗ ಹಾಕಿ, ಕೂಡಿ, ಕಳೆದು, ಗುಣಿಸಿ, ಭಾಗಿಸಿ ಏನೇನೋ ಮಾಡೋ ಹೊತ್ತಿಗೆ, ''ನಿಮ್ಮ ಅಕೌಂಟ್ ಹ್ಯಾಕ್ ಆಗಿ ಅದರಲ್ಲೀಗ ಬ್ಯಾಲೆನ್ಸ್ ಇಲ್ಲ. ಟ್ರ್ಯಾನ್ಸ್ಯಾಕ್ಷನ್ ಇನ್‌ವ್ಯಾಲಿಡ್'' ಅಂತ ಕಂಪ್ಯೂಟರ್ 'ಷಟ್ ಡೌನ್' ಆಯ್ತು! ''ಅಯ್ಯೋ ಹೋದರೆ ಹೋಯ್ತು. ಯಾರದೋ ದುಡ್ಡು, ಎಲ್ಲಮ್ಮನ ಜಾತ್ರೆ ನನಗೇನಾಗಬೇಕು. ನನ್ನ ದುಡ್ಡಂತೂ ತಿಮ್ಮಪ್ಪನ ಹುಂಡೀಲಿ ಭದ್ರವಾಗಿದೆಯಲ್ಲಾ, ಇನ್ನೇನು ಯೋಚನೆ'' ಅಂದುಕೊಳ್ತಾ ಹುಂಡೀನ ಚೆಕ್ ಮಾಡೋಕೆ ತಿರುಪತೀಗೆ ಪಯಣ ಬೆಳೆಸಿದ.

ಅಶ್ವಿನಿ ದೇವತೆಗಳಿಗೆ ನಿಮಗೆ ಗೊತ್ತಿರೋ ಔಷಧಿಗಳದ್ದೆಲ್ಲಾ ಒಂದು 'ಆ್ಯಪ್' ಮಾಡಿ, ಒಂದು ಹೊಸಾ ಫಾರ್ಮುಲಾದ ಆವಿಷ್ಕಾರ ಮಾಡಿ ಅಂತ ಪ್ರಾಬ್ಲಮ್. ಅವರುಗಳು ತಮಗೆ ಗೊತ್ತಿದ್ದ ನಾರು, ಬೇರು, ಮೂಲಿಕೆಗಳನ್ನೆಲ್ಲಾ ಸೇರಿಸಿ, ಕೊನೇಗೆ ಯಾರಿಗೂ ಸಿಕ್ಕಲ್ಲ ಅನ್ಕೊಂಡಿದ್ದ 'ಸೋಮರಸ' ಒಂದು ಸ್ಪೂನ್ ಹಾಕಿ ಫಾರ್ಮುಲಾ 'ಎಂಟರ್' ಮಾಡಿದ್ರೆ, ಪಾಪ, ಈ ಔಷಧೀಗೆ ಶತಂಜಲಿ ಅನ್ನೋರು ಭೂಲೋಕದಲ್ಲಿ ಆಗಲೇ ಪೇಟೆಂಟ್ ತೊಗೊಂಡಿದಾರೆ. ಸಾರಿ ಅಂತ ಕಂಪ್ಯೂಟರ್ 'ಆಫ್' ಆಗಿಬಿಡೋದೇ. ಅಶ್ವಿನೀದೇವತೆಗಳು 'ಹಿತ್ತಲ ಗಿಡ ಮದ್ದಲ್ಲ' ಅಂತ ಹರಳೆಣ್ಣೆ ಕುಡಿದ ಮುಖ ಮಾಡ್ಕೊಂಡ್ರು!

ಇನ್ನು ಸೂರ್ಯ. ಕಿಲಾಡಿ ಟೆಕ್ಕೀಗಳು ''ಮ್ಯಾಚ್ ಮೇಕಿಂಗ್ ಆ್ಯಪ್ ಒಂದನ್ನು ಡೌನ್‌ಲೋಡ್ ಮಾಡಿ, ನಿಮಗೆ 'ಮ್ಯಾಚ್' ಆಗೋರ್ನ ಆರಿಸಿ'' ಅಂತ ಮೀಸೆ ಅಡೀಲಿ ನಕ್ಕಿದ್ರು. ಸೂರ್ಯ ಎಲ್ಲಾ ವೆಬ್‌ಸೈಟ್‌ಗಳನ್ನು ಚೆಕ್‌ಮಾಡಿ ಒಬ್ಬಳು ಸುರಸುಂದರೀನ ಆರಿಸ್ಕೊಂಡು, ಜೊಲ್ಲು ಸುರಿಸ್ತಾ 'ಎಂಟರ್' ಮಾಡಿದ್ರೆ, ''ಗೂಗಲ್ ಸರ್ಚ್‌ನಲ್ಲಿ ನಿಮಗಾಗಲೇ ಸಂಧ್ಯಾ ಮತ್ತು ಛಾಯಾ ಎನ್ನುವ ಇಬ್ಬರು ಹೆಂಡತೀರು ಇದಾರೆ ಅಂತ ಗೊತ್ತಾಯ್ತು. ಬಹುಪತ್ನಿತ್ವ ಶಿಕ್ಷಾರ್ಹ ಅಪರಾಧ. ಸರಿ, ಯು ಆರ್ ನಾಟ್ ಎಲಿಜಬಲ್'' ಅಂತ ಕಂಪ್ಯೂಟರ್ 'ಷಟ್ ಆಫ್' ಆಗೋಯ್ತು. ಸೂರ್ಯ ''ಅಯ್ಯೋ, ಎಂಥಾ ಅವಕಾಶ ತಪ್ಪೋಯ್ತು. ಇನ್ನು ನನಗೆ 'ಇಬ್ಬರು ಹೆಂಡಿರ ಕಾಟ, ಇರುಳು ತಿಗಣೆಯ ಕಾಟವೇಗತಿ, ನನ್ನ ಹಣೇಬರಹ ಅಂತ ಗೋಳಾಡಿದ.'

ರಂಭೆ ಅಲಂಕಾರ ಮಾಡ್ಕೊಂಡು ಕಂಪ್ಯೂಟರ್ ಮುಂದೆ ಆಸೀನಳಾಗಿದ್ದಳು. ''ಝುಂಬಾ ಅನ್ನೋ ವ್ಯಾಯಾಮದ ಡ್ಯಾನ್ಸ್ ಪ್ರಕಾರ ಡೌನ್‌ಲೋಡ್ ಮಾಡಿಕೊಂಡು ಅದನ್ನ ಕಲಿತು ರೆಕಾರ್ಡ್ ಮಾಡಬೇಕು'' ಅಂತ ಅವಳ ಸಮಸ್ಯೆ. ಏನೂ ತಲೆ ಬುಡ ಗೊತ್ತಾಗದೆ ಅದನ್ನ ಅಡ್ಡಾದಿಡ್ಡಿ ಡೌನ್‌ಲೋಡ್ ಮಾಡ್ಕೊಂಡು ಕುಣಿಯೋಕೆ ಹೋಗಿ ಸೊಂಟ ಉಳುಕಿಸಿಕೊಂಡು ''ಏನ್ರೀ, ನನಗೆ ಕೆಟ್ಟು ಹೋಗಿರೋ ಕಂಪ್ಯೂಟರ್ ಕೊಟ್ಟಿದ್ದೀರಾ? ಏನೂ ಸರಿಯಾಗಿ ಬರ್ತಾ ಇಲ್ಲ'' ಅಂತ ಟೆಕ್ಕೀಗಳಿಗೇ ದಬಾಯಿಸಿ ಕುಂಟುತ್ತಾ ಹೊರಟೇಬಿಟ್ಟಳು. ಪಕ್ಕದ ಕ್ಯೂಬಿಕಲ್‌ನಲ್ಲಿ ಕೂತಿದ್ದ ಊರ್ವಶಿ ''ನಾಚ್ ನಾ ಜಾನೇ, ಆಂಗನ್ ಟೇಡಾ'' ಅಂತ ಹಲ್ಲು ಕಿರಿದಳು!



ಊರ್ವಶಿ ಏನು ಕಮ್ಮೀನಾ? ನಾಕೈದು ವೆಬ್ ಸೈಟ್‌ಗಳನ್ನು ಕಂಪೇರ್ ಮಾಡಿ, ಆನ್‌ಲೈನ್

ಮೂಲಕ ನಿಮಗೇನೇನು ಬೇಕೋ ಅದನ್ನು ಖರೀದಿಸಿ, ಪೇ ಮಾಡಿ ಅಂತ ಹೇಳಿದ್ರೆ ಖುಷಿ ತಾನೇ? 'ಮೋರ್ ಅಂಡ್ ಕೋಮಿ' ಕ್ರೀಮು, ''ಪ್ರಹಾರ್'' ಕೇಶತೈಲ, ''ಮಿಕ್ಸ್'' ಸೌಂದರ್ಯ ಸಾಬೂನು, ಅದೂ ಇದು ಅಂತ ದೊಡ್ಡ ಪಟ್ಟಿ ಮಾಡಿದಳು. ''ಮೋಡ್ ಆಫ್ ಪೇಮೆಂಟ್'' ಅಂತ ಬಂತು. ಪಾಪ, ಅವಳ ಹತ್ರ ಕ್ರೆಡಿಟ್ ಕಾರ್ಡ್ ಇತ್ತಾ? 'ಸೋಮರಸ್' ಅಂತ ಉತ್ತರಿಸಿದಳು, ''ನಾಟ್ ಲೀಗಲ್ ಟೆಂಡರ್. ಟ್ರಾನ್‌ಸ್ಯಾಕ್ಷನ್ ಕ್ಯಾನ್ಸಲ್ಡ್'' ಅಂತ ಕಂಪ್ಯೂಟರ್ ಮುಖ ಮುಚ್ಕಂಡ್ತು. ''ಅಯ್ಯೋ ಮಹಾ, ಇವರ ಸಾಮಾನುಗಳಿಗೆ ಬೆಂಕಿ ಹಾಕ. ಅಷ್ಟಕ್ಕೂ ಎಲ್ಲಾ ಎಂಥೆಂಥದ್ದೋ ಕೆಮಿಕಲ್ಸ್ ಹಾಕಿ ಮಾಡಿರೋದು. ನಮ್ಮ ಲೋಕದ್ದೇ ವಾಸಿ, ಆರ್ಗ್ಯಾನಿಕ್ ಸಾಮಾನುಗಳು'' ಅಂತ ಜಟ್ಟಿ ಕೆಳಗೆ ಬಿದ್ರು ಮೀಸೆ ಮಣ್ಣಾಗಲಿಲ್ಲ ಅನ್ನೋ ಹಾಗೆ ವೈಯ್ಯಾರವಾಗಿ ಜಡೆ ಮುಂದಕ್ಕೆ ಹಾಕ್ಕೊಂಡು ಹೊರಟಳು.

ಇದನ್ನೆಲ್ಲಾ ನೋಡ್ತಾ ಇದ್ದ ನಾರದನಿಗೂ ಆಸೆ ಹುಟ್ಟಿ ಗೋಗರೆದು ತಾನೂ ಒಂದು ಕಂಪ್ಯೂಟರ್ ಮುಂದೆ ಕೂತ. ಅದೇ ಕಿಲಾಡಿ ಟೆಕ್ಕೀಗಳು ''ರಾಕ್, ರ್‍ಯಾಪ್, ಹಿಪ್‌ಹಾಪ್, ಬಿಬಾಫ್, ಹೆವಿಮೆಟಲ್, ಬ್ಲ್ಯೂಸ್ ಇಂತಹ ಪ್ರಕಾರಗಳನ್ನು ಡೌನ್‌ಲೋಡ್ ಮಾಡಿ ಯಾವುದಾದರೂ ಒಂದನ್ನು ಕಲಿತು ರೆಕಾರ್ಡ್ ಮಾಡಿ ಅಂತ ಸವಾಲೆಸೆದರು. ಪಾಪ, ಸುಸ್ತಾದ ನಾರದ. ಏನೇನು ಮಾಡಿದರೂ 'ನಾರಾಯಣ, ನಾರಾಯಣ' ಅನ್ನೋದನ್ನ ಬಿಟ್ಟು ಕಲಿಯಕ್ಕೆ ಆಗಲಿಲ್ಲ. ಈ ವಿಷಯ ಭೂಲೋಕದಲ್ಲಿ ಹ್ಯಾಗೋ ಲೀಕ್ ಆಗಿ ಬಿಟ್ಟು, ಪಡ್ಡೆ ಒಂದು ಟ್ವೀಟ್‌ನಲ್ಲಿ 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ' ಅಂತ ಹಾಕೇಬಿಡ್ತು! ಇದು ಹ್ಯಾಗೋ ನಾರದನ ಕಂಪ್ಯೂಟರ್ ಸ್ಕ್ರೀನ್‌ನಲ್ಲಿ ಕಾಣಿಸಿಕೊಂಡು, ನಾರದ ಕೆಂಡಾಮಂಡಲವಾಗಿ, ಭೂಲೋಕಕ್ಕೆ ಹೋಗಿ ಬಿಲ್ಲಪ್ಪನಿಗೂ, ಸತ್ಯಣ್ಣನಿಗೂ ತಂದಿಡದೇ ಹೋದ್ರೆ ನನ್ನ ತಂಬೂರೀನೇ ದಾನ ಮಾಡಿಬಿಡ್ತೀನಿ ಅಂತ ಶಪಥ ಮಾಡಿ ಜುಟ್ಟು ಹಾರಿಸಿದ.''

ಕಡೇಲಿ ಉಳಿದಿದ್ದು ಯಮ. ''ಹೋದ ವರ್ಷ ಜನ ನಿಮ್ಮ ಪಾಶಕ್ಕೆ ಸಿಕ್ಕಿದರು, ಅದರಲ್ಲಿ ಎಷ್ಟು ಸ್ವರ್ಗವಾಸಿಗಳು, ಎಷ್ಟು ನರಕವಾಸಿಗಳು ಅನ್ನೋ ಆ್ಯಪ್ ಮಾಡಿ'' ಅಂತ ಸವಾಲು. ''ನಾನೇನು ಚಿತ್ರಗುಪ್ತ ಕೆಟ್ಟು ಹೋದನೇ? ಇದೆಲ್ಲಾ ಅವನು ಮಾಡೋ ಕೆಲಸ, ನನ್ನ ಮಾಡು ಅಂದ್ರೆ ಎಂತಹ ಅವಮಾನ ಅಲ್ವಾ'' ಅಂತ ಕೋಪಿಸ್ಕೊಂಡು ಆ ಕಡೆ, ಈ ಕಡೆ ನೋಡಿ ಟೆಕ್ಕೀ ಒಬ್ಬನ್ನ ಕರೆದ. ''ನಾನು ಯಾರು ಗೊತ್ತಾ?'' ಕೇಳಿದ. ''ಗೊತ್ತು ಸಾರ್, ನೀವು ಯಮಧರ್ಮರಾಯರು.'' ''ನಾನು ಹೇಳಿದ್ದು ಮಾಡದೇ ಇದ್ದರೆ ಏನಾಗತ್ತೆ ಗೊತ್ತು ತಾನೇ? ಬೇಗ ನನ್ನ ಕೆಲಸ ಮಾಡಿಕೊಡು'' ಅಂತ ಬ್ಲ್ಯಾಕ್ ಮೇಲ್ ಮಾಡಿದ. ಪಾಪ ಆ ಟೆಕ್ಕೀ ಜೀವಭಯದಿಂದ ಸರಸರ ಅಂತ ಯಮನ 'ಆ್ಯಪ್' ಮಾಡಿಕೊಟ್ಟ.

ಎಲ್ಲಾ ಮುಗಿದಮೇಲೆ ಯಮಧರ್ಮರಾಯರೊಬ್ಬರೇ ಈ ದಿನದ ಟೆಸ್ಟ್‌ನಲ್ಲಿ ಪಾಸ್ ಆಗಿರೋದು ಅಂತ ಘೋಷಣೆಯಾಯಿತು. ಯಮ, 'ಹಾಳೂರಿಗುಳಿದವ್ನೇ ಗೌಡ' ಅಂತ ಮೀಸೆ ತಿರುವಿ, ''ಈ ಬ್ರಹ್ಮದೇವ ವಿ ಹ್ಯಾವ್ ಟು ಕೀಪ್ ಅಪ್ ವಿತ್ ದಿ ಟೈಂಸ್'' ಅಂತ ಹೇಳಿದ್ದೂ ಹೇಳಿದ್ದೆ, ನನಗೆ ಓಡಾಡೋಕೆ ಒಂದು ಜಾಗ್ವಾರ್ – ಈನೋ, ಮರ್ಸಿಡೀಸೋ, ಕಡೇಪಕ್ಷ ಒಂದು ಸ್ಕೂಟರ್ ಆದ್ರೂ ಕೊಡಿಸಕೂಡದಾ? ಹಳೇಗಂಡನ ಪಾದವೇಗತಿ ಅಂತ ಗೊಣಗ್ತಾ ಅವನ ಕೋಣಾನ ಹತ್ತಿ ಹೊರಟ.




ಟೆಕ್ಕೀಗಳು ಬ್ರಹ್ಮನ ಹತ್ರ ''ಸಾರ್ ಭೂಲೋಕದಲ್ಲಿ ನಮ್ಮ ಪ್ರಾಜೆಕ್ಟ್‌ಗೆ ಡೆಡ್‌ಲೈನ್ ಇದೆ. ಮುಂದೆ ಇನ್ಯಾರನ್ನಾದ್ರೂ ಕರೆಸಿ'' ಅಂತ ಸಾಷ್ಟಾಂಗ ಹಾಕಿ ''ಕಂಪ್ಯೂಟರ್ ಕೊಂಬಾಗ ಹಾಲೋಗರುಂಡಂತೆ, ಸಾಫ್ಟ್‌ವೇರ್ ಬರೆವಾಗ ಕಿಬ್ಬದಿಯ ಕೀಲು ಮುರಿದಂತೆ ನೆಟ್ಟಜ್ಞ'' ಅಂತ ನಗಾಡ್ತಾ ಭೂಲೋಕಕ್ಕೆ ನಿರ್ಗಮಿಸಿದರು.

ಬ್ರಹ್ಮದೇವ ''ಥತ್ತೇರಿ, ಈ ದ್ಯಾಬೆ ದೇವತೆಗಳು ಸೋಮರಸ ಕುಡ್ಕೊಂಡು, ಅಪ್ಸರೆಯರ ಥಕ್ಕಥೈ ನೋಡ್ಕೊಂಡಿರೋದಕ್ಕೇ ಲಾಯಕ್ಕು. ನಾನ್ಯಕಪ್ಪಾ ಈ ಕೆಲಸಕ್ಕೆ ಕೈ ಹಾಕಿದೆ? ''ಮಾಡಿದ್ದುಣ್ಣೋ ಮಹರಾಯ'' ಅಂದ್ಕೊಂಡು, ''ಯಾವ ತಲೇಮೇಲೆ ಕೈ ಇಡಲಿ'' ಅಂತ ಪೇಚಾಡ್ಕೊಂಡು ಕೂತ.''

॥ ಓಂ ನಮೋ ನೆಟ್ಟೇಶ್ವರಾಯ ॥




ಕ್ಯಾಲೆಂಡರ್ ತಯಾರಿಸೋದಿಕ್ಕೆ ಮುಂಚೆ ನಮ್ಮನ್ನು ಒಂದು ಮಾತು ಕೇಳಬೇಕು. ಹಬ್ಬ ಯಾವುದೂ ಭಾನುವಾರ ಬರಬಾರದಂತೆ ನಾವು ಸಲಹೆ ಕೊಡಬಹುದು, ಆಗ ರಜಾ ವೇಸ್ಟ್ ಆಗೋದಿಲ್ಲ.



# ಮಾರ್ಜಾಲ ಮುನಿಸು

• ನಂನಾಗ್ರಾಜ್

**ಅ**ಯ್ಯೋ ಥೂ ದರಿದ್ರದ್ದೇ ಬೆಳಗಾಗ ಇದರ ದರ್ಶನವಾಯಿತು. ಇನ್ನು ಈವತ್ತಿನ ಕೆಲಸವೆಲ್ಲ ಆದ ಹಾಗೆಯೇ. ಪ್ರಾರಬ್ದ ನಾನೇ ಸಿಗಬೇಕಾಗಿತ್ತೇ ಇದಕ್ಕೆ. ಹಿಡಿ ಹಿಡಿ ಶಾಪ ಮನೆ ಯಜಮಾನಿಯದು.

ಬೆಳಗಾಗ ನರಿಮುಖ ನೋಡಿದರೆ ಅದೃಷ್ಟ ಎಂದು ನಂಬಿದ್ದೀರಿ, ಆಹಾ ಎಂತಹ ಬುದ್ಧಿ ಜೀವಿಗಳು.

**ರಸ್ತೆಯಲ್ಲಿ ನೀವು ಹೋಗುವಾಗ;**

ನಾವು ನಿಮ್ಮ ಎದುರಿಗೆ ಎಡದಿಂದ ಬಲಕ್ಕೆ ಹೋದರೆ ಶುಭ ಶಕುನ. ಅದೇ ಬಲದಿಂದ ಎಡಕ್ಕೆ ಹೋದರೆ ಅಶುಭಶಕುನ. ಮೊದಲನೇ ಸನ್ನಿವೇಶದಲ್ಲಿ ಧಾಪುಗಾಲು ಹಾಕಿ ನಾವು ಹಾಯ್ದ ರೇಖೆಯನ್ನು ದಾಟುತ್ತೀರಿ, ಪೂರ್ತಿ ಲಾಭ ನಿಮಗೇ ಸಿಗಲೆಂದು ಎರಡನೆಯ ಸನ್ನಿವೇಶದಲ್ಲಿ ನಮ್ಮನ್ನು ಗುರ್ರನೆ ಕೊಂದು ಬಿಡುವ ಹಾಗೆ ನೋಡಿ, ಯಾವುದಾದರೂ ನೆಪಹೂಡಿ (ಚಪ್ಪಲಿ ಸರಿಮಾಡಿಕೊಳ್ಳುವ ಹಾಗೆಯೋ ಅಥವಾ ಕಾಲು ಕರೆದುಕೊಳ್ಳುವ ಹಾಗೆಯೋ) ಸ್ವಲ್ಪ ನಿಂತು ಬೇರೆ ಯಾರಾದರೂ ಆ ರೇಖೆ ದಾಟಿದ ಮೇಲೆ ನಿಟ್ಟುಸಿರು ಬಿಡುತ್ತಾ ದಾಟುತ್ತೀರಿ. ಸರಿಯಾದ ಛತ್ರಿಗಳು ರೀ ನೀವು ಅಥವಾ ಶಕುನಿಗಳೋ?

**ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಹಾಗೆ:**

ಯಾರಾದರೂ ಮಾಡಬಾರದ್ದನ್ನು ಮಾಡುವಾಗ ಬೇರೆಯವರಿಗೆ ಆದು ಗೊತ್ತಾಗುತ್ತಿಲ್ಲ. ಎಂಬ ಭ್ರಮೆಯಲ್ಲಿದ್ದರೆ ಅದನ್ನು ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಹಾಗೆ ಎಂದು ಅರ್ಥೈಸುತ್ತೀರ ನಾವು ಹಾಲು ಕುಡಿಯುವಾಗ ಕಣ್ಣು ಮುಚ್ಚಿಕೊಳ್ಳುವುದು ಅದನ್ನು ಸಂಪೂರ್ಣವಾಗಿ ಆಸ್ವಾದಿಸುವುದಕ್ಕೆ ಮಾತ್ರ. ನಿಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬೇರೆಯೇ ಕಾರಣ ಕಲ್ಪಿಸಿಕೊಂಡು ನಮ್ಮ ಕುಲಕ್ಕೆ ಕಳಂಕ ತರುತ್ತಿದ್ದೀರಿ. ಇದು ಸಲ್ಲದು.

**ಬಾಲ ಸುಟ್ಟ ಬೆಕ್ಕಿನ ಹಾಗೆ:**

ಇದೆಂತಹ ಪರಿಹಾಸ್ಯ? ನಿಮಗೆ ಬಾಲ ಇಲ್ಲವೆಂದಿಲ್ಲ ಇಂಗಿ ಹೋಗಿ ಕಾಣುತ್ತಿಲ್ಲ ಅಷ್ಟೆ! ನಿಮ್ಮ ಹಿಂಬದಿ ಏನಾದರೂ ಸುಟ್ಟರೆ ನೀವು ನಮಗಿಂತ ವಿಕಾರವಾಗಿ ವರ್ತಿಸುತ್ತೀರಿ ತಿಳ್ಕೊಳಿ.

**ಮಾರ್ಜಾಲ ಸಂನ್ಯಾಸಿ:**

ಯಾರದೋ ಕಲ್ಪನೆಯಿಂದ ಹುಟ್ಟಿದ ಕಥೆಯೊಂದನ್ನು ಆಧರಿಸಿ ನಮ್ಮ ಕುಲಕ್ಕೆ ಮಸಿ ಬಳಿಯುವ ಪ್ರಯತ್ನ. ಆಳವಾಗಿ ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಿಯೇ ಇಲ್ಲ. ಒಂದು ವೇಳೆ ಬರಗಾಲದಲ್ಲಿ ಅನಿವಾರ್ಯತೆಯಿಂದ ಒಂದು ಬೆಕ್ಕು ಹಾಗೆ ಮಾಡಿರಲೂ ಸಾಧ್ಯ ಆದರೆ ನೀವು ಸುಭಿಕ್ಷ ಕಾಲದಲ್ಲೂ ದುರಾಸೆಗೆ ಬಿದ್ದು ಬೇರೆ ಬೇರೆ ವೇಶಗಳನ್ನು



ಧರಿಸುತ್ತೀರಿ ಅದನ್ನು 'ಉದರನಿಮಿತ್ತಂ ಬಹುಕೃತ ವೇಷಂ' ಎಂದು ಹೇಳಿ ಸಮರ್ಥಿಸಿಕೊಳ್ಳುತ್ತೀರಿ. ನಗೆ ಪಾಟಲು.

**ನಾಯಿಬೆಕ್ಕುಗಳ ಹಾಗೆ ಕಚ್ಚಾಟ:**

ಯಾರಾದರಿಬ್ಬರು ಕಚ್ಚಾಡುತ್ತಿದ್ದರೆ. ನಾಯಿಬೆಕ್ಕುಗಳ ಹಾಗೆ ಕಚ್ಚಾಟವಾಡುತ್ತಿದ್ದಾರೆ ಎಂದು ಹೋಲಿಸುತ್ತೀರಿ ನಿಮ್ಮಲ್ಲಿ ಹುಟ್ಟು ವೈರಿಗಳು ಹಾಗೂ ಜಗಳಗಳು ಕಡಿಮೆ ಏನು? ಅವುಗಳಲ್ಲೇ ಒಂದನ್ನು ಆರಿಸಿಕೊಳ್ಳಬಾರದೇಕೆ? ನಿಮ್ಮಲ್ಲಿನ ದಾಯಾದಿಗಳ ಕಲಹ ನೋಡಿಲ್ಲವೇ ನಾವು? ಕುರುಕ್ಷೇತ್ರ ಮರೆತು ಬಿಟ್ಟಿರಾ? ಅತ್ತೆ – ಸೊಸೆ ಜಗಳ ಯಾರ ಮನೆಯಲ್ಲಿ ಇಲ್ಲ ಹೇಳಿ ಇನ್ನು ಬೀದಿನಲ್ಲಿ ಬಳಿ ಆಗುವ ಜಗಳಗಳ ವೈಖರಿ/ ತೀವ್ರತೆ / ಹರಿತ ಕಂಡಿಲ್ಲವೇ? ಆಂಹಾ, ಎಂತೆಂತಹ ಕುಟುಕುವ ಬೈಗಳು, ಭಯ ತರಿಸುವ ಭಂಗಿಗಳು, ಕೈ ಕೈ ಮಿಲಾಯಿಸುವಿಕೆ, ಅಬ್ಬಾ ನೆನೆಸಿಕೊಂಡರೆ ಮೈಜುಂ ಎನ್ನುತ್ತೆ!

ಜೋರಾಗಿ ಮಳೆ ಬಂದರೆ, ರೈನಿಂಗ್ ಕ್ಯಾಟ್ಸ್ ಅಂಡ್ ಡಾಗ್ಸ್ ಅಂತೀರ ನೋಡಿ ಸ್ವಾಮಿ ಮಳೆ ಒಳ್ಳೆಯದು ಬೆಳೆ ಆಗುತ್ತೆ, ಪರಿಸರ ಸ್ವಚ್ಛ ಆಗುತ್ತೆ, ತಕ್ಷಣ ನಾಯಿ ಪದ ಡಿಲಿಟ್ ಮಾಡಿ ಈ ನಾಣ್ನುಡಿಯನ್ನು ತಿದ್ದುಪಡಿಮಾಡಿ.

**ಬೆಕ್ಕಿಗೆ ಒಂಭತ್ತು ಜೀವಗಳು:**

ಒಂದು ವಿಧದಲ್ಲಿ ಇದು ಸರಿಯಾಗಿದೆ ನಾವು ಚೆನ್ನಾಗಿ ಜಿಗಿಯಬಲ್ಲವು ಹಾಗೂ ನಮ್ಮಲ್ಲಿ ದೈವದತ್ತವಾದ ಅತಿ ವಿಶಿಷ್ಟವಾದ ಸಮತೋಲನೆ ಇದೆ. ಹಾಗಾಗಿ ಗಂಭೀರವಾದ ಆಕಸ್ಮಿಕಗಳಿಂದ ಬದುಕಿ ಉಳಿಯುತ್ತೇವೆ. 32 ಅಂತಸ್ತಿನ ಕಟ್ಟಡದಿಂದ ಕಾಂಕ್ರೀಟ ನೆಲದ ಮೇಲೆ ಬಿದ್ದು ಬದುಕುಳಿದ ನಿದರ್ಶನ ಇದೆ. ಬೆರಗಾದಿರಾ? ನಿಮ್ಮ ಕ್ವಾರ್ಟರ್ ಬಾಟಲ್ ಆಣೆಗೂ ನಿಜ ರೀ ನೀವು? ನಿಮ್ಮೂರಿನ ಪಾಟ್‌ಹೋಲ್ಸ್ ದಾಟುವುಕ್ಕಾಗದೆ ಬಳಸಿ ಹೋಗುತ್ತೀರಿ. ಹಾಗೂ ಪಾಟಹೋಲ್ಸ್ ಸಂಭ್ರಮಿಸುವ ಕಾರಣದಿಂದ ನೀವು 1/2 ಕಿ.ಮೀ ದೂರದ ಹಾದಿಯನ್ನು ಬಳಸಿ, ಬಳಸಿ ಕೇವಲ 1 ಕಿ.ಮೀ ಲಿ ಕ್ರಮಿಸುತ್ತೀರಿ. ಪಾಪರೀ!

"ಮನೆ ಒಡತಿ ಕಣ್ಣು ಇಂಗಿ ಹೋಗಲಿ" ಎಂದು ನಾವು ಶಾಪ ಹಾಕ್ತಿರ್ತೀವಿ ಅಂತ ಇಲ್ಲ ಸಲ್ಲದ ಆಪಾದನೆ ಹೊರೆಸುತ್ತೀರಿ. ಇದರಲ್ಲಿ ಎಳ್ಳಷ್ಟೂ ಹುರುಳಿಲ್ಲ. ಇಷ್ಟಕ್ಕೂ ಈಚೆಗೆಲ್ಲ ಮನೆ ಒಡತಿ ಕಣ್ಣು ಟಿ.ವಿ. ಮೇಲೆಯೋ ಅಥವಾ ಪಕ್ಕದ ಮನೆ ಕಿಟಕಿಯ ಮೇಲೆಯೇ ಇರುತ್ತೆ. ಹೊಂಚು ಹಾಕ್ತಾ ಇರ್ತೀವಲ್ಲವೇ ಸಮಯ ಸಾಧಿಸಿ ನಮ್ಮ ಕೆಲಸ ಮುಗಿಸಿಕೊಳ್ಳುತ್ತೇವೆ.

**ಅತ್ತೆ ಮೇಲಿನ ಕೋಪ ಕೊತ್ತಿಯ ಮೇಲೆ:**

ಆಹಾ ನಿಮ್ಮ ಅತ್ತೆ – ಸೊಸೆ ಸಂಬಂಧ! ಯಾವ ಶತ್ರುವಿಗೂ ಬೇಡ. ಅತ್ತೆಯಂದಿಯರದೇ ಮೇಲುಗೈ ಏಕೆಂದರೆ ನೀವು ಅದೇ ಗಂಡಸರು ಕ್ಷಮಿಸಿ ಗಂಡಸರೆಂದುಕೊಂಡಿರುವವರು ನಿಮ್ಮ ಮಡದಿಯ ಪರ ಅಮ್ಮನಿಗೆ ಎದುರಾಗಿ ಮಾತನಾಡುವ ಪ್ರಯತ್ನವೇ ಮಾಡುವುದಿಲ್ಲ. ಅಂಜುಬುರುಕರು ಹೀಗಾಗಿ ಸೊಸೆಯಂದಿರು ನಮ್ಮ ಮೇಲೆ ಪಾತ್ರೆ, ಸೌಟು ಲಟ್ಟಣಿಗೆಗಳಂತಹ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ತಮ್ಮ ಸುಪ್ತ ಕೋಪಗಳನ್ನು ಹೊರಗೆಡುವುತ್ತಾರೆ. ಸರ್ವ ಸೊಸೆಯಂದಿರೇ ಈ ವಿಶಾಲವಾದ ಜಗತ್ತಿನ ಕೋಟ್ಯಾಂತರ ಜೀವಿಗಳಲ್ಲಿ ನೀವು ನಮ್ಮನ್ನೇ ಆರಿಸಿಕೊಳ್ಳಬೇಕಿತ್ತೇ? ಈ ಸಂದರ್ಭದಲ್ಲಿ ನಿಮ್ಮ ಗಂಡಂದರಿರೂ ಸಹ ಒಂದು ಪ್ರಾಣಿ ಎಂದು ನೆನಪಿಸುತ್ತೇವೆ!



**ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ**

ಏನ್ರೀ ನೀವು ಬೇಸಿಕ್ಸ್‌ಏ ಮರೆತಹಾಗೆ ನಟಿಸುತ್ತೀರಿ? ಇಲಿ ನಮ್ಮ ಪ್ರಧಾನ ಆಹಾರ, ಅದನ್ನು ಹಿಡಿಯಲು ನಾವು ಹರಸಾಹಸ ಮಾಡಬೇಕಾಗುತ್ತೆ. ಈ ಸಾಹಸವನ್ನು ಗಮನಿಸದೇ ಇರುವುದು ಹಾಗಿರಲಿ ಅದನ್ನು ಲಘುವಾಗಿ ಚೆಲ್ಲಾಟ ಎಂದು ವ್ಯಾಖ್ಯಾನಿಸುತ್ತೀರಲ್ಲ? ಈ ತರಹದ ಅನವಶ್ಯಕ ಜಾಣ್ನುಡಿಗಳನ್ನು ಮಾಡದಿರಿ ನಮ್ಮಿಂದ ಮೂಷಿಕಸಂಹಾರ ನಿರಂತರವಾಗಿ ನಡೆಯುತ್ತಿರುವುದಲಿಂದಲೇ ಪ್ರಕೃತಿಯಲ್ಲಿ ಸಮತೋಲನೆ ಉಳಿದಿದೆ. ಈ ಚಟುವಟಿಕೆಯನ್ನು ನಾವು ಕೆಲಕಾಲ ಸ್ಥಗಿತಗೊಳಿಸಿದರೂ ಅದರಿಂದಾಗುವ ದುಷ್ಪರಿಣಾಮಗಳನ್ನು ಎದುರಿಸಲು ನೀವು ಶಕ್ತರಲ್ಲ. ಕಿಂದರಿಜೋಗಿ ನೇಪಥ್ಯ ಸೇರಿಕೊಂಡಾಗಿದೆ ಅಲ್ವೇ? ಹ ಹ್ಹಾ!

ನೀವು ನೋಡಿದರೆ ನಮ್ಮನ್ನು ಅಶುಭ ಅನ್ನುತ್ತೀರ. ಪ್ರಪಂಚದ ಅತಿ ಅಭಿವೃದ್ಧಿ ರಾಷ್ಟ್ರವಾದ ಅಮೇರಿಕದಲ್ಲಿ ನಾವು ನಂಬರ್ ಒನ್ ಪೆಟ್ (88 ಮಿಲಿಯನ್) ಅದೇ ನಮ್ಮ ಪರಮಶತ್ರು ನಾಯಿ 74 ಮಿಲಿಯನ್  ನೋ ಕಾಮೆಂಟ್ಸ್.

ನಮ್ಮನ್ನು ಪೆಟ್ ಆಗಿ ಹೊಂದಿದ್ದರೆ ಅದು ಹೃದಯಾಘಾತ ಹಾಗೂ ಲಕ್ವಗಳ ಅಪಾಯವನ್ನು 30 ಪ್ರತಿ ಶತ ಕಡಿಮೆ ಮಾಡುವದೆಂದು ಒಂದು ಅಧ್ಯಯನ ಹೇಳುತ್ತದೆ. 'ನೋಟ್ ಮಾಡ್ಕೋಳಿ'.

ನಿಮ್ಮಲ್ಲಿ ಗೊಂದಲ ಜಾಸ್ತಿರೀ, ಕರಿಬೆಕ್ಕು ಅಮೇರಿಕದಲ್ಲಿ ಅಶುಭ ಅದೇ ಕರಿ ಬೆಕ್ಕು ಯು.ಕೆ. ಹಾಗೂ ಅಸ್ಟ್ರೇಲಿಯದಲ್ಲಿ ಶುಭ! ಅಯ್ಯೋರಾಮ!

ಪದೇ ಪದೇ ನಾವು ಹಾಲನ್ನು ಕುಡಿದ್ಬಿಡ್ತೀವಿ ಅಂತ ಆಪಾದಿಸುತ್ತೀರಿ. ಹಾಗೆ ನೋಡಿದರೆ ನಾವು ಲಾಕ್ಟೋಸ್ ಇಂಟೋಲರೆಂಟ್ ಕಣ್ರೀ! ತಿಳುವಳಿಕೆ ಸಾಲದು ನಿಮಗೆ!

ಇನ್ನು ನಿಮ್ಮ ವ್ಯಂಗ್ಯ ಚಿತ್ರಗಳು ನಾವು ಹಸಿ ಮೀನನ್ನು ತಿನ್ನುವ ಹಾಗೆ ಚಿತ್ರಿಸಿಕೊಂಡೇ ಬಂದಿವೆ ಸುತರಾಂ ಸುಳ್ಳು! ನಾವು ಅದನ್ನು ಮುಟ್ಟುವುದೇ ಇಲ್ಲ!

ನಾವು ನಮ್ಮ ಶತ್ರು ನಾಯಿಯ ಹಾಗೆ ಸಕ್ರಿಯವಾಗಿ ಸ್ಪಂದಿಸುವುದಿಲ್ಲ ಎಂದು ಮೂಗೆಳೆಯುತ್ತೀರಿ. ವಾಸ್ತವ ಏನೆಂದರೆ ನಾವು ಕೂಲ್ ಅಷ್ಟೆ.

ಉಸೇನ್ ಬೋಲ್ಟ್ ಈ ಗ್ರಹದ ಅತ್ಯಂತ ವೇಗದ ಓಟಗಾರ ಎಂದು ಎಷ್ಟೊಂದೆಲ್ಲ ಬಹುಮಾನಿಸಿ ಸತ್ಕರಿಸಿ ಪ್ರಚಾರ ಕೊಡುತ್ತೀರಿ. ನಾವು ಅವನಿಗಿಂತ ವೇಗವಾಗಿ ಓಡಬಲ್ಲೆವು ಗೊತ್ತಾ?

ಇದೆಲ್ಲ ಹಾಗಿರಲಿ ಒಂದು ವಿಷಯಕ್ಕೆ ನಾವು ನಿಮ್ಮನ್ನು ಕ್ಷಮಿಸುವುದೇ ಇಲ್ಲ. ಅಲ್ಲ ಹೋಗಿ ಹೋಗಿ ಯ ಕಃಶ್ಚಿತ್ ಮೌಸಿಗೆ ಶರಣಾಗಿದ್ದೀರಲ್ಲಾರೀ, ಎಂಥಹ ದುರ್ವಿಧಿ, ನಗೆಪಾಟಲು ಹ ಹ್ಹಾ!!

**ಸಾಕೋ ಇನ್ನೂ ಬೇಕೋ?**

**ಬಡಪಾಯಿಯ ಸ್ವಗತ**

ಬಂದೆಯಾ ಬಾ ವಿಳಂಬೀ, ಸ್ವಾಗತಿಸುವೆ ನಿನಗೆ ಕೈ ಮುಗಿದು
ನೀನಿರುವ ವರ್ಷದಲ್ಲಾದರೂ, ಮಾಡು ನನ್ನನು ಸ್ವಾವಲಂಬಿ



# ಸೀರಿಯಲ್ ಸತ್ಯಗಳು

**• ಆನಂದ**

**ಸೀರಿಯಲ್‌ಗಳಲ್ಲಿ ತೋರಿಸಿದ್ದನ್ನು ಸತ್ಯವೆಂದು ನಂಬಿದರೆ**

ಎರಡು ಜನಪ್ರಿಯ ಕನ್ನಡ ಧಾರಾವಾಹಿಗಳನ್ನು ಸೇರಿಸಿ ಒಂದು ಧಾರಾವಾಹಿ ಮಾಡಿದರೆ ಅದರ ಟಿಆರ್‌ಪಿ ದುಪ್ಪಟ್ಟು ಹೆಚ್ಚಾಗಬಹುದಲ್ಲವೆ? ಉದಾಹರಣೆಗೆ, 'ಪುಟ್ಟ ಗೌರಿ ಮದುವೆ' ಮತ್ತು 'ಲಕ್ಷ್ಮೀ ಬಾರಮ್ಮ' ಸೀರಿಯಲ್‌ಗಳನ್ನು ಮರ್ಜ್ ಮಾಡಿ 'ಪುಟ್ಟ ಗೌರಿ ಬಾರಮ್ಮ' ಎಂಬ ಹೊಸಾ ಸೀರಿಯಲ್ ತಯಾರಿಸಿದರೆ ಈ ಎರಡೂ ಸೀರಿಯಲ್‌ಗಳಿಗೆ ಕಮಿಟೆಡ್ ವೀಕ್ಷಕರು ಇರುವುದರಿಂದ ಪು. ಗೌ. ಬಾ. ಸೀರಿಯಲ್‌ನ ಟಿಆರ್‌ಪಿ ಡಬಲ್ ಆಗುವುದರಲ್ಲಿ ಸಂದೇಹವೇ ಇಲ್ಲ ಎಂದು ಧಾರಾವಾಹಿ ತಜ್ಞರು ಹೇಳುತ್ತಿದ್ದಾರೆ.

***

ಸ್ತ್ರೀ ಸಬಲೀಕರಣ – ಅರ್ಥವಾಗಲಿಲ್ಲವೆ? ವಿಮೆನ್ಸ್ ಎಂಪವರ್‌ಮೆಂಟ್ – ಬಗ್ಗೆ ಪುಂಖಾನುಪುಂಖವಾಗಿ ಭಾಷಣಗಳು ಕೇಳಿ ಬರುತ್ತಿದ್ದರೂ ಅದು ನಿಜವಾಗಿಯೂ ಜಾರಿಯಾಗಿರುವುದು ಕನ್ನಡ ಸೀರಿಯಲ್‌ಗಳಲ್ಲಿ. ನೀವು ಯಾವುದೇ ಸೀರಿಯಲ್ ನೋಡಿ ಅದರಲ್ಲಿ ಡಾನ್ (ಡಾನೆಸ್?) ಆಗಿರುವುದು ಒಬ್ಬ ಲೇಡಿ ಕ್ಯಾರಕ್ಟರ್. ಈ ಡಾನೆಸ್‌ಗೆ ನಗರದ ಎಲ್ಲ ರೌಡಿಗಳೂ ಪರಿಚಿತ. ಫೋನಿನಲ್ಲೇ ಇವರನ್ನು ಸಂಪರ್ಕಿಸಿ ಕೊಲೆ, ಕಿಡ್ನಾಪ್, ಬ್ಲಾಕ್ ಮೇಲ್, ಸುಲಿಗೆ, ಬೆದರಿಕೆ ಎಲ್ಲವನ್ನೂ ಮಾಡಿಸುತ್ತಾಳೆ. ಈ ವಿಷಯದಲ್ಲಿ ಅವಳು ಯಾವುದೇ ಗಂಡು ಡಾನ್‌ಗೆ ಸರಿಸಮ. ಅವಳು ಫೋನಿನಲ್ಲಿ ಆವಾಜ್ ಹಾಕಿದರೂ ಈ ಗಂಡು ರೌಡಿಗಳು ಕಂಗಾಲಾಗುತ್ತಾರೆ. ಅಂದಮೇಲೆ ಸ್ತ್ರೀ ಸಬಲೀಕರಣ ಜಾರಿಗೆ ಬಂದಿದೆ ಎಂದಾಯಿತಲ್ಲವೆ? ನೆಕ್ಸ್ಟ್ ಜನರೇಷನ್ ಸೀರಿಯಲ್ ಗಳಲ್ಲಿ ಬಹುಶಃ ಲೇಡಿ ಗೂಂಡಾಗಳೇ ಇರುತ್ತಾರೇನೋ? ನೋಡೋಣ.

***

ಲೇಡಿ ಗೂಂಡಾಗಳು ಎಂದನಲ್ಲವೆ? ಅಂದಮೇಲೆ ಅವರಿಗೆ ತರಬೇತಿ ನೀಡಬೇಕಾಗಿ ಬರುತ್ತದೆ. ಹಾಗಿದ್ದರೆ ಅದಕ್ಕೆಂದೇ ಒಂದು ಪ್ರತ್ಯೇಕ ಜಿಮ್ ಶುರು ಮಾಡಲು ಸಾಧ್ಯ. ಬರೇ ಆ್ಯಕ್ಟಿಂಗ್ ಕಲಿಸುವ ಶಾಲೆಗಳಿದ್ದರೆ ಸಾಲದು. ಲೇಡಿ ಗೂಂಡಾಗಳನ್ನು ತಯಾರಿಸುವವರಿಗೂ ಸ್ಕೋಪ್ ಇದೆ.



***

ಕನ್ನಡ ಧಾರಾವಾಹಿಗಳಲ್ಲಿ ಮೋಸ್ಟ್ ಹಾರ್ಡ್ ವರ್ಕಿಂಗ್ ಸಿಬ್ಬಂದಿ ಎಂದರೆ ಮೇಕ್ ಅಪ್ ಮಂದಿ. ಇವರು 24 ಬೈ 7 ಕಾರ್ಯ ನಿರತರೆಂದೇ ಕಾಣುತ್ತದೆ. ಏಕೆಂದರೆ, ಯಾವುದೇ

ಧಾರಾವಾಹಿಯ ಯಾವುದೇ ಸ್ತ್ರೀ ಪಾತ್ರ ತೆಗೆದುಕೊಳ್ಳಿ, ಆಕೆ ಯಾವುದೇ ಸಮಯದಲ್ಲಿ ಕಾಣಿಸಿಕೊಂಡರೂ ಫುಲ್ ಮೇಕ್‌ಅಪ್‌ನಲ್ಲೇ ಕಾಣಿಸಿಕೊಂಡಿರುತ್ತಾಳೆ. ಬೆಳಿಗ್ಗೆ 6 ಆಗಿರಲಿ ಅಥವಾ ರಾತ್ರಿ 12 ಆಗಿರಲಿ ಹೂ ಮುಡಿದುಕೊಂಡು, ಲಿಪ್‌ಸ್ಟಿಕ್ ಹಚ್ಚಿಕೊಂಡು, ಎಲ್ಲ ಆಭರಣಗಳನ್ನು ಹಾಕಿಕೊಂಡು, ಸಿಲ್ಕ್ ಸೀರೆಯಿಂದ ಭೂಷಿತರಾಗಿ ಮದುವೆಗೋ ಆರತಕ್ಷತೆಗೋ ಹೊರಟಿರುವಂತೆ ಕಾಣುತ್ತಾರೆ. ಇದಕ್ಕೆ ಮೇಕ್‌ಅಪ್ ಮ್ಯಾನ್/ವುಮನ್‌ಗಳೇ ಕಾರಣ ಅಲ್ಲವೆ? ಅಂದಮೇಲೆ ಇವರಿಗೆ ವಿಶ್ರಾಂತಿಯೇ ಇಲ್ಲದಂತಾಯಿತು. ಕೆಲವೊಮ್ಮೆ ಮೇಕ್ ಅಪ್ ಜೊತೆಗೆ ಮೇಕ್ ಡೌನ್ ಸಹ ಮಾಡಬೇಕು. ಮೇಕ್ ಡೌನ್? ಕಪ್ರಗೆ ಕಾಣಬೇಕಿರುವ ಹುಡುಗಿಗೆ ಮೇಕ್ **ಅಪ್** ಹೇಗೆ ಮಾಡಲು ಸಾಧ್ಯ? ಆಕೆಯ ಒರಿಜಿನಲ್ ಸೌಂದರ್ಯ ಇಳಿಸಬೇಕಾದರೆ ಅದು ಮೇಕ್ ಡೌನೇ ಆಗಿರಬೇಕಲ್ಲವೆ?

***

ಕನ್ನಡ ಧಾರಾವಾಹಿಗಳಿಗೆ ಮೇಕ್ ಅಪ್ ಸಾಧನ/ಸಲಕರಣೆಗಳನ್ನು ಸರಬರಾಜು ಮಾಡುವ ಗುತ್ತಿಗೆ ಹಿಡಿದರೆ ಸಾಕಷ್ಟು ಹಣ ಮಾಡಿಕೊಳ್ಳಲು ಸಾಧ್ಯ ಎಂದು ಸೀರಿಯಲ್‌ಗಳನ್ನು ನೋಡಿದವರು ಹೇಳಲು ಸಾಧ್ಯ. ಮೇಲೆ ವಿವರಿಸಿರುವಂತೆ ಎಲ್ಲ ಕಲಾವಿದರೂ ಯಾವಾಗಲೂ ಒಪ್ಪ ಓರಣವಾಗಿರುವದರಿಂದ ಹಾಗೆ ಅವರು ಕಾಣುವಂತೆ ಮಾಡಲು ಅಗತ್ಯ ಸಾಧನ/ಸಲಕರಣೆಗಳನ್ನು ಸಪ್ಲೈ ಮಾಡುವುದು ಒಂದು ದೊಡ್ಡ ವಹಿವಾಟು ಆಗಿಯೇ ಇರುತ್ತದೆ. ಈ ವ್ಯವಹಾರದಲ್ಲಿ ಟಿಆರ್‌ಪಿ ಬಗ್ಗೆ ಸಪ್ಲೈದಾರರು ತಲೆಕೆಡಿಸಿಕೊಳ್ಳಬೇಕಿಲ್ಲ. ಅದೇನಿದ್ದರೂ ನಿರ್ಮಾಪಕರ ತಲೆನೋವು. ಹೂವು, ಲಿಪ್‌ಸ್ಟಿಕ್, ಪೌಡರ್, ಕ್ರೀಂ (ಏನಾದರೂ ಬಿಟ್ಟಿದ್ದರೆ ಸೇರಿಸಿ ಓದಿಕೊಳ್ಳಿ), ಆಭರಣಗಳು, ಉಡುಪು ನಿರಂತರವಾಗಿ ಸರಬರಾಜು ಮಾಡಿ ಹಣ ಪಡೆದುಕೊಳ್ಳುತ್ತಿದ್ದರೆ ಸರಿ. ಬರೀ ಹೂ ಸರಬರಾಜು ಮಾಡುವ ಗುತ್ತಿಗೆ ಹಿಡಿದರೂ ಸಾಕು ಎಂದು ಒಮ್ಮೊಮ್ಮೆ ಎನಿಸುತ್ತದೆ.

***

ಎಲ್ಲ ಧಾರಾವಾಹಿಗಳಲ್ಲೂ ಸಮಯ ಎನ್ನುವುದು ಒಂದು ಅರಿಯಲಾಗದ, ಅಳೆಯಲಾಗದ ಅವಧಿಯಾಗಿರುತ್ತದೆ. ಒಂದು ಎಪಿಸೋಡ್ ಮುಗಿದು ಇನ್ನೊಂದು ಪ್ರಾರಂಭವಾದಾಗ ಎಷ್ಟು ಸಮಯ ಸರಿದಿದೆ ಎಂಬುದನ್ನು ಊಹಿಸಲು ಸಹ ಅಸಾಧ್ಯ. ಅದು ಮರುದಿನವೇ, 3–4 ದಿನಗಳಾದವೇ ಅಥವಾ ಒಂದು ವಾರವೇ ಕಳೆಯಿತೇ ಎಂಬುದು ನಿರ್ದೇಶಕರಿಗಾದರೂ ತಿಳಿದಿರಬಹುದೆ? ವೀಕ್ಷಕರಿಗಂತೂ ತಿಳಿಯುವುದೇ ಇಲ್ಲ. ಹೊರಗೆ ಹೋಗಿದ್ದ ಮಗಳು/ಸೊಸೆ ಇನ್ನೂ ವಾಪಸ್ ಬಾರದಿದ್ದಾಗ ಅಪ್ಪ/ಅಮ್ಮ/ಅತ್ತೆ/ಮಾವ ಬಾಗಿಲನ್ನೇ ನೋಡುತ್ತಾ 'ಇನ್ನೂ ಯಾಕೆ ಇವಳು ಬರಲಿಲ್ಲ..' ಎಂದು ಕಾತರ ಪಡುತ್ತಿರುವಂತೆಯೇ ಅವಳು ಪ್ರತ್ಯಕ್ಷಳಾಗುತ್ತಾಳೆ. ಈ ಕೆಲಸ ಮೊದಲೇ ಮಾಡಿದ್ದರೆ ಟೆನ್ಷನ್ ಮಾಡಿಕೊಳ್ಳಬೇಕಾದ ಅಗತ್ಯವೇ ಇರುತ್ತಿರಲಿಲ್ಲ ಎಂಬುದು ವೀಕ್ಷಕರಿಗೆ ಅನಿಸುವುದು ಸಹಜ. ಹಾಗೆಯೇ ಫೋನ್ ಕಾಲ್ ಸಹ. ಇನ್ನೂ ಯಾಕೆ ಫೋನ್ ಬರಲಿಲ್ಲ ಎಂದುಕೊಳ್ಳುತ್ತಿರುವಂತೆಯೇ ಫೋನ್ ಶಬ್ದ ಕೇಳತೊಡಗುತ್ತದೆ.



**- ಕೃಷ್ಣ ಸುಬ್ಬರಾವ್**

**ಹಾ**ಸ್ಯ ಮಾಡುವುದು ಒಂದು ಗಂಭೀರ ವೃತ್ತಿಯೆಂದು ಎಲ್ಲರೂ ಒಪ್ಪಬೇಕು. ಬಹಳ ಜನ 'ಏನ್ಸಾರ್ ನೀವು ಚೆನ್ನಾಗಿ ನಗಿಸ್ತಿರಾ ಆದರೆ ನಿಮ್ಮ ಮುಖ ನೋಡಿದರೆ ಹಾಗೇನು ಅನಿಸುವುದಿಲ್ಲ ಎಂದು ಆಕ್ಷೇಪಿಸುತ್ತಾರೆ. ಅಂತಹ ಸಮಯದಲ್ಲಿ ನಾವು ನಿಮ್ಮನ್ನು ನಗಿಸುವುದು ಮಾತಿನ ಮೂಲಕವೇ ಹೊರತು ಮುಖದ ಮೂಲಕವಲ್ಲ ಎಂದು ಹೇಳುತ್ತೇವೆ.

**ವರಪೂಜೆಯ ನಡುವೆ ಹಾಸ್ಯೋತ್ಸವದ ಸಂಭ್ರಮ ಹೇಗೆ**

ಹಾಸ್ಯ ಕಾರ್ಯಕ್ರಮದ ಜವಾಬ್ದಾರಿ ಹೊತ್ತ ಸಂಘಟಕರು ಅಸಾಧ್ಯ ಒತ್ತಡದಲ್ಲಿ ಸಿಲುಕಿರುವುದನ್ನು ನಾವು ಹಾಸ್ಯೋತ್ಸವಗಳಲ್ಲಿ, ಅಂದರೆ 90ರ ದಶಕದಲ್ಲಿ ಜಯನಗರದ ನ್ಯಾಶನಲ್ ಕಾಲೇಜಿನಲ್ಲಿ ನಡೆಯುತ್ತಿದ್ದ ಹಾಸ್ಯೋತ್ಸವಗಳಲ್ಲಿ ಎಲ್ಲರೂ ನೋಡಿರುತ್ತಾರೆ. ಸಮಯಕ್ಕೆ ಸರಿಯಾಗಿ ಪ್ರಾರಂಭಮಾಡುವ ಹಠ, ಅದಕ್ಕಿಂತ ಹೆಚ್ಚಾಗಿ ಭಾಷಣಕಾರರು ತಮಗೆ ಕೊಟ್ಟ ಸಮಯವನ್ನು ಪಾಲಿಸುವಂತೆ ನೋಡಿಕೊಳ್ಳುವ ಕೆಲಸ. ಇದರ ಮಧ್ಯೆ ಯಾವುದಾದರು ಸ್ಲಾಟ್ ಪ್ರೇಕ್ಷಕರಿಗೆ ಬೋರ್ ಹೊಡಿಸುವ ಸುಳಿವು ಸಿಕ್ಕಾಗ ಆ ಕಾರ್ಯಕ್ರಮವನ್ನು ನಿಲ್ಲಿಸುವ ಸಾಹಸ ಹಾಗೂ ಕಾರ್ಯಕ್ರಮದ ಪಟ್ಟಿಯಲ್ಲಿ ಇನ್ನೊಂದು ಆಕರ್ಷಕ ಐಟಂನ್ನು ಪ್ರಸ್ತುತ ಪಡಿಸುವ ಪ್ರಯತ್ನ.. ಹೀಗೆ ಹತ್ತಾರು ಕೆಲಸಗಳನ್ನು ಮಾಡುವಾಗ ಸಂಘಟಿಗರ ಮುಖದಲ್ಲಿ ನಗು ಕಾಣುವುದಾದರೂ ಹೇಗೆ? ಅವರುಗಳು ಕಾರ್ಯಕ್ರಮದ ಸಿ.ಡಿ.ಗಳನ್ನು ನೋಡಿದಾಗಲೇ ಹಾಸ್ಯದ ಸವಿಯನ್ನು ಅನುಭವಿಸುತ್ತಿದ್ದರು ಅಥವಾ ಮರುದಿನ ಪತ್ರಿಕೆಗಳಲ್ಲಿ ಬರುತ್ತಿದ್ದ ವಿಸ್ತಾರದ ವರದಿ ಮೂಲಕ. ಆಂತಹ ಒಂದು ಹಾಸ್ಯೋತ್ಸವದ ಡಿಸೆಂಬರ್ 25ರ ರಾತ್ರಿ, ಯಶಸ್ವಿಯಾಗಿ ನಡೆದ ಕಾರ್ಯಕ್ರಮ ಮುಗಿಸಿ ಚಳಿಗಾಲದಲ್ಲೂ ಮುಖದ ಬೆವರನ್ನು ಕರವಸ್ತ್ರದಿಂದ ನಿವಾರಿಸಿಕೊಳ್ಳುತ್ತಾ ಹತ್ತಿರದಲ್ಲಿದ್ದ ದೋಸೆಕ್ಯಾಂಪ್‌ಗೆ ಹೊರಡಲು ಸಂಘಟಕರಾದ ನಾನು, ಬೇಲೂರು, ವೈ.ವಿ. ಗುಂಡೂರಾವ್ ಹಾಗೂ ಎಂ. ಎಸ್. ನರಸಿಂಹ ಮೂರ್ತಿ ಮಿಕ್ಕ ಗೆಳಯರೊಂದಿಗೆ ಹೊರಡುತ್ತಿದ್ದೆವು. ಅಷ್ಟರಲ್ಲಿ ಎದುರುಗಡೆಯಿಂದ ಇಬ್ಬರು ವ್ಯಕ್ತಿಗಳು ಒಂದು ಸಾರ್ ನೀವು ನಾಲ್ಕು ಜನ ಇಲ್ಲಿ ಒಟ್ಟಿಗೆ ಸಿಕ್ಕಿದ್ದು ನಮ್ಮ ಅದೃಷ್ಟ ಎಂಬ ಪೀಠಿಕೆಯ ಮಾತನಾಡಿದರು. ಆ ಕಾಲದಲ್ಲಿ ಹಾಸ್ಯ ಭಾಷಣಗಳಿಗೆ ಇನ್‌ಸ್ಟಂಟ್ ಬೇಡಿಕೆ ಬರುತ್ತಿದ್ದುದು ಆಶ್ಚರ್ಯವೇನಿರಲಿಲ್ಲ ನಾವು ಪ್ರತಿವರ್ಷ ಹಾಗೆ ಒಟ್ಟಿಗೆ ಸಿಕ್ಕೆ ಸಿಕ್ತೀವಿ, ನಮಗೆ ಭಯಂಕರವಾದ ಹಸಿವು ಆಗ್ತಿದೆ ಅದರಲ್ಲೂ ಅವರೆಕಾಯಿ ದೋಸೆ ನಮ್ಮನ್ನು ಕರೆಯುತ್ತಿವೆ, ಬೇಕಾದರೆ ನೀವು ಅಲ್ಲೇ ಬನ್ನಿ. ಈಗ ದಯವಿಟ್ಟು ಬಿಟ್ಟುಬಿಡಿ ಎಂದು ಒಕ್ಕೊರಲಿನಿಂದ ಕೇಳಿಕೊಂಡೆವು



''ಕ್ಷಮಿಸಿ ಐದೇ ನಿಮಿಷ, ನಮಗೂ ಬಹಳ ತುರ್ತು ಕೆಲಸವಿದೆ ನಾವು ನಿಮ್ಮನ್ನು ಯಾಕೆ ಐದು ನಿಮಿಷ ಹಿಡಿದು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಕಾರಣ ತಿಳಿದರೆ ಖಂಡಿತ ನೀವು ಅವರೇಕಾಯಿ ದೋಸೆ ತಿನ್ನುವುದನ್ನು ಹತ್ತು ನಿಮಿಷ ಮುಂದೂಡುತ್ತೀರಿ ಎಂದು ಬಹಳ ಆತ್ಮವಿಶ್ವಾಸದಿಂದ ಹೇಳಿದಾಗ, ಇರಲಿ ನೋಡೇ ಬಿಡೋಣವೆಂದು ''ನೋಡ್ರಿ ದಯವಿಟ್ಟು

ಹಾಸ್ಯೋತ್ಸವ ನಡೆದ ಮೇಲೆ ಕಡೆ ಪಕ್ಷ ಒಂದು ವಾರ ನಮಗೆಲ್ಲ ವಿಶ್ರಾಂತಿ ಬೇಡವೆ? ಮುಂದಿನ ವಾರ ಯಾವುದಾದರೂ ಕಾರ್ಯಕ್ರಮವಾದರೆ ಸರಿ, ಜನಗಳಿಗೂ ಸ್ವಲ್ಪ ವಿರಾಮ ಬೇಡವೆ ನಗೊಕ್ಕೆ ಎಂದು ಕೇಳಿದೆವು

''ಸಾರ್ ನಾಳೆ ಮಲ್ಲೇಶ್ವರಂನಲ್ಲಿರುವ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಸಾಯಂಕಾಲ 7 ರಿಂದ 8–30ರ ವರೆಗೆ ಒಂದು ಹಾಸ್ಯ ಕಾರ್ಯಕ್ರಮ ಕೊಟ್ಟು ಭೋಜನ ಸ್ವೀಕರಿಸಬೇಕು ನೀವು ನಾಲ್ಕು ಜನಾನೂ ಬರಬೇಕು, ದಯವಿಟ್ಟು ಇಲ್ಲಾ ಅನ್ನಬೇಡಿ...''




'ಅಲ್ರಿ, ಕಾರ್ಯಕ್ರಮವನ್ನೆಲ್ಲ ನೀವೆ ನಿರ್ಧರಿಸಿ ಆ ಜಾಗಕ್ಕೆ ಇಷ್ಟು .. ಎನ್ನೀ. ಇದು ನೋಡಿ ಹಾಸ್ಯೋತ್ಸವಕ್ಕೆ ಒಂದು ವರ್ಷದ ಮುಂಚಿನಿಂದಲೇ ತಯಾರು ಮಾಡ್ತೀವಿ ನಾಳೆಯಿಂದಲೇ ಮುಂದಿನ ಹಾಸ್ಯೋತ್ಸವಕ್ಕೆ ಅಣಿಮಾಡುತ್ತೇವೆ ಎಂದು ಜಂಭಕೊಚ್ಚುತ್ತಾ ನೀವು ಹಾಗೆ ಧಿಡೀರ್ ಕಾರ್ಯಕ್ರಮ ಹಾಕಿಕೊಂಡು ನಮ್ಮನ್ನು ಟೇಕನ್ ಫಾರ್ ಗ್ರಾಂಟೆಡ್ ರೀಕಿ..'' ಎನ್ನುತ್ತಿದ್ದಂತೆ ನೋಡಿ ಸಾರ್, ನೀವೆಲ್ಲಾ ಬಹಳ ಬಿಸಿ ಜನವೆಂದು ಗೊತ್ತು ಆದರೆ ನಾವು ಹಾಸ್ಯದ ಕಾರ್ಯಕ್ರಮಕ್ಕೆ ಛತ್ರ ಬುಕ್ ಮಾಡಿದ್ದಲ್ಲ, ನನ್ನ ತಂಗಿ ಮದುವೆಗೆಂದು ಬುಕ್ ಮಾಡಿದ್ದ ಆದರೆ ಧಿಡೀರ್ ಅಂತ ಮದುವೆ ನಿಂತು ಹೋಯಿತು. ನೆಂಟರಿಷ್ಟರಿಗೆ ತಿಳಿಸಲು ಸಾಧ್ಯವಿಲ್ಲ (90ರ ದಶಕದಲ್ಲಿ ಮೊಬೈಲ್ ಫೋನ್‌ಗಳು ಚಾಲ್ತಿಯಲ್ಲಿರಲಿಲ್ಲ ಇನ್ನು ವಾಟ್ಸಪ್ ಎಲ್ಲಿಂದ?) ವರಪೂಜೆಗೆಂದು ಜನರು ಛತ್ರಕ್ಕೆ ಬಂದುಬಿಡ್ತಾರೆ ಅಡುಗೆಯವರಿಗೂ ಹೇಳಿದ್ದಾಗಿದೆ. ಹಾಗಾಗಿ ನಾವು ಈ ಏರ್ಪಾಡುಗಳನ್ನು ಸದ್ಬಳಿಕೆ ಮಾಡಿಕೊಳ್ಳೋಣವೆಂದು...'

ಆಶ್ಚರ್ಯವಾಯಿತು, ಒಂದು ಮದುವೆ ನಿಲ್ಲುವುದು ಎಂತಹ ಘಟನೆ! ಅವತ್ತು ಅದೇ ಸಂಜೆ ಹಾಸ್ಯ ಕಾರ್ಯಕ್ರಮ ಏರ್ಪಡಿಸುವ ಯತ್ನ! ಅನಿರೀಕ್ಷಿತ ಅಪೇಕ್ಷೆಗೆ ಕುತೂಹಲದಿಂದ ನಾಲ್ಕು ಜನ ಒಪ್ಪಿಗೆ ಸೂಚಿಸಿದೆವು.



ಮರುದಿನ ವೇಳೆಗೆ ಸ್ವಲ್ಪ ಮುಂಚೆಯೇ ನಾವು ನಾಲ್ಕು ಜನ ಶ್ರೀನಿವಾಸ ಕಲ್ಯಾಣ ಮಂಟಪಕ್ಕೆ

ಹೋದೆವು. ಕಾಫಿ ಹೀರುತ್ತಿದ್ದಾಗ ನಮ್ಮನ್ನು ಸಮಾರಂಭಕ್ಕೆ ಕರೆದವರಲ್ಲಿ ನಮ್ಮ ಒಂದು ಅನುಮಾನವನ್ನು ಹಂಚಿಕೊಂಡೆವು. ಹಾಂಗತ ಮದುವೆ ನಿಂತಿದ್ದಕ್ಕೆ ಕಾರಣ ಕೇಳಿಲಿಲ್ಲ. ''ನೋಡಿ, ನಮಗೊಂದು ಸಮಸ್ಯೆ ಕಾಣುತ್ತಿದೆ, ಅದು ನಿಮ್ಮ ಸಮಸ್ಯೆಯೂ ಆಗಬಹುದು. ಇಲ್ಲಿ ಬಂದು ಸೇರುವ ನಿಮ್ಮ ನೆಂಟರಿಷ್ಟರನ್ನು ನಗಿಸುವ ಕೆಲಸ ಅಷ್ಟು ಸುಲಭವಾದ್ದವಲ್ಲ ಎನಿಸುತ್ತದೆ ಎಂದು ನೇರವಾಗಿ ಹೇಳಿದೆವು. ಆದರೆ ಆ ಮಾತನ್ನು ಹಗುರವಾಗಿ ತೆಗೆದುಕೊಂಡು ''ಒಳ್ಳೆ ತಮಾಶೆ ಮಾಡ್ತಿರಾ ಸಾರ್'' ಎಂಬ ಸಾಂಪ್ರದಾಯದ ರಾಗ ಎಳೆದರು ''ನೋಡಿ, ನಾವು ಸೀರಿಯಸ್ಸಾಗಿ ಹೇಳ್ತಾ ಇದ್ದೀವಿ. ಮದುವೆ ನಿಂತಿದ್ದಕ್ಕೆ ಕಾರಣ ಕೆದುಕುವ ಪ್ರಯತ್ನ ಜನರಲ್ಲಿ ಸಹಜವಾಗಿರುತ್ತೆ ಹೀಗಾಗಿ ಎಲ್ಲರೂ ತಮ್ಮತಮ್ಮಲ್ಲಿ ಮಾತನಾಡುತ್ತಿರುತ್ತಾರೆ. ನಮ್ಮದು ಫ್ಲಾಪ್ ಶೋ ಆಗೋದಿಲ್ವೆ? ಎಂದರು ಎಂ.ಎಸ್.ಎನ್. ''ನಾವು ಏನ್ ಮಾಡಬೇಕು? ಎಂದು ನಮ್ಮನ್ನೇ ಪ್ರಶ್ನಿಸಿದಾಗ ನೋಡಿ ಜನ ಎಲ್ಲ ಏಳು ಗಂಟೆಗೆ ಬಂದರೆ ನೀವೇ ಒಂದರ್ಧಗಂಟೆ ಜನರಿಗೆ ಮಾತನಾಡಲು ಅವಕಾಶಮಾಡಿಕೊಡಿ, ತಿಂಡಿಯ ಜೊತೆ ಗಾಸಿಪ್ ನಡೆಯಲಿ. ಏಳುವರೆಯಿಂದ ನಮ್ಮ ಕಾರ್ಯಕ್ರಮ ನಡೆಯಲಿ ನಾವು ಮಾತನಾಡುವಾಗ ಅವರು ಮಾತನಾಡಬಾರದು ಎಂಬ ವಾಗ್ದಾನ ಪಡೆಯಬೇಕು ಎಂದು ಗುಂಡೂರಾಯರು ಸಲಹೆ ನೀಡಿದರು.

ಸಮಾರಂಭ ಅಚ್ಚುಕಟ್ಟಾಗಿ ನಡೆಯಿತು. ಹೆಚ್ಚಾಗಿ ಮದುವೆಮನೆ ನಡೆದ, ನಡೆಯಬಹುದಾದ ಅಭಾಸಗಳು ಜನರ ನಡವಳಿಕೆಗಳು ಅಂದಿನ ಮುಖ್ಯ ವಿಷಯವಾಗಿತ್ತು. ಅಂದು ಕೊಂಡಿದ್ದಕ್ಕಿಂತ ಹೆಚ್ಚಿನ ಸ್ಪಂದನೆ ದೊರೆಯಿತು. ಹಾಸ್ಯದ ಜೊತೆಗೆ ಒಳ್ಳೆ ದಾಸೋಹದ ಸವಿಯಿತ್ತು.

ಕಾರ್ಯಕ್ರಮವನ್ನು ಸಂಯೋಜಿಸಿದವರು ಎಂತಹ ಪ್ರಾಕ್ಟಿಕಲ್ ಜನ. ಬೇಜಾರುಪಟ್ಟುಕೊಳ್ಳುವ, ತಲೆಕೆಡಿಸಿಕೊಳ್ಳುವ ಸನ್ನಿವೇಶದಲ್ಲಿ ಹಾಸ್ಯ ಹರಿಸಲು ಮುಂದಾಗಿದ್ದುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದೆವು. ಇಂತಹ ಒಳ್ಳೆ ಕಾರ್ಯಕ್ರಮವನ್ನು ಸವಿಯಲು ಗಂಡಿಗೆ ಹಾಗೂ ಗಂಡಿನ ಕಡೆಯವರಿಗೆ ಅದೃಷ್ಟವಿಲ್ಲವೆಂದು ಬೇಲೂರು ಹೇಳಿದಾಗ ಚಪ್ಪಾಳೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಮದುವೆನಿಂತಿದ್ದಕ್ಕೆ ಕಾರಣವೇನೇ ಇರಲಿ, ಅನಿರೀಕ್ಷಿತ ಘಟನೆಗಳು ನಡೆಯುತ್ತೆ ಆದರೆ ಅದನ್ನು ಮೆಟ್ಟಿ ನಿಲ್ಲಲು ಹಾಸ್ಯ ಸಹಾಯಮಾಡುತ್ತೆ ಎನ್ನುವ ಸತ್ಯದ ಅರಿವಾಯಿತು ಅಂದು ನಮಗೆಲ್ಲ.



# ಒಂದು ಚುಕ್ಕಿಯ ಸುತ್ತ

**ಎನ್. ರಾಮನಾಥ್**

● **ಇಷ್ಟೇ** ಸಾರ್ ನಾನು ಟ್ವೀಟ್ ಮಾಡಿದ್ದು. ಶುರುವಾಯ್ತು ಕಾಮೆಂಟ್‌ಗಳ ಮಹಾಪೂರ.

"ವಾಹ್! ಸೂಪರ್. 'ಅಣ್ಣಾ ನಿನ್ನ ಸೋದರಿಯನ್ನ ಮರೆಯದಿರೂ ಎಂದೆಂದು' ಎಂಬ ಗೀತೆ ನೆನಪಾಗುತ್ತಿದೆ. ಆ ಚಿತ್ರದಲ್ಲೂ ಅಣ್ಣ ತಂಗಿಯ ಕುಂಕುಮ ಸೌಭಾಗ್ಯಕ್ಕೆಂದು ಬಹಳವೇ ಶ್ರಮಿಸುತ್ತಾನೆ. ಈ ಟ್ವೀಟ್‌ನಲ್ಲಿ ಕುಂಕುಮವನ್ನು ಯುಗಾದಿಯ ಸಮಯದಲ್ಲಿ ಮಂಡಿಸಿರುವವರು ಯಾರೋ ಸನಾತನ ಧರ್ಮದ ಹರಿಕಾರರೇ ಇರಬೇಕು. ಅವರಿಗೆ ನನ್ನ ದೀರ್ಘದಂಡ ನಮಸ್ಕಾರ" ಎಂದಿತು ಸಂಸ್ಕೃತಿ ಸಿಸ್ಟರ್ಸ್ ಗಿಲ್ಡ್‌ನ ಟ್ವೀಟ್.

**ಚುಕ್ಕಿ ಯಾರಿಡಬೇಕು ಎಲ್ಲಿಡಬೇಕೆನ್ನುವುದೇ ಸಮಸ್ಯೆ**

"ಮೊದಲಿನಿಂದಲೂ ಇವನು ಬಹುಸಂಖ್ಯಾತರ ಕಡೆಯವನು ಅಂತ ನನಗೆ ಗೊತ್ತಿತ್ತು. ತನ್ನ ಧರ್ಮದ ಸಂಕೇತವಾದ ಕುಂಕುಮದ ಬೊಟ್ಟನ್ನ ಇಲ್ಲಿ ಪೋಸ್ಟ್ ಮಾಡಿರೋದ್ರಿಂದ ಇವನು ಕಮಲಿನಿಯ ಕಡೆಯವನೇ. ಈ ಚುಕ್ಕೆಯನ್ನು ಕಂಡರೆ ಅದೇಕೋ ನನಗೆ ನಮಸ್ತೇ ಸದಾ ವತ್ಸಲೆ ನೆನಪಾಗುತ್ತಿದೆ. ಕಮಲಿನಿಯ ಬಾಡಿ ಗಾರ್ಡ್ ಆದ ಬಿದುರುಕೋಲಣ್ಣನ ಸಂಘದ ಕೈವಾಡ ನನಗೆ ಗೋಚರವಾಗುತ್ತಿದೆ. ಕಮಲಿನಿಗೆ ಧಿಕ್ಕಾರ, ಬಿದಿರುಕೋಲಣ್ಣನಗೆ  ಧಿಕ್ಕಾರ" ಎಂದಿತು ಗಫೂರ್ ಹ್ಯಾರಿಸನ್‌ನ ಟ್ವೀಟ್.

"ಧಿಕ್ಕಾರವಿರಲಿ. ಆಧುನಿಕ ಲೋಕದಲ್ಲಿ ಹೆಣ್ಣನ್ನು ದಾಸ್ಯದ ಸಂಕೋಲೆಯಲ್ಲಿ ಬಂಧಿಸಲು ಬಳಸುವಂತಹ ಈ ಕುಂಕುಮದ ಸಂಕೇತವಾದ ಚುಕ್ಕಿಯನ್ನು ಇಟ್ಟವರು ಖಂಡಿತವಾಗಿ ಸ್ತ್ರೀಶೋಷಕರೇ ಆಗಿರುತ್ತಾರೆ. ಇಂತಹವರ ಮನೆಯ ಮುಂದೆ ಧರಣಿ ಕೂರುವುದರ ಮೂಲಕ ನಮ್ಮ ಸ್ತ್ರೀಶಕ್ತಿ ಏನೆಂದು ತೋರಿಸಿಯೇಬಿಡುತ್ತೇವೆ" ಎಂದು ಗುಡುಗಿತು ಲಯನೆಸ್ ದುರ್ಗಾಂಬೆಯ ಟ್ವೀಟ್.

"ಈತನನ್ನು ಇಷ್ಟಕ್ಕೇ ಬಿಡಬಾರದು. ಇಂದಿನ ಬಿಂದುವೇ ನಾಳೆಯ ರೇಖೆ. ಅಷ್ಟು ಸುಂದರವಾದ ಬಿಳಿಯ ಹಾಳೆಯನ್ನು ಈ ಚುಕ್ಕಿ ಇಡುವುದರ ಮೂಲಕ ಕೆಡಿಸಲು ಇವನಿಗೆ ಮನಸ್ಸಾದರೂ ಹೇಗೆ ಬಂದಿತು? ಇದು ಬಿಳಿ ಹಾಳೆಯ ಮೇಲೆ ನಡೆದ ಅತ್ಯಾಚಾರ, ಮಾನಭಂಗ, ದಬ್ಬಾಳಿಕೆ, ಶೋಷಣೆ, ಅಸಹಿಷ್ಣುತೆ" ಎಂದು ಟ್ವೀಟಿಸಿತು ಅಸಹಿಷ್ಣುತೆ ಬ್ರಿಗೇಡ್.

"ಶುದ್ಧ ದಡ್ಡರು. ಇದು ಕುಂಕುಮದ ಸಂಕೇತವಲ್ಲ, ಏಕೆಂದರೆ ಇದರ ಬಣ್ಣ ಕಪ್ಪು. ಇದು ಮೊದಲಿನಿಂದಲೂ ಕಪ್ಪುಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಪುರಾತನ ಪಕ್ಷದ ಕೈವಾಡವೇ ಇರಬೇಕು. ಪುರಾತನ ಪಕ್ಷ ಇದ್ದಲ್ಲಿ ಕಪ್ಪುಹಣ, ಕಾಳಸಂತೆ, ಕರಾಳ ದಿನಗಳು ಎಲ್ಲವೂ ಇರುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ಪುರಾತನ ಪಕ್ಷಕ್ಕೆ ಧಿಕ್ಕಾರ. ಅದರ ಹಸ್ತ ಅಸ್ತವಾಗಲಿ" ಎಂದು ಅರಚಿದ ಸಾರ್ವಜನಿಕ ವಾಹಿನಿಯ ಟ್ರಬಲ್ ಮಾಂಗರ್ ಟಿಂಗಣ್ಣ.






“ಇದು ಯಾರೋ ಶಿವರಾಜಕುಮಾರ್ ಅಭಿಮಾನಿಯ ಕೆಲಸವೇ ಆಗಿದೆ. ಯಾರಿಟ್ಟರೀ ಚುಕ್ಕೀ... ಯಾಕಿಟ್ಟರೀ ಚುಕ್ಕೀ... ಎಂಬ ಹಾಡಿನ ಗಾಢವಾದ ಪ್ರಭಾವ ಇವರ ಮೇಲೆ ಆಗಿರುವುದೇ ಇದಕ್ಕೆ ಸಾಕ್ಷಿ. ಸಿವಣ್ಣಾಗೇ ಜೈ, ಅಣ್ಣಾವ್ರೂಗೇ ಜೈ” ಎಂದಿತೊಂದು ಹನ್ನಾವ್ರ ಶಂಕದ ಟ್ವೀಟ್.

“ಐ ಆಮ್ ಸೋ ಸಾರಿ. ಇದು ಕನ್ನಡ ಚಲನಚಿತ್ರ ಪ್ರೇಮಿ ಇಟ್ಟ ಚುಕ್ಕಿಯಲ್ಲ. ಇದು ಮೆಹಮೂದ್ ಅಭಿಮಾನಿಯದೇ ಕೆಲಸ. ಪಡೋಸನ್ ಚಿತ್ರದಲ್ಲಿ ಮೆಹಮೂದ್ ಪ್ರೇಮಿಸುವ ಹೀರೋಯಿನ್ ಹೆಸರು ಬಿಂದು. ಬಿಂದು ಎಂದರೆ ಪಾಯಿಂಟ್. ಪಾಯಿಂಟ್ ಎಂದರೆ ಚುಕ್ಕಿ. ಇದು ಆ ಬ್ಯೂಟಿಫುಲ್ ಹೀರೋಯಿನ್‌ನ ಸಂಕೇತ. ಮೇರೆ ಸಾಮನೆ ವಾಲೇ ಕಿಟಕಿ ಮೆ ಏಕ್ ಚಾಂದ್ ಕಿ ಟುಕಡಾ ರೆಹತಾ ಹೈ...” ಎಂದಿತೊಂದು ಪುರಾನಿ ಫಿಲ್ಮಿ ದುನಿಯಾದ ಟ್ವೀಟ್.

“ಈ ಚುಕ್ಕಿ ಇಲ್ಲಿ ಬರಬೇಕಾದರೆ ಇದಕ್ಕೊಂದು ಹಿನ್ನೆಲೆ ಇದ್ದೇ ಇರುತ್ತದೆ. ಎಲ್ಲಿಯೋ ಬರೆದಿರುವ ವಾಕ್ಯವೊಂದರ ಫುಲ್‌ಸ್ಟಾಪ್ ಇದು ಆಗಿರುತ್ತದೆ ಎಂಬುದು ನಿಃಸಂಶಯ. ಈ ವಿಷಯವನ್ನು ಗಮನಿಸಿದರೆ ಇದರಲ್ಲಿ ನನಗೆ ರಾಜಕೀಯದ ವಾಸನೆ ಗೋಚರವಾಗುತ್ತಿದೆ. ಎಲ್ಲಿಯೋ ರಾಜಕಾರಣಕ್ಕಿಳಿದು, ಯಾವುದೋ ಪಕ್ಷ ಕಟ್ಟಿ, ಅದನ್ನು ಮುಗಿಸಿ, ಇನ್ನಾವುದೋ ಪಕ್ಷದಲ್ಲಿ ನಿಂತವನಂತೆ ಈ ಚುಕ್ಕಿ ನನಗೆ ಕಾಣಿಸುತ್ತಿದೆ. ಈ ಚುಕ್ಕಿ ವಾಕ್ಯವನ್ನು ಬಿಟ್ಟು ಇಲ್ಲಿ ಬಂದಿರಬೇಕೆಂದರೆ ಇದರ ಹಿಂದೆ ಏನೋ ಕುಟಿಲತೆ ಇರಲೇಬೇಕು” ಟ್ವೀಟಿಸಿದ ಸುದ್ದಿವಾಹಿನಿಗಳ ಪರ್ಮನೆಂಟ್ ಪ್ಯಾನಲ್ ಡಿಸ್ಕಷನ್ ಎಕ್ಸ್‌ಪರ್ಟ್.



“ಗಮನಿಸಿ ವೀಕ್ಷಕರೆ, ಈ ಚುಕ್ಕಿಯ ಬಣ್ಣ ಕಪ್ಪು. ಕಪ್ಪುಚುಕ್ಕೆ ಕಳಂಕದ ಸಂಕೇತ. ಟ್ವಿಟರ್ ಒಂದು ಅತ್ಯುತ್ತಮವಾದ ಸಾಮಾಜಿಕ ಜಾಲತಾಣ. ಅದಕ್ಕೊಂದು ಕಪ್ಪುಚುಕ್ಕೆ ಇಡುವುದರ ಮೂಲಕ ಅದನ್ನು ಅಗೌರವಿಸುವ ಇವರ ವಿರುದ್ಧ ಹೋರಾಡಲು ಇಡೀ ಟ್ವಿಟರಾಟಿ ಒಂದಾಗಬೇಕೆಂದು ಕೋರಿಕೊಳ್ಳುತ್ತೇನೆ” ಎಂದಿತು ಮೈಸೂರಿನ ಬು.ಜೀ. ದೇವಯ್ಯನ ಟ್ವೀಟ್.

"ಡೇಯ್ ತೇವಯ್ಯ, ಸರ್ರಿಯಾ ಪಾರುಡಾ... ನಲ್ಲ ಇರಕ್ಕರ ಪಸಂಗಳ ಮೊಹದ ಮ್ಯಾಲೆ ಸುಕ್ಕೆ ವೆಕ್ಕಿರಾಂಗ. ಪುರಚ್ಚಿ ತಲೈವಿ ಚಯಲಲಿದಾ ಮೊಹಂ ಮೇಲೆ ಒರು ಸುಕ್ಕಿ ಇರಂದದಿ. ಎವಳ ನಲ್ಲ ಇರಿಂದಾಳು ತೆರಿಮಾ... ಚುಮ್ಮ ಒಣ್ಣುಮೇ ತೆರಿಯಾದೆ ಪೇಸಾದೆ. ಡ್ವಿಡ್ಡರು ನಲ್ಲ ಇರಕ್ಕಿದಿ. ಅದಕು ತೃಷ್ಟಿ ಆವಾದ ಮಾದರಿ ಇರುಣುಮನ್ನಾ ಸುಕ್ಕಿ ವೆಕ್ಕಿಣುಮುಡಾ. ನೆಕ್ಸ್ಟ್ ಟೈಮ್ ಗೊಂಜ ಏಸ್ನೆ ಪಣ್ಣಿ ಡ್ವೀಡ್ ಪಣ್ಣೊಂಗೋ" ಎಂದು ಋ.ಜೀ.ಯ ಟ್ವೀಟಿಗೆ ಉತ್ತರಿಸಿತೊಂದು ಖನ್ನಟ ಸಗ್ತಿ ಸಂಕದ ಟ್ವೀಟ್.

"ಇದು ಪತ್ರಕರ್ತೆಯ ಹಂತಕರ ಕೆಲಸವೇ ಇರಬೇಕು. ಚಿಕ್ಕದಾದ ಟಾರ್ಗೆಟ್‌ಗೆ ಗುಂಡು ಹಾರಿಸಲು ಪ್ರಾಕ್ಟೀಸ್ ಮಾಡಲೆಂದು ಈ ಚುಕ್ಕಿಯನ್ನು ಒಂದು ಗೋಡೆಯ ಮೇಲೆ ಇಟ್ಟು, ಚುಕ್ಕಿಗೆ ಗುಂಡು ಹೊಡೆಯುವ ಪ್ರಾಕ್ಟೀಸ್ ಮಾಡಿರಬೇಕು. ಗೋಡೆಯ ಮೇಲಿನ ಚುಕ್ಕಿಯ ಫೋಟೋ ತೆಗೆದು ಈ ಪಾಪಿ ಇಲ್ಲಿ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರಬೇಕು. ಅಲ್ಲಿಗೆ ಪತ್ರಕರ್ತೆಯ ಹಂತಕರು ಈ ಚುಕ್ಕಿ ಇಟ್ಟವನಿಗೆ ತಿಳಿದಿರುವ ಸಾಧ್ಯತೆ ಇದೆಯೆಂದಾಯಿತು. ಬಂಧಿಸಿರಿ ಇವನನ್ನು" ಎಂದಿತು ಅನುಮಾನ್ ಅಸೋಸಿಯೇಟ್ಸ್‌ನ ಟ್ವೀಟ್.

ಒಂದು ಚುಕ್ಕಿಯಿಂದ ಇಷ್ಟೆಲ್ಲ ರಗಳೆಯಾದುದನ್ನು ಕಂಡು ಚುಕ್ಕಿಯನ್ನು ಅಳಿಸಿಹಾಕಿದೆ.

"ಸನಾತನ ಸಂಸ್ಕೃತಿಯ ಸಂಕೇತವಾದ ಕುಂಕುಮದ ಬೊಟ್ಟನ್ನು ಅಳಿಸುವುದರ ಮೂಲಕ ನಮ್ಮ ಸಂಸ್ಕೃತಿಗೆ ಅವಮಾನ ಮಾಡುತ್ತಿರುವ ಈ ಟ್ವೀಟ್ ಪೀಡೆಯ ವಿರುದ್ಧ ಟೌನ್‌ಹಾಲ್‌ನ ಮುಂದೆ ಧರಣಿ ಹೂಡುತ್ತೇವೆ" ಎಂದಿತು ವಾಟವಿಲ್ಲದ ನಾಗಪ್ಪನ ಪಕ್ಷದ ಟ್ವೀಟ್.

"ನೆನ್ನೆಯಿದ್ದ ಚುಕ್ಕಿ ಇಂದಿಲ್ಲವೆಂದಮೇಲೆ ಈತ ಕೊಲೆಯಲ್ಲಿ ಭಾಗಿಯಾಗಿರಲೇಬೇಕು. ಚುಕ್ಕಿ ಅಳಿಸಿದುದು ಸಪ್ರೆಷನ್ ಆಫ್ ಫಾಕ್ಟ್" ಎಂದಿತು ಅನುಮಾನ್ ಅಸೋಸಿಯೇಟ್ಸ್‌ನ ಲೇಟೆಸ್ಟ್ ಟ್ವೀಟ್.

ನಾನು ಟ್ವಿಟರ್ ಅಕೌಂಟ್ ಕ್ಲೋಸ್ ಮಾಡಿ ಹೊರಬಂದೆ.

## ಹಾಗೇ ಹೇಳುವೆ

ಆರು ಮಂದಿ ನಿವೃತ್ತರು ಇಸ್ಪೀಟು ಆಡುತ್ತಿದ್ದರು. ಒಬ್ಬ ರೂ. 10,000 ಬಾಜಿ ಕಟ್ಟಿ ಕಳೆದುಕೊಂಡ. ತಕ್ಷಣವೇ ಹೃದಯಾಘಾತವಾಗಿ ಸತ್ತ. ಅವನಿಗೆ ಗೌರವ ಸೂಚಿಸಲು ಉಳಿದ ಐವರು ನಿಂತುಕೊಂಡೇ ಆಡತೊಡಗಿದರು.

ಹೆಂಡತಿಗೆ ಯಾರು, ಹೇಗೆ ವಿಷಯ ತಿಳಿಸುವುದು ಎಂಬುದರ ಬಗ್ಗೆ ಚರ್ಚೆ ನಡೆಯಿತು. ಒಬ್ಬನಿಗೆ ಅದರ ಹೊಣೆ ವಹಿಸಿ ತುಂಬಾ ಸೂಕ್ಷ್ಮವಾಗಿ ವಿಷಯ ತಿಳಿಸಲು ಅವನಿಗೆ ಹೇಳಲಾಯಿತು.

'ಡೋಂಟ್ ವರಿ, ನಾನು ಅದನ್ನು ನಿಭಾಯಿಸುವೆ' ಎಂದವನು ಆಶ್ವಾಸನೆ ನೀಡಿದ.

ತೀರಿಕೊಂಡ ಗೆಳೆಯನ ಮನೆಗೆ ಹೋಗಿ ಅವನ ಹೆಂಡತಿಗೆ 'ನಿನ್ನ ಗಂಡ ಇಸ್ಪೀಟಿನಲ್ಲಿ ಈಗಷ್ಟೇ 50,000 ಕಳೆದುಕೊಂಡ, ಮನೆಗೆ ಬರಲು ಹೆದರುತ್ತಿದ್ದಾನೆ" ಎಂದ.

'ಅವನಿಗೆ ಅಲ್ಲೇ ಸಾಯಲು ಹೇಳು' ಎಂದು ಹೆಂಡತಿ ಸಿಡುಕಿದಳು.

'ಖಂಡಿತ. ಹಾಗೇ ಹೇಳುವೆ' ಎಂದ ಅಲ್ಲಿಂದ ಹೊರಟ.



# ಪೂರ್ವಜನ್ಮದ ಸುಕೃತ. . .

**ಎಚ್. ಗೋಪಾಲಕೃಷ್ಣ**

ನನಗೆ ಒಂದು ಆಸೆ, ಅದನ್ನು ನಿಮಗೆ ಹೇಗೆ ಹೇಳುವುದು ಅಂತ ಒಂದು ರೀತಿಯ ಮುಜುಗರ ನನಗೆ. ಯಾರಾದರೂ ಈ ತರಹದ ಆಸೆ ಪಡುವರೋ ಇಲ್ಲವೋ ನನಗೆ ಖಂಡಿತ ಗೊತ್ತಿಲ್ಲ. ಆದರೆ ಇದನ್ನ ಯಾರ ಬಳಿಯಾದರೂ ಹೇಳಿಕೊಂಡರೆ ಅವರು ನಾನು ಹುಚ್ಚ ಅಂತ ಅಂದುಕೊಳ್ಳಬಹುದು ಎನ್ನುವ ಆತಂಕ ನನ್ನನ್ನು ಕಾಡುತ್ತಲೇ ಬಂದಿದೆ. ಈ ಕಾರಣದಿಂದ ನಾನು ಮನಸು ಬಿಚ್ಚಿಯಾರ ಬಳಿಯೂ ಇದರ ಬಗ್ಗೆ ಬಾಯಿ ಬಿಟ್ಟಿಲ್ಲ.

> **ಜೀವನ ಎಂದರೆ ಆಸೆಗಳ ಮಹಾಪೂರ ಅಲ್ಲವೇ**

ಚಿಕ್ಕವನಾಗಿದ್ದಾಗಲಿಂದಲೂ ನನ್ನ ಜೀವನದ ಮಹದಾಸೆ ಒಂದು ಇದೆ. ಅದು ಏನಪ್ಪಾ ಅಂದರೆ ನಿರಾಳವಾಗಿ, ನಿರಾತಂಕವಾಗಿ ಅರಸನ ಅಂಕೆ ಆಳಿನ ಕಾಟವಿಲ್ಲದೇ ವರ್ಷಾನುಗಟ್ಟಲೆ ಮೈಮರೆತು ನಿದ್ದೆ ಮಾಡುವುದು. ಇದಕ್ಕೆ ನನಗೆ ಏನು ಸ್ಫೂರ್ತಿ, ಯಾಕೆ ಈ ರೀತಿಯ ಯೋಚನೆ ನನ್ನ ತಲೆಯಲ್ಲಿ ಬಂದಿತು ಅಂತಲೂ ನನಗೆ ತಿಳೀದು. ನನ್ನ ಈ ಆಸೆ ತೀರಿಸಿಕೊಳ್ಳಲು ನನ್ನ ಮನಸ್ಸು ಅನೇಕ ರೀತಿಯ ಹಾದಿಗಳನ್ನು ಹುಡುಕುತ್ತಲೇ ಇದೆ. ಆದರೂ ಈ ತನಿಕ ನನಗೆ ಯಶಸ್ಸು ಅನ್ನುವುದು ಮರೀಚಿಕೆಯಾಗಿಯೇ ಕುಳಿತಿದೆ. ನಾನು ಈ ಒಂದು ಪುಟ್ಟ ಆಸೆ ತೀರಿಸಿಕೊಳ್ಳಲು ಪಟ್ಟಿರುವ ಹರಸಾಹಸದ ಕೆಲವು ಸಂಗತಿಗಳನ್ನು ನಿಮಗೆ ಹೇಳಲೇಬೇಕು.

ಮಿಡಲ್ ಶಾಲೆಯಲ್ಲಿದ್ದಾಗ ಲೆಕ್ಕದ ಪುಸ್ತಕ ಕೈಲಿ ಹಿಡಿದಕೂಡಲೇ ನನಗೆ ಆಕಳಿಕೆ ಶುರುವಾಗಿ ಬಿಡೋದು. ಇದು ಪೂರ್ವಕಾಲದ ಆಸೆ ಅನ್ನೋದು ಆಗ ಗೊತ್ತಾಗುತ್ತಿರಲಿಲ್ಲ. ಯಾಕೆ ಅಂದರೆ ಅದು ಗೊತ್ತಾಗುವ ವಯಸ್ಸಲ್ಲ. ಹೇಗೋ ನಿದ್ದೆ ತಡೆಯಲು ಯತ್ನಿಸಿ ಅಪ್ಪನ ಕೈಲಿ ನಾಲ್ಕು ತಿಂದು ಅಣ್ಣಂದಿರ ಕೈಲಿ ತಲೆ ಮೇಲೆ ಮೊಟಕಿಸಿಕೊಂಡು ಅವರು ಬಿದ್ಕೊಳ್ಳೋ ಅಂತ ಹೇಳುವ ತನಕ ಎದ್ದಿರುವ ಪ್ರಯತ್ನ ಮಾಡುತ್ತಿದ್ದೆ.

ಮಿಡಲ್ ಮುಗಿಸಿ ಹೈಸ್ಕೂಲಿಗೆ ಬಂದನಾ? ಅಲ್ಲೂಇದೇ ಪರಿಪಾಠ ಮುಂದುವರೀತು. ಈಗ ಹೇಗಪ್ಪಾ ಅಂದರೆ ಲೆಕ್ಕದ ಜತೆಗೆ ಸೈನ್ಸೂ ಸೇರಿಕೊಂಡು ಬಿಟ್ಟಿತ್ತು. ಇವೆರೆಡು ಪಾಠ ಕೇಳಬೇಕಾದರೆ ನನ್ನಕಣ್ಣು ಮುಚ್ಚಿಕೊಂಡು ಬಾಯಿ ತೆರೆದು ಸ್ವರ್ಗಸುಖ ಅನುಭವಿಸುತ್ತಾ ಇರುತ್ತಿದ್ದೆನಂತೆ. ಹೀಗೆ ನಾನು ಸುಖ ಅನುಭವಿಸಬೇಕಾದರೆ, ಮೇಷ್ಟ್ರು ನಾಲ್ಕು ಬಾರಿಸಿ ಎಬ್ಬಿಸೋರು ಮತ್ತು ನಾನು ಎಸ್ಸೆಲ್ಸಿ ಪಾಸಾಗೋಲ್ಲ ಅಂತ ಅವರೇ ತೀರ್ಮಾನಿಸಿ ಬಿಟ್ಟಿದ್ದರು. ಅರವತ್ತು ವರ್ಷದ ನಂತರ ಮೊನ್ನೆ ನನಗೆ ಪಾಠ ಹೇಳಿದ್ದ ಮೇಡಂ ಒಬ್ಬರು ಸಿಕ್ಕಿದ್ದರು. ನಾನು ಎಸ್ಸೆಲ್ಸಿ ಪಾಸಾಗೋಲ್ಲ ಅಂತ ಮೇಷ್ಟ್ರುಗಳು ಬೆಟ್ಟಿಂಗ್ ಕಟ್ಟಿದ್ದರಂತೆ. ಅವರಲ್ಲೇ ಒಬ್ಬರು ಕಿಲಾಡಿ ಮೇಷ್ಟ್ರು ನಾನು ಪಾಸಾಗ್ತೀನಿ ಅಂತ ಬೆಟಿಂಗ್ ಮಾಡಿ ಸಖತ್ ದುಡ್ಡು ಮಾಡಿಕೊಂಡರಂತೆ, ನಾನು ಎಸ್ಸೆಲ್ಸಿ ಪಾಸಾದಾಗ. ಅದು ಮುಗಿಸಿ ಪೀಯೂಷಿಗೆ ಬಂದೆನಾ? ಅಲ್ಲಿ ಕನ್ನಡ ಇಂಗ್ಲಿಷು ಬಿಟ್ಟು ಯಾವ ಕ್ಲಾಸೇ ಆಗಲಿ ನನಗೆ ನಿದ್ದೆಯೋನಿದ್ದೆ. ಅಲ್ಲಿನ ಪಿನ್ಸಿಪಾಲರು ಬೆಳಿಗ್ಗೆ ಎದ್ದು ಮುದ್ದೆ ತಿಂದು ಬರ್ತೀಯೇನೋ ಅಂತ ಕ್ಲಾಸಿನ ಎಲ್ಲಾರ ಮುಂದೆ ಕೇಳೋರು.



ಸಾರ್ ಮುದ್ದೆ ನಮ್ಮ ಕಡೆ ಇಲ್ಲ ನಾವು ಬರೀ ಅನ್ನ ಸಾರು ಅಂತ ಹೇಳುತ್ತಿದ್ದೆ. ಇಡೀಕ್ಲಾಸು ನಗುತ್ತಿತ್ತು. ಈ ವೇಳೇಗಾಗಲೇ ನನಗೆ ಹಲವಾರು ಅಡ್ಡ ಹೆಸರುಗಳು ಅಮರಿದ್ದವು. ಗೂಬೆ ಅಂತ ಪ್ರೈಮರಿ ಶಾಲೆಯಲ್ಲಿ, ಕಾಡುಬೆಕ್ಕು ಅಂತ ಮಿಡಲ್ ಸ್ಕೂಲಿನಲ್ಲಿ, ನಿಂತ ಬಕ ಅಂತ ಹೈಸ್ಕೂಲಿನಲ್ಲಿ, ಪೀಯೂಷಿನಲ್ಲಿ ರಾವಣನ ತಮ್ಮ ಅಂತ . . . . . ಹೀಗೆ.

ಬೀಯೆಸ್ಸಿಗೆ ಬಂದೆನಾ ಅಲ್ಲೂ ಇದೇ ಗೋಳೇ. ಈಗ ಇಂಪ್ರೋಮೆಂಟು ಏನಪ್ಪಾ ಅಂದರೆ ಎಲ್ಲಾಕ್ಲಾಸಲ್ಲೂ ನಿದ್ದೆ ಮತ್ತು ಮೇಷ್ಟ್ರುಗಳು ನಾನು ಒಂದು ನಿರುಪದ್ರವಿ ಅಂತ ತೀರ್ಮಾನಿಸಿ ಪಾಪ ಏನೇನು ಮಾರ್ಕ್ಸು ಕೊಡಬೇಕೋ ಅದನ್ನ ಕೊಟ್ಟು ಬಿಡೋರು. ಅದು ಹೇಗೋ ಬೀಯೆಸ್ಸಿ ಮುಗಿಸಿಬಿಟ್ಟೆ. ಆಮೇಲೆ ಫ್ಯಾಕ್ಟರೀಲಿ ಕೆಲಸಕ್ಕೆ ಅಂತ ಸೇರಿದೆನಾ? ಅಲ್ಲೋ ಬೆಳಿಗ್ಗೆ ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗಬೇಕು ಒಂದು ಷಿಫ್ಟಿನಲ್ಲಿ, ಇನ್ನೊಂದರಲ್ಲಿ ಸರಿರಾತ್ರಿ ದೆವ್ವಗಳು



ಓಡಾಡೋ ಹೊತ್ತಿಗೆ ಮನೆ ಸೇರಬೇಕು. ಫ್ಯಾಕ್ಟರಿ ಬಸ್ಸಿನಲ್ಲಿ ಕೂಡುತ್ತಿದ್ದ ಹಾಗೇ ನಿದ್ದೆ ಆವರಿಸೋದು, ಫ್ಯಾಕ್ಟರಿ ಬಂದಾಗ ಯಾರೋ ಇಳಿಸೋರು. ಮನೆ ಬಂದಾಗ ಮತ್ತೆ ಯಾರಾದರೂ ಎಬ್ಬಿಸಿ ಇಳಿಸುತ್ತಾ ಇದ್ದರು. ಬೆನ್ನಿನ ಹಿಂದೆ ಒಂದು ಗಂಟಿದೆ ನಿನಗೆ, ಅದು ಟಚ್ ಆದರೆ ಸಾಕು ನಿದ್ದೆ ಬರುತ್ತೆ ಅಂತ ಅದ್ಯಾರೋ ತಮಾಷೆ ಮಾಡೋರು. ನಿದ್ದೆ ತಡೆಯಲು ಆಗದೆ ಎಷ್ಟೋ ಸಲ ಬಸ್ಸಿಂದ ಇಳಿದು ಫುಟ್ ಪಾಥ್ ಮೇಲೆ ಮಲಗಿಬಿಡ್ತಾ ಇದ್ದೆ. ಪಾಪ ನಮ್ಮ ಅಪ್ಪನೋ ಅಣ್ಣಂದಿರೋ ಬಸ್ ಸ್ಟಾಪಿಗೆ ಬಂದು ಕರೆದುಕೊಂಡು ಹೋಗ್ತಾ ಇದ್ದರು. ಆಗ ಫ್ಯಾಕ್ಟರೀಲಿ ಆರು ದಿವಸ ಕೆಲಸ ಮತ್ತುಒಂದು ದಿವಸ ರಜಾ. ಆರು ದಿವಸ ರಜಾ ಒಂದು ದಿವಸ ಕೆಲಸ ಇರೋ ಹಂಗೆ ಮಾಡಿಸ್ರೋ ಅಂತ ಟ್ರೇಡ್ ಯೂನಿಯನ್ ಅವರ ಕಾಲಿಗೆ ನಾನು ಎಷ್ಟು ಸಲ ಬಿದ್ದಿದೀನೋ ಲೆಕ್ಕ ಇಲ್ಲ. ಇಲ್ಲಿ ನನಗೆ ಅಡ್ಡಹೆಸರು ಲೆಕ್ಕ ಇಲ್ಲದೇ ಇರೋ ಅಷ್ಟು ಸಿಗ್ತು. ಫ್ಯಾಕ್ಟರಿಲಿ ಕೆಲಸ ಮಾಡೋಅವರಿಗೆ ಶಬ್ದ ಸಂಪತ್ತು ಹೆಚ್ಚಂತೆ. ಅದರ ಫಲ ಅಂದರೆ ಒಂದೊಂದು ಗಂಡಸೂ ಒಂದೊಂದು ಹೆಂಗಸೂ ನನಗೆ ನಿದ್ದೆ ಮೂಲದ ಅಡ್ಡಹೆಸರು ಇಟ್ಟಿದ್ದರು. ಇದೂ ನನಗೆ ಗೊತ್ತಾಗಿದ್ದು ನಾನು ರಿಟೈರಾದಾಗ. ನನಗೆ ಒಂದು ಫೇರ್ವೆಲ್ ಅಂತ ಮಡಗಿ ಅಲ್ಲಿ ನನ್ನ ಗುಣಗಾನ ಮಾಡಬೇಕಾದರೆ ಇಡೀಫ್ಯಾಕ್ಟರಿ ಜನ ಭಾಷಣ ಬಿಟ್ರು. ಇಡೀ ಒಂದು ಷಿಫ್ಟು ನನ್ನ ಗುಣಗಾನ ನಡೀತು. ಇಡೀ ಫ್ಯಾಕ್ಟರಿ ಅವರು ಭಾಷಣ ಬಿಟ್ಟಿದ್ದು ಒಂದು ರೆಕಾರ್ಡಂತೆ, ಅದು ಬಿಡಿ. ಒಬ್ಬ



ಸಾಮಾನ್ಯರಲ್ಲಿ ಸಾಮಾನ್ಯ ಮನುಸ ಇಷ್ಟೊಂದು ಅಡ್ಡಹೆಸರು ಇಡಿಸಿಕೊಂಡ ಅನ್ನುವುದು ನನಗೆ ಒಂದುರೀತಿಯಲ್ಲಿ ಹೆಮ್ಮೆತಂದ ವಿಷಯ .

ಇನ್ನು ನನ್ನ ಮದುವೆ ಆದ ಮೇಲೆ, ನನಗೆ ಮಕ್ಕಳು ಮರಿ ಆದ ಮೇಲೆ ಈ ನಿದ್ದೆ ಅವಾಂತರ ಕುರಿತು ನಿಮಗೆ ಹೇಳಬೇಕು ಅಂದರೆ ಅದೇ ಒಂದು ಮಹಾಭಾರತ ಹಾಗೂ ರಾಮಾಯಣ. ಅದನ್ನ ಇನ್ಯಾವಾಗಲಾದರೂ  ನಿಮಗೆ ಬಿಡುವು ಸಿಕ್ಕಿದಾಗ ಹೇಳ್ತೀನಿ. ಮದುವೆ ನಂತರ ಕೆಲವು ಸಂಗತಿ ನಿಮಗೆ ಹೇಳಲೇಬೇಕು. ತಾಳಿ ಕಟ್ಟೋ ವೇಳೆಯಲ್ಲಿ ನನಗೆ ಘಾಢವಾದ ನಿದ್ರೆಯಂತೆ. ಓಲಗದವನು ಕಿವಿ ಹತ್ತಿರ ಬಂದು  ಷಡ್ಜದಲ್ಲಿ ಊದಿದರೂ ನನ್ನ ಒಂದು ರೆಪ್ಪೆಕೂಡಾ ಅಲುಗಾಡಲಿಲ್ಲವಂತೆ. ನನ್ನ ಕೈಲಿ ತಾಳಿ ಮುಟ್ಟಿಸಿ ನನ್ನ ಹೆಂಡತಿ ತಂದೆ ಅವರೇ ತಾಳಿಕಟ್ಟಿದ ಶಾಸ್ತ್ರ ಮುಗಿಸಿದರು ಅಂತ ನೆಂಟರು ಹೇಳುವುದುಂಟು. ನನಗೆ ಇವರ ಮಾತಿನಲ್ಲಿ ನಂಬಿಕೆ ಇಲ್ಲ, ನನಗೆ ಮರೆವು ಜಾಸ್ತಿ ಅಂತ ಹೀಗೆ ಬುರುಡೆ ಬಿಡ್ತಾರೆ ಅನ್ನುವ ಪ್ರಬಲವಾದ ಅನಿಸಿಕೆ ನನ್ನದು.

ಮದುವೆ ನಂತರ ನನ್ನಾಕೆಗೆ ಅದೇನೇನೋ ನಿಕ್ ನೇಮುಗಳು ಅವರ ಬಂಧುಗಳಿಂದ ಉಡುಗೊರೆಯಾಗಿ ಬಂದವಂತೆ ಅದರಲ್ಲಿ ಒಂದು ನನಗೆ ತುಂಬಾ ಹಿಡಿಸಿದ್ದು ಅಂದರೆ ಕುಂಭಕರ್ಣನ ಮಡದಿ ಎನ್ನುವ ನಾಮಧೇಯ! ಅದರಲ್ಲೂ ಕೆಲವು ಗೆಳತಿಯರು ನನ್ನಾಕೆಗೆ ಹೇಳಿರುವ ಮಾತುಗಳನ್ನು ನಾನು ಅರೆನಿದ್ದೆಯಲ್ಲಿ ಕೇಳಿಸಿಕೊಂಡಿದ್ದೇನೆ. ನಿನ್ನ ಗಂಡನಂಥಹ ಕೋಟಿಗಂಡಂದಿರು ಇದ್ದರೂ ಸುಖವಾಗಿ ನಿಭಾಯಿಸಬಹುದು ಕಣೇ, ಅದು ನಿದ್ದೆ ಮಾಡ್ತಾ ಇರುತ್ತೆ, ನೀನು ಏನು ಶಾಪಿಂಗ್ ಮಾಡಿದರೂ ಅದು ಕೇಳುಲ್ಲ, ನಮ್ಮ ಪಾಡು ನೋಡು ಅಂಗಡೀಗೆ ಬಂದು ನಿಮಿಷಕ್ಕೆ ನೂರುಸಲ ಗಡಿಯಾರ ನೋಡುತ್ತೆ. . . . ನೀನು ಅದು ಯಾವ ಜನ್ಮದಲ್ಲಿ ಅದೆಷ್ಟು ಪುಣ್ಯ ಮಾಡಿದ್ದೆಯೋ.. ನಿನ್ನ ಜೀವನ ಅದೆಷ್ಟು ಸುಂದರವಾಗಿದೆ ಗೊತ್ತಾ . . ನಿನ್ನ ಪೂರ್ವಜನ್ಮದ ಸುಕೃತ. . . . ..ಹೀಗೆ!

ನಿದ್ದೆ ಜ್ಯಾಸ್ತಿ ಹೊಡೀತಾನೆ, ಇವನಿಗೇನಾದರೂ ಹುಟ್ಟುರೋಗ ಇರಬಹುದೇ ಅಂತ ಮೆಂಟಲ್ ಆಸ್ಪತ್ರೆಗೆ ನನ್ನನ್ನು ಒಮ್ಮೆ ಬಲವಂತ ಮಾಡಿ ಕರೆದುಕೊಂಡು ಹೋಗಿದ್ದರು, ಮದುವೆಯಾದಮೇಲೆ. ನನಗೆ ನಿದ್ದೆ ಬರದೇ ಇರೋ ಇಂಜೆಕ್ಷನ್  ಕೊಟ್ಟು, ಮತ್ತು ಬರೆಸಿ ಡಾಕ್ಟರು ಎರಡು ಗಂಟೆ ಪ್ರಶ್ನೆ ಕೇಳಿದ್ದರು. ಇದು ತದನಂತರ ನನಗೆ ಗೊತ್ತಾಗಿದ್ದು. ರಿಪ್ ವಾನ್ ವಿಂಕಲ್ ಗೊತ್ತಾ ಅಂತ ಒಂದು ಪ್ರಶ್ನೆ ಕೇಳಿದರಂತೆ. ನಾನು ಅದಕ್ಕೆ ಒಂದೂವರೆ ಘಂಟೆ ಉತ್ತರ ಕೊಟ್ಟೆನಂತೆ. ಆಮೇಲೆ ಡಾಕ್ಟರು ಹೋಗೀಮ್ಮ ಇದೇನೂ ಅಂತ ದೊಡ್ಡ ಸಮಸ್ಯೆ ಅಲ್ಲ, ಇದು ನಿಮಗೆ ದೇವರು ಕೊಟ್ಟ ವರ ಅಂತ ಹೇಳಿ ಕಳಿಸಿದ್ದರಂತೆ. ಇದೂ ಸಹ ನನಗೆ ಆಮೇಲೆ ತಿಳಿದುಬಂದಿದ್ದು.

ನನ್ನ ನಿಜವಾದ ಹೆಸರು ಸುಮಾರು ಜನರಿಗೆ ಗೊತ್ತೇ ಇಲ್ಲ. ಆದರೆ ನನ್ನ ಬಗ್ಗೆ ಎಲ್ಲರೂ ಹರಟುತ್ತಾರೆ. ಅದು ಹೇಗೆ ಅಂತೀರೋ ನಾನು ಕೆಲಸದ ತಾಣದಲ್ಲಿ, ಕ್ಯಾಂಟೀನ್‌ನಲ್ಲಿ, ನಾಟಕ ಪಾಟಕ ನೋಡುವಾಗ್ಗೆ ನಿದ್ದೆ ಮಾಡುತ್ತಿದ್ದ ಬಗೆ, ಮತ್ತು ಅವರುಗಳು ಇಟ್ಟ ಹೆಸರುಗಳು. ನಾಟಕ ಅಂದ ಕೂಡಲೇ ಒಂದು ನೆನಪಿಗೆ ಬರುತ್ತೆ. ಯಾವುದೋ ಪೌರಾಣಿಕ ನಾಟಕ, ನನ್ನೂ ಪಾತ್ರ ಮಾಡು ಅಂತ ಬೇಡಿಕೊಂಡರು. ಪಾಪ ಬೇಡಿಕೊಳ್ಳುತ್ವೆ ಅಂತ ಹೂಂ ಅಂದೆ. ನಾಟಕದಲ್ಲಿನ ಪಾತ್ರ ಸಿಂಹಾಸನದ ಮೇಲೆ ಕೂತು ಇಡೀ ನಾಟಕದ ಸಮಯ ಪೂರ್ತಿ ನಿದ್ದೇ ಮಾಡೋದಂತೆ. ನನ್ನಆಕ್ಟಿಂಗ್ ಗೆ ತೀರ್ಪುಗಾರರು ಬೆಚ್ಚಿದರಂತೆ ಮತ್ತು ನನಗೆ ಬೆಸ್ಟ್ಆಕ್ಟರ್ ಅವಾರ್ಡು ಬಂತು . . . . !



ನಿದ್ದೆ ಪುರಾಣ ಹೇಳುತ್ತಾ ಹೋದರೆ ನಾನು ಆದಿಶೇಷನಾಗುತ್ತೇನೆ ಮತ್ತು ಸಾವಿರ ನಾಲಗೆಗಳಿಂದ ಕಥೆಯ ಮೇಲೆ ಕಥೆ ಹೊಸೆದು ಹೇಳಬಲ್ಲೆ. ಇಷ್ಟಾದರೂ ನನ್ನ ಮೊದಲಿನ ಕೊರಗು ಹಾಗೇ ಉಳಿದಿದೆ. ಅದು ವರ್ಷಾನುಗಟ್ಟಲೆ ನಿದ್ದೆ ಮಾಡಬೇಕು ಎನ್ನುವ ಆಸೆ.

# ಹೀಗಾಗಬಾರದಾಗಿತ್ತು

**'ಗೌತಮ'**

ಶರೀರದ ಯಾವುದಾದರೂ ಒಂದು ಅಂಗಕ್ಕೆ ನೋವು ಬಂದಾಗ, ಉದಾಹರಣೆಗೆ ಹಲ್ಲು ನೋವು ಬಂದಾಗ 'ಯಾವ ನೋವನ್ನು ಬೇಕಾದರೂ ತಡಕೋಬಹುದು, ಈ ಹಲ್ಲು ನೋವನ್ನು ಮಾತ್ರ ತಡಕೋಳ್ಳೋಕಾಗಲ್ಲಪ್ಪ. ನಮ್ಮ ಶತ್ರುವಿಗೂ ಈ ನೋವು ಬರಬಾರದು' ಅನ್ನೋದು ಎಲ್ಲ ನೋವಿಗರೂ ಹೇಳುವ ಮಾತು.ಅಂದರೆ, ಈ ನೋವು ಅನ್ನೋದು ಎಲ್ಲ ಅಂಗಗಳಿಗೂ ಅನ್ವಯಿಸುತ್ತೆ ಅನ್ನೋದು ಗ್ಯಾರಂಟಿ ಅಂದ ಹಾಗಾಯಿತು. ಯಾಕೀ ಮಾತು ಹೇಳ್ತಿದ್ದೀನಿ ಅಂದರೇ, ಹತ್ತಿರ ಹತ್ತಿರ ಒಂದು ತಿಂಗಳಿಂದ ನಾನು ಅನುಭವಿಸ್ತಿರೋ ಅಂಗಾಲಿನ ನೋವು. ನಾನು ಔಷಧ–ದ್ವೇಷಿ. ಹಾಗಾಗಿ, 'ಅಂಗಾಲು ನೋಯ್ತಿದೆ ಪದ್ದಿ' ಅಂತ ಹೇಳಿದಾಗಿನಿಂದಲೂ ಅವಳೂ ಹೇಳ್ತಾನೇ ಬಂದಿದ್ದಾಳೆ 'ಡಾಕ್ಟರಿಗೆ ತೋರಿಸಿ ಡಾಕ್ಟರಿಗೆ ತೋರಿಸಿ' ಅಂತ. 'ನೋಡೂ, ಅಲ್ಲಿ ಹೋದರೆ ಒಂದು ಕೇಜಿ ಔಷಧ ಕೊಡ್ತಾರೆ. ಅದನ್ನಂತೂ ನಾನು ತೊಗೊಳ್ಳೊಲ್ಲ. ಒಂದೆರಡು ದಿನ ನೋಡೋಣ ಇರು' ಅಂತ ನಾನೂನೂ ಹೇಳ್ತಾನೇ ಬಂದಿದ್ದೀನಿ.ಈ ಮಧ್ಯೆ ಅನೇಕ ಹಿತೈಷಿಗಳು ಅನೇಕಾನೇಕ ಸಲಹೆಗಳನ್ನು, ಪರಿಹಾರೋಪಾಯಗಳನ್ನು, ಔಷಧಿಗಳನ್ನು ಸಜೆಸ್ಟ್ ಮಾಡಿದ್ದಾರೆ, ಅದೂ ಉಚಿತವಾಗಿ, 'ಒಂದನ್ನು ಕೇಳಿಸಿಕೊಂಡರೆ ಇನ್ನೆರಡು ಫ್ರೀ' ಅನ್ನೋಹಾಗೆ.

ಒಂದೆರಡು ಸ್ಯಾಂಪಲ್‌ಗಳನ್ನ ನೋಡಿ:

'ಎಕ್ಕದ ಎಲೇಲಿ ಬರೋ ಹಾಲನ್ನ ಕತ್ತೆ ಹಾಲಿನ ಜೊತೆ ಸಮ ಸಮವಾಗಿ ಬೆರೆಸಿ, ರಾತ್ರಿ ಮಲಗೋಕೆ ಮುಂಚೆ ಹಚ್ಚಿನೋಡಿ. ಒಂದು ವಾರದಲ್ಲಿ ಅಂಗಾಲಿನ ನೋವಿದ್ರೆ ಕೇಳಿ' ಅಂತ ಒಬ್ಬರು ಸಲಹಿಸಿದರು. 'ಅಂಗಾಲೇ ಇಲ್ಲದಿದ್ದ ಮೇಲೆ ಅಂಗಾಲು ನೋವೆಲ್ಲಿರತ್ತೆ' ಅಂತ ಕೇಳೋ ಧೈರ್ಯ ನನಗೆ ಬರಲಿಲ್ಲ. 'ರಾತ್ರಿ ಮಲಗೋಕೆ ಮುಂಚೆ ಕುದಿಯೋ ನೀರನ್ನು ಒಂದು ಬಕೆಟ್‌ನಲ್ಲಿ ಹಾಕಿ ಐದು ನಿಮಿಷ ಅದರೊಳಗೆ ಕಾಲುಗಳನ್ನ ಇಳಿಬಿಟ್ಟುಕೊಳ್ಳಿ. ಖಂಡಿತ ವಾಸಿಯಾಗತ್ತೆ' ಅಂತ ಇನ್ನೊಬ್ಬರು ಸಲಹೆ ನೀಡಿದರು. ಅದನ್ನೂ ಮೊದಲನೇ ಸಲಹೆಗಳ ಜೊತೆ ಸೇರಿಸಿದೆ. 'ಅಯ್ಯೋ ಅದಕ್ಯಾಕೆ ವರೀ ಮಾಡಿಕೋತೀರ? ಒಂದು ಕೆಲಸ ಮಾಡಿ. ಮೆಟಲ್‌ರೋಡ್ ಗೊತ್ತಾ? ಟಾರು ಹಾಕೋಕೆ ಮುಂಚೆ ಜಲ್ಲಿಕಲ್ಲು ಹಾಕಿ ಒಂದೆರಡು ತಿಂಗಳು ಹಾಗೇ ಬಿಟ್ಟಿರ್ತಾರೆ. ಅದನ್ನೇ ಮೆಟಲ್ ರೋಡು ಅನ್ನೋದು. ನಾನು ಹೇಳ್ತಿರೋದು ಸ್ವಲ್ಪಕಷ್ಟದ ಕೆಲಸವೇ. ಆದರೂ ಮಾಡಿ. ಅದರ ಮೇಲೆ ನಡೆಯುವಾಗ ಕಲ್ಲುಗಳು ಅಂಗಾಲಿಗೆ ಚುಚ್ಚತ್ತೇ, ನೋವಾಗುತ್ತೇ ನಿಜ. ಆದರೆ, ಆ ಕಲ್ಲು ಕೊಡೋ ನೋವಿಗೆ, ಮೊದಲಿದ್ದ ನೋವು ಹೆದರಿಕೊಂಡು ಓಡಿಹೋಗತ್ತೆ' ಅಂತ ಮತ್ತೊಬ್ಬರು.ಒಳ್ಳೆ ಲಾಜಿಕ್ಕು ಅನ್ನಿಸಿತು. ಆ ಪರಮಾತ್ಮ ಒಂದು ಕಿವಿಯನ್ನು ಕೊಡದೇ ಎರಡು ಕಿವಿಗಳನ್ನು ಯಾಕೆ ಕೊಟ್ಟಿದ್ದಾನೆ ಅನ್ನೋದನ್ನ ಅರ್ಥ ಮಾಡಿಕೊಂಡಿದ್ದೆ. ಅದರಂತೆ ನಡೆದೆ. ಹಾಗಾಗಿ ನೋವು ಹಾಗೇ ಉಳೀತು.



ಮೂರು ತಿಂಗಳಾದರೂ ಅಂಗಾಲು ನೋವು ಕಡಿಮೆಯಾಗುವ ಸೂಚನೆ ಕಾಣದಿದ್ದಾಗ ಡಾಕ್ಟರ ಹತ್ತಿರ ಹೋಗದೇ ವಿಧಿ ಇಲ್ಲ ಅನ್ನುವಂತಾಯಿತು.ನನ್ನೆಲ್ಲ ನೋವುಗಳನ್ನೂ, ಜೊತೆಗೆ ಹಿತೈಷಿಗಳು ಕೊಟ್ಟ ಸಲಹೆಗಳನ್ನೂ ಅವರ ಮುಂದೆ ವಿಷದವಾಗಿ ಬಿಡಿಸಿಟ್ಟು 'ನೋಡಿ ಡಾಕ್ಟರೇ, ಬೇರೆ ಏನು ಬೇಕಾದರು ಕೊಡಿ, ಔಷಧಿ ಮಾತ್ರ ಕೊಡಬೇಡಿ' ಅಂತ ಎಚ್ಚರಿಸಿದೆ. ಒಂದು ನಿಮಿಷ ನನ್ನನ್ನೇ ನೋಡಿ, ಇದ್ದಕ್ಕಿದ್ದ ಹಾಗೆ ತಮ್ಮ ಕುಳಿತಿದ್ದ ಭಂಗಿಯನ್ನು ಚಕ್ ಅಂತ ಬದಲಾಯಿಸಿ 'ಎಲ್ಲಿ ನಿಮ್ಮ ಕಾಲು ತೋರಿಸಿ' ಅಂದರು. ತೋರಿಸಿದೆ. 'ವೆರಿ ಸಿಂಪಲ್. ಒಂದು ಕೆಲಸ ಮಾಡಿ. ಸಾರಿ. ಒಂದಲ್ಲ ಎರಡು. ಮೊದಲನೇದು, ನೀವು ಹಾಕ್ಕೊಂಡಿರೋ ಚಪ್ಪಲೀನ ಹಿಂದು ಮುಂದು ನೋಡದೆ ಎಸೀರಿ. ಎರಡನೇದು, ಎಸೆದ ತಕ್ಷಣ (ಒಂದು ವಿಸಿಟಿಂಗ್ ಕಾರ್ಡ್‌ಕೊಡುತ್ತಾ) ಈ ಅಂಗಡೀಗೆ ಹೋಗಿ ಇನ್ನೊಂದು ಜೊತೆ ಚಪ್ಪಲಿ ತೊಗೊಳ್ಳಿ. ಈ ಕಾರ್ಡ್ ತೋರಿಸಿ. ಅವನೇ ಕೊಡ್ತಾನೆ. (ಕಾರ್ಡ್ ನೋಡಿದೆ. ಅದರಲ್ಲಿ ಈ ಡಾಕ್ಟರ ಹೆಸರಿತ್ತು. ನನಗೆ ಅರ್ಥಆಗಿತ್ತು). ಮುಂದಿನ ತಿಂಗಳು ಬನ್ನಿ. ಓಕೇ' ಅಂತಂದು 'ನೇಕ್ಸ್ಟ್' ಅಂದರು. ಜಾಗ ಖಾಲಿ ಮಾಡಿದೆ.

ಚಪ್ಪಲಿಗಳನ್ನು ಎಸೆದು ಬರಿಗಾಲಿನಲ್ಲಿ 'ಆ' ಅಂಗಡೀಗೆ ಹೋದೆ. ಕಾರ್ಡ್ ತೋರಿಸಿದೆ. ಒಂದು ಜೊತೆ ಚಪ್ಪಲಿಗಳನ್ನ ನನ್ನ ಮುಂದೆ ಇಟ್ಟು 'ಪರ್‌ಫೆಕ್ಟು ಸಾರ್' ಅಂದ. ನಾನು ಕೇಳೋಕೆ ಮುಂಚೇನೇ 'ಇದರ ಬೆಲೆ ಸಾವಿರದೈನೂರು ಸಾರ್. ನಮ್ಮ ಡಾಕ್ಟರು ಕಳಿಸಿದ್ದರಿಂದ ನಿಮಗೆ ಸಾವಿರದಿನ್ನೂರು ಸಾರ್. ಆರು ತಿಂಗಳು ಗ್ಯಾರಂಟಿ ಸಾರ್' ಅಂತಲೂ ಸೇರಿಸಿದ 'ಆರು' ಅನ್ನೋದನ್ನ ಹನ್ನೆರಡು ವರ್ಷ ಅನ್ನೋ ತರಹ ದೀರ್ಘವಾಗಿ ಎಳೆದು. ಕಾಣಿಕೆ ಒಪ್ಪಿಸಿ ಕಾಲಿಗೆ ಚಪ್ಪಲಿಗಳನ್ನು ಏರಿಸಿದೆ.

ಓೞೞೞೞೞೞೞ.

ಕ್ಷಮಿಸಿ. ನಿಮಗೆ ನಾನು ಹೇಳಬೇಕಾಗಿದ್ದದ್ದು ಈ ಚಪ್ಪಲಿಗಳ ವಿಷಯ. ಮುಖಕ್ಕಿಂತ ಮೂಗೇ ಉದ್ದ ಅನ್ನೋ ಹಾಗೆ ಪೀಠಿಕೇನೇ ಉದ್ದ ಆಗಿ ಹೋಯಿತು. ದಯವಿಟ್ಟು ಒಂದು ಕೆಲಸ ಮಾಡಿ. ನೀವು ಇಲ್ಲೀವರೆಗೂ ಓದಿದ್ದನ್ನ ಒಂದು ಕನಸು ಅಂದು ಕೊಂಡು ಬಿಡಿ, ಇಲ್ಲಾ, ಇದನ್ನ ಓದೇ ಇಲ್ಲ ಅಂತಂದುಕೊಂಡು ಬಿಡಿ. ಆಯ್ತು ಅಂದಿರಾ? ತಮಗೆ ಧನ್ಯವಾದಗಳು. ಥ್ಯಾಂಕ್ಯೂ ಸೋಮಚ್.

ಆಯ್ತು. ನೇರವಾಗಿ ವಿಷಯಕ್ಬಂದ್ಬಿಡ್ತೀನಿ.

ಅದು, ಹಿಂದಿನಿಂದ ನೋಡಿದರೆ ಷೂ, ಮುಂದಿನಿಂದ ನೋಡಿದರೆ ಚಪ್ಪಲಿ, ಮೇಲಿನಿಂದ ನೋಡಿದರೆ ಷೂಚಪ್ಪಲಿ!! ಅದನ್ನ ಹಾಕ್ಕೊಂಡ ಒಂದು ವಾರದಲ್ಲಿ ಅಂಗಾಲು ನೋವು ಕಡಿಮೆ ಎನ್ನಿಸಿತು. ಹದಿನೈದು ದಿನದಲ್ಲಿ ಇಲ್ಲವೇ ಇಲ್ಲ ಅನ್ನೋ ಅನುಭವ. ನನ್ನ ನೋವನ್ನು ನಿವಾರಿಸಿದ ಪಾದರಕ್ಷೆಯ ಮೇಲೆ ನನಗೆ ಅಭಿಮಾನ, ಪ್ರೀತಿವಿಶ್ವಾಸಗಳು ಮೂಡದಿರುತ್ತದೆಯೇ? ಅದಕ್ಕೆ ಮುತ್ತಿಡಲಿಲ್ಲ ಅಷ್ಟೆ.



ಅವತ್ತು ನನ್ನ ಮಿತ್ರನ ಎಪ್ಪತ್ತರ ಹುಟ್ಟುಹಬ್ಬ. ಪದ್ದಿಯೊಡನೆ ಬೆಳಿಗ್ಗೆ ಒಂಬತ್ತಕ್ಕೇ ಹಾಜರ್. ಪೇಪರ್ ಕೂಡಾ ಓದಿರಲಿಲ್ಲ. ದೊಡ್ಡ ಪಾರ್ಟಿ ಹಾಲು. ಪಾರ್ಟಿ ಗ್ರೌಂಡ್ ಫ್ಲೋರಲ್ಲಿ. ತಿಂಡಿ ಊಟ ನಾಲ್ಕನೇ ಫ್ಲೋರಲ್ಲಿ. ಲಿಫ್ಟು ಹತ್ತಿಳಿಯುತ್ತಿತ್ತು. ತಿಂಡಿ ಆಯ್ತು. ಹಾಲನ್ನ

ಪ್ರವೇಶಿಸುತ್ತಿದ್ದಂತೆ ರಿಸೆಪ್ಷನ್‌ನಲ್ಲಿ ಪ್ರಜಾವಾಣಿ ಇದ್ದದ್ದನ್ನ ನೋಡಿದ್ದೆ. ಬೇಗಬೇಗ ತಿಂಡಿತಿಂದು ಹೊರಗೆ ಬಂದು ಷೂಚಪ್ಪಲಿ ಮೆಟ್ಟಿದೆ. ಯಾಕೋ ಕಾಲಿಗೆ ಸರಿಹೋಗ್ತಾ ಇಲ್ಲ ಅನ್ನಿಸಿತು. ಆದರೂ ಹಾಕ್ಕೊಂಡು ಲಿಫ್ಟ್ ಮುಂದೆ ನಿಂತೆ. 'ವರ್ಕ್ ಆಗ್ತಾ ಇಲ್ಲ ಸಾರ್' ಅಂದ ಲಿಫ್ಟ್‌ಪಾಲಕ. ಸರಿ, ಧಡಧಡಾಂತ ಮೆಟ್ಟಿಲಿಳಿದೆ. ಪತ್ರಿಕೆ ಅಲ್ಲೇ ಇತ್ತು. ಕೈಗೆತ್ತಿಕೊಂಡು ಹಾಲಿನ ಹಿಂಂಂದುಗಡೆಗೆ ಹೋಗಿ ಛೇರಲ್ಲಿ ಕೂತು ಬಿಡಿಸಿದೆ. ಕಾಲ ಮೇಲೆ ಕಾಲು ಹಾಕ್ಕೊಂಡು ಓದೋಕೆ ಷುರು ಮಾಡಿದೆ. ಕಾಲಲ್ಲಿ ಏನೋ ಕಿರಿಕಿರಿ. ಒಂದು ಸುದ್ದೀನೂ ಅರ್ಥ ಆಗಲಿಲ್ಲ. ಗಮನವೆಲ್ಲಾ ಕಾಲಿನ ಕಡೆಗೇ ಇದ್ದರೂ ಓದೋದನ್ನ ಮಾತ್ರ ನಿಲ್ಲಿಸಲಿಲ್ಲ. ಇರಿಸುಮುರಿಸು, ಮುಜುಗರ, ಕಿರಿಕಿರಿ ಹೆಚ್ಚಾಯಿತು. ಪೇಪರನ್ನ ಪಕ್ಕಕ್ಕಿಟ್ಟೆ. ಎಡಗಾಲ ಮೇಲೆ ಬಲಗಾಲನ್ನು ಹಾಕಿ ಷೂಚಪ್ಪಲಿಯನ್ನ ನೋಡಿದೆ ಸೂಕ್ಷ್ಮವಾಗಿ.ಅರೆ! ಮೇಲಿನ ಪಟ್ಟಿಗಳಲ್ಲೆಲ್ಲಾ ಬಿರುಕುಗಳು. ಸಿಟ್ಟು ಒಮ್ಮೆಗೇ ನೆತ್ತಿಗೇರಿತು. ನೋಡಿದ್ಯಾ ಮಗ, ಸಾವಿರದಿನ್ನೂರು



ಪೀಕಿ ಹೀಗಾ ಮೋಸ ಮಾಡೋದು. ಅವನನ್ನ ಸುಮ್ಮನೆ ಬಿಡಬಾರದು. ಸೀದಾ ಕನ್ಸ್ಯೂಮರ್ ಕೋರ್ಟಿಗೆ ಎಳೀಬೇಕವನನ್ನ. ನನ್ನ ಹತ್ತಿರ ಎಲ್ಲಾ ರಸೀತಿಗಳು ಇವೆ. ಕೋರ್ಟು ಸಾವಿರದಿನ್ನೂರಲ್ಲದೇ ನನ್ನ ಖರ್ಚಿಗೆ ಅಂತ ಹತ್ತು ರುಪಾಯಿ ಜುಲ್ಮಾನೆ ಜಡೀಬೇಕು. ಬುದ್ಧಿ ಬರತ್ತೆ ಮಗನಿಗೆ. ಬಲಗಾಲಿನ ಮೇಲೆ ಎಡಗಾಲನ್ನು ಹಾಕಿ ನೋಡಿದೆ. ಅದರದ್ದೂ ಅದೇ ಕಥೆ. ಆರು ತಿಂಗಳು ಗ್ಯಾರಂಟಿ ಅಂದಿದ್ದ. ಎರಡು ತಿಂಗಳೂ ಬರಲಿಲ್ಲವಲ್ಲ. ಷೂಚಪ್ಪಲಿಯ ಅಂಗಾಲನ್ನು ನೋಡಿದೆ. ಹೊಟ್ಟೆ ಉರಿದು ಹೋಯಿತು. ಅಯ್ಯಯ್ಯೋ! ಎಷ್ಟೋಂದು ಸವೆದುಹೋಗಿದೇ. ನನ್ನ ಅಂದಾಜಿನಲ್ಲಿ ಅಷ್ಟೊಂದು ಸವೆಯೋಷ್ಟು ದೂರ ನಾನು ನಡೆದೇ ಇರಲಿಲ್ಲ. ಇರಲಿ ಕೇಸ್ ಹಾಕೋಕೆ ಇದೂ ಒಂದು ಪಾಯಿಂಟು. ಎಡ ಹಿಮ್ಮಡಿಯ ಎಡಭಾಗ (ಅಂದರೆ, ಅಂಗಾಲನ್ನ, ಅಂದರೆ ಷೂಚಪ್ಪಲಿಯ ಅಂಗಾಲನ್ನ, ಮುಖದೆದುರಿಗೆ ಹಿಡಿದು ನೋಡಿದರೆ ನಮಗೆ ಬಲಗಡೆಗೆ) ತುಂಬಾ ಸವೆದಿತ್ತು, ಬಲಗಾಲಿನದು



ವೈಸ್ ವರ್ಸಾ. ಏನೋ ಕೆಟ್ಟ ವಾಸನೆ ಮೂಗಿಗೆ ಬಡಿಯೋಕೆ ಷುರುವಾಗ್ತಿದ್ದ ಹಾಗೇ ಪ್ರಶ್ನೆಯೊಂದು ಧುತ್ತನೆ ನನ್ನೆದುರು ನಿಂತು ಕೇಳಿತು' ಇದು ನಿನ್ನದೇನಾ?' ನಾನು ನನ್ನಾತ್ಮಕ್ಕೆ ಅದೇ ಪ್ರಶ್ನೆಯನ್ನು ಹಾಕಿದೆ. ಉತ್ತರಕೊಡೋಕೆ ಮುಂಚೆ ಕಣ್ಣುಗಳು ಇನ್ನೊಮ್ಮೆ ಎರಡನ್ನೂ ಮತ್ತೂ ಸೂಕ್ಷ್ಮವಾಗಿ ವೀಕ್ಷಿಸಿತು. ಮೌನವಾಗಿ ಉತ್ತರಿಸಿಕೊಂಡೆ 'ಇದು ನಂದಲ್ಲ'. ತಕ್ಷಣವೇ ಖುಷಿಯಾದರೂ, ಮರುಕ್ಷಣವೇ ಜೀವ ಬಾಯಿಗೆ ಬಂದಂತೆಯೂ ಆಯಿತು. ಹಾಗಾದರೆ ನನ್ನ ಷೂಚಪ್ಪಲಿ? ನಾನಿಲ್ಲಿಗೆ (ತಿಂಡಿ ಹಾಲಿಗೆ) ಹಾಕ್ಕೊಂಡು ಬಂದಿರಲಿಲ್ಲವೇ? ಆಬ್ವಿಯಸ್ಲೀ ಇಲ್ಲ. ಹಾಗಾದರೆ ಅದನ್ನ ಎಲ್ಲಿ ಬಿಟ್ಟೆ? ಎಲ್ಲಿ ಬಿಟ್ಟೆ? ನೆನಪಿಗೆ ಬರಲಿಲ್ಲ. ಹಿಂದೆಯೇ ಖಿಷಾದವೂ ಪಿಸುಗುಟ್ಟಿತು ಹೇಳಿತು 'ವಯಸ್ಸಾದರೆ ಹೀಗೇ ಕಣಯ್ಯಾ' ಅಂತ. ತುಂಬಾ ಹೊತ್ತು ಹೊಳೀಲಿಲ್ಲ ಉತ್ತರ. ಪದ್ಮಾಸನ ಹಾಕಿ ಕಣ್ಮುಚ್ಚಿ ಪ್ರಾಣಾಯಾಮ ಮಾಡಿದೆ. ಶಾಂತನಾಗಿ ಕೂತು ನೆನಪಿಸಿಕೊಳ್ಳೋಕೆ ಪ್ರಾರಂಭಿಸಿದೆ. ಉಹುಂ. ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಮನೆಯಿಂದ ಹೊರಟಾಗ ಹಾಕಿಕೊಂಡದ್ದು ಮಾತ್ರ ನೆನಪಿಗೆ ಬಂತು. ಇನ್ನೂ ಒಂದು ವಿಷಯ ಹೊಳೀತು. ಚಪ್ಪಲಿ ಬಿಡೋಕೆ ಇಲ್ಲಿರೋದೇ ಎರಡು ಜಾಗ. ಅಲ್ಲಿಲ್ಲದಿದ್ದರೆ ಇಲ್ಲಿ ಇರಲೇಬೇಕು. ತಕ್ಷಣ ಎದ್ದೆ ಆರ್ಕಿಮಿಡೀಸನಂತೆ. ಪುಣ್ಯಕ್ಕೆ ಬಟ್ಟೆ ಹಾಕ್ಕೊಂಡಿದ್ದೆ. ಗ್ರೌಂಡ್ ಫ್ಲೋರಿನಲ್ಲಿ ಚಪ್ಪಲಿಗಳನ್ನು ಬಿಟ್ಟಿದ್ದ ಜಾಗಕ್ಕೆ ಮಿಂಚಿನಂತೆ ಹಾರಿದ್ದೆ. ಸಿಂಹಾವಲೋಕಿಸಿದೆ. ಸಧ್ಯ! ನನ್ನ ಮುದ್ದಿನ ಷೂಚಪ್ಪಲಿ ತಣ್ಣಗೆ ಮಳ್ಳಿ ಹಾಗೆ ಕೂತಿತ್ತು. ಎದೆ ಮೇಲೆ ಕೈ ಇಟ್ಟುಕೊಂಡು ಧನ್ಯನಾದೆ ಅಂದುಕೊಡೆ. ತಕ್ಷಣ ಇನ್ನೊಂದು ಪ್ರಶ್ನೆ. ಜೀವನವೆಲ್ಲಾ ಬರೀ ಪ್ರಶ್ನೆಗಳೇ. ಉತ್ತರಗಳಿಲ್ಲದ ಪ್ರಶ್ನೆಗಳು. ಹಾಗಾದರೆ ನಾನು ಹಾಕ್ಕೊಂಡಿರೋ ಚಪ್ಪಲಿಯೊಡೆಯ ಪಾಪ, ತಿಂಡಿ ತಿಂದು ಚಪ್ಪಲಿಗೆ ಹುಡುಕಾಡ್ತಾ ಇರಬೇಕು. ಅಕಸ್ಮಾತ್ ನಾನು, ನಾನು ಹಾಕ್ಕೊಂಡಿರೋ ಚಪ್ಪಲಿ ಆತನ ಕಣ್ಣಿಗೆ ಬಿದ್ದರೆ ಊಟಕ್ಕೆ ಮುಂಚೆ ಎಲೆ ಅಡಿಕೆ ಹಾಕ್ಕೊಳೋಲ್ವೇ ಆತಾ? ಏನು ಮಾಡೋದು? ನೇರ ನಾಲ್ಕನೇ ಮಹಡೀಗೆ ಹೋಗಿ ಅಲ್ಲಿ ಇದನ್ನ ಬಿಟ್ಟು ಓಡೋಡಿ ಬಂದು ಇದನ್ನ ಹಾಕ್ಕೊಳ್ಳೋದು ಅಂದುಕೊಂಡೆ. ಹಿಂದೆಯೇ ಇನ್ನೊಂದು ಪ್ರಶ್ನೆ. ಅಷ್ಟರಲ್ಲಿ ಆತ ನನ್ನ ಚಪ್ಪಲಿಯನ್ನ ಹಾಕ್ಕೊಂಡ್ಬಿಟ್ಟರೆ? ಹೌದಲ್ಲವೇ? ಒಂದು ಕೆಲಸ ಮಾಡಭೋದು. ನನ್ನ ಷೂ ಚಪ್ಪಲಿಯನ್ನ ಹಾಕ್ಕೊಂಡು ಇದನ್ನ ಎಡಗೈಲಿ ಹಿಡಿ . . . ಛೆಛೆ ಎಲ್ಲಾದರೂ ಉಂಟೆ? ಯಾರದ್ದೋ ಚಪ್ಪಲೀನ ಕೈಯ್ಯಲ್ಲಿ ಹಿಡಿದೂ? ಆಗದು ಆಗದು. ಮತ್ತೇ? ಅವಳಾದರೂ ನನ್ನ ಹತ್ತಿರ ಇದ್ದಿದ್ದಿದ್ದರೆ ಅವಳನ್ನು ಇಲ್ಲಿ ಕಾವಲು ಹಾಕಿ ಇದನ್ನ ಮೇಲೆ ಬಿಟ್ಟು ಬರಬಹುದಾಗಿತ್ತು. ಅವಳು ಬರೋವರೆಗೂ ಇಲ್ಲೇ ಇರೋಣ ಅಂತಂದರೇ, ನನ್ನನ್ನೇ ಅಬ್ಸರ್ವ್ ಮಾಡ್ತಾ ಇರೋರ್‍ಯಾರಾದರೂ 'ಚಪ್ಪಲಿ ಚೋರ' ಅನ್ನೋ ಬಿರುದು ಕೊಟ್ಟು ಬಿಟ್ಟರೆ ಕಷ್ಟ. ಥತ್ತೇರಿ. ಒಳ್ಳೆ ಪೀಕಲಾಟಕ್ಕೆ ಬಂತಲ್ಲಪ್ಪಾ. ಇನ್ನೂ ಒಂದು ಕೆಲಸ ಮಾಡಬಹುದು. ಈ ನ್ಯೂಸ್ ಪೇಪರಲ್ಲಿ ಈ ಚಪ್ಪಲೀನ ಸುತ್ತಿಕೊಂಡು ಮೆಲ್ಲಗೆ ಹೋಗಿ ಅಲ್ಲಿ ಸುರಿದು ಬಂದರೆ? ಚಪ್ಪಲೀನ ಸುತ್ತಿಕೊಳ್ಳೋದನ್ನ ಯಾರಾದರೂ ನೋಡಿಬಿಟ್ಟರೆ? ಆಗಲೂ ನನಗೆ ಬಿರುದು ತಪ್ಪಿದ್ದಲ್ಲ. ಮಿಂಚು ಹೊಡೆಯಿತು ತಲೆಗೆ. ಚಿಟಿಕೆ ಹೊಡೆಯುತ್ತಾ, ತೋರುಬೆರಳನ್ನು ಮೇಲೆತ್ತುತ್ತಾ, ಬಾಯಲ್ಲಿ 'ಹ್ಹಾಂ' ಎನ್ನುತ್ತಾ ಆನಂದತುಂದಿಲನಾದೆ. ಅಲ್ಲಿಯೇ ಓಡಾಡ್ತಿದ್ದ ಹುಡುಗರ ಕಾಲುಗಳನ್ನು ನೋಡುತ್ತಾ ನಿಂತೆ. ಬೇಗನೇ ಒಬ್ಬ ಬರಿಗಾಲಿನ ಹುಡುಗ ಕಂಡ. 'ಮರೀ ಬಾಪ್ಪ ಇಲ್ಲೀ' ಅಂದೆ.



‘ಏನಂಕಲ್?’ಅನ್ನುತ್ತ ಹತ್ತಿರ ಬಂದ. ‘ನೋಡಪ್ಪ ನನ್ನ ಫ್ರೆಂಡು ಮರೆತು ಚಪ್ಪಲೀನ ಇಲ್ಲಿ ಬಿಟ್ಟುಬಿಟ್ಟಿದ್ದಾರೆ. ಇದನ್ನ ಹಾಕ್ಕೊಂಡು ನಂಜೊತೆ ಬಂದು ಫೋರ್ತ್ ಫ್ಲೋರಲ್ಲಿ ಬಿಡ್ತೀಯಾ ಮರೀ’ ಅಂತ ರಿಕ್ವೆಸ್ಟಿಸಿಕೊಂಡೆ. ಮನಸ್ಸಿಲ್ಲದ ಮನಸ್ಸಿನಿಂದ ಆ ಹುಡುಗ ತಲೆ ಆಡಿಸಿದ ‘ಆಯ್ತು’ ಅನ್ನೋ ಹಾಗೆ. ‘ಹಾಕ್ಕೋ’ ಅಂದೆ. ಹಾಕ್ಕೊಂಡ. ‘ಲಿಫ್ಟ್ ಬೇಡ. ನಡಕೊಂಡೇ ಹೋಗೋಣ’ ಅಂದೆ. ಅದಕ್ಕೂ ‘ಹೂಂ’ ಅಂದ. ನನ್ನ ಪುಣ್ಯ. ಅವನ ಕಾಲಿಗಿಂತಲೂ ದೊಡ್ಡ ಚಪ್ಪಲಿ. ಪಾಪ, ಅವನಿಗೂ ಕಷ್ಟವೇ ನಡೆಯೋದು. ನಂಗೊತ್ತು. ಆದರೇನು ಮಾಡಲೀ? ಲಿಫ್ಟಲ್ಲಿ ಹೋದರೆ ನಾಲ್ಕು ಜನರ ಕಣ್ಣಿಗೆ ಬೀಳ್ತೀವಲ್ಲಾ. ಹ್ಯಾಗೂ ಎರಡು ಅಂತಸ್ತು ಹತ್ತಿದ್ದಾಯ್ತು. ಇನ್ನೆರಡು ಅಂತಸ್ತಷ್ಟೇ. ಮೂರನೇ ಅಂತಸ್ತು ಹತ್ತಬೇಕು. ಮೇಲಿನಿಂದ ಮಹನೀಯರೊಬ್ಬರು, ನನ್ನ ವಯಸ್ಸಿನವರೇ, ಇಳೀಲಿಕ್ಕೆ ಹತ್ತಿದಾರೆ. ಅಲ್ಲಿ ಅವರಿಗೆ ಇಳೀಲಿಕ್ಕೆ ಮೊದಲನೇ ಮೆಟ್ಟಿಲು. ಇಲ್ಲಿ ನಮಗೆ ಹತ್ತಲಿಕ್ಕೆ ಮೊದಲನೇ ಮೆಟ್ಟಿಲು. ನಾನವರನ್ನು ನೋಡಿದೆ. ಅವರು ನನ್ನನ್ನು ನೋಡದೇ ನನ್ನ ಹಿಂದಿದ್ದ ಹುಡುಗನ್ನ ನೋಡುತ್ತಿದ್ದರು. ಕಾಲಿನಿಂದ ಬೇರೆಯಾಗಿದ್ದ ಚಪ್ಪಲಿಯನ್ನು ಮತ್ತೆ ಹಾಕ್ಕೋತಾ ಇದ್ದ. ಬೇಗಬೇಗನೆ ಇಳಿದರು. ಅವರಿಗೂ ನಮಗೂ ನಾಲ್ಕೈದು ಮೆಟ್ಟಲುಗಳ ಅಂತರ. ಅಲ್ಲೇ ನಿಂತರು. ನಾವೂ ನಿಂತೆವು. ಹುಡುಗ ನನ್ನ ದುರುಗುಟ್ಟಿ ನೋಡುತ್ತಾ, ‘ಏನೋ, ಚೋಟುದ್ದ ಇದ್ದೀಯಾ ಆಗಲೇ ಚಪ್ಪಲಿ ಕದಿಯೋಕೆ ಷುರು ಮಾಡಿದೆಯೇನೋ?’ ಅಂದರು. ನನ್ನ ಜಂಘಾಬಲವೇ ಉಡುಗಿ ಹೋಯಿತು. ಚೋಟುದ್ದದವನು ತಕ್ಷಣವೇ ನನ್ನ ಕಡೆ ಬೆರಳು ತೋರಿಸ್ತಾ ‘ನಾನಲ್ಲ ಅಂಕಲ್, ಇವರೂ. ಹಾಕ್ಕೊಂಡ್ಬಾ ಅಂದ್ರೂ ಅಂಕಲ್್್’ ಅಂದ.

ಆ ಚೋಟುದ್ದದವ, ಆ ಚಪ್ಪಲಿಯೊಡೆಯರು, ಆ ಮೆಟ್ಟಿಲುಗಳು, ಆ ಗೋಡೆಗಳು ಎಲ್ಲಾ ಗಿರಗಿರಗಿರನೆ ತಿರುಗುತ್ತಿದ್ದುದಷ್ಟೇ ನೆನಪು!

## ಕುಹಕಿಡಿ... – ಎನ್ ರಾಮ್

ಮಿಂಚು ಪ್ರೇಯಸಿಯಂತೆ; ಹೀಗೆ ಬಂದು ಹಾಗೆ ಹೊರಟುಹೋಗುತ್ತದೆ. ವಿದ್ಯುಚ್ಛಕ್ತಿ ಹೆಂಡತಿಯಂತೆ. ಇತ್ತ ತವರಿನಲ್ಲೂ ಇರದೆ, ಅತ್ತ ಗಂಡನ ಮನೆಯಲ್ಲೂ ಇರದೆ ಹೋಗಿ ಬಂದು, ಹೋಗಿ ಬಂದು, ಕಾಟ ಕೊಡ್ತಾ ಇರತ್ತೆ.

***

ಮಂತ್ರಕ್ಕೆ ಮಾವಿನಕಾಯಿ ಉದುರದಿರಬಹುದು. ಮಂತ್ರಿಗಳಿಗೆ ಮಾವಿನತೋಪುಗಳೇ ಉದುರಿಬಿಡುತ್ತವೆ.

***

ಹಳತನ್ನೇ ತೋರುವವರು ಅಧಮ; ಹೊಸದನ್ನು ತೋರಿಸುವವರು ಉತ್ತಮ; ತೋರಿಸಿದ್ದನ್ನೇ ಉಜ್ಜೀ ಉಜ್ಜೀ ತೋರಿಸುವವರು ಮಾಧ್ಯಮ.

***

ಅಂದಿನ ಚಿತ್ರಗಳಿಗೂ, ಇಂದಿನವಕ್ಕೂ ಇಷ್ಟೇ ವ್ಯತ್ಯಾಸ – ಅದು ಬೇಡರ ಕಣ್ಣಪ್ಪ; ಇವು ಬ್ಯಾಡ ಕಣ್ರಪ್ಪಾ....



# ಬೈಗುಳ ಮಹಿಮೆ

**- ವೈ.ಎನ್. ಗುಂಡೂರಾವ್**

**ಕೋ**ಪಗೊಂಡಾಗ, ಸ್ತಿಮಿತ ಕಳೆದುಕೊಂಡ ಮನಸ್ಸಿನಿಂದ ಬೈಗುಳ ರೂಪದಲ್ಲಿ ಎಂತೆಂತಹ ಪದಗಳು ಹೊರಬರುತ್ತವೆ. ಆ ಸಂದರ್ಭದಲ್ಲಿ ನಮ್ಮ ಕೋಪ-ತಾಪಗಳನ್ನು ಬೈಗುಳಿನ ಮುಖಾಂತರ ಹೊರಹಾಕುವುದೇ ಪ್ರಮುಖವಾಗಿರುತ್ತದೆಯೇ ವಿನಃ ಬೈಸಿಕೊಳ್ಳುವ ವ್ಯಕ್ತಿಗೆ ಕೆಡುಕುಂಟು ಮಾಡಬೇಕೆಂದೇನಿಲ್ಲ. ಆದರೆ ಕೋಪದ ಭರದಲ್ಲಿ ಎಷ್ಟೋ ವೇಳೆ ಬೈಗಳಿನ ಮಾತಿಗೂ ಕೃತಿಗೂ ತಾಳಮೇಳವೇ ಇರುವುದಿಲ್ಲ. ಆದರೆ ಇನ್ನು ಕೆಲವು ಸಾರಿ ಬೈಗುಳಗಳೂ ಕೂಡಾ ಎಂತೆಂತಹ ರೂಪಕವಾಗಿ ಹೊರಹೊಮ್ಮುತ್ತದೆ ಎಂದರೆ ಇಂತಹ ಬೈಗುಳನ್ನು ಕೊಂಚ ವಿವೇಚನೆಗೊಡ್ಡಿದರೆ ನಗು ತರಿಸಿಬಿಡುತ್ತದೆ. ಇಂತಹ ಬೈಗುಳಗಳನ್ನು ಸಂಬಂಧಿಸಿದ ಘಟನೆಗಳನ್ನು ಹಳ್ಳಿಗಳಲ್ಲಿ ವಿಪುಲವಾಗಿ ಕಾಣಬಹುದು. ಅಕ್ಕಪಕ್ಕದ ಮನೆಯವರೇ ಅಪರಿಚಿತರಂತಿರುವ ಪಟ್ಟಣ ವಾಸಿಗಳಲ್ಲಿ ಬೈಯ್ಯಲು ಸಮಯವಾದರೂ ಎಲ್ಲಿದೆ?

'ಸಿಗಿದು ತೋರಣ ಕಟ್ಟಿ ಬಿಡ್ತೇನೆ' ಎಂಬ ಬೈಗುಳನ್ನು ಕೇಳಿದ ತಕ್ಷಣ ಸಂವೇದನಾಶೀಲರಾದ ವಿ.ಸೀ. ಯವರಿಗೆ ಒಂದು ರೀತಿ ಶಾಕ್ ಉಂಟುಮಾಡಿ ಬಿಡುತ್ತಿತ್ತಂತೆ. ನಂತರ ಜೊತೆಯವರೊಡನೆ ಅದನ್ನು ವಿಶ್ಲೇಷಿಸುತ್ತಾ ಆಹಾ! ಎಂತಹ ಸುಂದರ ರೂಪಕ! ಮೊದಲು ಮನುಷ್ಯನನ್ನು ಗರಗಸದಿಂದ ಸಿಗಿಯಬೇಕು, ಆಮೇಲೆ ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಬೇಕು, ಆ ಚೂರುಗಳನ್ನು ಪೋಣಿಸಿ ಬಾಗಿಲಿಗೆ ತೋರಣ ಕಟ್ಟಬೇಕು, ಅದನ್ನು ನೋಡಿ ನಾವು ಆನಂದಿಸಬೇಕು! ಎಂತಹ ಬೈಗುಳ, ಎಂತಹ ಕಲ್ಪನೆ, ಏನು ಬಹುಮಾನ ಕೊಟ್ಟರೆ ಸಾಕಾದೀತು! ಎಂದು ವಿಶ್ಲೇಷಿಸುತ್ತಿದ್ದರಂತೆ.

ಹಳ್ಳಿಯಲ್ಲಿದ್ದಾಗ ನಮ್ಮ ಮನೆಯ ಪಕ್ಕದಲ್ಲೊಬ್ಬರು ಗೃಹಣಿಯಿದ್ದರು. ಅಡುಗೆ ಕೆಲಸ ಮುಗಿಯಿತೆಂದರೆ ಜಗುಲಿಯ ಕಂಬಕ್ಕೆ ಒರಗಿ ನಿಂತು ಹೊಲಗದ್ದೆಗೆ ನೀರು ತರಲು ಹೋಗುವ ಹೆಂಗಸರು/ಗಂಡಸರು ಎನ್ನುವ ಬೇಧ ಭಾವವಿಲ್ಲದೆ ಎಲ್ಲರನ್ನೂ ಮಾತನಾಡಿಸುತ್ತಿದ್ದರು. ಕೆಲವರ ಬಳಿ ಹಣಕಾಸಿನ ವ್ಯವಹಾರವನ್ನು ಇಟ್ಟುಕೊಂಡಿದ್ದರು. ಸಾಲ ಪಡೆದವರು ಸಕಾಲದಲ್ಲಿ ಹಿಂದಿರುಗಿಸದಿದ್ದರೆ ಜಗಳ ಕಟ್ಟಿಟ್ಟದ್ದೆ. ಆಕೆಯ ಬಾಯಿಯೂ ಕೊಂಚ ದೊಡ್ಡದೆ. ಆದರೆ ಹಳ್ಳಿಯಲ್ಲಿ ಆ ರೀತಿ ಬಾಯಿ ಮಾಡದಿದ್ದರೆ ಬದುಕುವುದು ಕಷ್ಟವೆಂದು ತಿಳಿದಿದ್ದರಿಂದ ಆಕೆ ಹಳ್ಳಿಗೆ ಬೇಕಾದ ಗುಣಗಳನ್ನು ಮೈಗೂಡಿಸಿಕೊಂಡಿದ್ದರು.

ಒಮ್ಮೆ ಹಸು ಕಾಯುವವನಿಗೆ ಕೊಂಚ ಹಣ ಕೊಟ್ಟಿದ್ದು ಎಷ್ಟು ಕೇಳಿದರೂ ಹಿಂದಿರುಗಿಸದಿದ್ದಾಗ ಈಕೆಗೆ ಪಿತ್ತನೆತ್ತಿಗೇರಿತು. ''ಚಂಗ್‌ಸಿ ಒದ್ದಾಂದ್ರೆ ಹಣನಾ ನೀನೇ ತಂದ್ ಮಡಗ್ತೀಯಾ'' ಎಂದು ಹಾರಾಡತೊಡಗಿದರು. ಆದರೂ ಹಣ ಪಡೆದಾಗ ಜಗ್ಗಲಿಲ್ಲ. ಈಕೆ ಮನೆ ಮುಂದೆ ನಿಂತು, ಆತ ಓಡಾಡುವಾಗಲೆಲ್ಲಾ ಚಂಗ್‌ಸಿ ಒದ್ದಾಂದ್ರೆ... ಎಂದು ಹೇಳುತ್ತಲೇ ಇದ್ದಾಗ, ಒಮ್ಮೆ ಹಸು ಕರೆದೊಯ್ಯುತ್ತಿದ್ದವ ಹಗ್ಗವನ್ನು ಬಿಟ್ಟು ನೇರವಾಗಿ ಜಗುಲಿ ಹತ್ತಿ ''ಚಂಗ್‌ಸಿ ಒದೀತೀನಿ ಅಂದ್ರಿ ಒದೀರಿ ಮತ್ತೆ...'' ಚಂಗ್‌ಸಿ ಅಂದ್ರೆ ಎರಡೂ ಕಾಲು ಎತ್ತಿ ಒದೀಬೇಕು, ನೀವು ಒದಿಯೋ ತನಕ ಬಿಡಾಂಗಿಲ್ಲ ಎಂದು ಎರಡು ಕೈಯನ್ನು ಅಗಲಿಸಿ ಕಬಡ್ಡಿ ಆಡುವವರಂತೆ ಆಕಡೆ ಈಕಡೆ ಅಡ್ಡಾಡುತ್ತಾ



ಒದೀರಿ.. ಒದೀರಿ ಮತ್ತೆ... ಎಂದು ಅವರನ್ನು ಅಟಕಾಯಿಸತೊಡಗಿದ. ದಿನ ಬೆಳಗಾಗೆದ್ದರೆ ಇಂತಹ ಘಟನೆಗಳು ಹಳ್ಳಿಯಲ್ಲಿ ಸಾಮಾನ್ಯ, ಇಬ್ಬರ ಮಧ್ಯೆ ಇಂತಹ ತನಿ ಬಿದ್ರೆ ನೋಡುವವರಿಗೆ ತಮಾಷೆ. ಜನ ಗುಂಪು ಸೇರಿ ಆನಂದಿಸತೊಡಗಿದರು. ಅಷ್ಟರಲ್ಲಿ ಪಟೇಲರು ಆ ಕಡೆ ಬಂದಿದ್ದರಿಂದ ಅವನಿಗೆ ಬೈದು ಕಳುಹಿಸಿದಾಗಲೇ ಈಕೆಗೆ ಒದೀರಿ... ಒದೀರಿ.. ಅನ್ನೋ ಕಬಡ್ಡಿಯಿಂದ ಬಿಡುಗಡೆಯಾದದ್ದು. ನಂತರ ಆತ, ಹಣ ಹಿಂದಿರುಗಿಸಿದನೋ ಇಲ್ಲವೋ ತಿಳಿಯದು.



ಇನ್ನೂ ಕೆಲವರಿದ್ದಾರೆ. ಬೈಗುಳ ಪರಿಣಾಮ, ಅರ್ಥ ಗೊತ್ತಿಲ್ಲದಿದ್ದರೂ ಬಾಯಿಗೆ ಬಂದಂತೆ ಬೈಯ್ಯುತ್ತಿರುತ್ತಾರೆ. 'ನಿನ್ ಜನ್ಮಕ್ಕಿಷ್ಟು ಬೆಂಕಿ ಹಾಕ...' ಅಂದರೆ ಏನರ್ಥ, ಇವನ ಜನ್ಮಕ್ಕೆ ಬೆಂಕಿ ಹಾಕಿದಾಗ ಆತ ಮದುವೆಯಾಗಿದ್ದರೆ ಹೆಂಡತಿ ಮಕ್ಕಳ ಪಾಡೇನು? ಯುವಕನಾಗಿದ್ದರೆ ಅವನ ಭವಿಷ್ಯದ ಬಗ್ಗೆ ಅವನನ್ನು ನಂಬಿರುವ ತಂದೆ ತಾಯಿಗಳ ಬಗ್ಗೆ ಯೋಚಿಸುವುದು ಬೇಡವೇ? ಬೆಂಕಿ ಹಾಕಿದರೆ ಪರಿಣಾಮ ಏನಾದೀತೆಂದು ಯೋಚಿಸುವುದು ಬೇಡವೇ?

ಮತ್ತೆ ಕೆಲವರಿಗೆ ಮಕ್ಕಳು ಏನಾದರೂ ಗಲಾಟೆ ಮಾಡುತ್ತಾ ಅದುಬೇಕು ಇದುಬೇಕು ಎಂದು ವಿನಾಕಾರಣ ವಾದಿಸತೊಡಗಿದರೆ 'ಬಾಯ್ ಮೇಲೆ ಬರೆ ಹಾಕ್ತೀನಿ ನೋಡು' ಎಂದು ಮಕ್ಕಳಿಗೆ ಬೈದು ಕೂಡಿಸುವರು. ಅಲ್ಲಾ! ಹಾಗೊಂದು ವೇಳೆ ಬಾಯಿಯ ಮೇಲೆ ಬರೆ ಹಾಕಿ ಬಿಟ್ಟರೆ ಆ ಮಗುವಿನ ಗತಿ ಏನು? ಬರ್ನಾಲ್ ಹಚ್ಕೊಂಡು ಹ್ಯಾಗಪ್ಪ ಕೂತ್ಕೊಂಡಿರುತ್ತೆ? ಊಟ ಹ್ಯಾಗಪ್ಪ ಮಾಡುತ್ತೆ? ಸ್ಕೂಲಿಗೆ ಹೋದಾಗ ಫ್ರೆಂಡ್ಸೆಲ್ಲ ರೇಗಿಸೋಲ್ವೇನಪ್ಪ... ಅಬ್ಬಬ್ಬಬ್ಬಾ!

ಇನ್ನು ಕೆಲವರಿಗೆ ಕೈಕಾಲು ಮುರಿಸೋದಂದ್ರೆ ಬಾಳಾ ಖುಷಿ.

'ಕಾಲ್ಮುರ್ದು ಮೂಲೇಲಿ ಕೂಡಿಸ್ತೀನಿ ತಾಳು' ಅನ್ನೋದನ್ನ ನೀವು ಕೇಳಿರಬಹುದು. ಕಾಲು ಮುರಿದು ಮನೇಲಿ ಕೂತ್ಕೊಂಡ್ರೆ ಪಾಪ ಆತ/ಆಕೆ ಗತಿ ಏನು? ಆರುವಾರ ಬ್ಯಾಂಡೇಜ್ ಹಾಕ್ಕೊಂಡು ಪರಾಧೀನ ಆಗಿ ಬಿಡೋಲ್ವೆ. ಛೆ ಛೆ ಛೇ... ಈ ಸ್ಥಿತೀನ ಅನುಭವಿಸದವರಿಗೇ ಗೊತ್ತು.

ಕೆಲವು ಮನೆಗಳಲ್ಲಿ ಬೆಳಿಗ್ಗೆಯೋ, ಸಂಜೆಯೋ ಶ್ಲೋಕಗಳನ್ನು ಹೇಳಿ ಕೊಡುವ ಪದ್ಧತಿ, ಸಂಸ್ಕೃತ ಉಚ್ಚಾರಣೆ ಕೊಂಚ ಕಷ್ಟ, ತಪ್ಪೇನಾದ್ರು ಹುಡುಗರು ಹೇಳಿದ್ರೆ ಸಾಕು ವಾಧ್ಯಾರು ತಕ್ಷಣ ''ನಿನ್ನ ನಾಲ್ಗೆಗೆ ದರ್ಭೆ ಹಾಕಿ ತಿಕ್ಕ...'' ಈ ಪದ ಸರಿಯಾಗಿ ಹೇಳೋಕ್ಕೂ ಬರೋಲ್ವ ನಿಂಗೆ ಎಂಬ ಆಶೀರ್ವಚನವನ್ನು ಉದುರಿಸಿಬಿಡುತ್ತಾರೆ. ಒಂದು ವೇಳೆ ದರ್ಭೆಹಾಕಿ ತಿಕ್ಕಿದರೆ ಏನುಗತಿ? ನಾಲಗೆ




ಸೀಳಿ ನಾಗರ ಹಾವು ನಾಲಗೆಯನ್ನು ಹೊರ ಚಾಚಿದಾಗ ಅಲ್ಲಾಡಿಸುವ ಸೀಳು ನಾಲಗೆಯ ರೀತಿ ಇವನ ನಾಲಗೆಯೂ ಎರಡು ಸೀಳಾಗಿ ನಾಗರ ಹಾವಿನಂತೆ ಅಲ್ಲಾಡಿಸಬೇಕಾಗಿ ಬರುತ್ತದೆ ಅಲ್ಲವೇ? ಅಕಟಕಟಾ ಎಂತಹ ದುರ್ವಿಧಿ!

ಚಮ್ಡ (ಚರ್ಮ) ಸುಲ್ದು ಬಿಡ್ತೇನೆ....; ನೆಗೆದು ಬಿದ್ ನೆಲ್ಲಿ ಕಾಯಾಗ (ಬಿಡಿ, ನೆಲ್ಲಿಕಾಯಾದ್ರೆ ಉಪ್ಪಿನ ಕಾಯಿಗೆ ಹಾಕ್ಕೋಬೋದು); ಬುರ್ಡೆಗೆ ಬಿಸಿ ನೀರು ಕಾಯ್ಸಾ..; ಕುವೆಂಪುರವರ ಅಜ್ಜಯ್ಯನ ಅಭ್ಯಂಜನ ಜ್ಞಾಪಿಸಿಕೊಳ್ಳಿ. ಕೊತ ಕೊತ ಕುದಿಯುವ ಬಿಸಿನೀರು. ಮೀಯಿಸಿದ ತಕ್ಷಣ ಸ್ಮೃತಿ ತಪ್ಪಿದವರನ್ನು ದೋಣಿಯಲ್ಲಿ ಹಾಗೇ ಮಲಗಿಸಿ ಬಿಡುತ್ತಿದ್ದರು. ಎದ್ದನಂತರ ಒಂದು ಲೋಟ ಪಾನಕ! ಈ ರೀತಿ ಬಿಸಿನೀರನ್ನು ಬುರುಡೆಗೆ ಕಾಯಿಸೋದ್ಯಾಕೆ? ಸ್ಮೃತಿ ತಪ್ಪಿಸಿ ಬೀಳಿಸೋದ್ಯಾಕೆ? ಪಾನಕ ಕುಡಿಸೋದ್ಯಾಕೆ? ಅಯ್ಯೋ ವಿಧಿಯೇ!

ಇನ್ನು 'ಉದ್ದುದ್ದ ಮಲಗಿಸಿ ಬಿಡ್ತೇನೆ...' ಅನ್ನೋದನ್ನು ನೀವು ಕೇಳಿರಬಹುದು. ಅಹ್ಹಹ್ಹಾ! ಅವನನ್ನು ಉದ್ದುದ್ದ ಮಲಗಿಸಿ, ಮಣ್ಣು ಮುಚ್ಚಿ, ಜೈಲಿಗೆ ಹೋಗಿ.. ಅವನ ಸಂಸಾರವನ್ನು ಅತಂತ್ರಮಾಡಿ... ಎಂತಹ ಸುಂದರ ರೂಪಕ!

ಹೀಗೆ ಹಳ್ಳಿಯ ಬೈಗುಳಗಳಲ್ಲಿ ಎಂತೆಂತಹ ರೂಪಕಗಳನ್ನು, ಉಪಮೆ – ಉಪಮೇಯಗಳನ್ನು ಕಾಣಬಹುದು, ಕಂಡು ಆನಂದಿಸಬಹುದು ಅಲ್ಲವೇ?

ಊಟಕ್ಕೆ ಹೇಗಾಗಿದ್ದಿ ನೋಡು, ಸುಡುಗಾಡು ಈ ಸಾಫ್ಟವೇರ್ ಎಂಜಿನಿಯರ್ ಯಾಕೆ ಆಗಬೇಕು ಅಂತ ನಿನ್ನ ತಲೇಲಿ ಬಂತೋ ಕಾಣೆ, ಆ ನಿನ್ನ ಡ್ರೆಸ್ಸೋ,






# ಮ್ಯಾಚಿಂಗ್ ಮ್ಯಾಚಿಂಗ್

**ವಿ. ಪ್ರಾಣೇಶರಾವ್**

## "ರೀ"

ಏನೋ ಬರೆಯುತ್ತಾ ಕುಳಿತಿದ್ದ ನಾನು ನನ್ನ ಹೆಂಡತಿಯ ದನಿಗೆ ಬೆಚ್ಚಿ ಬಿದ್ದೆ. ಏನು ಎಂದು ಕಣ್ಣಿನಲ್ಲೇ ಅವಳನ್ನು ಕೇಳುವ ಧೈರ್ಯ ಮಾಡಿದೆ.

"ರೀ ಮ್ಯಾಚಿಂಗ್ ಬ್ಲೌಸ್ ಪೀಸ್ ತಗೋದದೆ, ಬಜಾರಕ್ಕೆ ಹೋಗಿಬರೋಣಾರೀ" ಅಂದಳು

ಸರಿ ಹೊರಟೆವು

ಇಡೀ ಊರು ಜಾಲಾಡಿದರೂ ಇವಳಿಗೆ ಬೇಕಾಗೋ ಮ್ಯಾಚಿಂಗ್ ಬ್ಲೌಸ್ ಪೀಸ್ ಎಲ್ಲೂ ಸಿಗಲಿಲ್ಲ. ಕೊನೆಗೆ ಮೂರಂಗಡಿ ಸರ್ಕಲ್ಲಲ್ಲಿರೋ ಭಂಡಾರೀಸ್ ಅನ್ನೋ ಒಂದು ದೊಡ್ಡ ಅಂಗಡಿಗೆ ನನ್ನನ್ನು ಕರೆದೊಯ್ದಳು. ಅಲ್ಲಿ ಅವಳು ಬಟ್ಟೆ ಆರಿಸುತ್ತಿರುವಾಗ ನಾನು ಅಲ್ಲಿದ್ದ ಸ್ಟೂಲಿನ ಮೇಲೆ ತೂಕಡಿಸುತ್ತಾ ಕುಳಿತವನು ಭ್ರಮಾಲೋಕಕ್ಕೆ ಜಾರಿದೆ.

ಒಂದು ಊರು, ಅಲ್ಲಿ ವಾಸದ ಮನೆಗಳು, ಸಿನಿಮಾ ಮಂದಿರ, ಹೋಟೆಲು, ಅಂಗಡಿ ಮುಂಗಟ್ಟು ಯಾವುವೂ ಇರಲಿಲ್ಲ. ಬರೀ ಮ್ಯಾಚಿಂಗ್ ಬ್ಲೌಸ್ ಪೀಸ್ ಅಂಗಡಿಗಳ ಸಾಲು. ಅಲ್ಲಿ ಇವಳು ತನಗೆ ಬೇಕಾದುದನ್ನು ಆರಿಸುತ್ತಾ ಸಂಭ್ರಮದಿಂದ ಇತ್ತಿಂದತ್ತ ಅತ್ತಿಂದತ್ತ ಓಡಾಡುತ್ತಿದ್ದಳು.

ಅವಳಿಗೆ ಬೇಕಾದ ಬ್ಲೌಸ್ ಪೀಸ್ ಸಿಕ್ಕ ಮೇಲೆ ಬಂದು ನನ್ನನ್ನು ಎಬ್ಬಿಸಿದಾಗ ಗಾಬರಿಯಾಯಿತು.  ನನ್ನ ಕನಸನ್ನು ವಿವರಿಸಿದಾಗ ನಕ್ಕಳು. ರೀ ಮ್ಯಾಚಿಂಗ್ ಸಂಬಂಧ ನಾನೂ ಒಂದು ವೆರಿ ಇಂಟರೆಸ್ಟಿಂಗ್ ಸ್ಟೋರಿ ಹೇಳ್ತೀನಿ ಅಂತ ಸ್ಕೂಟರೇರಿದಳು.

"ರಾಜಾ ನಿಮಗೆ ನಮ್ಮ ಸುನಂದ ಗೊತ್ತಲ್ಲ"

"ಗೊತ್ತೇಳು, ಅದೇ ನಿಮ್ಮ ಕಸಿನ್ನು, ದಪ್ಪ ಜಡೆಯವಳು. ಒಳ್ಳೆ ಬ್ಯೂಟಿ. ಯಾರೋ ಸಿನಿಮಾ ಆಕ್ಟರ್ ಥರಾ ಇದ್ದಾಳಂತಲ್ಲ ಅವಳೇ ಅಲ್ಲೇನು ಅಂದೆ"

"ಅವಳೇ, ಆದರೆ ನಿಮ್ಮ ಹೊಗಳಿಕೆ ಅತಿಯಾಯಿತು. ಏನ್ಸಮಾಚಾರಾ"

ನಾನು ಮಾತಾಡಲಿಲ್ಲ.

"ಸುನಂದಗೆ ಮ್ಯಾಚಿಂಗ್ ಮ್ಯಾಚಿಂಗ್ ಅಂದ್ರೆ ಏನೋ ಉತ್ಸಾಹರೀ. ಮ್ಯಾಚಿಂಗ್ ಅಂದ್ರೆ ಮುಗೀತು. ರೆಡ್ ಸ್ಯಾರಿ ಅಂದ್ರೆ ಅವಳಿಗೆ ಪ್ರಾಣ. ಎಲ್ಲಕ್ಕೂ ಎಲ್ಲಾನೂ ಮ್ಯಾಚಿಂಗ್ ಆಗ್ಬೇಕು. ಬಿಂದಿ, ಲಿಪ್ಸ್ಟಿಕ್ಕು, ನೇಲ್ ಪಾಲಿಷ್, ಬ್ಲೌಸ್, ಸೀರೆ, ಕಾಲ್ಗೆಜ್ಜೆ, ಎಲ್ಲಾನೂ ಅಂದ್ರೆ ಎಲ್ಲಾನೂ ಅವಳು ಕೂಸಿದ್ದಾಗ ಒಮ್ಮೆ ಬೆಳ್ಳಿ ಝುಮ್ಕಿ ಬಿಳಿ ಫ್ರಾಕು ಹಾಕಿ ಬಿಳಿ ಹೂ ಮುಡಿಸಿದ್ರು. ಎಲ್ಲ ಬಿಳಿ ಬಿಳಿ ಆದ್ರೂ ಸಮಾಧಾನ ಇಲ್ಲ. ಆಗ ತಾತ ಅಂದ್ರು ನೋಡಮ್ಮಗು ತಲೆಗೂದ್ಲಿಗೂ ಬಿಳಿ ಬಣ್ಣ ಹಾಕಿದ್ರೆ ಆಲ್ ವೈಟ್ ಆಗ್ತದಲ್ಲ ಅಂತ. ಅದಕ್ಕೆ ನನ್ತಮ್ಮ ಹೌದು ತಾತ, ಆಗ ಇವ್ಳು ಥೇಟ್ ವಿಕ್ರಂ ಔರ್ ಬೇತಾಳ್ ಥರ ಕಾಣಿಸ್ತಾಳೆ ಅಂತ ಕಿಚಾಯಿಸಿದ. ನಾವೆಲ್ಲಾ ಘೊಳ್

ಅಂತ ನಕ್ಕಿದ್ದು ನೋಡಿ ಅವಳು ರೌದ್ರಾವತಾರ ತಾಳಿ ಅವನನ್ನು ಹಿಡಿದು ಚಚ್ಚಿ ಘನಘೋರ ಯುದ್ಧಾನೇ ಮಾಡಿಬಿಟ್ಟಿದ್ದಳು"

ಅವಳ ನಗುವಿನ ಜೊತೆ ನನ್ನ ನಗುವನ್ನು ಸೇರಿಸುತ್ತಾ, " ರೆಡ್ ಸ್ಕಾರಿ ಕೇಸ್ " ಅಂತ ಅದೇನೋ ಸ್ಪೆಷಲ್ ಆಗಿ ಹೇಳ್ತಾ ಇದ್ದೆ ಅದನ್ನ ಹೇಳೇ ಅಂದೆ.

"ಹೌದೂರೀ, ಅದನ್ನ ಹೇಳ್ತೀನಿ ಕೇಳಿ. ನಮ್ ಸುನಂದ ಥೇಟ್ ಸಿನಿಮಾ ತಾರೆ ಮನೋಹರಿ ಹಾಗೆ ಬ್ಯೂಟಿ ಕ್ವೀನ್. ಅದಕ್ಕೆ ಬ್ಯೂಟಿ ಪಾರ್ಲರ್‌ನೋರು ಮೇಡಂ ಊರಿನಲ್ಲಿ ಸಿನಿಮಾ ಷೂಟಿಂಗ್ ನಡೀತಾ ಇದೆ. ನಿಮ್ಮನ್ನೇ ಸಿನಿಮಾ ತಾರೆ ಮನೋಹರಿ ಅಂತ ಎತ್ತಾಕ್ಕೊಂಡು ಹೋಗಿಬಿಟ್ಟಾರು, ಸುಮ್ನೆ ಬೇಗ ಮನೆಗೆ ಹೊರಟುಬಿಡಿ ಮೇಡಂ ಅಂತ ಅಂದ್ರು. ಬ್ಯೂಟಿ ಪಾರ್ಲರ್‌ನವರ ಹೊಗಳಿಕೆ ಕೇಳಿ ಅವಳು ಭೂಮೀ ಮೇಲೇ ಇರ್ಲಿಲ್ಲ ರೀ"

"ಹೌದು ನಾನೂ ಕೇಳಿದೀನಿ. ಆ ದಿನ ಅವಳು ರೆಡ್ ಸ್ಕಾರಿ ರೆಡ್ ಸ್ಲೀವ್ ಲೆಸ್ನಲ್ಲಿ ಒಳ್ಳೆ ಸ್ಟನ್ನಿಂಗ್ ಮತ್ತು ಡ್ಯಾಸ್ಲಿಂಗ್ ಬ್ಯೂಟಿ ಆಗಿದ್ಲೂಂತ. ಹಾಗೆ ಈಗೊಂದು ಷಾರ್ಟ್ ಬ್ರೇಕ್ ತಗೊಳೋಣ" ಎನ್ನುತ್ತಾ ಗಾಡಿ ನಿಲ್ಲಿಸಿ ಎಳನೀರು ಕುಡಿದೆವು.

ಮತ್ತೆ ಅವಳು ಕಥೆ ಮುಂದುವರಿಸಿದಳು

"ಸುನಂದ ಗಂಡ ಮನೋಜ್ ಅಂತ, ಅವನು ಅವಳನ್ನು ಮೊದಲು ನೋಡಿದ್ದು ಹೋಟೆಲ್ ಸುಗ್ರಾಸದಲ್ಲಂತೆ. ಅದಕ್ಕೆ ಆ ದಿನ ಅವರ ಪ್ರಥಮ ಮಿಲನದ ವಾರ್ಷಿಕೋತ್ಸವ ಅಂತ ಅವಳನ್ನು ಅಲ್ಲಿಗೆ ಬರೋಕೆ ಹೇಳಿದ್ನಂತೆ. ಕೆಂಪು ಸೀರೆ, ಕೆಂಪು ಬ್ಲೌಸ್‌ನಲ್ಲಿದ್ದ ಸುನಂದ ಗಂಡನೊಂದಿಗೆ ಊಟ ಮುಗಿಸಿ ಸುಗ್ರಾಸದಿಂದ ಹೊರಬಂದಾಗ ಕಂಡಿದ್ದು ಷಾಪಿಂಗ್ ಮಾಲ್ನಿಂದ ಹೊರಬರುತ್ತಿದ್ದ ಹೆಂಗಸೂ ಕೂಡಾ ತನ್ನಂತೆಯೇ ಇದ್ದಾಳೆ ಮತ್ತು ತನ್ನ ಕಲರ್ ಸೀರೇನೇ ಉಟ್ಟಿದಾಳೆ ಅಂತ. ನೋಡಿದರೆ ಅವಳು ಮನೋಜ್‌ನ ಆಫೀಸಿನ ಸ್ಟೆನೋ ಮಿಸೆಸ್ ಮಾಯಾರಾವ್. ಅವಳೂ ಅಂದು ಟಾಪ್ ಟು ಬಾಟಮ್ ಕೆಂಪು ಬಣ್ಣದಲ್ಲೇ ಕಂಗೊಳಿಸುತ್ತಿದ್ದಳು. ಇಬ್ಬರೂ ಒಂದೇ ತರಹ ಇದ್ದಿದ್ರಿಂದ ಒಬ್ಬರಿಗೊಬ್ಬರು ಅದಲು ಬದಲಾಗಬಹುದು ಅಂತ ಅನಿಸಿಯೇ ಇರಲಿಲ್ಲವಂತೆ.

" ಏನ್ ಮೇಡಂ, ಮ್ಯಾರೇಜ್ ಆನಿವರ್ಸರೀನಾ" ಅಂತ ಮಾಯಾರಾವ್ ಸುನಂದನ ಅಭಿನಂದಿಸಿದ್ಲಂತೆ. ತುಂಬ ಚೆಂದ ಕಾಣ್ತೀದೀರಿ ಅಂತ ಹೊಗಳಿದಳಂತೆ. ಆ ಹೊತ್ತಿಗೆ ಅವಳ ಪಕ್ಕದ್ಮನೆ ಪದ್ಮಕ್ಕನೂ ಸುನಂದ ಸುಬ್ರಮಣಿನ ನೋಡಿ ನೀವು ಇಂದು ತುಂಬ ಚೆಂದ ಕಾಣ್ತೀದೀರಿ. ದೃಷ್ಟಿ ತೆಗೆಸ್ಕೊಳ್ರೀ ಎನ್ನುತ್ತಾ ಮಾತಿಗೆ ನಿಂತ್ರಂತೆ.

"ನಾನು ಮಧ್ಯ ಬಾಯಿ ಹಾಕಿ ಪದ್ಮಕ್ಕ ಅಂದ್ರೆ ಅದೇ ಮಂಗಳೂರಿನೋರು, ಜಯಮಾಲಾ ಇದ್ದ ಹಾಗೆ ಇದಾರೆ ಅಂತಿದ್ಯಲ್ಲ ಅವರೇ ತಾನೇ" ಅಂತ ಕೇಳಿದೆ.



"ನನ್ನ ಮೂತಿ ತಿವಿದು ಹೌದು ನಿಮಗೆ ಎಲ್ಲರೂ ಸಿನಿಮಾ ತಾರೆಯರ ಹಾಗೇ ಕಾಣ್ತಾರೆ, ಒಬ್ಬಳು ಜಯಮಾಲಾ, ಇನ್ನೊಬ್ಬಳು ಜಯಂತಿ ಹಂಗೆ ಅಲ್ವೇನ್ರೀ" ಅಂದಳು

ನಾನು ಮಾತಾಡಲಿಲ್ಲ,

ಸರಿ, ಸುನಂದ ಪದ್ಮಕ್ಕನೂ ಅಡಿಗೆ ತಿಂಡಿ ಅದೂ ಇದೂ ಅಂತ ಮಾತಾಡ್ತಾ ಮಾಲ್‌ನಲ್ಲಿ ಬೇಕಾದ ಪದಾರ್ಥ ತಗೋತಾ ಇದ್ರು. ಅತ್ತ ಮನೋಜ್ ಮತ್ತು ಮಾಯಾ ಆಫೀಸ್

ವಿಚಾರ ಮಾತಾಡುತ್ತಿದ್ದರು. ಸಂಜೆ ಹೊತ್ತು ನೋಡಿ ಮಾಲ್‌ನಲ್ಲಿ ತುಂಬಾ ಜನ ಇದ್ರು. ಮಾಯಾಳ ಡ್ರೆಸ್ಸಿಂಗ್ ಸೆನ್ಸ್ ಹೊಗಳುತ್ತಾ ನಿಂತಿದ್ದ ಮನೋಜ್ ಮೊಬೈಲ್ ರಿಂಗ್ ಆದಾಗ ಹೊರಗೆ ಬಂದ. ಆಗ ಶಾಪಿಂಗ್ ಮಾಲ್‌ನಲ್ಲಿ ಒಂದು ಕಡೆಯಿಂದ ಜೋರಾಗಿ ಢಮಾರ್ ಅಂತ ಶಬ್ದ ಬಂತಂತೆ. ದೊಡ್ಡ ಸಿಡಿಲು ಬಡಿಯಿತೇನೋ ಅನ್ನುವಂಥ ಸದ್ದು. ಸುತ್ತಲೂ ಕತ್ತಲು ಕವಿಯಿತು. ಜನ ಎಲ್ಲ ಬಾಂಬ್ ಸ್ಫೋಟಗೊಂಡಿತೋ ಏನೋ ಅಂತ ದಿಕ್ಕಾಪಾಲಾಗಿ ಓಡತೊಡಗಿದರಂತೆ. ಭಯದಿಂದ ನಡುಗಿದ ಮನೋಜ್ ಮಾಲ್ ಒಳಗೆ ಬಂದು ದೂರದಲ್ಲಿ ಕಾಣುತ್ತಿದ್ದ ಕೆಂಪು ಸೀರೆಯವಳನ್ನು ಕೈ ಹಿಡಿದು ದರ ದರ ಅಂತ ಎಳೆದುಕೊಂಡು ಬಂದು ಸ್ಕೂಟರ್ ಹತ್ತಿಸಿ ಹೊರಟೇ ಬಿಟ್ಟನಂತೆ. ಅವಳು ರೀ ರೀ ಅಂತ ಕಿರುಚುತ್ತಿದ್ದರೂ ಅವಳ ಕಡೆ ಗಮನ ಕೊಡದೇ ಸಧ್ಯ ಈ ಸ್ಥಳದಿಂದ ಆದಷ್ಟೂ ದೂರ ಹೋದರೆ ಸಾಕು ಅಂತ ಸ್ಕೂಟರನ್ನು ವೇಗವಾಗಿ ಓಡಿಸಿದನಂತೆ.



ಇತ್ತ ಮಾಲ್‌ನಲ್ಲಿ ಶಬ್ದ ಬಂದಿದ್ದು ಬಾಂಬ್ ಸ್ಫೋಟದಿಂದಲ್ಲ, ಟ್ರಾನ್ಸ್‌ಫಾರ್ಮರ್ ಸಿಡಿದಿದ್ದರಿಂದ ಅಂತ ಗೊತ್ತಾಗಿ ಜನ ನಿರಾಳವಾದರು. ಕೆಲವೇ ಕ್ಷಣಗಲ್ಲಿ ದೀಪಗಳೂ ಹೊತ್ತಿಕೊಂಡವು. ಸುನಂದಳೂ ಪದ್ಮಕ್ಕನೂ ಆಚೆ ಬಂದು ನೋಡಿದರೆ ಮನೋಜ್ ಕಾಣ್ತಿಲ್ಲ. ಬಾಂಬ್ ಸಿಡಿದು ಹೆಂಡ್ತಿ ಬೇಕಾದ್ರೆ ಸಾಯ್ಲಿ ಅಂದ್ಕೊಂಡು ಮನೆಗೆ ಹೊರಟು ಹೋದರೋ ಏನೋ ಅಂತ ರೇಗಿಕೊಂಡು ಸುತ್ತಮುತ್ತ ನೋಡತೊಡಗಿದಳು. ಪದ್ಮಕ್ಕ ಮೊದಲು ಮೊಬೈಲ್ ರಿಂಗ್ ಮಾಡು, ಎಲ್ಲಿದಾರೆ ಅಂತ ಗೊತ್ತಾಗುತ್ತೆ ಅಂದ ಮೇಲೆ ಸುನಂದ ಗಂಡನ ಮೊಬೈಲ್‌ಗೆ ರಿಂಗ್ ಮಾಡಿದಳಂತೆ. ಆಗ ಮನೋಜ್‌ಗೆ ಷಾಕ್ ಆಗಿ ನೋಡ್ತಾನೆ ತಾನು ಕರ್ಕೊಂಡು ಬಂದಿದ್ದು ತನ್ನ ಹೆಂಡತಿ ಅಲ್ಲ ಮಾಯಾರಾವ್ ಅಂತ. ಮಾಯಾರಾವ್ ಕ್ಷಮೆ ಕೇಳಿದಾಗ ಅವಳು ನಗುತ್ತಾ, ನಾಚುತ್ತಾ, ಪರವಾಗಿಲ್ಲ ಬಿಡಿ ಸರ್, ನಾನು ಎಷ್ಟು ಸಾರಿ ರೀ ರೀ ಅಂತ ಕೂಗ್ತಾ ಇದ್ರೂ ನೀವು ನನ್ನ ಮಾತೇ ಕೇಳದೇ ನನ್ನ ಕೈ ಬಿಗಿಯಾಗಿ ಹಿಡಿದು ಎಳ್ಕೊಂಡು ಬಂದು ಸ್ಕೂಟರ್ ಹತ್ತಿಸಿ ಕರ್ಕೊಂಡು ಬಂದ್ರಲ್ಲಾ ಅದರಲ್ಲೂ ಒಂಥರಾ ಥ್ರಿಲ್ ಇತ್ತು ಅಂದ್ಲಂತೆ.



ಮನೋಜ್, “ ನಿಮ್ಮ ಥ್ರಿಲ್ ಮನೆ ಹಾಳಾಯ್ತು, ಹೆಂಡ್ತಿಗೆ ಗೊತ್ತಾದ್ರೆ ನನಗೆ ಡ್ರಿಲ್ ಮಾಡಿಸ್ತಾಳೆ” ಅಂತ ಅವಳನ್ನು ಮತ್ತೆ ಷಾಪಿಂಗ್ ಮಾಲ್ ಹತ್ತಿರ ಕರ್‍ಕೊಂಡು ಬಂದ್ನಂತೆ. ಆಗ ಅಲ್ಲಿದ್ದ ಸುನಂದ ಗಂಡನ ಕಡೆ ಕೆಕ್ಕರಿಸಿ ನೋಡಿ, “ ಏನ್ರೀ ನಿಮಗೆ ಬಿಳಿ ಸೀರೆ ಉಟ್ಕೋಳೆಲ್ಲಾ ನನ್ನ ಹೆಂಡ್ತಿ ಎನ್ನೋ ಬುದ್ಧಿ ಯಾವಾಗಿಂದ ಬಂತು “ ಅಂದು ಮಾಯಾರಾವ್ ಕಡೆ ನೋಡಿ “ ಏನ್ ಮೇಡಂ, ಅವರು ಎಳ್ಕೊಂಡು ಹೋದ್ರು ಅಂತ ನೀವೂ ಸುಮ್ಮನೆ ಹೋಗಿಬಿಡೋದಾ. ನಿಮಗೂ ಅದೇ ಬೇಕಾಗಿತ್ತಾ “ ಅಂತ ಕೇಳಿದಳಂತೆ

ಮಾಯಾರಾವ್‌ಗೆ ಬೇಜಾರಾದರೂ ಸುಮ್ಮನೇ ನಿಂತಿದ್ಲಂತೆ. ಸುನಂದ ಗಂಡನ ಕಡೆ ನೋಡಿ “ ನಡೀರ್‍ರೀ ಇಲ್ಲೇನು ನೋಡ್ತಾ ನಿಂತ್ರಿ ಅಂದು ಪದ್ಮಕ್ಕನ ಕಡೆ ತಿರುಗಿ “ ಪದ್ಮಕ್ಕಾ ಈ ಗಂಡಸ್ರನ್ನು ನಂಬಲೇಬಾರದು, ಶುದ್ಧ ಪಾಕಾಡಾಗಳು” ಅಂದ್ಲಂತೆ.

ಅದಕ್ಕೆ ಪದ್ಮಕ್ಕ ನಗುತ್ತಾ “ ನಿನ್ನ ಗಂಡನ್ನ ಮನೆಗೆ ಎಳ್ಕೊಂಡು ಹೋಗಿ ಅದೇನು ಸೇಡು ತೀರಿಸ್ಕೊತೀಯೋ ತೀರಿಸ್ಕೋ” ಅಂದು ಕಣ್ಣು ಹೊಡೆದು ನಕ್ಕರಂತೆ.

ಮಾಯಾರಾವ್ ಸುನಂದ ಬಳಿ ಬಂದು “ ಸಾರಿ ಮೇಡಂ” ಅಂದ್ಲಂತೆ. ಸುನಂದ ತುಟಿ ಕೊಂಕಿಸಿದಳು ಮಾತು ಬರಲಿಲ್ಲ.

“ನೋಡ್ರೀ ಹೀಗೆ ನಡೀತು ಅವರ ಕಥೆ” ಅಂದಳು

ಅವಳ ಮಾತಿಗೆ ತಲೆಯಾಡಿಸಿ ನಾನು “ ಹೌದು ಕಣೆ ಮನೋಜ್ ಅಂಥವರನ್ನು ನಂಬಲೇಬಾರದು,” ಅಂದೆ

ಅದಕ್ಕೆ ನನ್ನವಳು “ ನೀವೇನು ಕಮ್ಮಿ, ಅವಳು ಬ್ಯೂಟಿ ಇವಳು ಬ್ಯೂಟಿ ಅಂತ ಬೇರೆ ಹೆಂಗಸರನ್ನು ನನ್ನ ಮುಂದೆನೇ ಹೊಗಳ್ತಾ ಇರ್‍ತೀರಲ್ಲ” ಅಂದಳು.

ನಾನು “ಬರೀ ಹೊಗಳಿದರೇನು, ನಿನ್ನ ಬಿಟ್ಟು ಬೇರೆ ಯಾವ ಹೆಂಗಸರನ್ನೂ ನನ್ನ ಸ್ಕೂಟರಲ್ಲಿ ಕೂರಿಸಿಕೊಂಡು ಹೋಗೋ ಭಾಗ್ಯ ನನಗೆ ಇನ್ನೂ ಬಂದಿಲ್ಲವಲ್ಲ” ಅಂದೆ

ಅವಳು “ಏನಂದ್ರೀ” ಅಂದಾಗ “ನಿನ್ನಂಥಾ ಹೆಣ್ಣು ಇನ್ನಿಲ್ಲ, ನಿನ್ನಂಥಾ ಹೆಣ್ಣು ಬೇರಿಲ್ಲ” ಅಂದು ಹಾಡುತ್ತಾ ಅವಳನ್ನು ಸ್ಕೂಟರ್ ಹತ್ತಿಸಿ ಸ್ಟಾರ್ಟ್ ಮಾಡಿ ಓಡಿಸುತ್ತಾ ಅವಳ ಕೈ ಹಿಡಿದು ನನ್ನ ಸೊಂಟದ ಸುತ್ತ ಸುತ್ತಿಕೊಂಡೆ.

## ಅನಾಮಧೇಯನ ಉವಾಚ

- ಡಯಟ್ ಮಾಡಿದವರಿಗೆ ಕೇಕ್ ತಿನ್ನು ಅಂತಾರೆ. ಆದರೆ ಒಂದೇ ಒಂದು ಪೀಸ್ ತಿನ್ನು ಅಂತಾರೆ. ಹಾಗಾದರೆ ಅವನು ಚಿಕ್ಕ ಪೀಸ್ ಆಗಿ ಟ್ರೈ ಮಾಡದೆ ಒಂದೇ ಪೀಸ್ ಆಗಿ ತಿನ್ನಬಹುದೆ?
- ಡಯಟ್ ಮಾಡೋರಿಗೆ ರಾತ್ರಿ ಹೊತ್ತು ಏನೂ ತಿನ್ನ ಬೇಡಿ ಅಂತ ಹೇಳ್ತಾರೆ. ಹಾಗಾದರೆ ಫ್ರಿಜ್ ಬಾಗಿಲು ತೆಗೆದಾಗ ಲೈಟ್ ಯಾಕೆ ಹತ್ತುತ್ತೆ?
- ಜೀವನದಲ್ಲಿ ಲವ್ ಬಹಳ ಮುಖ್ಯ ಅಂತ ಕೆಲವರು ಹೇಳಿದಾರೆ. ಆದರೆ ನನ್ನ ಪ್ರಕಾರ ಉಸಿರಾಡೋಕೆ ಆಮ್ಲಜನಕ ಇನ್ನೂ ಮುಖ್ಯ.



# ಹೊಸ ವರ್ಷಕ್ಕೊಂದು 'ವಾಟ್ಸ್‌ಡೌನ್' ಆಪ್!

* **ತುರುವೇಕೆರೆ ಪ್ರಸಾದ್**

**ಹೊ**ಸ ವರ್ಷದಲ್ಲಿ ಯಾರ್ಯಾರೋ ಏನೇನೋ ಸಂಕಲ್ಪ ಮಾಡುತ್ತಾರೆ. ಕೆಲವರು ಸಿಗರೇಟ್ ಸೇದುವುದನ್ನು, ವಿಸ್ಕಿ ಕುಡಿಯುವುದನ್ನು (ಸ್ವಂತ ದುಡ್ಡಿನಲ್ಲಿ) ಬಿಡುತ್ತಾರೆ. ಮತ್ತೆ ಕೆಲವರು ಸ್ವಂತ ಹೆಂಡತಿಯನ್ನೇ ಬಿಟ್ಟು ಬೇರೆಯವರ ಹೆಂಡತಿ ಮೇಲೆ ಕಣ್ ಹಾಕುವ ಸಂಕಲ್ಪ ಮಾಡುವವರಿದ್ದಾರೆ. ಕೆಲವರು ಓದು, ಬರಹ ಕಾಲೇಜನ್ನೇ ಬಿಟ್ಟವರೂ ಇದ್ದಾರೆ. ಹೊಸ ವರ್ಷದಲ್ಲಿ ಹೀಗೇ ಏನಾದರೂ ಹುಚ್ಚುಚ್ಚಾಗಿ ಮಾಡಬೇಕು ಎಂದು ತಿಕ್ಕಲು ಹತ್ತುವುದು ಸರ್ವೇ ಸಾಮಾನ್ಯ ಮತ್ತು ಅದು ಮಾರನೆಯದ ದಿನ ಎಣ್ಣೆ ಕಿಕ್ ಇಳಿದ ಮೇಲೆ ಮರೆತು ಹೋಗುವುದೂ ಅಷ್ಟೇ ಸಾಮಾನ್ಯ..!

> **ನಾವು ಏನೆಲ್ಲಾ ಮಾಡಬಹುದು ಎಂಬುದರ ಒಂದು ದೊಡ್ಡ ಪಟ್ಟಿಯೇ ಇಲ್ಲಿದೆ.**

ಈ ತರ ಹುಚ್‌ಹುಚ್ಚಾಗಿ ಕುಚೋದ್ಯದ, ಕುಪ್ರತಿಷ್ಠೆಯ ಅಥವಾ ತಲೆಪ್ರತಿಷ್ಠೆಯ ಕೆಲಸ ಮಾಡಿದವರಿಗೂ ನೊಬಲ್ ಪ್ರಶಸ್ತಿ ಮಾದರಿಯಲ್ಲಿ ಇಗ್ನೋಬೆಲ್ ಪ್ರಶಸ್ತಿ ನೀಡಲಾಗುತ್ತದೆ. ಬ್ರಿಟನ್ನಿನ ಕೊಕೊಕೋಲ ಕಂಪೆನಿ ನಲ್ಲಿಯಲ್ಲೂ ಖನಿಜ ನೀರು ಬರುತ್ತದೆ ಎಂಬುದನ್ನು ತೋರಿಸಿ ಇಗ್ನೋಬೆಲ್ ಗಿಟ್ಟಿಸಿತ್ತು. ನಾವು ಬೋರ್ ನೀರಿನಲ್ಲಿ ಸಾಕ್ಷಾತ್ ಖನಿಜ ಚೂರುಗಳು ಐ ಮೀನ್ ಕೇಸಿಂಗ್ ಪೈಪ್ ಪಳೆಯುಳಿಕೆಗಳು ಬರುತ್ತವೆ ಎನ್ನುವುದನ್ನು ಕಂಡು ಹಿಡಿದು ಹೊಸ ವರ್ಷದಲ್ಲಿ ಪ್ರಶಸ್ತಿ ಗಿಟ್ಟಿಸಬಾರದೇಕೆ?

ವಾಟ್ಸ್‌ಅಪ್ ಮತ್ತು ಫೇಸ್‌ಬುಕ್‌ಗಳಲ್ಲೇ ಟೆಕ್ಸ್ಟ್‌ಬುಕ್, ನೋಟ್ಸ್ ಬರುವಂತೆ (ಎಲ್‌ಕೆಜಿಯಿಂದ ಎಂಜಿನಿಯರ್, ಮೆಡಿಸಿನ್‌ವರೆಗೆ) ಹೊಸ ಆಪ್ ಒಂದನ್ನು ಹೊಸ ವರ್ಷದಲ್ಲಿ ಭಾರತೀಯರಾದ ನಾವು ಏಕೆ ಕಂಡು ಹಿಡಿಯಬಾರದು? ಅದನ್ನು ವಾಟ್ಸ್ ಡೌನ್? ( ಸೊಂಟದ ಕೆಳಗಿನ ಸ್ವಾರಸ್ಯದ ಆಪ್ ಎಂಬ ಸ್ಟೇಟಸ್‌ನೊಂದಿಗೆ) ಬಗ್ಗಿ, ಕದ್ದು ನೋಡುವ ನಮ್ಮ ಯುವಕರಿಗೆ, ಶಾಸಕರಿಗೆ ಏಕೆ ಕೊಡಬಾರದು?

ಫ್ಲಾರಿಡಾದ 'ಅಮೇರಿಕನ್ ನ್ಯೂಡಿಸ್ಟ್ ಲೈಬ್ರರಿ' ತರ ನಮ್ಮ ಶಾಸಕರಿಗೆ ಸಂಸದರಿಗೆ ಮೊಬೈಲ್ ಇಲ್ಲದೆಯೇ ಬರೀ ಅಂಗೈನಲ್ಲೇ ಬ್ಲೂ ವೀಡಿಯೋ ನೋಡುವಂತಹ ಒಂದು ಹೊಸ ಆಪ್ ಏಕೆ ಹೊಸವರ್ಷದಲ್ಲಿ ಸೃಷ್ಟಿಸಬಾರದು?

ಮನುಷ್ಯರ ಹೊಕ್ಕುಳಲ್ಲಿ ಸಿಕ್ಕಿಕೊಂಡ ಗುಂಜು ದಾರದ ಎಳೆ ಬಿಡಿಸಿದವರಿಗೆ ಇಗ್ನೋಬೆಲ್ ಪ್ರಶಸ್ತಿ ಸಿಕ್ಕಿದೆ. ಹಾಗೇ ನಾವೂ ಚಿತ್ರತಾರೆಯರ ಹೊಕ್ಕಳಲ್ಲಿ ಸಿಕ್ಕಿಕೊಂಡ ಗುಂಜು, ರವಿಚಂದ್ರನ್ ಹಾಕಿದ ದ್ರಾಕ್ಷಿ, ಗೋಡಂಬಿಗಳನ್ನು ಹುಡುಕಿ ಉತ್ಖನನ ಮಾಡಿ ಹೊಸ ವರ್ಷದಲ್ಲಿ ಹೊಸದನ್ನೇನಾದರೂ ಸಾಧಿಸಬಾರದೇಕೆ?



ಬೊಕ್ಕ ತಲೆಯ ಭಾಗ ಎದ್ದು ಕಾಣದ ಹಾಗೆ ಕೂದಲು ಬಾಚುವುದರ ಬಗ್ಗೆ ಅರ್ಲಂಡೋದ ತಂದೆ ಮಗ ಇಗ್ನೋಬೆಲ್ ಪ್ರಶಸ್ತಿ ಪಡೆದಿದ್ದರು. ಹೊಸ ವರ್ಷದಲ್ಲಿ ನಾವೂ ಹೆಂಡತಿಯ ಲಟ್ಟಣಿಗೆ ಪ್ರಹಾರದ ಫಲವಾಗಿ ಎದ್ದಿರುವ ಭಾರೀ ಬುಗುಟನ್ನೂ ಕಾಣದಂತೆ ತಲೆ ಬಾಚುವ ಹೊಸ ವಿಧಾನಗಳನ್ನು ಏಕೆ ಸಂಶೋಧಿಸುವ ಸಂಕಲ್ಪ ಏಕೆ ಮಾಡಬಾರದು? ತಲೆಯ ಮೇಲಿರುವ ಕೂದಲನ್ನೇ ಉದುರಿಸಿ ಅಂತಹ ಪೂರ್ಣ ಬೊಕ್ಕ ಚೊಂಬನ್ನು ನಿಮ್ಮ ದರ್ಪಣವಾಗಿಸಿ, ರಿಫ್ಲೆಕ್ಟರ್‌ಗಳಾಗಿ, ಡಿಶ್ ಆಂಟೆನಾಗಳಾಗಿ ಹೇಗೆ ಬಳಸಬಹುದೆಂಬ ಬಗ್ಗೆ ಹೊಸ ಆವಿಷ್ಕಾರವನ್ನು ಹೊಸವರ್ಷದಲ್ಲಿ ಏಕೆ ಮಾಡಬಾರದು?

ಅನಿಲ್ ಬಾಲ್ಸಂಕರ್ ಎನ್ನುವವರು ತಮ್ಮ ಇಚ್ಛಾಶಕ್ತಿಯಿಂದ ಎರಡು ನಿಮಿಷದವರೆಗೆ ಬೇಕೆಂದಾಗ ತಮ್ಮ ತಲೆಗೂದಲನ್ನು ನೆಟ್ಟಗೆ ನಿಲ್ಲಿಸಬಲ್ಲರಂತೆ. ಒಣ ನಾರಿನಂತೆ ಮುರಿದುಬಿದ್ದ ಅಳಿದುಳಿದ ಒಂದೋ, ಎರಡೋ ಕೂದಲೆಳೆಯನ್ನು ಉದುರದಂತೆ ಹಿಡಿದಿಟ್ಟುಕೊಳ್ಳುವುದೇ ಹರಸಾಹಸವಾಗಿರುವಾಗ ಇದೇನು ಸಾಮಾನ್ಯ ಸಾಧನೆಯೇ? ನಮ್ಮ ಹುಡುಗರ ಟೋಫನ್ನಿನ ಕೂದಲು ಸೆಟೆದು ನಿಲ್ಲುವಂತೆ ಭವ್ಯ ಭಾರತದ ಲತಾಂಗಿಯರು ಹೊಸದೇನಾದರೂ ಸಂಶೋಧನೆ ಮಾಡಬಾರದೇ?

ಜಾರ್ಕಂಡ್‌ನ ರಾಹುಲ್ ಎಂಬಾತ ಬೆಟ್ಟವನ್ನೇ ಮದುವೆಯಾಗಿದ್ದಾನಂತೆ! ಬೆಟ್ಟದಂತ ಹೆಂಡತಿಯನ್ನು ಕಟ್ಟಿಕೊಂಡೂ ಬೆಟ್ ಕಟ್ಟಿ ಏಗುವವರಿದ್ದಾರೆ. ಆದರೆ ರಾಹುಲ್ ಗಾಂಧಿ ಮಾತ್ರ ಮದುವೆ ಎಂದರೆ ಹೆದರುತ್ತಿದ್ದಾರೆ. ಹೊಸ ವರ್ಷದಲ್ಲಿ ಯಾರಾದರೂ ಬ್ಯೂಟಿ ಕ್ವೀನ್‌ಗಳು ರಾಹುಲ್ ಗಾಂಧಿಯವರ ಬ್ರಹ್ಮಚರ್ಯದ ಸೆರೆ (ಕನ್ಯಾಸೆರೆ ತರ) ಬಿಡಿಸುವ ಪ್ರಯತ್ನ ಮಾಡಿಯಾರಾ?

ಎಲ್ಲರೂ ಬ್ಲಾಕ್ ಮನಿ ವಾಪಸ್ ತರುವ ಯೋಚನೆಯಲ್ಲಿದ್ದಾಗ ಮೊನ್ನೆ ಮೊನ್ನೆ ಚೆನ್ನೈ ಏರ್‌ಪೋರ್ಟ್‌ನಲ್ಲಿ ಇಬ್ಬರು ಹಣಕಾಸು ಪಂಡಿತರು(?) ಲಕ್ಷಾಂತರ ಡಾಲರ್‌ಗಳನ್ನು ಗುದದಲ್ಲಿ ಇಟ್ಟುಕೊಂಡು ವಿಮಾನದಲ್ಲಿ ಪರಾರಿಯಾಗಲು ಸ್ಕೆಚ್ ಹಾಕಿದ್ದರು. (ಇದನ್ನು 'ಬ್ಲಾಕ್ ಮನಿ' ಎನ್ನುವುದಕ್ಕಿಂತ 'ಬ್ಯಾಕ್ ಮನಿ' ಎನ್ನಬಹುದಾ?) ಹೊಸ ವರ್ಷದಲ್ಲಿ ಈ ರೀತಿ ಮನಿ ಹಾರಿಸಲು ಹೊಸ ಹೊಸ ಸ್ಕೀಂ ಆನ್ವೇಷಿಸಬಹುದಾ?

ಕೇರಳದ ಸೀಮತ್ತಿ ಟೆಕ್ಸ್‌ಟೈಲ್ಸ್‌ನವರು 1585 ಅಡಿ ಉದ್ದದ ಸೀರೆ ನೇಯ್ದು ಲಿಮ್ಕಾ ದಾಖಲೆಗೋ, ಗಿನ್ನೀಸ್ ದಾಖಲೆಗೋ ಸೇರಿದ್ದಾರಂತೆ. ಸಂತೋಷ ಸೇರಲಿ ಬಿಡಿ. ಇಂತಹದೊಂದು ಸೀರೆಯನ್ನು ಅಕಸ್ಮಾತ್ ಉಟ್ಟರೆ ನೆರಿಗೆಯನ್ನು ಎಲ್ಲಿಗೆ ತುರುಕಿಕೊಳ್ಳಬೇಕು ಎಂಬ ಬಗ್ಗೆ ಅಪ್ಪಟ ಭಾರತೀಯ ನಾರಿಯರು ಹೊಸ ವರ್ಷದಲ್ಲಿ ಯಾಕೆ ಸಂಶೋಧನೆ ನಡೆಸಬಾರದು? ಇನ್ನೊಂದೆಡೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸೀರೆಯುಡುವ, ಅದನ್ನು ಪ್ರಾರಬ್ಧ ಕರ್ಮ ಎಂದೇ ಭಾವಿಸುವ 'ಅಪ್ ಡು ಡೇಟ್' ಅಮ್ಮಣ್ಣಿಯವರು ಈ ಸೀರೆ ಉಟ್ಟೂ ಹೊಕ್ಕಳು ಕಾಣುವಂತೆ ಕುಬುಸ (ಅಕಸ್ಮಾತ್ ಹಾಕಿದರೆ !) ಮತ್ತು ನೆರಿಗೆಯನ್ನು ಸಮ ಬಾಜಕ ವೃತ್ತದಿಂದ ಎಷ್ಟು ಸಮಾನ ದೂರದಲ್ಲಿ ಕೂರಿಸಬೇಕು ಎಂಬ ಲೆಕ್ಕಾಚಾರದ ಹೊಸ ಫಾರ್ಮುಲಾ ಕಂಡು ಹಿಡಿದರೆ ಹೇಗೆ?



ರೂ 4700 ಬಿಸಾಕಿ ಚಂದ್ರನ ಮೇಲೆ ಎರಡು ಸೈಟು ಮಾಡಿದ್ದೇವೆ ಎಂದು ಕಲ್ಕತ್ತಾದ ದಂಪತಿಗಳು ಘೋಷಿಸಿದ್ದರು. ಯಾವುದೇ ರಾಕೆಟ್ ಇಲ್ಲದೆ 'ರೈಲು' ಬಿಟ್ಟ 'ಅಗೋ ನೋಡು ಚಂದ್ರ ಬಿಂಬ, ತಗೋ ಕೈಗೆ ತಾಮ್ರದ ಚೊಂಬ', ಎನ್ನುವ ಈ ದಂಪತಿಗಳಂತೆ ನಮ್ ಹೆಂಡತಿಯರೂ ಬೆಂಗಳೂರಿನಲ್ಲಿ ಸೈಟ್ ಕೊಡಿಸು ಎಂದು ಗಂಡನನ್ನು ಪೀಡಿಸುವ ಬದಲು ಹೊಸ ವರ್ಷದಲ್ಲಿ ಮಂಗಳನಲ್ಲಿ ಮ್ಯಾನ್‌ಶನ್ ಕಟ್ಟುವ ಯೋಜನೆ ತಯಾರಿಸಬಾರದೇಕೆ?

ನಮ್ಮಲ್ಲಿ ಜ್ಞಾನಪೀಠ ಗಳಿಸುವ ಸಾಹಿತ್ಯ ಕೃತಿಗಳಿಗಿಂತ ಜ್ಞಾನಪಿತ್ಥ ಕೆರಳಿಸುವ ಸಾಹಿತ್ಯದ ಕೆಟಗರಿಯೇ ಹೆಚ್ಚು. ಇಂತಹ (ಕೆಟ್ಟ?) ಸಾಹಿತ್ಯಗಳು ಅಕಸ್ಮಾತ್ ಸಿನಿಮಾ ಆಗಿಬಿಡುತ್ತವೆ. ಹಿಂದೊಮ್ಮೆ ವರ್ಷದ ಅತ್ಯಂತ ಕೆಟ್ಟ ಚಿತ್ರಗಳ ತಂತ್ರಜ್ಞರು ಮತ್ತು ಕಲಾವಿದರಿಗಾಗಿ ನೀಡುವ 'ಗೋಲ್ಡನ್ ರಾಸ್ ಬೆರ್ರಿ' ಪ್ರಶಸ್ತಿಗೆ ನಮ್ಮ ಮೂಲದವರೇ ಆದ ಮನೋಜ್ ನೈಟ್ ಶಾಮಲನ್ ಎಂಬುವವರ ಚಿತ್ರವನ್ನು ನಾಮಕರಣ ಮಾಡಲಾಗಿತ್ತು. ಆ ಚಿತ್ರದ ಹೆಸರು 'ಲೇಡಿ ಇನ್ ವಾಟರ್'. ಲೇಡಿ ಇನ್ ವಾಟರ್ ಚಿತ್ರವನ್ನು ಮೀರಿಸುವಂತಹ 'ಬೇರ್ ಲೇಡಿ ಇನ್ ವಾಟರ್' 'ವಾಟರ್ ಇನ್ ಲೇಡಿ' ಮಾದರಿಯ ಚಿತ್ರಗಳನ್ನು ಹೊಸವರ್ಷದಲ್ಲಿ ನಾವೇಕೆ ತಯಾರಿಸುವ ಸಂಕಲ್ಪ ಮಾಡಬಾರದು?

ನಮ್ಮ ಭಾರತೀಯ ಮೂಲದ ಲೇಖಕಿ ಕಾವ್ಯ 'ಹೌ ಐ ಗಾಟ್ ಎ ಕಿಸ್ ಫ್ರಮ್ ಓಪೆಲ್?' ಎಂಬುದನ್ನು ಯಾರದ್ದೋ ಪುಸ್ತಕದಿಂದ ಕಾಪಿ ಹೊಡೆದು ಪ್ರಚಾರ ಗಿಟ್ಟಿಸಿರಲಿಲ್ಲವೇ? ಈ ಕಾಪಿ ಸಾಹಿತ್ಯ ಗೊತ್ತಾಗದಂತೆ ನಕಲು ಮಾಡಲು ಹೊಸ ಸಾಫ್ಟ್‌ವೇರ್ ಕಂಡು ಹಿಡಿಯುವ ಹೊಸ ಸಂಶೋಧನೆ ಮಾಡಿ ಹೊಸ ವರ್ಷದಲ್ಲಿ ಡಾಕ್ಟರೇಟ್ ಪಡೆಯಬಹುದಲ್ಲ!

ಕಲ್ಲು, ಮಣ್ಣಿನ ಗಣಪತಿ ಎರ್ರಾಬಿರ್ರಿ ಹಾಲು ಕುಡಿದು ಬಿಡುತ್ತದೆಂದು ಹೆದರಿ 'ಸ್ಪೇರ್ ಗಣಪತಿ' ಮಾಡಿದ್ದೇವೆ. ಗಾಲಿಯ ಕಣ್ಣು, ಬೇರಿಂಗ್‌ಗಳಿಂದ ಮಾಡಿದ ಹಾರ, ಫ್ಯಾನ್‌ಬೆಲ್ಟ್‌ನಿಂದ ಮಾಡಿದ ಜನಿವಾರ, ಟ್ಯೂಬಿನಿಂದ ಮಾಡಿದ ಸೊಂಡಿಲು, ಹೀಗೆ ಬಸ್ಸು ಲಾರಿಯ ಸ್ಪೇರ್ ಪಾರ್ಟ್ಸ್ ಹಾಕಿ ನಿರ್ಮಿಸಿರುವ ಗಣಪತಿ ಹಾಲೆಲ್ಲಿ ಕುಡಿದೀತು? ಹೆಚ್ಚೆಂದರೆ ಗ್ರೀಸ್ ತಿಂದು ಕ್ಯಾಸ್ಟ್ರಾಲ್ (ಹರಳೆಣ್ಣೆ) ಕುಡಿದೀತು! ಇಂತಹ ಗಣಪತಿ ನಾಗಪುರದ ಶಿವಾಜಿ ಪಾರ್ಕ್‌ನಲ್ಲಿದೆ. ಯಂತ್ರ ಮಾನವನನ್ನು ನಿರ್ಮಿಸುವುದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯಂತ್ರ ದೇವರನ್ನೇ ಸೃಷ್ಟಿಸಲಾಗಿದೆ. ಈ ತರ ಮುಕ್ಕೋಟಿ ಯಂತ್ರ ದೇವರುಗಳನ್ನು ಸೃಷ್ಟಿಸಲು ಮೋದಿ ಸಾಹೇಬರು ಹೊಸ ವರ್ಷದಲ್ಲಿ ನಿರುದ್ಯೋಗಿ ಯುವಕರಿಗೆ ಹೊಸ 'ಮೇಕ್ ಇನ್ ಇಂಡಿಯಾ' ಯೋಜನೆ ಏಕೆ ಘೋಷಿಸಬಾರದು?

ಜಪಾನೀ ಸಂಶೋಧಕಿ ಮಾಯೂ ಯಮಾಮೊಟೆಗೆ ಸಗಣಿಯಿಂದ ವೆನಿಲ್ಲಾ ಸುಗಂಧ ತಯಾರಿಸಿದ್ದಾರಂತೆ! ಇದೇನು ಮಹಾ ಬಿಡಿ. ಭಾರತದ ಯಾವುದೇ ಎಮ್ಮೆಗೆ ವೆನಿಲ್ಲಾ ತಿನ್ನಿಸಿ. ಅದು ತಪ್ಪದೇ ಸಗಣಿಯನ್ನೇ ಹಾಕುತ್ತದೆ. ವೆನಿಲ್ಲಾದಿಂದ ಸಗಣಿ ತಯಾರಿಸುವ ವಿಧಾನದ ಪೇಟೆಂಟ್ ಹೊಸ ವರ್ಷದಲ್ಲೇ ನಮಗೇ ಸಿಗಬೇಕು ಎಂದು ನಾವೇಕೆ ವಿನೂತನ ಸಗಣಿ ಧರಣಿ ಮಾಡಬಾರದು?



ಸಂಪರ್ಕ ಕ್ಷೇತ್ರದಲ್ಲಿ ಮೊಬೈಲ್ ಅವಿಷ್ಕಾರ ಮತ್ತು ಅಭಿವೃದ್ಧಿಯಿಂದ ಮಂಗನ ಕೈಲಿ ಮಾಣಿಕ್ಯ ಕೊಟ್ಟಂತಾಗಿದೆ. ಮೊಬೈಲ್ ಇಲ್ಲದೆ ಬದುಕೇ ಇಲ್ಲ ಎಂಬಂತಾಗಿದೆ.

ಮಾತಾಡುವುದಕ್ಕಿಂತ ಹೆಚ್ಚಾಗಿ ಅನೇಕ ಗುಪ್ತ ಚಟ ಮತ್ತು ಪೋಲಿತನಕ್ಕೆ ಮಾಧ್ಯಮವಾಗಿ ಮೊಬೈಲ್ ಒದ್ದಾಡುತ್ತಿದೆ. ಮೊಬೈಲ್‌ನ ಎಲ್ಲಂದರಲ್ಲಿ ಸಿಕ್ಕಿಸಿಕೊಂಡು ಮನುಷ್ಯನ ಬ್ಯಾಟರಿ ವೀಕ್, ಲೀಕ್ ಆಗುತ್ತಿರುವಂತೆಯೇ, ಅತಿಯಾದ ಬಳಕೆಗೆ ಬಲಿಯಾಗಿ ಮೊಬೈಲ್ ಬ್ಯಾಟರಿಗಳು 'ಢಂ' ಎನ್ನುತ್ತಿವೆ. "ಢಂ' ಎನ್ನುವ ತ್ರಾಣವಿಲ್ಲದ ಬ್ಯಾಟರಿಗಳು ಕರೆಂಟನ್ನೂ ಹೀರದೆ ತೆಪ್ಪಗೆ ಕುಳಿತಿರುತ್ತವೆ. ಎಲ್ಲಾ ಸರಿಯಾಗಿದೆ ಎಂದರೂ ರಸ್ತೆಯಲ್ಲಿ, ಪಾರ್ಕ್‌ನಲ್ಲಿ, ಹೋಟೆಲಲ್ಲಿ, ಮೊಬೈಲ್ ಛಾರ್ಜ್ ಮಾಡುವ ಸಾಧ್ಯತೆ ನಮ್ಮ ದೇಶದಲ್ಲಿ ತೀರಾ ಕಮ್ಮಿ. ಮೈ ಬಿಸಿಯಿಂದಲೇ ಮೊಬೈಲ್ ಛಾರ್ಜ್ ಆಗುತ್ತದೆ ಎಂದು ಇತ್ತೀಚೆಗೆ ಸಂಶೋಧನೆ ನಡೆಸಿದ್ದಾರೆ. ಆದರೆ ನಮ್ಮ ಮೈ ಬಿಸಿಯೇ ಆಗುತ್ತದಾ ಅಥವಾ ಪಕ್ಕದವರ ಮೈ ಬಿಸಿಯಿಂದ ಆಗುತ್ತದಾ ಎಂಬ ಸಂಶೋಧನೆಯನ್ನು ಹೊಸ ವರ್ಷದಲ್ಲಿ ನಾವೇಕೆ ಮಾಡಬಾರದು?

ಪ್ರೇಮಿ, ಹೆಂಡತಿ ಇಬ್ಬರೂ ಇಲ್ಲದೆ ಮೊಬೈಲ್‌ನ ತತ್ ಕ್ಷಣದಲ್ಲಿ ಛಾರ್ಜ್ ಮಾಡಿಕೊಳ್ಳಲು ಈ ಮೈ-ಶಾಖ ಉಪಯೋಗಕ್ಕೆ ಬರುವುದಿಲ್ಲ. ಅಂತಹವರಿಗೆ ಈಗ ಎಲ್ಲೆಂದರಲ್ಲಿ ಸಿಗುವ ಸಗಣಿಯೇ ವರದಾನವಾಗಿದೆ. ಸಗಣಿಯಿಂದ ಮೊಬೈಲ್‌ನ ಛಾರ್ಜ್ ಮಾಡಬಹುದು ಎಂದು ಯಾರೋ ಕಂಡುಹಿಡಿದಿದ್ದಾರಂತೆ. ಸರಿ, ಅದನ್ನೇ ಬ್ಯಾಟರಿ ಬದಲು ಮೊಬೈಲ್‌ಗೆ ತುಂಬಿಕೊಡುವ ಸಗಣಿ ರಿಫಿಲ್ ಔಟ್ಲೆಟ್‌ಗಳನ್ನು, ಫ್ರಾಂಚೈಸಿಗಳನ್ನು ಸರ್ಕಾರ ಏಕೆ ಹೊಸವರ್ಷದಲ್ಲಿ ತೆಗೆಯಬಾರದು?

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಿಶೇಷವಾಗಿ ರೆಡ್‌ಲೈಟ್‌ಗಳಲ್ಲಿ ಗಂಡಸರ ಸಂಕೇತವೇ ಏಕಿರಬೇಕು? ಗಂಡಸರೆಂದರೆ 'ಡೇಂಜರ್' ಎಂದು ಲಿಂಗಭೇದ ಮಾಡಿದಂತಲ್ಲವೇ? ಹುಡುಗಿಯರ ಬಾಡಿಲೈನನ್ನು ಟ್ರಾಫಿಕ್ ಸಿಗ್ನಲ್ ಒಳಗೆ ಬರುವಂತೆ ಮಾಡಿದರೆ ಹೇಗೆ? ಹೀಗೆ ಮಾಡುವುದರಿಂದ ಅಪಘಾತಗಳು ಕಮ್ಮಿಯಾಗುತ್ತವೆ. ಅಪಘಾತಕ್ಕೆ ಅವಸರವೇ ಕಾರಣ ತಾನೇ? ರೆಡ್ ಸಿಗ್ನಲ್ ಲೈಟಿನಲ್ಲಿ ಹುಡುಗಿಯರ ಮೋಹಕ ಭಂಗಿಯೋ, ಐಟಂ ಸಾಂಗ್‌ನ ವೀಡಿಯೋ ಕ್ಲಿಪಿಂಗೋ, ಏನೋ ಒಂದು ಬರುವಂತಾದರೆ ವಾಹನ ಚಾಲಕರು ಕಣ್ಣು ಬಾಯಿ ಬಿಟ್ಟುಕೊಂಡು ಗ್ರೀನ್ ಸಿಗ್ನಲ್ ಬಿದ್ದರೂ ಹೋಗದೆ ಅಲ್ಲೇ ಮತ್ತೊಂದು ಸಿಗ್ನಲ್ ಬೀಳುವವರೆಗೆ ನಿಂತೇ ಇರುತ್ತಾರೆ. ಇನ್ನು ಅಪಘಾತವಾಗುವುದಾದರೂ ಹೇಗೆ ಹೇಳಿ? ಹೊಸ ವರ್ಷದಲ್ಲಿ ಇಂತಹ ಒಂದು ಪೋಲಿ ಸಿಗ್ನಲ್ಲನ್ನು ನಮ್ಮ ಪೋಲೀಸರು ಏಕೆ ಅಳವಡಿಸಬಾರದು?

ನಮ್ಮ ರಾಜಕೀಯದವರು ಕುರ್ಚಿಗಾಗಿ ಏನೆಲ್ಲಾ ಸರ್ಕಸ್ ಮಾಡುತ್ತಾರೆ ಎಂದು ನಮಗೆಲ್ಲಾ ಗೊತ್ತೇ ಇದೆ. ಕುರ್ಚಿಯ ವ್ಯಾಮೋಹದ ಮುಂದೆ 'ಕೊಟ್ ಮಾತು ಇಟ್ಟ ಆಣೆ ಎಲ್ಲಾ ಗೋವಿಂದ' ಎಂದು ಪುಣ್ಯಕೋಟಿಯ ಭಜನೆ ಮಾಡುತ್ತಿದ್ದ ಪಂಚಕೋಟಿ ಕನ್ನಡಿಗರಿಗೆ ಮನವರಿಕೆಯಾಗಿದೆ. ಮುಂಬೈನ ಡಾ॥ ಅಬ್ದುಲ್ ರಜಾಕ್ ಬೇಗ್ ಎಂಬ ಹೋಮಿಯೋಪತಿ ವೈದ್ಯರು ಗುಳಿಗೆ, ಟಾನಿಕ್ ಕೊಡುವುದನ್ನು ಬಿಟ್ಟು ತಿರುಗು ಕುರ್ಚಿಯಲ್ಲಿ ಜನರನ್ನು ಕೂರಿಸಿ ಗರ್ರನೆ ತಿರುಗಿಸುತ್ತಾರಂತೆ. ಹೀಗೆ ಜನ ಜೋಷ್‌ನಲ್ಲಿದ್ದಾಗ ಜೋಕ್ಸ್ ಹೇಳಿ, ಕವನ ವಾಚನ ಮಾಡಿ ಅವರನ್ನು ನಗಿಸಿ ರೋಗ ವಾಸಿ ಮಾಡುತ್ತಾರಂತೆ. ನಗುವಿನಿಂದ ಎಲ್ಲಾ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆ ಅವರದ್ದು. ಕುಮಾರಸ್ವಾಮಿ, ಯಡಿಯೂರಪ್ಪ, ದೇವೇಗೌಡರು, ಖರ್ಗೆ ಮೊದಲಾದವರನ್ನು ಒಮ್ಮೆ ಈ ಕುರ್ಚಿಯಲ್ಲಿ ಕೂರಿಸಿ ಗರ್ರನೆ ಸುತ್ತಿಸಬೇಕು. ಅವರು ನಕ್ಕರೆ ಅದನ್ನು ಸರ್ಕಾರ ಹೊಸ ವರ್ಷದ ಉಡುಗೊರೆಯಾಗಿ ಕುರ್ಚಿಭಾಗ್ಯ ಎಂದು ಪ್ರತಿ ಮನೆಗೊಂದು ಕುರ್ಚಿಕೊಡಬೇಕು. "ದಂತಭಾಗ್ಯ" ಎಂದು ಹಲ್ಲು ಕೊಟ್ಟ ಮೇಲೆ ಅದನ್ನು ಪ್ರದರ್ಶಿಸಲು ಸರ್ಕಾರ ಹೊಸ ವರ್ಷದಲ್ಲಿ ಏನಾದರೂ ಸರ್ಕಸ್ ಮಾಡಲೇಬೇಕಲ್ಲ!



# ಗಡಿ ಬಿಡಿ ಗುಂಡ

**- ವಿಜಯ ಗುರುರಾಜ್**

ನಮ್ಮ ಗುಂಡೂರಾವ್ ಅರ್ಥಾತ್ ನಮಗೆಲ್ಲ ಗುಂಡ, ಗುಂಡಣ್ಣ ಹೀಗೆ ಕರೆಯುವುದು ವಾಡಿಕೆ. ನಮ್ಮ ಗುಂಡನಿಗೆ ಬೆಂಗಳೂರಲ್ಲಿ ಮೇಷ್ಟ್ರರಾಗಿ ಕೆಲಸ ಸಿಕ್ಕಿತು.

ಆಗಷ್ಟೇ ಸ್ಕೂಟರ್‌ಗಳು ರೋಡಿಗಿಳಿದಿದ್ದ ಕಾಲ. ಮಿರಿ ಮಿರಿ ಮಿರುಗುವ ಹೊಸ ಸ್ಕೂಟರ್‌ನ್ನು ಕೊಂಡ. ಗುಂಡ ಕೆಲಸಕ್ಕೇನೊ ಸಲೀಸಾಗಿ ಹೋಗಿಬರುತ್ತಿದ್ದ. ಆದರೆ ಅವನ ಅಡಿಗೆ ಅವನೇ ಬೇಸಿಕೊಂಡು ತಿನ್ನಬೇಕಲ್ಲ ಎಂದು ಅಪ್ಪ ಅಮ್ಮ ಊರಲ್ಲಿ ಅವನಿಗಾಗಿ ಹುಡುಗೀನ ಹುಡುಕುತ್ತಿದ್ದರು.

ಗುಂಡ ದಿನವೂ ಸ್ಕೂಟರ್‌ನಲ್ಲಿ ಬರುವಾಗ, ಹೋಗುವಾಗ ದಾರಿಯಲ್ಲಿ ಟೂ ವ್ಹೀಲರ್‌ಗಳಲ್ಲಿ ಗಂಡನ ಭುಜ ಹಿಡಿದು ಹಿಂದೆ ಕುಳಿತ ಭಾರ್ಯಾಮಣಿಗಳು ಅಲ್ಲದೆ ಕೆಲವು ಕನ್ಯಾಮಣಿಗಳು ಅವರ ಬಾಯ್‌ಫ್ರೆಂಡ್‌ಗಳ ಭುಜ ಹಿಡಿದು ಜಗತ್ತನ್ನೇ ಮರೆತವರಂತೆ ತೇಲಿ ಹೋಗುತ್ತಿರುವುದನ್ನು ನೋಡುತ್ತಿದ್ದ ಗುಂಡ.

ತಾನೂ ಅವರ ಹಾಗೇ ಎಂದು ಮದುವೆಯಾಗುವೆನೋ ಹೆಂಡತಿಯನ್ನು ಹಿಂದೆ ಕೂರಿಸಿಕೊಂಡು ಎಂದು ತಿರುಗಾಡುವೆನೋ ಎಂದು ಕನಸು ಕಾಣುತ್ತಿದ್ದ.

ಅಂತೂ ಒಂದು ಶುಭಮುಹೂರ್ತದಲ್ಲಿ ಗುಂಡನ ಮದುವೆ ಆಗಿ ಗುಂಡನ ಹೆಂಡತಿಯಾಗಿ ಹೊಸಿಲಕ್ಕಿ ಮೆಟ್ಟಿ ಗುಂಡನ ಮನೆ ತುಂಬಿದಳು ಗಜಗೌರಿ.

ಬೆಳ್ಳ ಬೆಳ್ಳಗೆ ಗುಂಡು ಗುಂಡಾಗಿದ್ದರಿಂದ ಗಜಗೌರಿ ಎಂದು ಹೆಸರಿಟ್ಟಿದ್ದರೇನೊ? ಗಜದಗಲವಿದ್ದ ಹೆಂಡತಿಯನ್ನು ಪ್ರೀತಿಯಿಂದ ಗೌರೀ ಎನ್ನುತ್ತಿದ್ದ ಗುಂಡ.

ಅಂದು ಭಾನುವಾರ ಗೌರಿ ಗಂಡನ ತಲೆಗೆ ಹರಳೆಣ್ಣೆಯನ್ನು ತಟ್ಟಿ ರಕ್ಷೆಯಿಟ್ಟಳು. ಮೊದಲಬಾರಿಗೆ ಹೆಂಡತಿಯನ್ನು ರಾಜ್‌ಕುಮಾರ್ ಸಿನಿಮಾಗೆ ಕರೆದೊಯ್ಯಲು ತವಕದಿಂದ ಸಿಳ್ಳೆಹಾಕುತ್ತ ಸ್ಕೂಟರ್‌ನ್ನು ಫಳ ಫಳ ನೆಂದು ಒರೆಸಿಟ್ಟ. ನಾಚಿಕೆಯಿಂದಲೇ ಗಂಡನ ತಲೆ, ಬೆನ್ನು ಉಜ್ಜಿ ಬಿಸಿನೀರು ಸುರಿವಿದ ಹೆಂಡತಿಯ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸಿದ ಗುಂಡ. ಗೌರಿಯಿತ್ತ ಬಿಸಿ ಬಿಸಿ ಅವರೇಕಾಳು ಉಪ್ಪಿಟ್ಟು, ಹೊರೆ ತುಪ್ಪ ಹಾಕಿದ ಸಜ್ಜಿಗೆಯನ್ನು ತೃಪ್ತಿಯಿಂದ ಸೇವಿಸಿದವನೇ ಸೊಗಸುಗಾರನಂತೆ ಸಿದ್ಧನಾದ. ಸಿಂಗಾರಗೊಂಡ ಹೆಂಡತಿಯನ್ನು ಸ್ಕೂಟರ್‌ನಲ್ಲಿ ಕೂರಿಸಿಕೊಂಡು ಐರಾವತವನ್ನು ಹತ್ತಿದ ಇಂದ್ರನೋ ಎಂಬಂತೆ ತೇಲುತ್ತಾ ಹೊರಟ ಥಿಯೇಟರಿನ ಬಳಿಗೆ. ಟಿಕೇಟ್ ಕೌಂಟರ್ ಬಳಿ ನಿಲ್ಲಿಸಿದ. ಕಿಟಕಿಯಲ್ಲಿ ಸೋಲ್ಡ್ ಔಟ್ ಬೋರ್ಡ್ ಕಾಣಿಸಿತು.

ಬೇಸರದಿಂದ ಅಂತೆಯೇ ಸ್ಕೂಟರ್ ತಿರುಗಿಸಿ ಮೆಜೆಸ್ಟಿಕ್‌ನತ್ತ ಧಾವಿಸತೊಡಗಿದ. ಎಲ್ಲಾದರೂ ಸರಿಯೇ ಸಿನಿಮಾವನ್ನು ಹೆಂಡತಿಗೆ ತೋರಿಸಲೇಬೇಕೆಂಬ ಹಠದಲ್ಲಿದ್ದ ಗುಂಡ.



ಹಾಗೇ ದಾರಿಯಲ್ಲಿ ಹೋಗುತ್ತಾ ಪ್ರೀತಿಯಿಂದ ಗೌರೀ.... ಎಂದ ಗೌರಿಯಿಂದ ಉಲಿತವೇ ಇಲ್ಲ. ಗೌರಿ ಏಕೆ ದೂರ ಕುಳಿತಿರುವೆ ಸಿನಿಮಾ ಟಿಕೆಟ್ಟು ಸಿಗಲಿಲ್ಲವೆಂದು ಕೋಪವೇ ಇನ್ನೂ ಹತ್ತಿರ ಬಾ ನನ್ನ ಬೆನ್ನಿಗೆ ಒರಗಿಕೋ ಎಂದ.

ಊಹು, ಗೌರಿ ಮೌನಗೌರಿಯಾಗಿದ್ದಳು. ಗುಂಡನಿಗೆ ಅನುಮಾನವಾಯಿತು. ಕೂಡಲೇ ತನ್ನ ಐರಾವತವನ್ನು ನಿಲ್ಲಿಸಿ ಕೆಳಗಿಳಿದ. ಸೀಟನ್ನು ತಡವಿ, ತಡವಿ ನೋಡಿದ. ಗೌರಿ ಅಲ್ಲಿರಲಿಲ್ಲ. ತಾನು ಸ್ಕೂಟರ್ ಓಡಿಸಿದ ರಭಸಕ್ಕೆ ಎಲ್ಲಾದರೂ ಉರುಳಿಹೋದಳೊ, ಏನೋ ಏನಾದಳೊ ಎಂದು ಪರಿತಪಿಸುತ್ತ ಅತ್ತ ಕಡೆಯಿಂದ ಬರುವ ಲಾರಿ, ಕಾರನ್ನು ನಿಲ್ಲಿಸಿ ರಸ್ತೆಯಲ್ಲಿ ಯಾರಾದರೂ ಹೆಂಗಸು ಬಿದ್ದಿರುವುದನ್ನು ಕಂಡಿರಾ ಎಂದು ಹಲುಬುತ್ತ ಕಾಂಕ್ರೀಟ್ ಕಾಡಿನಲ್ಲಿ ರಾಮನಂತೆ ಹೆಂಡತಿಯನ್ನು ಹುಡುಕುತ್ತ ಮತ್ತೆ ಮೊದಲು ಬಂದಿದ್ದ ಥಿಯೇಟರ್ ಹತ್ತಿರ ಬರುತ್ತಿದ್ದಂತೆಯೇ ಕೌಂಟರ್‌ನ ಬಳಿಯೇ ಗೌರಿ ನಿಂತಿದ್ದನ್ನು ದೂರದಿಂದಲೇ ಕಂಡು ಗೌರಿಶಂಕರ ಶಿಖರವೇರಿದಷ್ಟು ಸಂತಸದಿಂದ 'ಎಂದು ನಿನ್ನ ಸೇರುವೆ' ಎನ್ನುವಂತೆ ಧಾವಿಸಿದ. ಗಜಗೌರಿಯೂ ತನ್ನ ಗಜವನ್ನು ಮರೆತು ಓಡುತ್ತಾ ಬಂದು ಗಂಡನನ್ನು ತಬ್ಬಿಕೊಂಡಳು. ದೊಡ್ಡ ನಿಧಿ ದೊರೆತಂತೆ ಅವಳನ್ನು ಅಪ್ಪಿದ.

ಆಗಷ್ಟೆ ಸಿನಿಮಾ ಬಿಟ್ಟು ಹೊರ ಬರುತ್ತಿದ್ದ ಜನರು ರಸ್ತೆಯಲ್ಲೇ ತಬ್ಬಿ ನಿಂತಿದ್ದ ಜೋಡಿಯನ್ನು ನೋಡಿ ಇದೂ ಸಿನಿಮಾನೇನೋ ಎಂದು ತಬ್ಬಿಬ್ಬಾಗತೊಡಗಿದರು.

## ಏಕೆ ಬರೆಯುತ್ತೀರಿ?

ಉದಯೋನ್ಮುಖ ಬರಹಗಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಹೆಸರಾಂತ ಬರಹಗಾರರೊಬ್ಬರು 'ನೀವೇಕೆ ಬರಹಗಾರರಾಗಲು ಬಯಸುತ್ತೀರ?' ಎಂದು ಕೇಳಿದರು.

ಮೌನ ಆವರಿಸಿತು. ನಂತರ ಒಬ್ಬ ಉ. ಬರಹಗಾರ ಸಂಕೋಚದಿಂದ 'ನಾನು ಫೇಮಸ್ ಆಗಲು ಬಯಸುತ್ತೇನೆ' ಎಂದ.

'ಹ! ನಾನೊಬ್ಬ ಖ್ಯಾತ ಬರಹಗಾರ. ಆದರೆ ರಸ್ತೆಯಲ್ಲಿ ನಡೆದು ಹೋದರೆ ಯಾರೂ ನನ್ನನ್ನು ಗುರುತು ಹಿಡಿಯುವುದಿಲ್ಲ. ಫೇಮಸ್ ಆಗಬೇಕೆಂದರೆ ಬೇರೆ ಯಾವುದಾದರೂ ವೃತ್ತಿ ಹಿಡಿ' ಎಂದರು.

'ನಾನು ಬರೆದು ಜೀವನ ಸಾಗಿಸಬೇಕೆಂದಿದ್ದೇನೆ' ಎಂದ ಇನ್ನೊಬ್ಬ.

'ನನ್ನಂತಹ ಲೇಖಕರು ಪ್ರತಿ ವರ್ಷ 10,000 ರೂಪಾಯಿ ಗಳಿಸಬಹುದು. ಬದುಕಲು ಅದು ಸಾಕೆ?' ಎಂದು ಕೇಳಿದರು ಖ್ಯಾತ ಬರಹಗಾರರು.

ಉದಯನ್ಮೋಖ ಬರಹಗಾರರು ಗೊಂದಲದಲ್ಲಿ ಬಿದ್ದರು.

ಆ ಖ್ಯಾತ ಬರಹಗಾರರು ಅವರ ಗೊಂದಲಕ್ಕೆ ಹೀಗೆ ತೆರೆ ಎಳೆದರು: 'ನೀವು ಈಗಾಗಲೇ ಬರೆಯುತ್ತಿದ್ದೀರಿ ಏಕೆಂದರೆ ನಿಮಗೆ ಬರೆಯಲೇ ಬೇಕಿದೆ. ಅದು ಬಿಡಲಾಗದ ಚಟ. ಈ ನಿಮ್ಮ ಗುಣವನ್ನು ನೀವು ಯಾರೂ ಗಮನಿಸಿಯೇ ಇಲ್ಲ. ಆದುದರಿಂದ ನೀವು ಈಗಾಗಲೇ ಬರಹಗಾರರು ಆಗಿದ್ದೀರಿ. ಭಾರೀ ಭ್ರಮೆಗಳನ್ನು ಇಟ್ಟುಕೊಳ್ಳದಿರಿ. ನೀವು ಬರೆಯಲು ಯಾಕೆ ಶುರು ಮಾಡಿದಿರಿ ಎಂಬುದನ್ನು ನೆನಪಿಸಿಕೊಳ್ಳಿ. ಅದಕ್ಕೇ ಅಂಟಿಕೊಳ್ಳಿ. ಮುಂದಿನದು ಸಲೀಸಾಗುತ್ತದೆ.'



# ಊಟದ ಮಾಟ

**– ಜಯಕುಮಾರ್ ಮರಿಯಪ್ಪ**

ಒಂದು ಎರಡು ಬಾಳೆಲೆ ಹರಡು, ಮೂರು ನಾಕು ಅನ್ನ ಹಾಕು ..

ಊಟದ ಆಟ ಪದ್ಯ ಎಲ್ಲರಿಗೂ ಗೊತ್ತಿದೆ ಆದರೆ ಊಟಕ್ಕೂ ಒಂದು ಮಾಟ ಇದೆಯೇ? ದೊಡ್ಡ ದೊಡ್ಡ ಔತಣ ಕೂಟದಲ್ಲಿ ಎಟಿಕ್ವೇಟ್ಸ್ / ಟೇಬಲ್ ಮ್ಯಾನರ್ಸ್ ಇರುವ ಹಾಗೆ ಒಂದೊಂದು ಕಡೆ ಒಂದೊಂದು ಪಂಕ್ತಿ ಸಂಪ್ರದಾಯ ಇದೆ ಅನ್ನೋದು ಗೊತ್ತು. ಆದರೆ ಈ ಫಾಸ್ಟ್ ಫುಡ್‌ಗಳು ಬರುವ ಮುಂಚೆಯೇ ಗಬಗಬ ಅಂತಾ ಫಾಸ್ಟಾಗಿ ಫುಡ್ ತಿಂದು ಬಸ್ಸಿಗೋ ರೈಲಿಗೋ ಓಡುತ್ತಿದ್ದ ನಮಗೆ ಅದರ ಕಡೆಗೆ ಗಮನ ಎಲ್ಲಿರುತ್ತೆ ಹೇಳಿ.

**ಚಮಚ, ಮುಳ್ಳಿನ ಚಮಚ ಮತ್ತು ಮೊಂಡು ಚಾಕು ಬಳಸಿ ಮಸಾಲೆ ದೋಸೆ ತಿನ್ನುವುದೆ?**

ಈ ಪಾಶ್ಚಾತ್ಯ ಎಟಿಕ್ವೇಟ್ಸ್ ಧುತ್ತೆಂದು ನನ್ನ ಎದುರಿಗೆ ಬಂದದ್ದು ಯಾವುದೋ ಪಂಚತಾರಾ ಹೋಟೆಲ್ಲಿನಲ್ಲಿ ಆದ ಅನುಭವ ಅಂದುಕೊಳ್ಳಬೇಡಿ. ಅದು ನಡೆದದ್ದು ಮಹತ್ಮಾಗಾಂಧಿ ರಸ್ತೆಯ ಕಾಫಿ ಹೌಸಿನಲ್ಲಿ. ಏನು ಕೇಳಿದೆ ಮಹಾ! ಒಂದು ಮಸಾಲೆ ದೋಸೆ ಮಾತ್ರ. ಆದರೆ ಆತ ಅಷ್ಟನ್ನೆ ತಂದು ಕೊಡದೆ ಜೊತೆಗೆ ಚಮಚ, ಮುಳ್ಳಿನ ಚಮಚ ಮತ್ತು ಒಂದು ಮೊಂಡು ಚಾಕು ತಂದು ಇಡುವುದೆ. ನನ್ನ ನಗರೀ ನಾಜೂಕಿಗೆ ಎಸೆದ ಸವಾಲು. ಅದರ ಪ್ರಯೋಗವಿರಲಿ ಯಾವ ಕೈನಲ್ಲಿ ಯಾವುದನ್ನು ಹಿಡಿಯ ಬೇಕು ಎಂಬುದೆ ದೊಡ್ಡ ಪ್ರಶ್ನೆ ಆಗಿ ಹೋಗಿತ್ತು. ಆಗ ನನಗೆ ಗುರುವಾದವನು ನಮ್ಮ ನಾಗರಾಜ,  ಅವೆನ್ಯೂ ರೋಡಿನ ಸಂಜೀವಪ್ಪ ಗಲ್ಲಿಯ ಗೌರವಾನ್ವಿತ ನಾಗರಿಕ. ಆಗಲೆ ಗೊತ್ತಾಗಿದ್ದು ಈ ಅವೆನ್ಯೂ ರೋಡಿನ ಜನಕ್ಕೆ ಕೌಸಲ್ಯಾ ಸುಪ್ರಜಾ ರಾಮ ಆಗುವುದೇ ಕಾಫಿ ಹೌಸಿನಲ್ಲಿ ಎಂದು. ಬೈಟುಕಾಫಿಯ ಜನ್ಮದಾತರು ಇವರು.  ಹೀಗಾಗಿ ಇವರ ಈ ಚಮಚಾವಳಿಯ ಕರ ಕೌಶಲ ಪ್ರಾವಿಣ್ಯದ ಬಗ್ಗೆ ಪ್ರಶ್ನೆ ಎತ್ತುವಂತಿರಲಿಲ್ಲ . ಅವನು ಹೇಳಿಕೊಟ್ಟಂತೆ ಶಸ್ತ್ರ ಪ್ರಯೋಗ ಮಾಡಿದೆನಾದರೂ ಆ ಕಾಲದಲ್ಲಿ ಸಿ ಸಿ ಟೀವಿ ಕ್ಯಾಮರ ಇಲ್ಲದಿದ್ದರೂ ಕಾಫಿ ಹೌಸಿನ ಬೃಹತ್ ಬೆಲ್ಜಿಯಂಗಾಜಿನ ಕನ್ನಡಿಗಳು ಬಾಗಿ ನಿಂತು ನನ್ನ ಪರಿಪಾಟನ್ನು ಜಗಜ್ಜಾಹಿರು ಮಾಡುತ್ತಿವೆ ಎಂಬ ಅಳುಕು ನನ್ನನ್ನು ಕಾಡಿತ್ತು.

ಅಲ್ಲ ಒಂದು ಮಸಾಲೆ ದೋಸೆಗೇ ಇಷ್ಟೊಂದು ಬಿಲ್ಡಪ್ ಕೊಡ್ತಾ ಇದ್ದಾನಲ್ಲ ಅಂತಿರಾ. ಹಾಗಾದರೆ ಮಸಾಲೆ ದೋಸೆ ತಿನ್ನುವ ಬಗ್ಗೆ ದೇಸಿ ಶಿಷ್ಟಾಚಾರ ಸಂಪ್ರದಾಯ ನಿಮಗೆ ಗೊತ್ತೆ? ಈ ಪಲ್ಲಾಂಡು ಅಪೂಪವನ್ನು (ಇದು ಮಸಾಲೆದೋಸೆಗೆ ಸಂಸ್ಕೃತದ ಹೆಸರು – ಕಾಪಿ ರೈಟ್ ಶ್ರೀ ಪು.ತಿ. ನರಸಿಂಹಾಚಾರ್ಯರು) ಎಲ್ಲರೂ ತಿನ್ನುವ ರೀತಿ ನೋಡೋಣ. ಸುರುಳಿ ಸುತ್ತಿದ ಮಸಾಲೆ ಗರಿಗರಿಯಾಗಿ ಬಿಸಿ ಬಿಸಿಯಾಗಿ ಬರುತ್ತದೆ.



ಆ ಮಸಾಲೆ ದೋಸೆಯ ಹೊಟ್ಟೆಯ ಭಾಗದಲ್ಲಿ ಒಂದು ತುಣುಕು ಬೆಣ್ಣೆ ಮಿರಿ ಮಿರಿ ಮಿಂಚುತ್ತದೆ. ಅಟ್ಯಾಕ್ ಅನ್ನುತ್ತಾ ಅದರ ಹೊಟ್ಟೆಗೆ ತಿವಿದು ಪಲ್ಯ ಕಾಣುವಂತೆ ಬಗೆದು ನಿಮ್ಮ ಶುಭಾರಂಭ ಮಾಡುತ್ತೀರಿ. ನನಗೆ ಮಸಾಲೆ ದೋಸೆ ತಿಂಬೋಣದ ಶಿಷ್ಟಾಚಾರ ಹೇಳಿಕೊಟ್ಟವನು ಮಲ್ಲೇಶ್ವರದ ದೇವಯ್ಯ ಪಾರ್ಕಿನ ಶ್ರೀ ನಿವಾಸಿ (ಮಿ. ರೆಸಿಡೆಂಟ್) ಶ್ರೀ ಬಿ.ಕೆ ವಾಸು. ರುಚಿ ಅಭಿರುಚಿ ರಸನೋಲ್ಲಾಸ ಬಂದಾಗ ಮಲ್ಲೇಶ್ವರ ಕೇಂಬ್ರಿಡ್ಜು ಆದರೆ ಗಾಂಧಿಬಜಾರು ಆಕ್ಸ್‌ಫರ್ಡು. ಮಸಾಲೆ ದೋಸೆ ಬಂದಾಗ ವಾಸು ಅದರ ಹೊಟ್ಟೆಗೆ ಹೊಡೆಯಲಿಲ್ಲ. ಮಕಾಡೆ ಮಲಗಿದ್ದ ದೋಸೆಯನ್ನು ಅಂಗಾತವಾಗಿಸಿ. ಪಲ್ಯ ಕಾಣುವಂತೆ ಬಿಡಿಸಿ ಆಗಲೆ ಕೈಗೆತ್ತಿಕೊಂಡಿದ್ದ ಬೆಣ್ಣೆಯನ್ನು ಅದರಲ್ಲಿ ಹಾಕಿ ಮೊದಲಿಗೆ ಪಲ್ಯದ ಮಗ್ಗುಲಿಗೆ ಚಟ್ನಿ ಸುರಿದ. ತದನಂತರ ಬೆರಳಿಂದ ದೋಸೆಯ ಅಂಚನ್ನು ಮುರಿದು ಮುರಿದು ವೃತ್ತಾಕಾರವಾಗಿ ದೋಸೆಯನ್ನು ಪಲ್ಯ ಚಟ್ನಿ ಜೊತೆ ನೆಂಜಿಕೊಂಡು ತಿಂದು ಮಧ್ಯ ಭಾಗಕ್ಕೆ ಬಂದು ದೋಸೆಯ ಪರಿಪೂರ್ಣ ಸೇವನೆ ಮಾಡಿದ. ಕೇಂಬ್ರಿಡ್ಜಗೆ ಬಿಡದೆ ಪ್ರಶ್ನೆ ಕೇಳಿದೆ: ಹೀಗೆ ತಿನ್ನುವುದರ ವಿಶೇಷತೆ ಯಾದರೂ ಏನು? ಆಗ ಆ ರಸಿಕೋತ್ತಮನಾದರೂ ಹೇಳಿದ್ದು ಹೀಗೆ: ದೋಸೆ ಗರಿ ಗರಿಯಾಗಲಿ ಎಂದು ಹಿಟ್ಟಿನ ಹದ ಭಿನ್ನವಾಗಿ ಮಾಡಿರುವುದರಿಂದ ಅಂಚು ಆರಿ ಹೋದರೆ ರಟ್ಟಿನಂತಾಗುತ್ತದೆ ಅದೇ ಬಿಸಿ ಪಲ್ಯದ ಅಥವಾ ಹಸಿ ಚಟ್ನಿಯ ಸಂಸರ್ಗದಿಂದ ಮಧ್ಯದ ಭಾಗ ಮೆತ್ತಗೇ ಇರುತ್ತದೆ ಆದ್ದರಿಂದ ಅಂಚು ತಿಂದು ಬಳಿಕ ಮಧ್ಯಕ್ಕೆ ಬರುತ್ತೇನೆ ಎಂದನು. ಅನುಭವಂ ಪುದುಮೈ ಅವನಿಡೆ ಕಂಡೇನ್ ಎಂದು ನಾನಾದರೂ ತಲೆದೂಗಿದೆನು.

ಮಸಾಲೆ ದೋಸೆ ಮಾತ್ರವಲ್ಲ ಮುದ್ದೆ ತಿನ್ನುವುದಕ್ಕೂ ಒಂದು ಹದ ವಿಧ ಇದೆ . ಮುದ್ದೆಯ ವಿಶೇಷತೆಯೆಂದರೆ ಅಖಿಲಾಂಡಕೋಟಿ ಬ್ರಹ್ಮಾಂಡದ ಎಲ್ಲ ಉಣಿಸುಗಳ ಊಟದ ಕುರುಕ್ಷೇತ್ರದಲ್ಲಿ ಸಮತಟ್ಟಾದ, ಅಂದರೆ ಲೆವೆಲ್ ಪ್ಲೇಯಿಂಗ್ ಫೀಲ್ಡ್, ಇರಬೇಕಾದರೆ ಮುದ್ದೆಗೆ ಮಾತ್ರ ಇಳಿಜಾರು ಕ್ಷೇತ್ರವೇ ಪ್ರಶಸ್ತ. ಮುದ್ದೆ ಊಟ ಎಂದರೆ ಮೊದಲು ಬರುವುದು ಒತ್ತು ಎಂಬ ಮರದ ಬೆಣೆ. ಆಮೇಲೆ ಮಿರಿ ಮಿರಿ ಬೆಳಗಿದ ಕಂಚಿನ ಗಂಗಾಳ. ಒತ್ತಿನ ಮೇಲೆ ಇಳಿಜಾರಾಗಿ ಇರಿಸಿದ ಗಂಗಾಳದಲ್ಲಿ ಏರಿ ಮೇಲೆ ಬಿಸಿಬಿಸಿಮುದ್ದೆ ವಿರಾಜಮಾನವಾದಮೇಲೆ ಕೆರೆ ಅಂಗಳಕ್ಕೆ ಉಪ್ಪು ಸಾರೋ ಬಸ್ಸಾರೋ, ಮೊಳ್ಕೆಉಳ್ಳಿಸಾರೋ ಬಡಿಸಲಾಗುತ್ತದೆ ಮಗ್ಗುಲಿಗೆ ಕಾಳು ತರಕಾರಿ ಪಲ್ಯ ಬರುತ್ತವೆ. ಮುದ್ದೆ ಬಡಿಸಿದ ತಕ್ಷಣವೇ ಹಿರಿಯರಿಂದ "ಕೋಳಿ ಕುಕ್ಕಿದ ಹಾಗೆ ಕುಕ್ಕ ಬೇಡಿ ಸರಿಯಾಗಿ ಮುರಿಯಿರಿ" ಎಂಬ ಗದರಿಕೆ ಮಾತುಬರುತ್ತಿತ್ತು. ಮುದ್ದೆಯ ಮನಮೋಹಕತೆ ಇರುವುದೇ ಅದರ ಗೋಲಾಕಾರದಲ್ಲಿ. ಇನ್ನು ಮುದ್ದೆ ಮುರಿಯುವುದರಲ್ಲಿನ ಸವಾಲು ಎಂದರೆ ಕಡೆಯ ತುತ್ತಿನವರೆಗೂ ಆ ಗೋಲಾಕಾರ ಕೆಡಬಾರದು. ಇನ್ನು ಪ್ರೋಸ್ಸಸ್ಸು ಎಂದರೆ ಅಂಗೈನಲ್ಲಿ ಇಡಿ ಮುದ್ದೆ ಅದುಮಿ ಹೆಬ್ಬೆರಳು ತೋರು ಬೆರಳಿನ ನಡುವೆ ಹೆಬ್ಬೆರಳಿನ ಮಧ್ಯದ ಗಿಣ್ಣು ತೋರು ಬೆರಳಿನ ಕೊನೆಯ ಗಿಣ್ಣಿನ ಕರ್ತರಿ ಪ್ರಯೋಗದಿಂದ ಒಂದೆ ಒಂದು ತುತ್ತನ್ನು ಗಿಂಡಿ ಹೊರತೆಗೆಯಬೇಕು ಆಗ ಮೂಲದ ಗೋಲಾಕಾರ ಖಿಲವಾಗದೇ ಹಾಗೆಯೇ ಉಳಿದಿರುತ್ತದೆ. ಅದೇ



ಮುದ್ದೆಯ ನೆತ್ತಿಯ ಮೇಲೆ ಒಂದು ಸಣ್ಣ ತಗ್ಗು ಮಾಡಿ ಅದರ ಮೇಲೆ ತುಪ್ಪದ ಮಡುವನ್ನು ಮಾಡಿಕೊಂಡಿದ್ದರಂತೂ ಈ ಪ್ರಕ್ರಿಯೆ ಬಲು ಜಟಿಲವಾಗುತ್ತದೆ.

ಇನ್ನು ಬಾಳೆಲೆ ಊಟದ ಸಂದರ್ಭದಲ್ಲಿ ಒಂದು ಜಿಜ್ಞಾಸೆ ಎದ್ದದ್ದುಂಟು. ಬಾಳೆ ಎಲೆ ತುದಿ ಊಟಮಾಡುವವನ ಎಡಕ್ಕೆ ಮುಖ ಮಾಡಿರಬೇಕೇ ಅಥವಾ ಬಲಕ್ಕೆ ಮುಖ ಮಾಡಿರಬೇಕೆ? ಇದಕ್ಕೆ ಉತ್ತರ ಬಲು ವೈಜ್ಞಾನಿಕವಾಗಿರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಬಲ ಭಾಗಕ್ಕೆ ಎಲೆಯ ಅಗಲವಾದ ಭಾಗ ಬಂದರೆ ಮುಖ್ಯವಾಗಿ ಊಟಮಾಡುವವರಿಗೆ ಕೈ ಆಡಿಸಲು ಅನುಕೂಲ. ಆದ್ದರಿಂದ ಎಲೆಯ ಕುಡಿ ಊಟ ಮಾಡುವವನ ಎಡಕ್ಕೆ ಇರಬೇಕು ಎಂಬ ನಂಬಿಕೆ ನನ್ನದು ಆದರೆ ಬಲ್ಲವರೊಬ್ಬರನ್ನು ಕೇಳಿ ತಿಳಿದಾಗ ಅವರು ಸುಳಿ ಬಾಳೆ ಎಲೆಯಲ್ಲಿ ಊಟಮಾಡುವಾಗ ಇದು ಮುಖ್ಯವಾಗುತ್ತದೆ ಎಂದು ವಿವರಿಸಿದರು. ಬಾಳೆ ಎಲೆಯು ತನ್ನ ಸುಳಿಯ ಸುರುಳಿಯನ್ನು ಬಿಚ್ಚಿಕೊಳ್ಳುವಾಗ ಬಡಿಸುವಾಗ ಕುಡಿಯು ಊಟಮಾಡುವವರ ಎಡಭಾಗಕ್ಕೆ ಇದ್ದಾಗ ತಳಭಾಗಕ್ಕೆ ಬರುವ ಭಾಗ ಮೊದಲು ಬಿಚ್ಚಿಕೊಳ್ಳುತ್ತದೆ ಮತ್ತು ಬಲಿಯುತ್ತದೆ ಪೂರ್ಣ ಸುಳಿ ಬಿಚ್ಚಿದಾಗ ಮೇಲ್ಭಾಗಕ್ಕೆ ಬರುವ ಎಲೆಯ ಭಾಗ ಇನ್ನು ಎಳೆಯದಾಗಿ ನಸು ಹಳದಿ ಮಿಶ್ರಿತ ಮಿರುಮಿರುಗಾಗಿರುತ್ತದೆ. ಅದೇನದ್ದರೂ ಪಲ್ಯ ಕೋಸಂಬರಿ ಉಪ್ಪಿನ ಕಾಯಿಗೆ ಸಾಕಾದ ಬಲ ಹೊಂದಿರುತ್ತದೆ. ಉಳಿದಂತೆ ಊಟದ ರಭಸ ತಡೆಯಲಾರದೆ ಹರಿದು ಹೋಗಬಹುದು ಎಂದು ಅವರು ವರ್ಣಿಸಿದರು. ನನಗೆ ಸಸ್ಯಶಾಸ್ತ್ರದಲ್ಲಿ ಕಲಿತಿದ್ದ ವೆರ್ನೇಷನ್ ಎಂಬ ಪಾಠ ಜ್ಞಾಪಕಕ್ಕೆ ಬಂತು.

ಅದು ಯಾವಾಗ ಹೇಗೆ ಈ ಅಭ್ಯಾಸ ಬಂತೋ ನನಗೆ ಗೊತ್ತಿಲ್ಲ. ಊಟ ಮಾಡುವಾಗ. ಅದೂ ಕೈನಿಂದ ಊಟ ಮಾಡುವಾಗ. ಅಂಗೈಗೆ ಅಗುಳು ತಾಗಬಾರದು. ಕೇವಲ ಬೆರಳುತುದಿಯಲ್ಲಿ ಅನ್ನ ಕಲಸ ಬೇಕು ಎಂಬ ಹೊಸ ಸಂಪ್ರದಾಯವು 'ತುತ್ತು ಅನ್ನ ತಿನ್ನೋಕೆ ಬೊಗಸೆ ನೀರು ಕುಡಿಯೋಕೆ..' ಎಂಬ ಹಾಡಿನಂತೆ ಅಂಗೈ ಮಧ್ಯದ ಸುಕ್ಷೇತ್ರವನ್ನು ಹಾಡಿ ಹೊಗಳುವಂತೆ ಅನ್ನದ ತುತ್ತು ಕೈತುತ್ತುಗಳ ಮಹದಾನಂದವನ್ನು ಅನುಭವಿಸುತಿದ್ದ ನನಗೆ ನುಂಗಲಾರದ ತುತ್ತಾಗಿತ್ತು.

ಹೀಗಾಗಿ ಮುಂಬೆರಳು ಊಟದ ಜಿಜ್ಞಾಸೆ ನನ್ನನ್ನು ಕಾಡಿದ ಇನ್ನೊಂದು ಸಮಸ್ಯೆ. ನಮಗೆ ಚಿಕ್ಕಂದಿನಲ್ಲಿ ಈಗ ಯಾವುದೋ ಚಾಕಲೇಟು ಜಾಹಿರಾತಿನಲ್ಲಿ ತೋರುವಂತೆ ಮುಖಕ್ಕೆಲ್ಲಾ ಏಷಿಯನ್ ಪೇಂಟ್ ಹಚ್ಚಿಕೊಂಡಂತೆ ಅಕರಾಳ ವಿಕರಾಳವಾಗಿ ಅಗುಳೆಲ್ಲ ಮೂಖಾರವಿಂದವನ್ನು ಆವರಿಸದಂತೆ ಮಾಡಲು ತುತ್ತು ಕಟ್ಟಿ ಊಟ ಮಾಡುವುದನ್ನು ಕಲಿಸಿದ್ದರು ಅದರಲ್ಲಿ ಅನಿವಾರ್ಯವಾಗಿ ಅಂಗೈನ ಬಳಕೆ ಆಗುತ್ತಿತ್ತು. ತುತ್ತು ಮಾತ್ರ ಜೋಪಾನವಾಗಿ ಮುಖ ಕುಹರವನ್ನು ಹೊಕ್ಕು ರಸನೆಯ ಆಸ್ವಾದಕ್ಕೆ ಈಡಾಗುತ್ತಿತ್ತು. ಕೈತುತ್ತು ತಿಂದವರಿಗೆ ಅಂಗೈ ಬಳಕೆ ಚೆನ್ನಾಗಿ ಗೊತ್ತು. ಅದು ಯಾವಾಗ ಪ್ರಾರಂಭವಾಯಿತೋ ಗೊತ್ತಿಲ್ಲ ಊಟಮಾಡುವಾಗ ಅಂಗೈ ಬಳಸಬಾರದು ಏನಿದ್ದರೂ ತುದಿ ಬೆರಳಿನಲ್ಲೇ ತಿನ್ನುವ ಕೆಲಸ ಆಗ ಬೇಕು ಎಂಬ ಪ್ರಸಕ್ತಿ ಬೆಳೆದು ಬಿಟ್ಟಿತು.



ಈ ವಿಷಯದಲ್ಲಿ ಒಬ್ಬ ಮಹಾನ್ ವ್ಯಕ್ತಿಯಿಂದ ನನ್ನ ಮೈ ಚಳಿ ಬಿಟ್ಟಿತು. ಅವರೇ ಗೋಪಾಲಕೃಷ್ಣ ಅಡಿಗರು. 1984 ರ ಸುಮಾರಿನಲ್ಲಿ 'ಕಾಲು ಶತಮಾನದ ಕನ್ನಡ

ಸಾಹಿತ್ಯ' ಎಂಬ ವಿಚಾರಗೋಷ್ಠಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಕನಕಪುರದಲ್ಲಿ ಏರ್ಪಡಿಸಿತ್ತು . ಮಧ್ಯಾಹ್ನದ ಊಟದ ಸಮಯದಲ್ಲಿ ತಿಳಿಸಾರು ಅನ್ನ ಬಂದಾಗ ಅಡಿಗರು ಪೂರ್ಣ ಅಂಗೈ ಬಳಸಿ ಊಟ ಮಾಡುತ್ತಿದ್ದರು ಎದರುಗಡೆ ಬದಾಮಿ ಅಂತಾ ಉತ್ತರ ಕರ್ನಾಟಕದ ಜೋಷಿ ಒಬ್ಬರು ಕುಳಿತಿದ್ದರು ಅವರು ಅಕಾಡೆಮಿಯ ಕೆ.ಎ. ಎಸ್. ಅಧಿಕಾರಿ. ಅವರು ಅಡಿಗರು ಊಟಮಾಡುವುದನ್ನೇ ಗಮನಿಸುತ್ತಿದ್ದರು. ಇದು ಅಡಿಗರ ಗಮನಕ್ಕೂ ಬಂತು. ಆವರು 'ಯಾಕ್ರಿ ಹಾಗೆ ನೋಡ್ತಿರಿ?' ಎಂದು ಕೇಳಿಬಿಟ್ಟರು. ಬದಾಮಿ "ಹಂಗಲ್ರಿ ನಮ್ ಕಡೆ ಊಟ ಮಾಡುವಾಗ ಅಂಗೈ ಒದ್ದೆ ಆಗೊಂಗಿಲ್ರಿ' ಅಂದರು. ಅಡಿಗರು ಥಟ್ಟನೆ ಉತ್ತರ ಕೊಟ್ಟರು "ಯಾಕೆ ಒದ್ದೆ ಆಗುತ್ತೆ ಬಿಡ್ರಿ ನೀವೆಲ್ಲ ರೊಟ್ಟಿ ತಿನ್ನೋ ಜನ. ರೊಟ್ಟಿ ಮುರಿಯುವುದಕ್ಕೆ ಮುಂಬೆರಳುಗಳು ಸಾಕು . ನಾವು ಅನ್ನ ತಿನ್ನೋ ಜನ.  ತಿಳಿಸಾರಿನ ಷಡ್ರಸಗಳು ಅನ್ನದಲ್ಲಿ ಮಿಳಿತವಾಗಿ ಬಾಯಿಗೆ ಇಳಿದರೇನೇ ನಮಗೆ ತೃಪ್ತಿ" ಎಂದು ಹೇಳಿ ತಮ್ಮ ಶೈಲಿಯಲ್ಲಿ ಊಟ ಮುಂದುವರಿಸಿದರು. ಈಗಲೂ ನಾನು ತಿಳಿಸಾರು ಅನ್ನದ ವಿಷಯ ಬಂದಾಗ ಯಾರು ಏನಾದರೂ ಅಂದುಕೊಳ್ಳಲಿ ಷಡ್ರಸ ಸಮೇತ ತುತ್ತು ಕಟ್ಟುವುದನ್ನು ಬಿಡುವುದಿಲ್ಲ.

ಇನ್ನು ಮದುವೆ ಸಮಾರಂಭದಲ್ಲಿ ಬುಫೇ ಡಿನ್ನರ್‌ನಲ್ಲಿ ಪ್ಲೇಟು ಸ್ಪೂನುಗಳಲ್ಲಿ ಯಾರಾದರು ತಿಳಿಸಾರು ಅನ್ನ ಕಲಿಸಿ ತಿನ್ನುತ್ತಿದ್ದರೆ ಆತನ ಬಗ್ಗೆ ಮತ್ತು ತಿಳಿಸಾರಿನ ಬಗ್ಗೆ ನನಗೆ ಕರುಣೆ ಉಕ್ಕಿ ಬರದೇ ಇರದು. ನಾನು ಮಾತ್ರ ಅಂಥ ಕಡೆ ಲೋಟಕ್ಕೆ ತಿಳಿಸಾರು ಹಾಕಿಸಿ ಕುಡಿದು ಬಿಡುತ್ತೇನೆ. ಈ ತುತ್ತು ಮೀಮಾಂಸೆಯ ಕಾರಣದಿಂದಲೋ ಏನೋ ಅಂಥ ಕಡೆ ನಮಗೋಸ್ಕರ ಕಲಿಸಿದ ರೂಪದಲ್ಲಿ ಮೊಸರನ್ನ ಸಿದ್ಧ ಪಡಿಸಿ ಚಮಚದ ಅಳವಿಗೆ ತಂದಿರುತ್ತಾರೆ ಎಂಬುದು ಸಮಾಧಾನದ ವಿಷಯ.

## ಕುಹಕಿಡಿ...

– ಎನ್ ರಾಮ್

ವಾಟ್ಸಪ್‌ನಲ್ಲಿ ಲೈಕ್ ಮಾಡಿದವನೇ ನೆಂಟ!


ಕಾಲು ಒಮ್ಮೆ ಜಾರಿದರೆ ಕ್ಷಮೆ ಕೇಳಿ; ಪದೇ ಪದೇ ಜಾರುವುದಾದರೆ
ಚುನಾವಣೆಗೆ ನಿಲ್ಲಿ.

ವೆಲ್ಡಿಂಗ್ ಮಾಡುವಾಗ ಕಿಡಿಗಳು ಹಾರುತ್ತವೆ;
ವೆಡ್ಡಿಂಗ್ ಆದನಂತರ ಕಿಡಿಗಳು ಹಾರುತ್ತವೆ.

ಸ್ಪೀಕರ್‌ನ ಹೊರತಾಗಿ ಮಿಕ್ಕೆಲ್ಲರೂ
ಒಟ್ಟಿಗೆ ಮಾತನಾಡುವ ಸ್ಥಳವೇ ಪಾರ್ಲಿಮೆಂಟ್.

ಹಗರಣ ನಡೆಯಲು ಆ ಪದವೇ ಕಾರಣ – ಪದವೊಂದರಲ್ಲೇ ಹಣ,
ರಣ, ಗಣ, ಹರಣ ಇಷ್ಟೂ ಇವೆ!






**ಸಮಯಕ್ಕೊಂದು**
**ಸರಸೋಕ್ತಿ, ಸ್ವಾರಸ್ಯ.**
ಭಾಷಣಕಾರರ ಬಾಲಬೋಧೆ
ಸಂಪಟೂರು ವಿಶ್ವನಾಥ್

ಸಪ್ನ ಬುಕ್ ಹೌಸ್ ಬೆಂಗಳೂರು
– ೨೦೧೭ – ಪುಟ ೨೧೯ –
ಬೆಲೆ ರೂ. ೧೫೦/-
ಅಕಾರಾಂತವಾಗಿ ಪದಗಳಿಗೆ
ವಿಸ್ತೃತವಾದ ಅರ್ಥವನ್ನು
ಕೊಟ್ಟಿರುವ ಇದು
ಭಾಷಣಕಾರರಿಗೆ ಕೈಪಿಡಿಯಂತಿದೆ

**ವಿನೋದ ವಿಹಾರ**
ಹ.ಶಿ. ಭೈರನಟ್ಟಿ

ಸಾಧನಾ ಪಬ್ಲಿಕೇಷನ್ಸ್
ಬೆಂಗಳೂರು – ೨೦೧೭ –
ಪುಟ ೧೨೦ ಬೆಲೆ ರೂ. ೧೦೦/-
ವಿಜ್ಞಾನ ಮತ್ತು ಹಾಸ್ಯ ಹೀಗೆ ಅನೇಕ
ವಿಷಯಗಳಲ್ಲಿ ನುರಿತ
ಬರಹಗಾರರಾಗಿರುವ
ಭೈರನಟ್ಟಿಯವರು ಈ ಸಂಗ್ರಹದಲ್ಲಿ
ಸುಮಾರು ೩೮ ವಿಷಯಗಳ ಬಗೆಗೆ
ಅದ್ಭುತ ವಿಡಂಬನೆ ಮಾಡಿದ್ದಾರೆ.
ನಿಜಕ್ಕೂ ಸಂಗ್ರಹ ಯೋಗ್ಯ ಕೃತಿ.

